ಕಸ್ತೂರಿ

ಜೂನ್ ೧೯೭೭

ಬೆಲೆ: ರೂ. ೧-



ಕಸ್ತೂರಿ



ವ್ಯವಸ್ಥಾಪಕ ಸಂಪಾದಕ:
ರಂಗನಾಥ ದಿವಾಕರ

ಪ್ರಧಾನ ಸಂಪಾದಕ:
ಖಾದ್ರಿ ಶಾಮಣ್ಣ

ಕಲೆ:
ಕೆ. ಬಿ. ಕುಲಕರ್ಣಿ

ಮುಖಪುಟ:
ಮೈತ್ರಿ,
ಎ. ಎ. ಆಲಮೇಲಕರ

ಲೇಖಕರಿಗೆ ಸೂಚನೆ

ಕಸ್ತೂರಿಯಲ್ಲಿ ಪ್ರಕಟಣೆಗಾಗಿ ಕಳುಹಿಸುವ ಲೇಖ, ಪ್ರಬಂಧ, ಕಥೆ ಮೊದಲಾದವನ್ನು ಕಾಗದದ ಒಂದೇ ಮಗ್ಗಲಿಗೆ ವಿರಳವಾಗಿ ಬರೆದಿರಬೇಕು. ಲೇಖಕರ ಹೆಸರು ವಿಳಾಸ ಸ್ಪಷ್ಟವಿರಬೇಕು. ಅನುವಾದ, ರೂಪಾಂತರ ಇಲ್ಲವೆ ಸಾಧಾರ ಲೇಖನಗಳಾದರೆ ಮೂಲ ಲೇಖಕರ ಮತ್ತು ಪ್ರಕಾಶಕರ ಹೆಸರು ವಿಳಾಸಗಳಿರಬೇಕು. ಇಂಥ ಲೇಖನಗಳಿಗೆ ಪೂರ್ವಾನುಮತಿ ದೊರಕಿಸಿಕೊಂಡರೆ ಉತ್ತಮ. ಅಸ್ವೀಕೃತ ಲೇಖನಗಳು ತಿರುಗಿ ಬೇಕಾಗಿದ್ದರೆ, ಜೊತೆಗೆ ಸಾಕಷ್ಟು ಅಂಚೆ ಚೀಟಿಗಳನ್ನು ಇರಿಸಿ. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗೆ ಇದೆ.

ಚಂದಾದಾರರಿಗೆ ಸೂಚನೆ

ಕಸ್ತೂರಿ ತಿಂಗಳ ಒಂದನೇ ದಿನಾಂಕದೊಳಗೇ ಪ್ರಕಟವಾಗುವುದು. ತಿಂಗಳ ೫ ನೇ ದಿನಾಂಕದೊಳಗೆ ತಲುಪದೇ ಹೋದರೆ ಚಂದಾದಾರರು ತಮ್ಮ ಟಪಾಲುಕಟ್ಟೆಯಲ್ಲಿ ಮೊದಲು ವಿಚಾರಿಸಿ ಅನಂತರ ನಮಗೆ ತಿಳಿಸಬೇಕು. ಪತ್ರವ್ಯವಹಾರ ಮಾಡುವಾಗ ಚಂದಾ ನಂಬರು ಹಾಕಿರಬೇಕು.

ಚಂದಾ ದರ

೩ ವರ್ಷ	(ಅಂಚೆ ಸೇರಿ)	ರೂ. ೩೫-೦೦
೨ ವರ್ಷ	,,	ರೂ. ೨೫-೦೦
೧ ವರ್ಷ	,,	ರೂ. ೧೪-೦೦
ಅರ್ಧ ವರ್ಷ	,,	ರೂ. ೭-೫೦

ಈ ಸಂಚಿಕೆಯಲ್ಲಿ

ಪುಸ್ತಕ ವಿಭಾಗ

ಸೊಲ್ಲಾಪುರ — ಟಿ. ಸಿ. ಗುರುಸ್ವಾಮಿ

ಡಾ. ಸುಂದರ ರಾಜುಲು

ಮಾರ್ಚ್ ೧೯೬೬ ರ 'ಕಸ್ತೂರಿ' ಸಂಚಿಕೆಯಲ್ಲಿ ಪ್ರಕಟವಾದ ನನ್ನ ಲೇಖನ 'ಡಾ. ಕೆ. ಸುಂದರರಾಜನ್' (ಪುಟ ೪೦) ರಲ್ಲಿ ಈ ಕೆಳಗಿನ ತಿದ್ದುಪಡಿಗಳನ್ನು ಮಾಡಬೇಕಾಗಿ ಅರಿಕೆ.

೧ ಡಾ. ಕೆ. ಸುಂದರರಾಜನ್‌ರ ನಿಜವಾದ ಹೆಸರು ಡಾ. ಜಿ. ಸುಂದರರಾಜುಲು ಎಂದು.

೨ ಡಾ. ಸುಂದರರಾಜುಲು ಅವರು ಸಂಶೋಧನೆ ನಡೆಸಿದ ಕೀಟ 'ಪೊಲಿಕ್ಸೆನಿಲ್ಸ್ ಕೃಷ್ಣಾಸಿ'ಯು ನಾಲ್ವತ್ತು ಲಕ್ಷ ವರ್ಷಗಳಷ್ಟು ಹಿಂದಿನದು. 'ಕಸ್ತೂರಿ'ಯಲ್ಲಿ ಈ ಕೀಟ ನಾಲ್ಕು ಲಕ್ಷ ವರ್ಷಗಳಷ್ಟು ಹಿಂದಿನದೆಂದು ಪ್ರಕಟವಾಗಿದೆ.

ಪ್ರಮಾದವಶಾತ್ ಆದ ಈ ತಪ್ಪಿಗಾಗಿ ವಿಷಾದಿಸುತ್ತೇನೆ.

ಶಿರಾಲಿ — ನಾಗ ಶಿರಾಲಿ

ಅಪಹೃತ

ನಿಮ್ಮ ಏಪ್ರಿಲ್ ತಿಂಗಳ 'ಕಸ್ತೂರಿ'ಯಲ್ಲಿ ಪ್ರಕಟವಾದ 'ಅಪಹೃತ' ತುಂಬಾ ಚೆನ್ನಾಗಿತ್ತು. ಅದನ್ನು ಬರೆದ ಚಂದ್ರಶೇಖರ ಅವರಿಗೂ 'ಕಸ್ತೂರಿ'ಗೂ ಧನ್ಯವಾದಗಳು.

ಅದರಲ್ಲಿಯ ಕೊನೆಯ ವಾಕ್ಯ ತುಂಬಾ ಅರ್ಥಗರ್ಭಿತವಾಗಿದೆ. ಪತ್ರಿಕಾ ಸ್ವಾತಂತ್ರ್ಯ ಒಬ್ಬನ ಪ್ರಾಣ ಉಳಿಸಿತಷ್ಟೇ ಅಲ್ಲ, ಒಬ್ಬ ರಾಷ್ಟ್ರಪತಿಯನ್ನು ರಕ್ಷಿಸಿತು. ಪತ್ರಿಕಾ ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಅಡಿಗಲ್ಲು. ಈ ಲೇಖನದಿಂದ ರಾಜಕಾರಣಿಗಳೂ ಪತ್ರಿಕಾ ಸಂಪಾದಕರೂ ಪಾಠ ಕಲಿಯಬೇಕು. ತುರ್ತು ಪರಿಸ್ಥಿತಿಯನ್ನು ಘೋಷಿಸಿದ ತರುಣದಲ್ಲಿ ಪತ್ರಿಕೆಗಳು ಅದನ್ನು ಪ್ರತಿಭಟಿಸಿದ್ದರೆ ಆಗುತ್ತಿದ್ದ ಅನ್ಯಾಯ ಸ್ವಲ್ಪ ಮಟ್ಟಿಗಾದರೂ ತಗ್ಗಬಹುದಿತ್ತೇನೋ?

ದಾವಣಗೆರೆ — ಪ್ರಹ್ಲಾದ ಕುಲಕರ್ಣಿ

ಮೂರು ರೊಟ್ಟಿಗಳು

ಮೇ ೬೬ ರ 'ಕಸ್ತೂರಿ' ಸಂಚಿಕೆಯಲ್ಲಿ ಪ್ರಕಟವಾದ 'ಮೂರು ರೊಟ್ಟಿಗಳು' ಕಥೆಯನ್ನು ಸೊಗಸಾಗಿ ಕನ್ನಡಕ್ಕೆ ಅನುವಾದಿಸಿದ ರಂಗರಾವ ಕಲಬೇರಕರರಿಗೆ ನನ್ನ ಅಭಿನಂದನೆಗಳು. ಇಂಥ ಹಾಸ್ಯಭರಿತ ಕಥೆಗಳು

ಉತ್ತಮ ಪತ್ರಿಕೆ

'ಕಸ್ತೂರಿ'ಯು ಕನ್ನಡದ 'ರೀಡರ್ಸ್ ಡೈಜೆಸ್ಟ್' ಆಗಿದ್ದು ಒಂದು ಉತ್ತಮ ಮಾಸಪತ್ರಿಕೆಯಾಗಿದೆ. ಏಪ್ರಿಲ್ ತಿಂಗಳಲ್ಲಿ ಪ್ರಕಟವಾದ 'ಅಪಹೃತ', 'ಅಳಿಸ್ಬರ್ಗ್' 'ಸತ್ಯದ ಶಕ್ತಿ' ಮುಂತಾದ ಕೃತಿಗಳಂತೂ ತುಂಬಾ ಮನೋರಂಜಕವಾಗಿದ್ದವು.

ಆದರೆ ಒಂದು ಸಲಹೆ: ಮಹಾತ್ಮರ ಮತ್ತು ಭಾರತೀಯ ಸ್ವಾತಂತ್ರ್ಯಕ್ಕಾಗಿ ದುಡಿದ ಹಿರಿಯ ನಾಯಕರ ಜೀವನದ ಬಗ್ಗೆ ಲೇಖನಗಳನ್ನು ಪ್ರಕಟಿಸುವುದು ಒಳ್ಳೆಯದು

ತುಮಕೂರು — ರಾಜಬುದ್ಧಿ

ಹಂಪಿಯ ತರುಣ ತಪಸ್ವಿ

'ಕಸ್ತೂರಿ'ಯ ಏಪ್ರಿಲ್ ಸಂಚಿಕೆಯಲ್ಲಿ ಪ್ರಕಟವಾದ 'ಹಂಪಿಯ ತರುಣ ತಪಸ್ವಿ' ಲೇಖನದಲ್ಲಿ ಜಗದ್ಗುರುಗಳು ಅಕ್ಕಯಮ್ಮನ ಬೆಟ್ಟದಲ್ಲಿ ಶ್ರೀರಾಮ ದೇವಾಲಯವನ್ನು ಕಟ್ಟಿಸಿದ್ದರೆಂಬ ಉಲ್ಲೇಖ ಬರುತ್ತದಷ್ಟೆ. ಆದರೆ ಅದನ್ನು ಕಟ್ಟಿಸಿದ ಶ್ರೇಯಸ್ಸು ವರ್ತಕ ಶ್ರೀ ಎಂ. ಅಣ್ಣಯ್ಯ ಅವರಿಗೂ ಶಾರದಾ-ಗಣಪತಿ ದೇವಾಲಯಗಳಿಗೆ ಸೋಮನಹಳ್ಳಿಯ ಎಂ. ಲಕ್ಷ್ಮಯ್ಯ ಬ್ರದರ್ಸ್, ಯಲಹಂಕದ ವೈ. ಎಂ. ಶ್ರೀನಿವಾಸಮೂರ್ತಿ, ಚಿದಾನಂದ ಹಾಗೂ ಬೆಂಗಳೂರಿನ ಆರ್. ನಾಗರಾಜರಾವ್, ಬಿ. ಎ. ಜಯರಾಮಯ್ಯ ಅವರುಗಳಿಗೂ ಸಲ್ಲಬೇಕು. ಈ ಅಂಶ ಲೇಖನದಲ್ಲಿ ಬಿಟ್ಟುಹೋದುದಕ್ಕೆ ನಾನು ವಿಷಾದಿಸುತ್ತೇನೆ.

ಹುಬ್ಬಳ್ಳಿ — ದ. ಲ. ಕರೂರ

ಮುದ್ರಣ ದೋಷಗಳು

'ಕಸ್ತೂರಿ'ಯ ಇತ್ತೀಚಿನ ಸಂಚಿಕೆಗಳಲ್ಲಿ ಮುದ್ರಣ ದೋಷಗಳು ಹೆಚ್ಚಾದುದನ್ನು ಅನೇಕ ಓದುಗರು ನಮ್ಮ ಗಮನಕ್ಕೆ ತಂದಿದ್ದಾರೆ. ಅವರಿಗೆಲ್ಲ ನಮ್ಮ ಕೃತಜ್ಞತೆಗಳು. 'ಕಸ್ತೂರಿ'ಯಂತಹ ಪತ್ರಿಕೆಯಲ್ಲಿ ಮುದ್ರಣ ದೋಷಗಳು ಇರಲೇಬಾರದು: ಒಂದು ವೇಳೆ ವಿಜ್ಞಾನ ಅಥವಾ ವೈದ್ಯಕೀಯಕ್ಕೆ ಸಂಬಂಧಿಸಿದ ಲೇಖನಗಳಲ್ಲಿ ಇಂತಹ ದೋಷಗಳು ಕಂಡುಬಂದರಂತೂ ಅವು ಅಪಾರ್ಥಕ್ಕೆಡೆ ಮಾಡಿಕೊಡಬಹುದು ಎಂಬುದನ್ನು ನಾವು ಪ್ರಾಂಜಲವಾಗಿ ಒಪ್ಪಿಕೊಳ್ಳುತ್ತೇವೆ. ಉದಾಹರಣೆಗೆ ಮೇ ತಿಂಗಳ ಸಂಚಿಕೆಯಲ್ಲಿ ಪ್ರಕಟವಾದ ಜಿ. ಟಿ. ನಾರಾಯಣರಾಯರ ಲೇಖನದಲ್ಲಿ 'ಎರಡು' ಎಂಬುದಕ್ಕೆ

ಬದಲಾಗಿ 'ಬಡ' ಎಂಬುದಾಗಿಯೂ (ಪುಟ ೬೮ ಬಲಗಡೆ ಕಾಲಮ್ಮಿನ ೨೫ನೆಯ ಸಾಲು) 'ಐದಕ್ಕಿಂತ' ಎನ್ನುವುದರ ಬದಲು 'ಇದಕ್ಕಿಂತ' ಎಂತಲೂ (ಪುಟ ೭೦, ಎಡಗಡೆ ಕಾಲಮ್ಮಿನ ಎರಡನೆಯ ಸಾಲು) ಅಚ್ಚಾಗಿದೆ ಹಾಗೆಯೇ ಜಿ. ಆರ್. ಲಕ್ಷ್ಮಣರಾಯರ 'ಆನುವಂಶಿಕ ಸಂಕೇತ ಭಾಷೆ'ಯಲ್ಲಿ 'ಎರಡು ತಂಡಗಳಾಗಿ ಬೇರ್ಪಟ್ಟು ಒಂದೊಂದು ತಂಡವೂ ಎರಡಾಗಿ ಒಡೆಯುತ್ತಿರುವ ಕೋಶದ ಒಂದೊಂದು..' ಎಂದಿರಬೇಕಾದಲ್ಲಿ 'ಎರಡು ತಂಡಗಳಾಗಿ ಬೇರ್ಪಟ್ಟ ಒಂದೊಂದು' ಎಂದಾಗಿಯೂ (ಪುಟ ೫೧ ಎಡಗಡೆ ಕಾಲಮ್ಮಿನ ೩೧ ನೆಯ ಸಾಲು) 'ನಿರ್ಧರಿಸುವುದು' ಎಂದಿರಬೇಕಾದಲ್ಲಿ 'ನಿರ್ಧರಿಸಿರುವುದು' ಎಂದಾಗಿಯೂ (ಪುಟ ೫೨. ಬಲಗಡೆಯ ಕಾಲಮ್ಮಿನ ೬ ನೆಯ ಸಾಲು) ಆಮ್ಲದ ರಚನೆಯಲ್ಲಿ ಎಂದಿರಬೇಕಾದಲ್ಲಿ 'ಆಮ್ಲದ ರಚನೆಯು' ಎಂದೂ (ಪುಟ ೫೪, ಬಲಗಡೆಯ ಕಾಲಮ್ಮಿನ, ೩೦ ನೆಯ ಸಾಲು) ಅಚ್ಚಾಗಿದೆ.

ಇಂತಹ ಮುದ್ರಣದೋಷಗಳು ಇನ್ನು ಮುಂದೆ ಸಂಭವಿಸದಂತೆ ನಾವು ಶಕ್ತಿಮೀರಿ ಪ್ರಯತ್ನಿಸುತ್ತೇವೆಂದು ಈ ಮೂಲಕ ಓದುಗರಿಗೆ ಭರವಸೆ ನೀಡುತ್ತೇವೆ.

—ಸಂಪಾದಕ

ನೈಜ ಸ್ವಯಂಸೇವಕ

ಡಾ. ನಾ. ಸು ಹರ್ಡೀಕರರ ಆತ್ಮಚರಿತ್ರೆಯನ್ನು ಸುರೇಂದ್ರ ದಾನಿಯವರು ಚೆನ್ನಾಗಿ ಸಂಗ್ರಹಿಸಿದ್ದಾರೆ. ಚಿಕ್ಕಂದಿನಿಂದಲೇ ತುಂಬಾ ಕಷ್ಟಪಟ್ಟು ಯಾವ ಫಲಾಪೇಕ್ಷೆಯೂ ಇಲ್ಲದೆ ದೇಶದ ಹಿತಕ್ಕಾಗಿ ಹೆಣಗಾಡಿದ ಈ ವ್ಯಕ್ತಿ ನಿಜವಾದ ಅರ್ಥದಲ್ಲಿ ಒಬ್ಬ ಸ್ವಯಂಸೇವಕನೆನ್ನುವುದರಲ್ಲಿ ಸಂಶಯವಿಲ್ಲ.

ಕೆ ಆ. ನಗರ —ಕೆ. ಟಿ. ಬಸವರಾಜ್

ಪತ್ರಿಕೆ—ಸ್ವಾತಂತ್ರ್ಯ—ಓದುಗ

'ಕಸ್ತೂರಿ'ಯ ಪ್ರಾರಂಭದ ಪುಟದಲ್ಲಿ ಶ್ರೀ ಖಾದ್ರಿ ಶಾಮಣ್ಣನವರು ಇತ್ತೀಚೆ ಕಿರಿದರಲ್ಲೇ ಹಿರಿಯರ್ಥ ಹೇಳುವಂತಹ ಪುಟ್ಟ ಲೇಖನಗಳನ್ನು ಬರೆದು ಕನ್ನಡ ಓದುಗರಿಗೆ ಒಳ್ಳೆಯ ಸೇವೆಯನ್ನೇ ಸಲ್ಲಿಸುತ್ತಿದ್ದಾರೆ. ಆದರೆ ಈ ಸಲ (ಮೇ ೧೯೭೭) ಶ್ರೀಯುತರು ಕನಿಷ್ಠ ನಾಲ್ಕಾರು ಪುಟಗಳಲ್ಲಿ ಪರಿಣಾಮಕಾರಿಯಾಗಿ ವ್ಯಕ್ತಪಡಿಸಬಹುದಾಗಿದ್ದ ವಿಷಯವನ್ನು ಒಂದೂವರೆ ಪುಟದಲ್ಲಿ ಹೇಳಹೊರಟು ಸುಮ್ಮನೆ ಓದುಗರ ಕುತೂಹಲವನ್ನು, ಆಸ್ಥೆಯನ್ನು ತುಸು ಕೆರಳಿಸಿ ಕೈಬಿಟ್ಟಿದ್ದಾರೆನಿಸುತ್ತದೆ. ಪತ್ರಿಕಾ ಸ್ವಾತಂತ್ರ್ಯ ನಮಗೆ ನಿಜವಾದ ಅರ್ಥದಲ್ಲಿ ಎಂದಾದರೂ ಇತ್ತೇ ಎಂಬುದನ್ನು ಶ್ರೀಯುತರು ನಮಗೆ ಹೇಳಲಿ. ಬಸ್ ಪಾಸು, ಮನೆ ಕಟ್ಟಿಕೊಳ್ಳಲು ಪುಕ್ಕಟೆಯಾಗಿಯೋ, ಅಲ್ಪ ಬೆಲೆಯೋ ಪ್ಲಾಟುಗಳು, ಮುಂತಾದ ಚಿಕ್ಕ ಪುಟ್ಟ ಅನುಕೂಲಗಳಿಗಾಗಿ ಎಂದಿನಿಂದಲೂ ಸರಕಾರದ ಕೃಪೆಗಾಗಿ ಕಾಯ್ದು ಕೂತಿರುವಂಥ ಪತ್ರಿಕೋದ್ಯಮಿಗಳೇ ನಮ್ಮಲ್ಲಿ ಹೆಚ್ಚಾಗಿರುವಾಗ ಅವರು ಯಾವ ವಿಷಯದಲ್ಲಿ ನಿರ್ಭೀತರಾಗಿ ಬರೆಯಬಲ್ಲರು ಸ್ವಾಮಿ? ಸರಕಾರದ ಕಾನೂನು ಕಟ್ಟಳೆಗಳು ಎಷ್ಟು ಸ್ವಾತಂತ್ರ್ಯ ಕೊಟ್ಟರೇನ ಫಲ?

ಮುಂಬಯಿ ಸಿ. ಟಿ. ಹನುಮಂತರಾಯ

ಟೀಯೆಸ್ಸಾರ್

'ಪ್ರಜಾವಾಣಿ'ಯ ಸಂಪಾದಕರಾಗಿ ಕನ್ನಡ ಪತ್ರಿಕೋದ್ಯಮವನ್ನು ಉನ್ನತ ಮಟ್ಟಕ್ಕೊಯ್ದ ದಿ. ಟಿ. ಎಸ್. ರಾಮಚಂದ್ರರಾಯರ ಬಗ್ಗೆ ಅನೇಕ ವರ್ಷ ಅವರ ನಿಕಟವರ್ತಿಯಾಗಿದ್ದ ಶ್ರೀ ಜಯಶೀಲರು ಬರೆದ 'ಅವಿಸ್ಮರಣೀಯ ಟೀಯೆಸ್ಸಾರ್' ಓದಿದೆ. ಲೇಖನ ಚೆನ್ನಾಗಿದೆ. ಆದರೆ ರಾಯರೊಂದಿಗೆ ಇಷ್ಟು ಸುದೀರ್ಘ ಕಾಲ ಒಡನಾಟವಿದ್ದ ಜಯಶೀಲರು ಈಗ ಬರೆದಿರುವಷ್ಟರಿಂದಲೇ 'ಕಸ್ತೂರಿ'ಯ ಓದುಗರಿಗೆ ಸಮಾಧಾನ ನೀಡಿದ್ದಾರೆಯೆ ಎಂಬುದು ಮಾತ್ರ ಸಂಶಯಾಸ್ಪದ. ರಾಯರ ವ್ಯಕ್ತಿತ್ವವನ್ನು ಇನ್ನಷ್ಟು ಹತ್ತಿರದಿಂದ, ಆಳವಾಗಿ ತೆರೆದು ತೋರಲು ಅವರಿಗೆ ಶಕ್ಯವಿತ್ತು ಎಂಬುದು ನನಗನಿಸುತ್ತದೆ.

ದಾವಣಗೆರೆ —ಎಸ್. ಬಸವರಾಜು

ಪಾ. ವೆಂ. ಆಚಾರ್ಯ ಸನ್ಮಾನ ಸಮಿತಿಯ ನೆನಪಿನ ಸಂಚಿಕೆ:

ಸಂಪಾದಕರು; ಜಿ. ಎಸ್. ಭಟ್ಟ, 'ಕುಮಾರ ಕೃಪಾ' ೨೪, ಸಿ.ಐ.ಟಿ.ಬಿ. ಮಾದರಿ, ಮನೆ, ಸರಸ್ವತೀಪುರಂ ಹೊಸ ಬಡಾವಣೆ ಮೈಸೂರು ೫೭೦೦೦೯.

ಜಾಹೀರಾತು ಕಾರ್ಯದರ್ಶಿ; ಎಚ್. ಜಯದೇವ, ಮಾರ್ಕೆಟಿಂಗ್ ಕನ್ಸಲ್ಟೆಂಟ್ ಅಂಡ್ ಏಜೆನ್ಸೀಸ್ ಲಿಮಿಟೆಡ್ 'ಹರಿನಿವಾಸ' ೩೭, ಕನ್ನಿಂಗ್ಹ್ಯಾಮ್ ರಸ್ತೆ, ಬೆಂಗಳೂರು ೫೬೦೦೫೨

ಕಸ್ತೂರಿ

ಸಂಚಿಕೆ : ೧೦ ಕಸ್ತೂರಿ, ಜೂನ್ ೧೯೭೭ ವರ್ಷ : ೨೧

ಹಮ್ಮಿಗೆ ಬಿತ್ತು ಬರೆ

ಎ. ಮಾಧವ ಉಡುಪ

ದ್ವಾಪರಯುಗದ ಮಾತು. ಪಾಂಡವ-ರ ಕೌರವರೊಳಗಿನ ಸಮರ ಕೊನೆಗೊಂಡು ಶಾಂತಿ ಕಾಲಿರಿಸಿದೆಯಷ್ಟೆ. ಅರ್ಜುನನ ಮನಸ್ಸಿಗಂತೂ ಎಲ್ಲಿಲ್ಲದ ಹಿಗ್ಗು. ಆತನ ಸಂತಸ ಇಬ್ಬಗೆಯದು—ಗೆಲವಿನ ನಲಿವು ಒಂದು ಬಗೆಯದಾದರೆ, ಕೃಷ್ಣನ ಗೆಳೆತನದ ಸುಖ ಮತ್ತೊಂದು ಬಗೆಯದು. ದಿನಗಳೆದಂತೆ, ತಾನು ಶ್ರೀಕೃಷ್ಣನನ್ನು ಪ್ರೀತಿಸಿದಷ್ಟು ಜಗತ್ತಿನಲ್ಲಿ ಬೇರೆ ಯಾರೂ ಆತನನ್ನು ಪ್ರೀತಿಸುವುದಿಲ್ಲ. ಹಾಗಾಗಿ ತಾನೇ ಕೃಷ್ಣಪರಮಾತ್ಮನ ಶ್ರೇಷ್ಠಭಕ್ತನೆಂಬ ಅಹಂಕಾರದಿಂದ ಅರ್ಜುನನ ಮನ ಬೀಗಿ ಬಿಮ್ಮಗಾಯಿತು. ಸರ್ವಜ್ಞನಾದ ಶ್ರೀಕೃಷ್ಣನಿಗೂ ಅರ್ಜುನನ ತಲೆ ಕೆಡಿಸಿರುವ ಈ ದುರಹಂಕಾರದ ವಿಚಾರ ತಿಳಿಯಿತು.

ಒಂದು ಸಂಜೆ ಕೃಷ್ಣಾರ್ಜುನರು ವಿಹಾರಕ್ಕೆ ಹೋದಾಗ, ಬ್ರಾಹ್ಮಣನೊಬ್ಬನ ವರ್ತನೆಯಿಂದ ಅರ್ಜುನ ಚಕಿತನಾದ. ಆ ಬ್ರಾಹ್ಮಣ ಅಹಿಂಸೆಯೇ ಪರಮಧರ್ಮವೆಂದು ಬಗೆದವ; ಹಸಿ ಹುಲ್ಲನ್ನು ತಿಂದರೆ ಗಿಡಕ್ಕೆ ಸಾವು ನೋವಾದೀತೆಂದು ಯೋಚಿಸುತ್ತಾ ಕೂತಿದ್ದನಾತ. ಆದರೆ ಆತದ ಸೊಂಟದಲ್ಲೊಂದು ಥಳಥಳಿಸುವ ಕತ್ತಿಯಿತ್ತು. ಅಹಿಂಸೆಯ ಆರಾಧಕನೊಡನೆ, ಹಿಂಸಾಚಾರಕ್ಕೆ ಕಾರಣವಾಗುವ ಆಯುಧವೇ ಎಂದು ಬೆರಗಾದ ಅರ್ಜುನ, ಇದೇನು ವಿಚಿತ್ರವೆಂದು ಕೃಷ್ಣನನ್ನೇ ಪ್ರಶ್ನಿಸಿದ. ಕೃಷ್ಣ ಮುಗುಳ್ನಗುತ್ತಾ, ಆ ಬ್ರಾಹ್ಮಣನನ್ನೇ ಕೇಳು ಎಂದ. ಅರ್ಜುನನ ಪ್ರಶ್ನೆಗೆ ಆ ಬ್ರಾಹ್ಮಣ ಉತ್ತರಿಸುತ್ತಾ, "ನನ್ನ ಆರಾಧ್ಯ ದೇವರಿಗೆ ಕಾಟ-

ಕೊಟ್ಟ ನಾಲ್ಕು ಜನರಿದ್ದಾರೆ. ಅವರನ್ನೆಲ್ಲಾ ದರೂ ಕಂಡರೆ ಕೊಂದೇಹಾಕಬೇಕೆಂದು ಕತ್ತಿ ಹಿಡಿದೇ ತಿರುಗುತ್ತಿದ್ದೇನೆ," ಎಂದ. ಅರ್ಜುನ ಬೆಕ್ಕಸ ಬೆರಗಾದ. —ದೇವರ ಭಕ್ತನಾದ ತಾನೂ ಅಂಥ ದುಷ್ಟರ ವಿನಾಶದ ಹೊಣೆಗೆ ಹೆಗಲೊಡ್ಡಬೇಕೆಂದುಕೊಂಡು, "ದೇವರಿಗೆ ಕಾಟ ಕೊಟ್ಟ ಆ ನಾಲ್ವರು ಯಾರು?" ಎಂದು ಕೇಳಿದ.

"ಮೊದಲನೇಯವನೇ ಆ ನೀಚ ನಾರದ," ಎಂದ ಬ್ರಾಹ್ಮಣ.


"ಅವನೇನು ತಪ್ಪು ಮಾಡಿದ?" ಎಂದ ಅರ್ಜುನ ದಿಗ್ಭ್ರಾಂತನಾಗಿ. ಬ್ರಾಹ್ಮಣನ ಮಾತು ಕಳಕಳಿಯ ಕಹಿಯನ್ನೇ ಹೊತ್ತು ಹೊರ ಬಿತ್ತು.

"ಅವನಿಗೆ ದೇವರ ಸುಖ–ದುಃಖ ಒಂದಿಷ್ಟೂ ಇಲ್ಲ. ಹಗಲಿರುಳನ್ನದೆ, ಕೀರ್ತನೆ ಭಜನೆಗಳಿಂದ, ನಿದ್ರೆಗೂ ಎಡೆಗೊಡದೆ ದೇವರ ಶಾಂತಿಯನ್ನೇ ಕದಡಿ ಬಿಟ್ಟ ನಿರ್ದಯಿ ಆತ."

ಬ್ರಾಹ್ಮಣನ ಮುಗ್ಧ ಭಕ್ತಿಯನ್ನು ಕಂಡು ಅರ್ಜುನನಿಗೆ ನಗು ಬಂತು. ದೇವರನ್ನು ಪೀಡಿಸುವ ಇನ್ನೂ ಮೂವರು ದುರುಳರಿದ್ದಾರಲ್ಲಾ, ಅವರಾರೆಂದು ತಿಳಿಯುವ ಆತುರ ಅವನಿಗೆ. ಬ್ರಾಹ್ಮಣ ಮಾತನ್ನು ಮುಂದುವರಿಸಿದ: "ಎರಡನೆಯವಳು ಆ ತಿಳಿಗೇಡಿ ದ್ರೌಪದಿ. ಆಕೆ ನನ್ನ ದೇವರಿಗೆ ಊಟ ಮಾಡಲೂ ಬಿಡದೆ ಪೀಡಿಸಿದ ಅವಿವೇಕಿ. ಅದರಿಂದಾಗಿ ನನ್ನ ದೇವ ತನ್ನ ಊಟವನ್ನು ಬಿಟ್ಟು, ಪಾಂಡವರನ್ನು ದೂರ್ವಾಸರ ಶಾಪದಿಂದ ಪಾರು ಮಾಡಲು, ಕಾಮ್ಯಕ ವನಕ್ಕೆ ಧಾವಿಸಬೇಕಾಯಿತು. ಅಷ್ಟು ಮಾಡಿದರೂ ದೇವರಿಗೆ ತನ್ನ ಎಂಜಲನ್ನೇ ತಿನ್ನಿಸಿದ ಕೃತಘ್ನಳು ಆಕೆ.

"ಮೂರನೆಯವನೇ ನಿಷ್ಕರುಣಿ ಪ್ರಹ್ಲಾದ. ಆತ ಭಗವಂತನಿಗೆಷ್ಟು ಕಷ್ಟ ಕೊಟ್ಟ!–ಬಾಂಡಲೆಯಲ್ಲಿ ಕಾಯುತ್ತಿದ್ದ ಎಣ್ಣೆಯೊಳಗೆ ಹೋಗು ಎಂದ; ಆನೆಯ ಕಾಲಿನಿಂದ ತುಳಿಸಿ ಬಿಟ್ಟ; ವಜ್ರದಂತೆ ಗಟ್ಟಿಯಾಗಿರುವ ಕಂಬವನ್ನು ಸೀಳಿ ಬರಬೇಕೆಂದ. ದೇವರನ್ನು ಹೀಗೆಲ್ಲಾ ಚಿತ್ರಹಿಂಸೆಗೆ ಗುರಿಮಾಡಿ ಶಿಕ್ಷಿಸಿದ ದ್ರೋಹಿ ಆತ.

"ನಾಲ್ಕನೆಯವನೇ ಆ ದುರುಳ ಅರ್ಜುನ," ಎಂದಾಗ ಅರ್ಜುನನ ಎದೆಗೇ ಆ ಕತ್ತಿಯ ಮೊನೆ ನಾಟಿದ ಅನುಭವವಾಯಿತು. "ಆತ ಮಹಾಪಾತಕಿ. ಕುರುಕ್ಷೇತ್ರ ಯುದ್ಧದಲ್ಲಿ ನನ್ನ ದೇವರಾದ ಶ್ರೀಕೃಷ್ಣ ಪರಮಾತ್ಮನನ್ನು ತನ್ನ ಊಳಿಗದವನಂತೆ ಸಾರಥಿಯಾಗಿರಿಸಿಕೊಂಡು ಅವಮಾನಿಸಿದ," ಎಂದವನು ಹೇಳುತ್ತಿದ್ದಂತೆಯೇ ಅರ್ಜುನನ ಅಹಂಕಾರದ ಹುಟ್ಟಡಗಿತು. ತನಗಿಂತಲೂ ಹೆಚ್ಚಾಗಿ ದೇವರನ್ನು ಪ್ರೀತಿಸಿ, ದೇವರ ಕಷ್ಟ ಸುಖಗಳಿಗೂ ನಿಗಾಕೊಡುವ ಆ ಬ್ರಾಹ್ಮಣನ ಭಕ್ತಿಯ ಮುಗ್ಧತೆಯನ್ನು ಕಂಡು ಅರ್ಜುನ ನಾಚಿಕೆಯಿಂದ ತಲೆಬಾಗಿದ. ✡



ಅಂಥಾ ಉದ್ದನ್ನ ಗಂಡನನ್ನು ಏಕೆ ಮದುವೆ ಮಾಡಿಕೊಂಡೆ?

"ಏಕೆಂದರೆ ನನ್ನೊಂದಿಗೆ ಮಾತಾಡುವಾಗೆಲ್ಲಾ ತಲೆತಗ್ಗಿಸಿ, ನೆಲನೋಡುತ್ತ ಮಾತಾಡಲಿ ಅಂತ."

ಕೆಲ ಭಾರತೀಯ ಚರ್ಮವಾದ್ಯಗಳು

ಶಿವನ ಡಮರುವಿನ ತಾರಕ ಸ್ವರ ಭೂಮ್ಯಾಕಾಶಗಳನ್ನೆಲ್ಲ ವ್ಯಾಪಿಸಿತ್ತು; ಆ ಸ್ವರದಲ್ಲೇ ಶಬ್ದ ಮೈದಳೆಯಿತು. ಶಿವ ಶಬ್ದಾಧಿಪ, ವಾಗೀಶ. ಅವನ ಡಮರುವಿನ ನಿನಾದ ವಿಶ್ವವನ್ನೇ ವ್ಯಾಪಿಸುತ್ತದೆ. ಶಿವನ ಡಮರು ಹಾಗೂ ಶಬ್ದಗಳಲ್ಲಿ ಭೇದವೇ ಇಲ್ಲ. ಎರಡೂ ಸಂಕೇತಿಸುವುದು ಪರಮೇಶ್ವರನ ಸಂದೇಶವನ್ನು; ಅದರಲ್ಲಿ ಅಡಗಿದ ಅರ್ಥವನ್ನು.

ಶಿವನ ವಾಹನವಾದ ನಂದಿ ಸರ್ವಶ್ರೇಷ್ಠ ಮದ್ದಳೆ ವಾದಕನಂತೆ. ನಂದಿ, ಅದರ ವ್ಯಕ್ತ ರೂಪದಲ್ಲಿ ಗೋಚರಿಸುವಂತೆ ಬರಿ ಪಶುವಲ್ಲ, ಅದು ಮೈದಳೆದ ದೈವೀ ಸತ್ವ. ಅವನ ತಾಳದಲ್ಲಿಯ ಏರಿಳಿತಗಳು ಸೃಷ್ಟಿ–ವಿನಾಶಗಳ, ಹುಟ್ಟು–ಸಾವುಗಳ, ಹಗಲು—ರಾತ್ರಿಗಳ ನಿರಂತರ ಚಕ್ರವನ್ನೇ ಸಂಕೇತಿಸುತ್ತದಂತೆ. ಶಿವ ತಾಂಡವಕ್ಕೆ ನಂದಿ ಹಾಕಿದ್ದೇ ತಾಳ.

ನಮ್ಮ ಪುರಾಣಗಳಲ್ಲಿ ಚರ್ಮವಾದ್ಯ ವಾದಕರು ಶಿವ, ನಂದಿ ಇಬ್ಬರೇ ಅಲ್ಲ. ಸಾವಿರ ಕೈಗಳುಳ್ಳ ಅಸುರ ಬಾಣ. ಸಾವಿರ ಕೈಗಳಿಂದ ಅವನು ಬಾರಿಸತೊಡಗಿದನೆಂದರೆ ಸಾವಿರಾರು ಸಿಂಹಗಳು ಕಾಡಿನಲ್ಲಿ ಭಯಂಕರವಾಗಿ ಗರ್ಜಿಸಿದಂತೆ ಕೇಳಿಸುತ್ತಿತ್ತಂತೆ. ಅವನು ತನ್ನ ತಾಮಸ ಕೋಪದಿಂದ ಸಾವಿರ ವಾದ್ಯಗಳೂ ಏಕಕಾಲಕ್ಕೆ ಗುಡುಗಲಾರಂಭಿಸಿದಾಗ ಭಯಂಕರ ಬಿರುಗಾಳಿ ಬೀಸಿ ಭೂಮ್ಯಾಕಾಶಗಳು ನಡುಗುತ್ತಿದ್ದುವಂತೆ; ದೇವ ದೇವತೆಗಳು ಆಕಾಶವನ್ನು ಬಿರಿದು ಹೊರಬಂದು ಹೆದರಿ ಇಣುಕಿದರಂತೆ. ಅವನ ವಾದನದ ಮೋಡಿಗೆ ಜಗತ್ತೇ ಮರುಳಾಗಿ ತನ್ನನ್ನೇ ತಾನು ಮರೆತುಬಿಟ್ಟಿತ್ತಂತೆ.

ಭಾರತದ ಚರ್ಮವಾದ್ಯಗಳಿಂತು ನಮ್ಮ ಪುರಾಣಗಳಲ್ಲಿ, ದೇವ-ದಾನವರ ನಚ್ಚಿನ ವಾದ್ಯಗಳೆನಿಸಿ ಸುಪ್ರಸಿದ್ಧವಾಗಿವೆ. ಆದರೆ ಪುರಾಣೇತಿಹಾಸಗಳಲ್ಲಿ ಬರುವುದಕ್ಕೆ ಎಷ್ಟೇ ಗಂಭೀರ ಅರ್ಥಗಳನ್ನು ಹೇಳಬಹುದಾದರೂ ಜಾನಪದ ಗೀತಗಳಲ್ಲಿ, ಕಥೆಗಳಲ್ಲಿ ಸಿಕ್ಕುವ ಅಂಶಗಳು ಮನು-





ಭಾರತೀಯ
ಚರ್ಮ
ವಾದ್ಯಗಳು
೨
೩
೪
೫
೬


২
৩
৫
১০

ಪ್ಯನ ಹ್ಯಸಯಕ್ಕೇ ಸೇರವಾಗಿ ಕಲುಪ್ರಪಂಥವು.

ಮನುಷ್ಯ ಸೃಷ್ಟಿಸಿದ ಮೊಟ್ಟ ಮೊದಲ ವಾದ್ಯ ಚರ್ಮವಾದ್ಯವೇ ಆಗಿರಬೇಕು ಎಂಬುದನ್ನು ತಜ್ಞರೆಲ್ಲರೂ ಒಪ್ಪುತ್ತಾರೆ. ಭಾರತದ ವನವಾಸಿ ಜನಗಳಲ್ಲಿನ್ನೂ ರೂಢವಾಗಿರುವ ಒಂದೆರಡು ಕಥೆಗಳನ್ನು ನೋಡಿ.

ಒಂದಾನೊಂದು ಕಾಲದಲ್ಲಿ ಒಬ್ಬ ಬೇಟೆಗೆಂದು ಕಾಡಿಗೆ ಹೋದ. ಒಂದು ಗಿಡದ ಟೊಂಗೆಗಳ ಮೇಲೆ ಮಂಗಗಳೆರಡು ಆಡುವುದರಲ್ಲಿ ಮಗ್ನವಾಗಿದ್ದವು. ಗಂಡು ಮಂಗ ಚರ್ಮವಾದ್ಯವೊಂದನ್ನು ಬಾರಿಸುತ್ತಿತ್ತು. ಗಂಡು, ಹೆಣ್ಣು ಎರಡೂ ಅತುಲಾನಂದದಿಂದ ನರ್ತಿಸುತ್ತಿದ್ದಂತೆ ತೋರುತ್ತಿತ್ತು.

ಬೇಟೆಗಾರ ಗಂಡು ಮಂಗಕ್ಕೆ ಗುರಿಯಿಟ್ಟು ಬಾಣ ಬಿಟ್ಟ. ಆದರೆ ತಪ್ಪಿ ಅದು ಹೆಣ್ಣಿಗೆ ಬಡಿಯಿತು. ಗಂಡು ತಟ್ಟನೆ ವಾದ್ಯವನ್ನು ಕೆಳಕ್ಕೆಸೆದು ಗಾಯಗೊಂಡ ಜೊತೆಗಾತಿಯನ್ನು ಎಲಕ್ಕೆತ್ತಿಕೊಂಡು ಬಂದು ಗಾಯಕ್ಕೆ ಯಾವುದೋ ಒಂದು ತೊಪ್ಪಲು ತಿಕ್ಕಿ ಹೆಂಡತಿ ಎಚ್ಚರಗೊಂಡು ಏಳುವಳೋ ಹೇಗೆಂದು ನೋಡಲೆಂಬಂತೆ ವಾದ್ಯವನ್ನು ಜೋರು ಜೋರಾಗಿ ಬಡಿಯತೊಡಗಿತು. ಆದರೂ ಹೆಣ್ಣು ಕೊನೆಯುಸಿರೆಳೆಯಿತು. ಗಂಡು ಬಹಳ ಹೊತ್ತು ದುಃಖಿಸಿ ಕೊನೆಗೆ ಕಲ್ಲುಗಳಿಂದ ಶವವನ್ನು ಪೂರ್ತಿ ಮುಚ್ಚಿ ಅದರ ಮೇಲೆ ತನ್ನ ವಾದ್ಯವನ್ನಿಟ್ಟು ಮ್ಲಾನವದನದಿಂದ ಅಲ್ಲಿಂದ ಹೊರಟುಹೋಯಿತು.

ಅವನ್ನೆಲ್ಲ ಮರೆಯಲ್ಲಿ ನಿಂತು ನೋಡುತ್ತಿದ್ದ ಬೇಟೆಗಾರ ಗಂಡು ಮಂಗ ಅಲ್ಲಿಂದ ಹೋದ ನಂತರ ಕುತೂಹಲದಿಂದ, ಅದು ಬಿಟ್ಟು ಹೋಗಿದ್ದ ವಾದ್ಯವನ್ನೆತ್ತಿಕೊಂಡು ಮನೆಗೆ ಮರಳಿದನು. ಮುಂದೆ ಕೆಲ ಸಮಯದಲ್ಲಿ ಅವನೂ ಅವನ ಮಿತ್ರರೂ ಅದನ್ನು ಬಾರಿಸಲು ಕಲಿತರು. ಅಂದಿನಿಂದಲೂ ಆ ಚರ್ಮವಾದ್ಯವನ್ನು ಬಾರಿಸಿದಾಗ ಸ್ತ್ರೀ ಪುರುಷರೆಲ್ಲ ಅದರ ತಾಳಕ್ಕೆ ಕುಣಿಯುವ ಪರಂಪರೆಯೂ ಬೆಳೆದು ಬಂತು.

ಇನ್ನೊಂದು ಕತೆಯ ಪ್ರಕಾರ ಚರ್ಮವಾದ್ಯಗಳು ಹುಟ್ಟಿದ್ದು ಹೀಗೆ. ಹಿಂದಿನ ಕಾಲದಲ್ಲಿ ಒಮ್ಮೆ ಒಬ್ಬ ಮನುಷ್ಯ ತನ್ನ ಊರಿನಿಂದ ದೂರದಲ್ಲಿರುವ ಹಳ್ಳಿಯಲ್ಲಿ ಸತ್ತ. ಅವನ ಭೂತವನ್ನಾದರೂ ಊರಿಗೆ ತರಬೇಕೆಂದು ಅವನ ಬಂಧು ಮಿತ್ರರು ಆ ಹಳ್ಳಿಗೆ ಹೋದರೂ ಭೂತ ಬರಲು ನಿರಾಕರಿಸಿತು. ವಾದ್ಯವೈಭವದಿಂದ ಕರೆದೊಯ್ಯುವುದಾದರೆ ಮಾತ್ರ ಬರುವುದಾಗಿ ಅದು ಕರಾರು ಹಾಕಿತು.

ಆದರೆ ಆ ಜನಕ್ಕೆ ವಾದ್ಯದ ಕಲ್ಪನೆ ಕೂಡ ಇರಲಿಲ್ಲ. ಏನು ಮಾಡುವುದೆಂದು ತಿಳಿಯದೆ ಅವರು ನಿತ್ಯ ಚರ್ಚಿಸುತ್ತಲೇ ನಡೆದರು. ದಾರಿ ಕಾಯ್ದು ಬೇಸತ್ತ ಭೂತ ತನ್ನೂರವರ ಕನಸಿನಲ್ಲಿ ಬಂದು ಹಲವಾರು ವಾದ್ಯಗಳನ್ನು ಹೇಗೆ ಮಾಡುವುದೆಂದು ತೋರಿಸಿಕೊಟ್ಟಿತು. ಅನಂತರ ಜನ ಆ ಭೂತವನ್ನು ವಾದ್ಯವೈಭವದ ಸಡಗರದಿಂದ ಊರಿಗೆ ಕರೆತಂದರು.

ಇನ್ನೂ ಒಂದು ಜಾನಪದ ಪರಂಪರೆಯಂತೆ ಮನುಕುಲದ ಆರಂಭ ಕಾಲದಲ್ಲಿ ದೇವರು ಮನುಷ್ಯರ ಬಗ್ಗೆ ತೀರ ಅಸಂತುಷ್ಟನಾಗಿದ್ದ. ಅವರು ಅರ್ಪಿಸುವ ನೈವೇದ್ಯ, ಬಲಿ ಮುಂತಾದ ಯಾವ ಸೇವೆಗಳೂ ಅವನಿಗೆ ತೃಪ್ತಿ ನೀಡಿರಲಿಲ್ಲ. ಅಂತೆಯೆ ಅವನು ಮನುಷ್ಯರಿಗೆ ಬಂದ ಬೇನೆ ಬೇಸರಿಕೆಗಳನ್ನು ನಿವಾರಿಸದಾದ, ಮಳೆ ಬೆಳೆಗಳನ್ನು ಕಾಲಕಾಲಕ್ಕೆ ನೀಡದಾದ. ಆಗ ಮನುಷ್ಯರೆಲ್ಲ ಗಾಬರಿಗೊಂಡರು. ಇದೇ ಸಮಯಕ್ಕೆ ಅವರಲ್ಲೇ ಒಬ್ಬನಿಗೆ ಒಂದು ಅಪೂರ್ವ ವಿಚಾರ ಹೊಳೆಯಿತು. ಅವನು ಕಾಡಿನಿಂದ ತಾಳೆಯ ಮರದ ಬೊಡ್ಡೆಯನ್ನು ಕಡಿದು ತಂದು ಅದನ್ನು ನಡುವೆ ಪೊಳ್ಳು ಮಾಡಿ, ಪೊಳ್ಳು ಜಾಗದ ಮೇಲೆ ಆಕಳ ಚರ್ಮವನ್ನು ಬಿಗಿದ. ಕೋಲಿನಿಂದ ಅದನ್ನು ಬಾರಿಸತೊಡಗಿದಾಗ ಆ ಗಂಭೀರ ಧ್ವನಿ ಜನಕ್ಕೆಲ್ಲ ತುಂಬ ಆಕರ್ಷಕವಾಗಿ

ಕೇಡರೆ ಅದನ್ನು ಕೇಳಿದ ದೇವರು ಸಹ ಸಂತುಷ್ಟನಾದ. ಅವರು ದೇವತಾರಾಧನೆಗೇ ಅವನ್ನು ಪಯೋಗಿಸತೊಡಗಿದಾಗ ಅವನು ಜನಕ್ಕೆಲ್ಲ ಸುಖ ಶಾಂತಿಯನ್ನೂ ಭಾಗ್ಯವನ್ನೂ ಕರುಣಿಸಿದ.

ಕನ್ನಡ ನಾಡಿನಲ್ಲಿ ಕುರುಬರು ಡೊಳ್ಳು ಬಾರಿಸುವುದನ್ನು ನೀವು ಕೇಳಿರಲೇಬೇಕು. ಬಹುಶಃ ಈ ವಾದ್ಯ ಸಮುಸಮೀಪ ಮನುಷ್ಯ ಪುರಾತನ ಕಾಲದಲ್ಲಿ ಸೃಷ್ಟಿಸಿದ ಚರ್ಮವಾದ್ಯಕ್ಕೆ ಹೆಚ್ಚು ಹತ್ತಿರವಾಗಿವೆಯೆಂದನಿಸುತ್ತದೆ. ಈ ಲೇಖನದ ಪ್ರಾರಂಭ ಪುಟದಲ್ಲಿರುವ ಚಿತ್ರವೇ ಡೊಳ್ಳು. ಭರಮದೇವರ ಪೂಜೆಗೆ ಹೊರಟಾಗ, ಯುಂಗಾಧಿ, ಕಾರಹುಣ್ಣಿಮೆ, ಮಹಾನವಮಿ, ಮುಂತಾದ ಹಬ್ಬ ಹರಿದಿನಗಳಲ್ಲಿ ದುಮುಗುಮಿಸುವ ಡೊಳ್ಳಿನ ನಾದ ಕಿವಿಗೆ ಗುಂಗು ಹಿಡಿಸುವಂಥದು. ಆದರೆ ಅವರು ಬಾರಿಸುವ ತಾಳದಲ್ಲಿ ಹೆಚ್ಚು ವೈವಿಧ್ಯವಿರುವುದಿಲ್ಲ.

ಡೊಳ್ಳಾಗಲಿ, ಹಲಿಗೆಯಾಗಲಿ, ನೀವು ಸಾಮಾನ್ಯವಾಗಿ ನೋಡುವ ಜಾನಪದ ಚರ್ಮವಾದ್ಯಗಳು. ಅವುಗಳೊಟ್ಟಿಗೆಯೇ ತಬಲಾ, ಮೃದಂಗ, ಚಂಡೆ, ಮದ್ದಳೆ, ತಾಶಾ, ಬ್ಯಾಂಡು ಮುಂತಾದವು ಸಹ ಕಣ್ಣಿಗೆ ಬೀಳುತ್ತವೆ. ತಬಲಾ, ಮೃದಂಗ, ಪಖ್ವಾಜ್‌ಗಳಂತಹ ಕೆಲ ವಾದ್ಯಗಳು ನಮ್ಮ ಹಿಂದುಸ್ತಾನಿ, ಕರ್ನಾಟಕಿ ಎರಡೂ ಸಂಗೀತ ಪದ್ಧತಿಗಳಲ್ಲಿ ಉನ್ನತ ಸ್ಥಾನ ಗಳಿಸಿವೆ. ಈ ವಾದ್ಯಗಳು ಪ್ರತ್ಯೇಕವಾಗಿ ಸಹ ಸಂಗೀತದ ಮುಖ್ಯ ಮಾಧ್ಯಮವಾಗಿ ಬಳಸಲ್ಪಡುವುದಿದೆ. ಹಲವಾರು ಮಾತ್ರೆಗಳಲ್ಲಿ ಒಂದೊಂದು ತಾಳಗಳನ್ನು ಇವುಗಳಿಂದ ಹೊರಡಿಸಲಾಗುತ್ತದೆ. ಮನುಷ್ಯರ ಹಾಗು ಪ್ರಾಣಿಗಳ ನಡಿಗೆಯಲ್ಲಿ ಕಂಡುಬರುವ ತಾಳಲಯಗಳೇ ಈ ಚರ್ಮ ವಾದ್ಯಗಳಿಗೆ ಮೂಲ ಸ್ಫೂರ್ತಿಯಾಗಿರಬೇಕು. ಸಂಸ್ಕೃತದಲ್ಲಿರುವ ಪ್ರಾಚೀನ ಸಂಗೀತ ಗ್ರಂಥಗಳಲ್ಲಿ ಚರ್ಮವಾದ್ಯಗಳನ್ನು ಅವನದ್ಧ ಅಥವಾ ಭಾಂಡವಾದ್ಯಗಳೆಂದು ಕರೆಯಲಾಗಿದೆ.

ಈ ಲೇಖನದೊಟ್ಟಿಗಿರುವ ಚಿತ್ರಗಳಲ್ಲಿ ಭಾರತದಲ್ಲಿ ಕಾಣಸಿಗುವ ಹಲವು ಚರ್ಮವಾದ್ಯಗಳನ್ನು ನೋಡಬಹುದು.

ಚಿತ್ರ (೧): ಲಕ್ಷ ದ್ವೀಪದ ಮೂಲನಿವಾಸಿಗಳು ಬಾರಿಸುವ ಡೊಳ್ಳಿನ ಮಾದರಿ. ನಮ್ಮ ಕುರುಬರು ಡೊಳ್ಳು ಬಾರಿಸಲು ಕೋಲನ್ನುಪಯೋಗಿಸಿದರೆ ಇವರು ಬರಿಗೈಯಿಂದಲೇ ಬಾರಿಸುತ್ತಾರೆ. ಚಿತ್ರ (೨) : ಬಿಹಾರದ 'ಹೋ' ಬಣಕ್ಕೆ ಸೇರಿದ ಆದಿವಾಸಿಯ ನಗಾರಿ. ಚಿತ್ರ (೩) : ಇದು ಮಹಾರಾಷ್ಟ್ರದ ಕೊಂಕಣ ಪಟ್ಟಿಯಲ್ಲಿ ಜನಪ್ರಿಯವಾಗಿರುವ ಕರಡೀಮಜಲು. ಚಿತ್ರ (೪) : ಮಧ್ಯಪ್ರದೇಶದ ಬಸ್ತಾರ್ ಜಿಲ್ಲೆಯ ಮಾರಿಯಾ ಜನಾಂಗದ ಯುವಕನೊಬ್ಬ ಎತ್ತಿನ ಕೋಡು ಕಟ್ಟಿಕೊಂಡು ವಾದ್ಯ ನುಡಿಸುತ್ತ ನರ್ತಿಸುತ್ತಿದ್ದಾನೆ. ಚಿತ್ರ (೫) : ಪಂಜಾಬಿ ನುಡಿಸುವ ಢೋಲ್. ಈ ವಾದ್ಯದ ಆಕಾರವನ್ನು ನೋಡಿದಾಗ ಕರ್ನಾಟಕದ ಡೊಳ್ಳು ಮತ್ತು ಪಂಜಾಬಿ ಢೋಲ್ ಒಂದೇ ವಾದ್ಯಕ್ಕೆ ಇರುವ ಎರಡು ಹೆಸರುಗಳೆನಿಸುವುದಲ್ಲದೆ ಈ ಎರಡೂ ವಾದ್ಯಗಳ ಮೂಲವೂ ಒಂದೇ ಇರಬೇಕೆಂದೆನಿಸುತ್ತದೆ. ಚಿತ್ರ (೬) : ಸಂಗೀತದಲ್ಲಿಂದು—ಮುಖ್ಯವಾಗಿ ಹಿಂದುಸ್ತಾನಿ ಪರಂಪರೆಯಲ್ಲಿ—ಅತ್ಯಂತ ಜನಪ್ರಿಯ ಅವನದ್ಧ ವಾದ್ಯ ತಬಲಾ. ತಬಲಾ ನುಡಿಸುವ ಕೆಲವರು ಆಗಲೆ ಗಾಯಕರಷ್ಟೇ ಪ್ರಖ್ಯಾತಿಯನ್ನು ಪಡೆದಿದ್ದಾರೆ. ಚಿತ್ರ (೭) : ಈಶಾನ್ಯ ಭಾರತದ ನಾಗಾದ ಯುವಕ ಬಾರಿಸುವ ವೈಶಿಷ್ಟ್ಯಪೂರ್ಣ ಚರ್ಮ ವಾದ್ಯ. ಇದನ್ನವನು ಒಂದು ಕೋಲಿಗಂಟಿಸಿಕೊಂಡು, ಹರಿಯುತ್ತಿರುವ ಹಾವಿನಂತೆ ಕಾಣುವ ಚಿತ್ರದ ಕೋಲಿನಿಂದ ಬಾರಿಸುತ್ತಿದ್ದಾನೆ. ಚಿತ್ರ (೮) : ಅರುಣಾಚಲದ ಗಿರಿಕನ್ಯೆ ಬಾರಿಸುತ್ತಿರುವ ಈ ಚಮರ ವಾದ್ಯ ಮೃದಂಗವನ್ನೇ ಹೋಲುತ್ತದೆ. ಚಿತ್ರ. (೯): ದೇಶದಲ್ಲಿ ಎಲ್ಲೆಲ್ಲೂ ಜಾನಪದ ಮಟ್ಟದಲ್ಲಿ

ಜನಪ್ರಿಯವಿರುವ ಖಂಜೀರಾ. ಚಿತ್ರ (೧೦): ಮಹಾರಾಷ್ಟ್ರದ ಕುರುಬರ ವಿಶಿಷ್ಟ ಡೊಳ್ಳು.

ಅನೇಕ ಪ್ರಾಚೀನ ಗ್ರಂಥಗಳಲ್ಲಿ ಸಂಗೀತವಾದ್ಯಗಳ ವಿವಿಧ ಪ್ರಕಾರಗಳನ್ನು ಕುರಿತು ಬರೆದವರು ನಿಜಗುಣಶಿವಯೋಗಿಗಳು. ಕ್ರಿ. ಶ. ೧೪-೧೫ನೆಯ ಶತಮಾನದಲ್ಲಿದ್ದ ಶಿವಯೋಗಿಗಳು ಚರ್ಮವಾದ್ಯಗಳ ಬಗ್ಗೆ ಬರೆಯುತ್ತ, "ಚರ್ಮವಂ ಕಟ್ಟಿ ಬಾಜಿಸುವ ಆವುಜೆ ಮೊದಲಾದವೇ ಆನದ್ಧವೆನಿಸುವುದು," ಎಂದಿದ್ದಾರೆ. ಇನ್ನೊಂದೆಡೆ, "ಬಳಿಕ ಶುದ್ಧ, ಸಾಳಗ, ಸಂಕೀರ್ಣ, ತಪಣೆಗಳೆಂಬ ಚತುರ್ವಿಧ ಪ್ರಬಂಧಗಳಂ ಮೇಳೈಸಿ ಕತ್ತರ, ಜೊಟ್ಟಿಗಡಾದಿ ಭೇದಂಗಳನಳವಡಿಸಿ, ತ್ವಂಕ್ಯ, ಆಲಿಂಗ್ಯ, ಊರ್ಧ್ವಕವೆಂಬ ತ್ರಿವಿಧ ಕ್ರಮವಱಿದು ನುಡಿಸುವ ಕಡುಜಾಣರಪ್ಪ ಮರ್ದಳೆಕಾರರಿಂ ಬಳಿಕ ಕೆಂದಾವುಜ, ಪಟಾವುಜ, ಕುಡವಾವುಜ, ಅಡಾವುಜವೆಂಬ ನಾಲ್ಕು ತೆರದ ಆವುಜಮನೋಜ್ಞಯಿಂ ಬಾಜಿಸುವಾವುಜಕಾರಂ," ಎಂದು ವರ್ಣಿಸಿದ್ದಾರೆ.

ಅವನದ್ಧ ವಾದ್ಯಗಳಿಗೆ ರಾಜ ದರ್ಬಾರಿನಲ್ಲಿ ಬಹು ಮಹತ್ವದ ಸ್ಥಾನ ದೊರೆತುದು ಮೊಗಲ ಬಾದಶಹರ ಕಾಲದಲ್ಲಿ. ಉದಾಹರಣೆಗೆ ಅಕ್ಬರನ ಆಡಳಿತದಲ್ಲಿ ವಿಶೇಷ ಪ್ರಸಂಗಗಳಲ್ಲಿ ಬಾರಿಸಲಾಗುತ್ತಿದ್ದ ನೌಬತ್ತಿನಲ್ಲಿ (ಒಂಬತ್ತು ವಾದ್ಯಗಳು) ಮೂರು ಅವನದ್ಧ ವಾದ್ಯಗಳು. ಮೊದಲನೆಯದು ಕೂರ್ಗ ಎಂಬ ದೊಡ್ಡ ಆಕಾರದ ಅವನದ್ಧ ವಾದ್ಯ; ಎರಡನೆಯದು ನಕ್ಕಾರಾ (ನಗಾರೆ) ಎಂಬ ಸಾಧಾರಣ ದೊಡ್ಡ ಭಾಂಡ ವಾದ್ಯ; ಹಾಗೂ ಮೂರನೆಯದು ಢೋಲ್ (ಡೊಳ್ಳು) ಎಂಬ ಪೀಪಾಯಿಯಾಕಾರದ ಎರಡೂ ಬದಿಗೆ ಚರ್ಮಾಚ್ಛಾದನವಿರುವ ಅವನದ್ಧ ವಾದ್ಯ. ಈ ಅವನದ್ಧ ವಾದ್ಯಗಳ ಜೊತೆಗೆ ಶಹನಾಯಿ, ಸಣ್ಣ ದೊಡ್ಡ ತುತ್ತೂರಿ, ಕಹಳೆ, ಝಾಂಜಗಳಂಥ ವಾದ್ಯಗಳನ್ನಿಟ್ಟು ನೌಬತ್ತು ಬಾರಿಸುತ್ತಿದ್ದ ಕೋಣೆಗೆ 'ನಕ್ಕಾರಖಾನಾ' (ನಗಾರಖಾನೆ) ಎಂದೇ ಹೆಸರಿತ್ತು. ಅಂದಾಗ ಚರ್ಮವಾದ್ಯಗಳಿಗೆ ಆಗ ಇದ್ದ ಮಹತ್ವವೆಷ್ಟೆಂಬುದು ಅರ್ಥವಾಗುತ್ತದೆ.

ಜಗತ್ತು ತಾಲ ನಿಯಮದಿಂದ ಬದ್ಧವಾಗಿದೆಯೆಂಬ ಒಂದು ಸೂಕ್ಷ್ಮ ಸತ್ಯದ ಅರಿವು ಮನುಷ್ಯನಿಗೆ ಬರುವುದು ಚರ್ಮವಾದ್ಯಗಳ ಮೂಲಕವೇ. ಅಂತೆಯೇ ತೀರ ಕಾಡು ಎಂದೆನಿಸುವ ಜನಗಳಲ್ಲೂ ಮೂಲ ಮಹತ್ವವಿರುವುದು ಈ ಅವನದ್ಧ ವಾದ್ಯಗಳಿಗೆಯೇ ಹೊರತು ಬೇರೆ ಬಗೆಯವುಗಳಿಗಲ್ಲ. ಭಾರತವಂತೂ ಚರ್ಮವಾದ್ಯಗಳ ತೌರುಮನೆಯೇ ಅನ್ನಿಸುವಷ್ಟು ವೈವಿಧ್ಯದಿಂದ ಕೂಡಿದೆ. ✡

ಒಬ್ಬ ಅಪರಾಧಿ ಸ್ನಾನ ಮಾಡಬೇಕೆನ್ನುವಷ್ಟರಲ್ಲಿ ಕಾವಲುಗಾರ ತಡೆದ. ಅದಕ್ಕೆ ಅಪರಾಧಿ ಕೆಟ್ಟದಾಗಿ ನುಡಿದನು: "ಈ ಸೆರೆಮನೆಯಲ್ಲಿ ಸ್ನಾನ ಮಾಡಬಾರದು ಎನ್ನುವ ನಿಯಮವನ್ನು ನಾನು ಬರುವಾಗ [illegible] ಏಕೆ ಹೇಳಲಿಲ್ಲ?"

"ಇಲ್ಲಿ ಕೇವಲ ಸ್ನಾನ ಮಾಡುವುದಕ್ಕೆ ಮಾತ್ರ ನಿಷೇಧ" ಕಾವಲುಗಾರ ಕೂಡಲೆ ಉತ್ತರಿಸಿದ.

*

"ನೀನು ಮತ್ತೊಂದು ವಿವಾಹ ಏಕೆ ಮಾಡಿಕೊಳ್ಳಬಾರದು?"

"ಇದಕ್ಕೆ ನಾಲ್ಕು ಕಾರಣಗಳಿವೆ."

"ಯಾವವು?

"ಒಬ್ಬ ಹುಡುಗ ಮತ್ತು ಮೂರು ಹುಡುಗಿಯರು." ಎಸ್. ಕೆ. [illegible]

ಪಾ. ವೆಂ. ಆಚಾರ್ಯ ಸನ್ಮಾನ ಸಮಿತಿ

ಮಾನ್ಯರೆ,

ಶ್ರೀಮಾನ್ ಪಾಡಿಗಾರು ವೆಂಕಟರಮಣ ಆಚಾರ್ಯರು ತಮ್ಮ ಬಹುಮುಖ ಪ್ರತಿಭೆಯಿಂದ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಹಿರಿಯ ಪತ್ರಿಕೋದ್ಯಮಿಗಳು. ಸ್ವತಃ ಪ್ರಖರ ಚಿಂತಕರೂ ಶ್ರೇಷ್ಠ ಲೇಖಕರೂ ಆಗಿರುವ ಆಚಾರ್ಯರು ಜಗತ್ತಿನ ಮೂಲೆ-ಮೂಲೆಗಳಿಂದ ಜ್ಞಾನವಿಜ್ಞಾನಗಳನ್ನು ಕುರಿತ ಲೇಖನಗಳನ್ನು ಸಂಗ್ರಹಿಸಿ "ಕಸ್ತೂರಿ"ಯ ಮೂಲಕ ಅವನ್ನು ಕನ್ನಡ ಜನತೆಗೆ ಉಣಿಸಿ ಪತ್ರಿಕೋದ್ಯಮದಲ್ಲಿ ಉತ್ತಮವಾದ ಪರಂಪರೆಯನ್ನು ಸ್ಥಾಪಿಸಿದ್ದಾರೆ. ನಾಡಿನ ತರುಣ ಪ್ರತಿಭಾನ್ವಿತರನ್ನು ಗುರುತಿಸಿ ಹುರಿದುಂಬಿಸಿ ಅವರಿಂದ ಲೇಖನಗಳನ್ನು ಬರೆಸಿ "ಕಸ್ತೂರಿ"ಯಲ್ಲಿ ಪ್ರಕಟಿಸಿ ಸಮರ್ಥ ಲೇಖಕರ ಪೀಳಿಗೆಯನ್ನು ಸೃಷ್ಟಿಸಿದ್ದಾರೆ.

ಐವತ್ತು ವರ್ಷಗಳಿಂದಲೂ ಸತತ ಕ್ರಿಯಾಶೀಲರಾಗಿರುವ ಶ್ರೀ ಪಾ. ವೆಂ. ಆಚಾರ್ಯರು ಪತ್ರಿಕೋದ್ಯಮದ ಆಚಾರ್ಯರೂ ವಿಚಾರವಂತರ ಅಧ್ವರ್ಯುವೂ ಆಗಿದ್ದಾರೆ. ಶ್ರೀಯುತರ ಸುದೀರ್ಘ ಸಫಲ ಸೇವೆಯನ್ನು ಕನ್ನಡ ಜನತೆ ಕೃತಜ್ಞತೆಯಿಂದ ಸ್ಮರಿಸುತ್ತದೆ. ಇದರ ದ್ಯೋತಕವಾಗಿ ಇವರಿಗೆ ಎಲ್ಲ ಕನ್ನಡ ಜನರ ಪರವಾಗಿ ಸಾರ್ವಜನಿಕ ಸನ್ಮಾನವನ್ನು ಏರ್ಪಡಿಸಬೇಕೆಂದು ನಿರ್ಧರಿಸಿದ್ದೇವೆ. ಈ ಸಮಾರಂಭದ ಅಂಗವಾಗಿ ಶ್ರೀ ಪಾ. ವೆಂ. ಆಚಾರ್ಯರಿಗೆ ನಿಧಿಯನ್ನು ಸಮರ್ಪಿಸಬೇಕೆಂದು ಉದ್ದೇಶಿಸಲಾಗಿದೆ. ಇದೇ ಸಂದರ್ಭದಲ್ಲಿ ನೆನಪಿನ ಸಂಚಿಕೆಯನ್ನೂ ಆಚಾರ್ಯರ ಹರಟೆಗಳ ಸಂಕಲನವನ್ನೂ ಹೊರತರಬೇಕೆಂದು ಯೋಜಿಸಲಾಗಿದೆ.

ಶ್ರೀ ಪಾ. ವೆಂ. ಆಚಾರ್ಯರ ಬಹುಮುಖಿ ಸೇವೆಯನ್ನು ಬಲ್ಲ ನೀವು ಮೇಲೆ ವಿವರಿಸಿರುವ ಉದ್ದೇಶಗಳ ಪೂರ್ತಿಗಾಗಿ ಕೊಡುಗೈಯಿಂದ ಮುಂಬಂದು ಧನಸಹಾಯ ಮಾಡಬೇಕೆಂದೂ ನಿಮ್ಮ ಇಷ್ಟಮಿತ್ರರಿಂದ ಕೂಡ ಇದಕ್ಕೆ ನೆರವು ಕೊಡಿಸಬೇಕೆಂದೂ ಪ್ರಾರ್ಥಿಸುತ್ತೇವೆ.

ಹಣವನ್ನು ಕ್ರಾಸ್ ಮಾಡಿದ ಚೆಕ್ ಇಲ್ಲವೇ ಬ್ಯಾಂಕ್ ಡ್ರಾಫ್ಟ್ ಮೂಲಕ "ಪಾ. ವೆಂ. ಆಚಾರ್ಯ ಸನ್ಮಾನ ಸಮಿತಿ, ಮೈಸೂರು" ಈ ಖಾತೆಗೆ ಪಾವತಿ ಆಗುವಂತೆ ಬರೆದು ಸಮಿತಿಯ ಕಾರ್ಯದರ್ಶಿಯವರಿಗೆ ರವಾನಿಸಬಹುದು; ಅಥವಾ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯ ಮೂಲಕ ಅದೇ ಬ್ಯಾಂಕಿನ ಸರಸ್ವತೀಪುರಂ—ಮೈಸೂರು ಶಾಖೆಯಲ್ಲಿರುವ "ಸೇವಿಂಗ್ಸ್ ಬ್ಯಾಂಕ್ ಖಾತೆ ಸಂಖ್ಯೆ ೫೦೬೭ ಪಾ. ವೆಂ. ಆಚಾರ್ಯ ಸನ್ಮಾನ ಸಮಿತಿ"ಗೆ ವರ್ಗಾಯಿಸಿ (ಮೈಲ್ (ಟ್ರಾನ್ಸ್‌ಫರ್) ನೀವು ಪಾವತಿ ಮಾಡಿರುವ ಮೊಬಲಗು, ನಿಮ್ಮ ಹೆಸರು, ವಿಳಾಸ ಮುಂತಾದ ವಿವರಗಳನ್ನು ಪತ್ರಮುಖೇನ ಸಮಿತಿಯ ಕಾರ್ಯದರ್ಶಿಯವರಿಗೆ ತಿಳಿಸಬಹುದು.

ಸನ್ಮಾನ ಸಮಾರಂಭದ ವಿಚಾರವು, ಧನಸಂಗ್ರಹ ಮುಂತಾದ ವಿವರಗಳನ್ನು ಕುರಿತಂತೆ ಸಮಸ್ತ ಪತ್ರವ್ಯವಹಾರಗಳನ್ನು ಕಾರ್ಯದರ್ಶಿಗಳೊಡನೆ, ನೆನಪಿನ ಸಂಚಿಕೆಯಲ್ಲಿ ಜಾಹಿರಾತು ಮುದ್ರಣದ ವಿವರಗಳನ್ನು ಜಾಹಿರಾತು ಕಾರ್ಯದರ್ಶಿಗಳೊಡನೆ, ನೆನಪಿನ ಸಂಚಿಕೆಯಲ್ಲಿ ಲೇಖನ ಮುದ್ರಣ ವಿವರಗಳನ್ನು ಸಂಚಿಕೆಯ ಸಂಪಾದಕರೊಡನೆ ನೇರವಾಗಿ ಮಾಡಬೇಕಾಗಿ ವಿನಂತಿ.

ಕಾರ್ಯದರ್ಶಿ	ಎಂ. ಗೋಪಾಲಕೃಷ್ಣ ಅಡಿಗ
ಜಿ. ಟಿ. ನಾರಾಯಣರಾವ್	ಅಧ್ಯಕ್ಷ

"ಅತ್ರಿ" ಎಂಟನೆಯ ಅಡ್ಡರಸ್ತೆ ಸರಸ್ವತೀಪುರಂ ಮೈಸೂರು 570009

ವಿಚಾರ ತರಂಗ

ಭವಿಷ್ಯತ್ತು

ಧರ್ಮ-ಸಂಸ್ಕೃತಿಗಳಲ್ಲಿ ನಿಹಿತವಾದ ಆದರ್ಶಗಳನ್ನೂ ಅವುಗಳೊಳಗೆ ವ್ಯಾಪಕವಾಗಿ ಹರಡಿದ ಗೂಢಾರ್ಥಗಳನ್ನೂ ಅರಿಯಲು ಭೂತಕಾಲವನ್ನನುಸರಿಸುವುದು ಎಷ್ಟೇ ಸ್ವಾಭಾವಿಕವಾದರೂ ಅದು ಸರಿಯಾದ ಮಾರ್ಗವಲ್ಲ. ಮಿಂಚಿ ಹೋದ ಕಾಲ ಎಂದಿಗೂ ಮರಳಿಬರುವುದಿಲ್ಲ. ಒಮ್ಮೆ ಸತ್ತುಹೋದ ಭೂತಕಾಲವನ್ನು ಪುನರುಜ್ಜೀವಿಸಲು ನಾವು ಏಕಾದರೂ ಪ್ರಯತ್ನಿಸಬೇಕು? ಗತಕಾಲದ ಬಗೆಗಾಗಲಿ ನಮ್ಮ ಪೂರ್ವಜರ ಬಗೆಗಾಗಲಿ ಆದರವನ್ನಿಟ್ಟುಕೊಳ್ಳುವುದು ಒಳ್ಳೆಯದೇನೋ ಸರಿ. ಆದರೆ ಅದರ ಅರ್ಥ ನಾವು ಅವರ ದಾಸರಾಗಬೇಕೆಂದೇನೂ ಆಗುವುದಿಲ್ಲ. ವರ್ತಮಾನವನ್ನು ತುಚ್ಛವೆಂದು ತಿಳಿಯುವುದೂ ಗತಕಾಲದ ಬಗೆಗೆ ಅತಿಯಾದ ಆದರ ಭಾವವನ್ನಿಟ್ಟುಕೊಳ್ಳುವುದೂ ಎಂದರೆ ಭವಿಷ್ಯತ್ತಿಗೆ ದ್ರೋಹ ಬಗೆದಂತೆ.

ಒಂದು ರೀತಿಯಲ್ಲಿ ಭವಿಷ್ಯತ್ತು ಪರಮಾತ್ಮನ ಬರಲಿರುವ ಅವತಾರವೇ ಸರಿ. ಆದ್ದರಿಂದ ಭೂತಕಾಲ ಪವಿತ್ರವಾಗಿದ್ದರೆ ಭವಿಷ್ಯತ್ತು ಅದಕ್ಕಿಂತಲೂ ಹೆಚ್ಚು ಪವಿತ್ರವಾಗಿದೆ. ಗತಕಾಲದ ಬಂಧನ ಪ್ರಗತಿಗೆ ಮಾರಕವಾಗಿದ್ದರೆ ಇಂತಹ ಬಂಧನದಿಂದ ಮುಕ್ತರಾಗುವುದೇ ನಮ್ಮ ಆದ್ಯ ಕರ್ತವ್ಯವಾಗುತ್ತದೆ.

–ಕಾಕಾ ಕಾಲೇಲಕರ

ಇವರು ವಿಜ್ಞಾನಿಗಳೆ?

ಭಾರತೀಯ ವಿಜ್ಞಾನಿಗಳಲ್ಲಿ ಬಹುತೇಕ ಜನರಿಗೆ ತಮ್ಮ ಸ್ಥಾನಮಾನದ ಬಗೆಗಾಗಲಿ ತಮ್ಮ ಸಂಬಳದ ಬಗೆಗಾಗಲಿ ಇರುವಷ್ಟು ಆಸಕ್ತಿ ತಮ್ಮ ಕೆಲಸದ ಬಗೆಗೇ ಇರುವುದಿಲ್ಲ. ಪ್ರಾಚೀನ ಭಾರತದಲ್ಲಿ ಜನರ ಮನೋವೃತ್ತಿ ಇದಕ್ಕೆ ತದ್ವಿರುದ್ಧವಾಗಿತ್ತು. ದುರ್ದೈವದಿಂದ ಭಾರತದಲ್ಲಿ ಕಂಡುಬರಬೇಕಾದ ಈ ಮನೋವೃತ್ತಿ ಯುರೋಪಿಯನ್ ದೇಶಗಳಲ್ಲಿ ಇಂದು ಕಂಡುಬರುತ್ತಿದೆ. ರಾಯಲ್ ಸೊಸಾಯಿಟಿಯ ಕೌನ್ಸಿಲ್ಲಿನ ಗೌರವಾನ್ವಿತ ಸದಸ್ಯರೊಬ್ಬರು (ಹೆಸರು ಹೇಳಬೇಕೆಂದರೆ ಆರ್. ಸಿ. ಮ್ಯಾಕ್-ಕ್ಯಾನ್ಸ್) ಕೊಳೆಯಾದ ಬಟ್ಟೆ ಧರಿಸಿ ಹೆಗಲಮೇಲೆ ಸಾಮಾನುಗಳ ಭಾರ ಹೊತ್ತು ಕೌನ್ಸಿಲ್ಲಿನ ಸಭೆಗೆ ಹಾಜರಾಗುತ್ತಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಆದರೆ ಇಂದು ಭಾರತದಲ್ಲಿ ವಶಿಷ್ಠ,

ಪಿತೃ ಮಿತ್ರ, ಗುರ್ಜಾಸಂತತ ಶ್ರೇಷ್ಠ ಕುಲ ಪರಂಪರೆಗೆ ಸೇರಿದ ಈ ಅಯೋಗ್ಯ ಜನರು ರಾಜ್ಯಪಾಲ, ಮಂತ್ರಿಗಳಂತಹ ಜನರನ್ನು [illegible] ಸಭೆಗಳಿಗೆ ಆಮಂತ್ರಿಸುವುದು ಸಾಮಾನ್ಯವಾಗಿದೆ.

–ಜೆ. ಬಿ. ಎಸ್. ಹಾಲ್ಡೇನ್

ಸತ್ಯ

ಗೌರವವನ್ನು ಕಳೆದುಕೊಳ್ಳುವ ಪ್ರಸಂಗ ಬಂದರೂ ಬರಲಿ; ಪ್ರೇಮದಿಂದ ವಂಚಿತಳಾಗುವ ಪ್ರಸಂಗ ಬಂದರೂ ಬರಲಿ; ಆದರೆ ಸತ್ಯವನ್ನು ನಾನು ಕೈಬಿಡಲಾರೆ. ಸತ್ಯವನ್ನು ಪರಿಪಾಲಿಸುವುದಲ್ಲದೆ ಅದನ್ನು ಸರ್ವತ್ರವೂ ಅಧಿಷ್ಠಿಸುವುದು ನನ್ನ ಜೀವನಧರ್ಮ. ಸತ್ಯ-ಶೋಧನೆಗಾಗಿ ಮರುಭೂಮಿಯಲ್ಲಾದರೂ ಅಲೆದೇನು, ಈ ಸಾಹಸದಲ್ಲಿ ಪ್ರೇಮದಿಂದ ವಂಚಿತಳೂ ಆದೇನು. ಆದರೆ ಸತ್ಯದಿಂದೆಂದೂ ವಿಮುಖಳಾಗುವುದಿಲ್ಲ. ನಾನು ಸತ್ತನಂತರ ನನ್ನ ಸಮಾಧಿಯ ಮೇಲೆ, "ಆಕೆ ಸದಾ ಸತ್ಯವಂತಳಾಗಿರಲು ಪ್ರಯತ್ನಿಸಿದಳು," ಎಂಬ ವಾಕ್ಯ ಸಾಕು. ಬೇರಾವ ಹೊಗಳಿಕೆಯೂ ನನಗೆ ಬೇಕಿಲ್ಲ.

–ಆ್ಯನಿ ಬೆಸೆಂಟ್

ಪುನರ್ಜನ್ಮ

ಭಾರತ ಆಂತರಂಗಿಕವಾಗಿ ಶಾಂತಿಯನ್ನು ಪ್ರಸ್ಥಾಪಿಸುವುದಲ್ಲದೆ ಗಡಿಗಳಲ್ಲೂ ಶಾಂತಿಯನ್ನು ಕಾಪಾಡಿಕೊಳ್ಳಬೇಕಾಗಿದೆಯೇ? ದೇಶದ ಆರ್ಥಿಕ ಸಾಧನಗಳನ್ನು ಅಭಿವೃದ್ಧಿಪಡಿಸಿಕೊಳ್ಳಬೇಕಾಗಿದೆಯೇ? ಅಥವಾ ಕಲೆ, ವಾಣಿಜ್ಯ, ವಿಜ್ಞಾನ ಮುಂತಾದ ರಂಗಗಳಲ್ಲಿ ಮುಂದುವರಿಯಬೇಕಾಗಿದೆಯೇ? ಹಾಗಾದರೆ ಇದಕ್ಕೆ ಪೂರ್ವಭಾವಿಯಾಗಿ ಹಿಂದುತ್ವ ಹಾಗೂ ಇಸ್ಲಾಮುಗಳೆರಡೂ ಪುನರ್ಜನ್ಮವನ್ನು ಪಡೆಯಬೇಕಾಗುವುದು. ಅವಕ್ಕಾಗಿ ಅವೆರಡೂ ಸತ್ವಪರೀಕ್ಷೆಗೀಡಾಗಬೇಕಾಗಿದೆಯಲ್ಲದೆ ತರ್ಕ ವಿಜ್ಞಾನಗಳ ಕುಲುಮೆಯಲ್ಲಿ ಚಿನ್ನದಂತೆ ಚೊಕ್ಕವಾಗಿ ಪುನರ್ಜನ್ಮವನ್ನೂ ಪುನರ್ಯೌವನವನ್ನೂ ಪಡೆಯಬೇಕಾಗುವುದು.

–ಡಾ. ಯದುನಾಥ ಸರಕಾರ

ಸ್ಥಾನಮಾನ

ಉಚ್ಚ ನೀಚ ಎಂಬ ಭಾಗವನ್ನು ತೆಗೆದು ಹಾಕುವುದು ಸುಧಾರಣೆಗಳಲ್ಲಿ ಒಂದು ಎಂದು ಹೇಳಿದ್ದಾಗಿದೆ. ಹೀಗೆಂದರೆ ಏನು ? ಉಚ್ಚ ನೀಚ ಸ್ಥಿತಿಗಳೇ ಇಲ್ಲದಂತೆ ಮಾಡುವುದೆಂತಲೇ ? ಇದು ಸಾಧ್ಯವಿಲ್ಲ. ಒಂದು ಮೈಯಲ್ಲೇ ತಲೆ ಕಾಲು ಇವೆ. ತಲೆ ಉಚ್ಚ; ಕಾಲು ನೀಚ. ಇಷ್ಟೇ, ಉಚ್ಚ ಎಂದು ತಲೆಯು ಕಷ್ಟ ಸುಖವನ್ನು ಮಾತ್ರ ನೋಡಿಕೊಂಡು, ಕಾಲನ್ನು ನೀಚ ಎಂದು ಅನಾದರಿಸುವುದು ವಿವೇಕವಲ್ಲ. ಉಚ್ಚ ನೀಚದ ಭೇದಭಾವ ಹೋಗಬೇಕೆನ್ನುವುದರ ಅರ್ಥ ಉಚ್ಚ ಆದದ್ದು ತಾನು ಉಚ್ಚ ಎಂದು ಅಹಂಕಾರಪಡಬಾರದು, ನೀಚ ತಾನು ನೀಚ ಎಂದು ಹೀನಾಯಪಡಬಾರದು ಎನ್ನುವುದು. ತಲೆ ಕಾಲು ಎರಡೂ ದೇಹಕ್ಕೆ ಅವಶ್ಯಕವಾದ ಭಾಗಗಳು, ದೇಹದ ಬಾಳಿಗೆ ಎರಡೂ ಸಾಧನಗಳಾಗಿವೆ.

–ಮಾಸ್ತಿ ವೆಂಕಟೇಶ ಅಯ್ಯಂಗಾರ್

ಇದು ನಿಮ್ಮ ಕತೆ, ನಮ್ಮದೂ ಹೌದು....

ಪೇಚಿನ ಪ್ರಸಂಗಗಳು

ಕೆ. ಚಂದ್ರಮೌಳಿ

'ಒಂದು ತಮಾಷೆಯಾಗೋಯ್ತು ನೋಡಿ' ಎಂದು ಎಂತದೋ ಗೋಳಿನ ಕಥೆಯನ್ನು ವಿವರಿಸುವವರೇ ಹೆಚ್ಚು. ಅದು ಬಿಟ್ಟು 'ಒಂದು ಗೋಳಿನ ಕಥೆ ಕೇಳಿ' ಎಂದಾಗಲಿ 'ಪೇಚಿಗೆ ಸಿಕ್ಕಿಬಿದ್ದೆ 'ಎಂದಾಗಲಿ ಯಾರಾದರೂ ಶುರು ಮಾಡಿದ್ದನ್ನು ನೀವೆಲ್ಲಾದರೂ ಕೇಳಿದ್ದೀರೇನು? ಹಾಗೆ ಕೇಳಿದ್ದರೆ ನೀವು ಅವರ ಕಥೆ ಮಾತ್ರ ಖಂಡಿತಾ ಕೇಳಿರುಲ್ಲ, ಊರ್ವಶಿ ಅರ್ಜುನಂಗೇ ನೀ ಶಿಖಂಡಿಯಾಗೆಂದು ಶಾಪ ಕೊಟ್ಟಾಗ ಅವನ ಮುಖದಲ್ಲಿ ಹೇಗೆ ನೀರಿಳಿದಿರಬೇಕು? ಅವನು ಈ ಪೇಚಿನ ಕಥೆಯನ್ನು ಯಾರಿಗಾದರೂ ಹೇಗೆ ಹೇಳಿದನೋ ಅಥವಾ ನುಂಗಿಕೊಂಡೇ ಇದ್ದನೋ ಅದಿನ್ನೂ ತಿಳಿದೇ ಇಲ್ಲ. ಆ ಶಾಪದ ವಿಚಾರ ಹಾಗಿರಲಿ, ಅವನು ಒಂದು ವರ್ಷ ತನ್ನ ವೀರ ಗಂಡುಗಲಿತನ ಮರೆತು ಶಿಖಂಡಿಯಾಗಿದ್ದಾಗಿನ ಆ ಪೇಚಿನ ಪ್ರಸಂಗವನ್ನು ಹೇಗೆ ಕಳೆದನೋ ಅದು ಅವನೊಬ್ಬನಿಗೇ ಗೊತ್ತು. ಅದನ್ನು ಹಲ್ಲು ಹಿಡಿದು ಸಹಿಸಿಕೊಂಡ ಅವನದೇ ಗಂಡು ಹೃದಯ! ಇನ್ನೊಂದು ಪೇಚಿನ ಪ್ರಸಂಗದ ಉದಾಹರಣೆ ನೋಡಿ. ಶೇಕ್ಸ್‌ಪಿಯರನ ನಾಟಕಗಳ ಫಾಲ್‌ಸ್ಟಾಫನ ವ್ಯಕ್ತಿತ್ವ ಕೇಳೇ ಇದ್ದೀರಿ. ಇವನನ್ನು ಪೇಚಿಗೆ ಸಿಕ್ಕಿಸಬೇಕೆಂದೇ ರಾಜಕುಮಾರ ಮತ್ತು ಅವನ ಸ್ನೇಹಿತರು ಕಳ್ಳರಂತೆ ವೇಷ ಧರಿಸಿ, ಫಾಲ್‌ಸ್ಟಾಫನನ್ನು ದೋಚಿ, ಅವನನ್ನು ಹೆದರಿಸಿ ಓಡಿಸುತ್ತಾರೆ. ಈ ಸೋಲನ್ನು ಮುಚ್ಚಿಡಲು ಫಾಲ್‌ಸ್ಟಾಫ್ ಶೌರ್ಯದ ಕಥೆ ಕಟ್ಟಿ ಹೇಳುತ್ತಾನೆ. ಕಥೆ ಹೇಳುವ ಜೋರಿನಲ್ಲಿ ಅವನು ವಿವರಿಸುತ್ತಿದ್ದ ಇಬ್ಬರು ದಪ್ಪ ಬಟ್ಟೆಯ ಕಳ್ಳರು, ಕಥೆಯು ಕಾವೇರಿದಂತೆ ಹೆಚ್ಚುತ್ತಾ ಹೋಗಿ ಹನ್ನೊಂದು ಜನ ಕಳ್ಳರಾಗಿ ಬಿಡುತ್ತಾರೆ. ಇವನ ಆಟಾಟೋಪ, ಬಡಾಯಿತನ ತಾಳಲಾರದೆ ರಾಜಕುಮಾರ ನಿಜ ಹೇಳಿ ಫಾಲ್‌ಸ್ಟಾಫನ್ನು ಪೇಚಿಗೆ ಸಿಗಿಸಿದೆ ಅಂದುಕೊಂಡಾಗ ಫಾಲ್‌ಸ್ಟಾಫನ ಉತ್ತರವೇನು ಗೊತ್ತೆ?— "ರಾಜಕುಮಾರ, ಅದಕ್ಕೇ ಇನ್‌ಸ್ಟಿಂಕ್ಟ್ ಅನ್ನೋದು— ಸಿಂಹ ಸಹ ರಾಜಕುಮಾರನ ಮೇಲೆ ಬೀಳುಲ್ಲ. ಅದರೆ ನೀನು ಹೇಗೆ ನಿಜವಾಗಿ - ರಾಜಕುಮಾರನೋ ಹಾಗೇ ನಾನು ಸಹ ನಿಜವಾಗಿ ಸಿಂಹದ ಕೆಚ್ಚೆಯುವ..." ಅನ್ನುತ್ತಾನೆ. ಇಂತಹ ಖರಟು ಚರ್ಮದ, ಮೊಂಡರು ಪೇಚಿಗೆ ಬಿದ್ದರೂ ಯೋಚನೆಯಿಲ್ಲ, ನಗುನಗುತ್ತಾ ಹೊರಬರುತ್ತಾರೆ.

ಪ್ರತಿಯೊಬ್ಬನೂ ಒಂದಲ್ಲ ಒಂದು ಸಲ ಯಾವುದಾದರೊಂದು ರೀತಿಯಲ್ಲಿ ಪೇಚಿಗೆ ಸಿಕ್ಕೇ ಇರ್ತಾನೆ. ಹೆಚ್ಚು ಜನ ಅಂಥ ಪ್ರಸಂಗ ಮರೆಯಲೋ ಅಥವಾ ಮರೆಸಲೋ ಪ್ರಯತ್ನಿಸುತ್ತಾರೆ. ವಿಷಯ ಹೊರಬಂದರೆ ತಾನೆಲ್ಲಿ ನಗೆಪಾಟಲಿಗೆ ಗುರಿಯಾಗುತ್ತೇನೋ ಅಂತ ಹೆದರಿಕೆ. ಇನ್ನೂ ಒಂದು ರೀತಿಯ ಪೇಚು ನೋಡಿ. ಉತ್ತರಕುಮಾರ ತನ್ನ ಪೌರುಷವನ್ನು ಹೆಂಗಳೆಯರ ಮುಂದೆ, ಒಲೆ ಮುಂದೆ ಕೊಚ್ಚಿದ್ದೇ ಕೊಚ್ಚಿದ್ದು. ಆದರೆ ನಿಜವಾಗಿ ಕೌರವ ಸೇನೆಯನ್ನು ನೋಡಿ-

[illegible] ಅಷ್ಟೆ, ಬಿಪೆತ್ತೂಬಿಟ್ಟನಂತೆ. ಇದೆಲ್ಲಾ ನೋಡಿದರೆ ಎಷ್ಟೋ ವೇಳೆ ನಮಗೆ ನಾವೆ ಪೇಚಿಗೆ ಸಿಕ್ಕಿಸಿ-ಕೊಳ್ತೀವಿ ಅನ್ನಿಸುತ್ತೆ. ನಾವು ಯಾವ ವಿಚಾರ-ದಲ್ಲಿ ತುಂಬ ಹೆಚ್ಚು ಜಂಭ ಕೊಚ್ಚಿಕೊಳ್ತ್ತಿ-ರ್ತೀವೋ ಆಗ ಅನಾಯಾಸವಾಗಿ ಎಡವಿ ಮುಗ್ಗರಿಸಿ ನಗೆ ಪಾಟಲಿಗೇಡಾಗುತ್ತೀವಿ ಅನ್ನಿಸುತ್ತೆ. ಅರ್ಜುನ ತನ್ನ ಗಂಡುತನದ ಬಗ್ಗೆ ಜಂಭ ಪಡು-ತ್ತಿದ್ದ, ಬಳೆಹಾಕಬೇಕಾದಾಗ ಪೇಚಾಯಿತು. ಫಾಲ್‌ಸ್ಟಾಫ್ ಮತ್ತು ಉತ್ತರಕುಮಾರ ಇಬ್ಬರೂ ತಮ್ಮಲ್ಲಿಲ್ಲದ ಪೌರುಷದ ಬಗ್ಗೆ ಬಹಳ ಜಂಭ ಕೊಚ್ಚಿಕೊಂಡರು. ಆದರೆ ಸಮಯ ಬಂದಾಗ ಕಾಲು ಸೋತು ನಡುಗುತ್ತಾ ಪೇಚಿಗೆ ಸಿಕ್ಕಿದರು. ಇದೇ ಸಾಲಿಗೆ ಸೇರಿದಿದ್ದರೂ, ನಿತ್ಯ ಜೀವನದ ಇನ್ನೊಂದು ಪೇಚು ನೆನಪಿಗೆ ಬರುತ್ತೆ. ಬಲು ಶಿಸ್ತಿನ ಮುದುಕರೊಬ್ಬರು ಮಕ್ಕಳನ್ನು ಚಿತ್ರ ಬಿಡದೇ ಗದರಿಸಿ ಶಿಸ್ತಿನಲ್ಲಿಟ್ಟಿದ್ದರು. ಮನಸ್ಸು ಗಟ್ಟಿಯಿಲ್ಲ. 'ಮನಸ್ಸು ದೃಢವಾಗಿದ್ದರೆ ಕಲ್ಲನ್ನು ಬೇಕಾದರೂ ಅರಗಿಸಿಕೊಳ್ಳಬಹುದು. ಈಗಿನ ಕಾಲದ ಹುಡುಗರು ಏನೂ ಪ್ರಯೋಜನವಿಲ್ಲ' ಅನ್ನು-ತ್ತಿದ್ದರು. ರಾತ್ರಿ ಊಟ ಬಿಟ್ಟ ಮೇಲೆ ಈ ತಾತಯ್ಯಂಗೂ ಹಸಿವು ಹೆಚ್ಚಾಗಿ ನಾಲಿಗೆಯ ಚಪಲವೂ ಇಮ್ಮಡಿಸಿತ್ತು. ಒಂದು ದಿನ ರಾತ್ರಿ ಅವೇಳೆಯಲ್ಲಿ ಅಡಿಗೆ ಮನೆಗೆ ಕತ್ತಲಲ್ಲೇ ತಡಕಾಡಿಕೊಂಡು ಹೋಗಿ ಇನ್ನೇನು ಮೊಸರನ್ನ ಬಾಯಿಗೆ ಹಾಕಬೇಕು, ಆಗ ಎಲ್ಲೋ ಮೂಲೆ-ಯಲ್ಲಿದ್ದ ಚಿಕ್ಕ ದೊಡ್ಡನೆ ಪಾತ್ರೆ ಬೀಳಿಸಿದರೆ. ತಾತಯ್ಯಂಗೆ ಏನಾಗಬೇಕು ಹೇಳಿ, ಅವರ ಕೈಯ್ಯಿನ ಅನ್ನದ ಪಾತ್ರೆ ಬಿದ್ದು ಅಡಿಗೆ ಮನೆ-ಯಲ್ಲೆಲ್ಲಾ ಅನ್ನ ಚೆಲ್ಲಿ, ಮನೆಯವರೆಲ್ಲಾ ಎದ್ದು ಬಂದಾಗ, ತಾತಯ್ಯನ ದೃಢ ಮನಸ್ಸು, ಶಿಸ್ತು ಇವುಗಳ ಗತಿಯೇನು! ಅಂದರೆ ಒಂದು ಪಾಠ– ಯಾವುದೋ ವಿಚಾರದಲ್ಲಿ ನಾವು ಯಾವಾ-ಗಲೂ ಜಂಭ ಕೊಚ್ಚಿಕೋತಾ ಇದ್ದ ಹಾಗೆಲ್ಲಾ ನಾವು ಮುಂದೆಲ್ಲೋ ಎಡವಿ ಬೀಳಲು ಅನು-ಕೂಲವಾಗುವಂತೆ ಗುಂಡಿ ತೋಡಿಕೊಳ್ತಾ ಇದ್ದೀವೆಂದರ್ಥ. ಕೆಲವರು ಇಂತಹ ಗುಂಡಿಗೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲವೆಂದು ಏಳ-ಬಹುದು, ಇನ್ನು ಕೆಲವರು ಖೆಡ್ಡಾ ಗುಂಡಿಯಲ್ಲಿ ಆನೆ ಬಿದ್ದ ಹಾಗೆ ಆಗಬಹುದು. ಅಷ್ಟೆ ವ್ಯತ್ಯಾಸ.

ಹೀಗಂದ ಮಾತ್ರಕ್ಕೆ, ಪೇಚಿಗೆ ಸಿಗುವುದೆಲ್ಲಾ ಸ್ವಯಂಕೃತಾಪರಾಧದಿಂದಲೇ! ಅಂತ ತಲೆ ಮೇಲೆ ಕೈ ಹೊರಬೇಕಾದ್ದೇನೂ ಇಲ್ಲ. ಎಷ್ಟೋ ಸಲ ಏನೂ ತಿಳಿಯದ ಸರಳವಾದ ಮಕ್ಕಳಿನಂತಹ ಮಾತು ಇತರರನ್ನೂ, ನಮ್ಮನ್ನೂ ಪೇಚಿಗೆ ಸಿಕ್ಕಿಸಿ ಬಿಡುತ್ತವೆ. ಡೆನಿಸ್ ದಿ ಮೆನೇಸ್ ಓದುವ ಬ್ರಹ್ಮಚಾರಿಗಳಿಗೆ ಅಥವಾ ಡೆನಿಸ್‌ನಂತಹ ಮಕ್ಕಳಿದ್ದವರಿಗೆ ಈ ವಿಚಾರ ಹೇಳಲೇಬೇಕಾದ್ದಿಲ್ಲ. ಇಂಥ ಹುಡುಗರ ಮುಗ್ಧ ಮಾತು ದೊಡ್ಡವರ ತೋರಿಕೆಯ ಗಾಜಿನ ಪ್ರಪಂಚಕ್ಕೆ ಕಲ್ಲೆಸೆದ ಹಾಗೆ– ಒಂದೇ ಮಾತಿನಲ್ಲಿ ಫಳ್! ದೂರದ ಡೆಲ್ಲಿಯಿಂದ ಬಂದ ಮಗ–ಸೊಸೆಯನ್ನು ನೋಡಿ ಶಾಸ್ತ್ರಿ-ಗಳಿಗೆ ಸಂಭ್ರಮವೋ ಸಂಭ್ರಮ. ಏನಪ್ಪಾ, ಪೂಜೆಯೆಲ್ಲಾ ಮಾಡ್ತಿದ್ದೀಯೋಪ್ಪ, ಅಂದಾಗಲೇ ಮಗನಿಗೆ ಜನಿವಾರದ ನೆನಪು ಏನಮ್ಮಾ, ಗೌರೀ-ಪೂಜೆಗೆ ಶಾಸ್ತ್ರಿಗಳು ಸಿಕ್ಕಿದರೇನಮ್ಮಾ ಎಂದೆಲ್ಲಾ ವಿಚಾರಿಸಿದ ಮೇಲೆ, ಮೊಮ್ಮಗನನ್ನು, ಕರೆದು ಮಾತಾಡಿಸಲು ಶುರು ಮಾಡಿದರು. ಯಾವುದೋ ಒಂದು ಪ್ರಶ್ನೆಗೆ ಮುಗ್ಧ ಉತ್ತರ ಕೊಡುತ್ತಾ ಹುಡುಗ, 'ಅಮ್ಮ ಸ್ವಿಮ್ಮಿಂಗ್ ಸೂಟ್ ಹಾಕ್ಕೊಂಡು ಎಲ್ಲರ ಜೊತೆ ಕೊಳಕ್ಕೆ ಇಳಿದಾಗ–' ಅಂತ ಹೇಳಿದಾಗ ಸೊಸೆಯ ಪೇಚು ಮುಖವನ್ನು ಫೋಟೋ ಹಿಡಿದೇ ನೋಡಬೇಕು. ಇದೇ ರೀತಿ ದೊಡ್ಡವರು ಸಂದರ್ಭ ತಿಳಿಯದೆ ಮಾತಾಡಿದಾಗಲೂ ಇದೇ ಪರಿಣಾಮ. ಒಮ್ಮೆ ರಜದ ಮೇಲೆ ಊರಿಗೆ ಹೋಗಿದ್ದಾಗ ಅಂಗಡಿಯಲ್ಲಿ ನಮ್ಮ ಪಟೇಲರನ್ನು ನೋಡಿ ಸಂತೋಷದಿಂದ ಮಾತನಾಡಿಸಿದೆ. ಬಹಳಷ್ಟು ಜವುಳಿ ಖರೀದಿ ಮಾಡುತ್ತಿದ್ದ ನರೆತ ಕೂದಲಿನ ಪಟೇಲರನ್ನು ನೋಡಿ ತಕ್ಷಣ ನನಗೆ ಅವರ ಮದುವೆ ವಯಸ್ಸಿನ ಮಗಳ ನೆನಪಾಯಿತು. ಸಂತೋಷದಿಂದ ಜೋರಾಗಿ, 'ಓಹೋ ಬಹಳ ಜವುಳಿ ಕೊಳ್ತಾ ಇದ್ದೀರಲ್ಲ ಪಟೇಲ್ರೇ. ಮಗಳ ಮದುವೆ ಅಂತ ಕಾಣುತ್ತೆ. ಎಲ್ಲೀದೋ ಗಂಡು? ನಿಮ್ಮ ಮಗಳು ನನ್ನ ಜೊತೆ ಓದುತ್ತಿದ್ದಳು'

ಎಂದು ಹಲ್ಲುಕಿರಿದೆ. ಇಷ್ಟಕ್ಕಿದ್ದ ಹಾಗೇ ಅವರ ಮುಖ, ಕಿವಿ ಎಲ್ಲಾ ಕೆಂಪಾಗಿ ಬಾಯಲ್ಲಿ ಮಾತೇ ಹೊರಡಲಿಲ್ಲ. ಏನೋ ತಕ್ಷಣ ತತತಾ ಅಂದರು. ಅಷ್ಟರಲ್ಲಿ ಯಾರೋ ಹಳೆಯ ಸ್ನೇಹಿತ ಹೊರಗೆ ಕರೆದ ಎಂದು ಓಡಿದೆ. ಪಟೇಲರು ನನ್ನ ಮಾತಿನಿಂದ ಪೇಚಿಗೆ ಸಿಕ್ಕಿದ್ದರ ಕಾರಣ ನಂತರ ತಿಳಿಯಿತು– ಮದುವೆ ಮಗಳಿಗಲ್ಲವಂತೆ, ಪಟೇಲರಿಗೇ ಅಂತೆ, ಅದೂ ಮೂರನೇ ಬಾರಿ!

ಇನ್ನೊಮ್ಮೆ ಕ್ರಿಕೆಟ್ ಪಂದ್ಯವಾಡಿ ಸುಸ್ತಾಗಿ ದೂರದ ಊರಿನಿಂದ ಹಿಂದಿರುಗಾಗ ದಾರಿಯಲ್ಲೇ ಜೀಪು ಕೆಟ್ಟು ಬಹಳ ಹೊತ್ತು ಕಳೆಯಿತು. ಮೊದಲು ಊಟದ ಪ್ರೋಗ್ರಾಂ ಇಲ್ಲದಿದ್ದರೂ ತಡವಾಗಿ ಎಲ್ಲರೂ ಹಸಿದಿದ್ದರಿಂದ ಅಲ್ಲಿಯೇ ಒಂದು ಖಾನಾವಳಿಗೆ ಊಟಕ್ಕೆ ನುಗ್ಗಲೇಬೇಕಾಯಿತು. ಕಂಠಪೂರ್ತಿ ಊಟವಾದ ಮೇಲೆಯೇ ನಮಗೆಲ್ಲಾ ದುಡ್ಡಿನ ಯೋಚನೆ. ಆಗ ನೋಡಿದರೆ ಹದಿನೈದು ಊಟಕ್ಕಾಗುವಷ್ಟು ದುಡ್ಡು ಕೂಡಿಸಲಾಗದೇ ಪೇಚಿಗೆ ಸಿಕ್ಕಿದ್ದೆವು. ನಾವು ಯೋಚನೆ ಮಾಡುತ್ತಿದ್ದಂತೆಯೆ, ನಮ್ಮ ಗುಂಪಿನ ಠೊಣಪ ಶೇಖರು ಹೋಟೆಲ್ ಮಾಲಿಕರ ಹತ್ತಿರ ಹೋಗಿ ಊಟ ತಣ್ಣಗಿತ್ತು, ಮೊಸರಲ್ಲಿ ಕಲ್ಲಿತ್ತು, ಸಾರಲ್ಲಿ ನೊಣವಿತ್ತು ಎಂದು ಏನೇನೋ ಸುಳ್ಳು ನೆಪ ಹೂಡಿ ದಬಾಯಿಸಲು ಶುರುಮಾಡಿದರು. ಆ ಮಾಲೀಕ ಮೊದಲು ಸಾಕಷ್ಟು ವಾದಿಸಿದರೂ ಕೊನೆಗೆ ಈ ತರಲೆ ಹುಡುಗರೊಡನೆ ಏನು ಜಗಳ ಅಂದುಕೊಂಡು 'ಸರಿ, ಈಗ ಆಗಿ ಹೋಯ್ತಲ್ಲ, ನಾಳೆ ಬನ್ನಿ, ಒಳ್ಳೇ ಊಟ ಹಾಕ್ತೀನಿ' ಎಂದ. ಹಾ, ಹಾಗೆ ಬನ್ನಿ ದಾರಿಗೆ ಅಂದುಕೊಂಡು, ಶೇಖರು ತಲಾ ಊಟಕ್ಕೆ ಒಂದೇ ರೂಪಾಯಿ ಕೊಡ್ತೀವಿ ಎಂದು ಜೋರು ಮಾಡಿದ. ಮಾಲೀಕ ತಬ್ಬಿಬ್ಬಾಗಿ ಸದ್ಯಕ್ಕೆ ಅಷ್ಟಾದರೂ ಸಿಗಲಿ; ಸಾಕೆಂದು ಹೂಂ ಅನ್ನಬೇಕು, ಆಗ ಎಲ್ಲಿದ್ದನೋ ಏನೋ ನಮ್ಮ ಶಂಕರ ಮಹಾಶಯ ನುಸುಳಿ ಬಂದು, ಹೊಟ್ಟೆ ನೀವಿಕೊಳ್ಳುತ್ತಾ ದೊಡ್ಡ ತೇಗು ತೇಗಿ, 'ವಾ! ಕೀ ಖಾವಾಲೇನ್ ದಾದಾ! ಏನು ಊಟ ಹಾಕಿದ್ರಿ ಮಾರಾಯ್ರೆ! ತುಂಬಾ ಚೆನ್ನಾಗಿತ್ತು. ತುಂಬಾ ಹಸಿವಾಗಿತ್ತು. ಎಲ್ಲರೂ ಸೇರಿ ಒಂದಕ್ಕೆರಡರಂತೆ ಸೇರಿ ಹೊಡೆದುಬಿಟ್ಟೆವು!' ಎಂದು ಉದ್ಗಾರ ತೆಗೆದು ನಮ್ಮೆಲ್ಲರನ್ನೂ ಪೇಚಿಗೆ ಸಿಗಿಸಬೇಕೆ!

ಈ ರೀತಿ ಮಗುವಿನಂತೆ ಮಾತುತಿಳಿಯದೆ ಆಡಿದರೂ ಪೇಚು, ತಿಳಿದಿದ್ದನ್ನು ಶಂಕರನಂತೆ ತಪ್ಪಾಗಿ ಆಡಿದರೂ ಪೇಚು. ಇನ್ನು ಆಡಿದ್ದನ್ನು ತಪ್ಪರ್ಥ ಮಾಡಿಕೊಂಡರೆ ಇನ್ನೂ ಪೇಚೋಪೇಚು. ಆಡಿದ ಮಾತಿಗೆ ಇಲ್ಲದ ಅರ್ಥ ಕಲ್ಪಿಸಿಕೊಂಡು ಗೊಂದಲಕ್ಕೆ ಸಿಗುವವರಿಗೇನೂ ಕಮ್ಮಿಯಿಲ್ಲ. ಮೊನ್ನೆ ಸ್ನೇಹಿತರೊಬ್ಬರು ತಮ್ಮ ಮಾತಿನ ಗೊಂದಲದಲ್ಲಿ ತಾವೇ ಸಿಕ್ಕಿ ಹಾಕಿಕೊಂಡಿದ್ದು ಹೀಗೆ– 'ರೀ, ನನಗೆ ಲೇಡೀ ಡಾಕ್ಟರು ಬೇಕಿತ್ತು–ಹೌದ್ರೀ, ನನಗೆ ಸ್ವಲ್ಪ ಲೇಡೀ ಡಾಕ್ಟರು ಬೇಕಿತ್ತು–ಹೌದ್ರೀ ನನಗೆ ಸ್ವಲ್ಪ ಲೇಡೀ ಡಾಕ್ಟರ್ ಬೇಕಿತ್ರೀ...ಅ, ಅ, ಅಂದ್ರೆ ಹಾಂಗಲ್ಲಾರೀ...ನನಗೆ ಮದುವೆ ಆಗಿದೆ. ನನಗ ಬೇಕು ಅಂದ್ರೆ ನನ್ನ ಮನೆಯವಳನ್ನು ನೋಡುಕ್ಕೆ...' ಇದೇ ರೀತಿಯ ತಪ್ಪರ್ಥದ ಪೇಚು ಇನ್ನೊಂದು. ಎದುರು ಮನೆಯ ಗಂಡಸಿನ ಗೀಳಿನ ಬಗ್ಗೆ ಮಾತುಕತೆ ನಡೆದಿತ್ತು. ಆಗ ಮನೆಯ ಮುಂದೆ ದಪ್ಪನೆಯ ದುಂಡು ದುಂಡಾದ ಹೆಂಗಸು ಹಾದು ಹೋದಳು. ಅವಳನ್ನು ನೋಡಿ ಸ್ನೇಹಿತ ಶುರು ಮಾಡಿದ, 'ಆ ಹೆಂಗಸು ಅವರಿಗೆ ಹಾಲು ಕೊಡುತ್ತಾಳೆ... ಅಂದರೆ ಆ ಅರ್ಥದಲ್ಲಲ್ಲ...' ವಿವರಣೆ ಬೇಕೇ ಇರಲಿಲ್ಲ. ವಿವರಣೆ ಕೊಡಲು ಹೋಗಿ ತಾನೇ ಗೊಂದಲದಲ್ಲಿ ಸಿಕ್ಕಿಕೊಂಡಿದ್ದ.

ತಪ್ಪರ್ಥ ಆದರೆ ತಾನೇ ಪೇಚು, ಅರ್ಥವೇ ಆಗದಿದ್ದರೆ ಪೇಚಿಗೆ ಕಾರಣವೇ ಇಲ್ಲ ಅಂದುಕೋಬೇಡಿ. ಅರ್ಥ ಆಗುಲ್ಲ ಅಂದುಕೊಂಡು ಮಾತಾಡಿದ್ದು ಮುಖ ಮುಚ್ಚಿಕೊಳ್ಳುವ ಹಾಗೆ ಮಾಡಿದ್ದೂ ಇದೆ. ನನ್ನ ಸ್ನೇಹಿತ ಮದುವೆಯಾದ ಹೊಸತರಲ್ಲಿ ಹನಿಮೂನಿಗೆ ಬೊಂಬಾಯಿಗೆ ಹೊರಟ. ಇಬ್ಬರೂ ದಿನವಿಡೀ ಟ್ಯಾಕ್ಸಿಯಲ್ಲಿ ತಿರುಗಿದ್ದೇ ತಿರುಗಿದ್ದು. ಎಲ್ಲೆಣೆ ಏನೇನು ನೋಡಿದರೂ ಅದರ ವಿವರಣೆಯೆಲ್ಲಾ, ತಮಗೆ ಅನ್ವಯಿಸುವಂತೆ, ಬಹಳ ಅನ್ಯೋನ್ಯವಾಗಿ, ಮೊದಲ ಪ್ರೀತಿಯ ಕಾವಿನಲ್ಲಿ, ಸರಸವಾಗಿ

ನಿರರ್ಗಳವಾಗಿ ಕನ್ನಡದಲ್ಲಿ ಮಾತಾಡಿ-ಕೊಂಡರು. ಬೆಂಗಳೂರು ಟ್ಯಾಕ್ಸಿಯಲ್ಲಿ ಕೂತಿ-ದ್ದಾಗ ಇಷ್ಟು ನಿಸ್ಸಂಕೋಚವಾಗಿ ಎಲ್ಲಾ ಕನ್ನಡ ದಲ್ಲಿ ಮಾತಾಡುತ್ತೆ ಆಗ್ತಾನೇ ಇರಲಿಲ್ಲ ಅಲ್ವೇನೇ ಅಂದ ಗಂಡ. ಹೌದ್ರೀ, ಈ ಬೊಂಬಾಯಿ ಟ್ಯಾಕ್ಸಿವಾಲಾಗೆ ನಮ್ಮ ಮಾತು ತಿಳಿದೇ ಇರೋದು ಒಂದು ರೀತಿ ತುಂಬಾ ಒಳ್ಳೇದೇ ಅಂದಳು ಹೆಂಡತಿ. ಇಬ್ಬರೂ ನಕ್ಕರು. ದಾರಿ ಕೊನೆಯಲ್ಲಿ ಟ್ಯಾಕ್ಸಿಯವನಿಗೆ ದುಡ್ಡು ಕೊಟ್ಟಾಗ [illegible] ಬಂತು ಉತ್ತರ, 'ಬೊಂಬಾಯಿ ಟ್ಯಾಕ್ಸಿವಾಲಾ ಹತ್ತಿರ ಚಿಲ್ಲರೆ ಇರಲ್ಲ ಸಾರ್,' ಎಂದು ಅಚ್ಚ ಕನ್ನಡದಲ್ಲೇ!

ಮಾತನ್ನು ತಪ್ಪಾಗಿ ಅರ್ಥ ಮಾಡಿಕೊಂಡರೆ ಪೇಚು ಅನ್ನಬಹುದು. ಆದರೆ ವ್ಯಕ್ತಿಯನ್ನೇ ತಪ್ಪಾಗಿ [illegible], ಗುರುತು ಹಿಡಿದಿದ್ದರೆ, ಆಗ [illegible]' ಎಂದು [illegible] ಪರವಾ-ಗಿಲ್ಲ ಕ್ಷಮೆ ಕೇಳಬಹುದು. ಅವರೂ ಕ್ಷಮಿಸ-ಬಹುದು-ತಪ್ಪು ಗುದ್ದು ಜೋರಾಗಿಲ್ಲದಿದ್ದರೆ. ಆದರೆ, ಛ, ನನ್ನ ಚಿನ್ನಾ ಅಂತ ಯಾರೋ ಹೆಂಗಸರ ಬೆನ್ನು ಸವರಿದರೆ ಮೊದಲು ಕೆನ್ನೆಗೇಟು, ಆಮೇಲೆ ನೀವು, ತಪ್ಪಾಯ್ತು, ಅಂದಮೇಲೆ ಒಂದಿಷ್ಟು ಛೀಮಾರಿ ಖಂಡಿತಾ ತಪ್ಪದು. ಹೊಸ ಊರಿನಲ್ಲಿ ಅಥವಾ ಪರಿಚಯವಿಲ್ಲದವರನ್ನು [illegible] ಮಾಡುವಾ-ಗಲೂ ಎಚ್ಚರಿಕೆ ಬೇಕು. ಅಂಗಡಿಯಲ್ಲಿ ಪಾನ್-ಬೀಡಾ ಕೊಳ್ಳುವಾಗ ದಾರಿಲಿ ಹೋಗ್ತಿದ್ದ ವ್ಯಕ್ತಿಯನ್ನು ನೋಡಿ, 'ನೋಡ್ರಪ್ಪಾ ಆ ಫಾಟೀ ಕಳ್ಳನ್ನ. ನಿನ್ನೆ ಅವನು ಮಾಡಿದ್ದು ನೋಡ-ಬೇಕಾಗಿತ್ತು' ಅಂತ ವಿವರಿಸಿದ ಮೇಲೆ ನಿಮ್ಮ ಜೊತೆ ಇದ್ದ ವ್ಯಕ್ತಿ ಮುಖಗಂಟಿಕ್ಕಿ ನೋಡಿ [illegible] ಅಂತ ಹೊರಟು ಹೋಗ್ತಾನೆ. ಅವನಿ-ಗ್ಯಾಕೆ ಸಿಟ್ಟು ಎಂದು ಕಾರಣ ಕೇಳಿದ್ದಕ್ಕೆ ಅಂಗಡಿಯವ ಉತ್ತರ ಕೊಡ್ತಾನೆ— 'ಅಲ್ಲಾ ರಾಯ್ರೇ. ಮಗನ ಹತ್ತಿರ ನೀವು ಅಪ್ಪನ್ನ [illegible] ಅಂತ ವರ್ಣನೆ ಮಾಡಿದರೆ ಸಿಟ್ಟು ಬರೋಲ್ವೇನ್ರೀ?' ಹೀಗೆಂದಾಗ ಇಷ್ಟಕ್ಕೆಲ್ಲಾ [illegible] 'ಸುಣ್ಣಾ, ಸುಣ್ಣ ಜಾಸ್ತಿ, ಪಾನ್‌ಗೆ' ಎಂದು ಕೂಗದೇ ಬೇರೆ ಬೇರೆ ಗತ್ಯಂತರವೇ ಇಲ್ಲ. ಮೊನ್ನೆ ನಾಟಕ ಸ್ಪರ್ಧೆಗಳಿಗೆ ಬಂದಿದ್ದ ಪ್ರಸಿದ್ಧ ಸಾಹಿತಿಗೆ ನನ್ನ ಸ್ನೇಹಿತನ ಪರಿಚಯ ಮಾಡಿಕೊಟ್ಟೆ. ನನ್ನ ಸ್ನೇಹಿತ 'ನಾಟಕ ಹೇಗಿತ್ತು ಸಾರ್?' ಅನ್ನುವುದೇ ತಡ, ಚಟಕ್ಕನೆ ಬಂತು ಸಾಹಿತಿಗಳ ಉತ್ತರ—'ನಾಟಕವೇ? ಇದನ್ನು ನಾಟಕ ಅಂತಾರೇನ್ರೀ? ಇದರಲ್ಲಿ ಏನಿದೆ?...ಇಂತಹ ನಾಟಕಗಳು ಬರೋದರಿಂದಲೇ ನಮ್ಮ ಕನ್ನಡ ನಾಟಕ ರಂಗ ಎಂದೂ ಮುಂದೆ ಬರುಲ್ಲ. ಅದ್ಯಾವನ್ರೀ ಆ ನಾಟಕಕಾರ, ಕರೆದುಕೊಂಡು ಬನ್ನಿ ಇಲ್ಲಿ,' ಹೀಗೆಂದಾಗ ನನ್ನ ಸ್ನೇಹಿತ ತಕ್ಷಣ ಅಲ್ಲಿಂದ ಜಾರಿ ಮರೆಯಾದ. 'ಏನಪ್ಪಾ, ನಾಟಕಕಾರನ್ನ ಕರೆಯೋಕ್ಕೆ ಹೋಗಿದಾನೇನು?' ಅಂದರು ಸಾಹಿತಿ. ಆಗ-ಲಾದರೂ ನಾನು ನಿಜಸ್ಥಿತಿ ವಿವರಿಸಲೇ ಬೇಕಾಯ್ತು— 'ನಾಟಕಕಾರನ್ನ ಕರೆಯೋಕ್ಕೆ ಹೋಗಿಲ್ಲ. ಅವನ ಮುಖ ಮರೆಸೋಕ್ಕೆ ಹೋಗಿದ್ದಾನೆ. ಈಗ ನಿಮ್ಮ ಜೊತೆ ಮಾತಾಡಿದ್ನಲ್ಲಾ ಅವನೇ ನಾಟಕಕಾರ' ಅಂದಾಗ ಹಿರಿಯ ಸಾಹಿತಿ ಗಳ ಪೇಚು ಹೇಳತೀರದು.

ಇನ್ನು ಬೇಡ ಅಂದಿದ್ದನ್ನೇ ಕದ್ದು ಮಾಡು ವಾಗ ಇನ್ನೊಬ್ಬರ ನೋಟಕ್ಕೆ ಸಿಕ್ಕಿಬಿದ್ದು ಪೆಚ್ಚು ಮುಖ ಹಾಕಿಕೊಳ್ಳುವುದು ಸಾಮಾನ್ಯ. ಸಣ್ಣವರಿಂದ ಮುದುಕರ ವರೆಗೆ ಪ್ರತಿಯೊಂದು ವಯಸ್ಸಿನವರಿಗೂ ಬೇಡ ಅನ್ನುವ ಪಟ್ಟಿ ಬೇರೆ-ಬೇರೆಯಾಗೇ ಇದೆ. ಮಣ್ಣಿನಲ್ಲಿ ಆಡಬೇಡ, ಸ್ಕೂಲು ತಪ್ಪಿಸಬೇಡ, ಸಿಗರೇಟ್ ಸೇದಬೇಡ ಇಪ್ಪತ್ತರ ಹಿಡಿದು ಮುದುಕರಿಗೆ, ರಾತ್ರಿ ಊಟ ಬಿಡಿ, ಸಿಹಿ ತಿನ್ನಬೇಡಿ ಅನ್ನುವವರೆಗೂ ಈ ಬೇಡದ ಪಟ್ಟಿ ತರತರಹಾವರಿಯಾಗಿ ಬೆಳೆದಿದೆ. ಆದರೂ ಬೇಡ ಅಂದದ್ದನ್ನೇ ಕದ್ದು ಮಾಡುವುದ ರಲ್ಲೇ ಏನೋ ಸ್ವಾರಸ್ಯವಿದೆ, ಥ್ರಿಲ್ ಇದೆ, ರುಚಿ ಯಿದೆ. ಮುತ್ತು ಸಿಹಿಯಿರಬಹುದು, ಆದರೆ ಕದ್ದ ಮುತ್ತು ಸಿಹಿಯೆನ್ನುತ್ತಾರಲ್ಲ. ಆದರೆ ನಿಮ್ಮ ಪ್ರೇಯಸಿಯನ್ನು ಹೇಗೋ ದೊಡ್ಡ ಗುಂಪಿನಿಂದ ದೂರವಾಗಿ ಆ ಸಿಹಿಯೇನೆಂದು ನೋಡುತ್ತಿರುವಾಗ ಅವಳಪ್ಪನೇ ಆ ಕಡೆ ಬಂದ-

ರೂನ್ನಿ...ಆಗ ಆ ನಿಮ್ಮ ಪೆಚ್ಚು ಮುಖದ ಕೆಂಪು, ಕಪ್ಪು-ನೀಲಿಯಾಗಿ ಎಲ್ಲಾ ಕಲಬೆರಕೆಯಾಗಿಬಿಡುತ್ತದೆ.

ಇನ್ನೊಂದು ರೀತಿಯ ಪೇಚು ಹೊಗಳಿಕೆಯಿಂದ ಹುಟ್ಟಿಬರುತ್ತದೆ. ಹೊಗಳಿಸಿಕೊಂಡು ಮರುಕ್ಷಣವೇ ವ್ಯತಿರಿಕ್ತವಾಗಿ ನಡೆದು ತಲೆಬಗ್ಗಿಸುವಂತಾಗುವುದೂ ಅಪರೂಪವೇನಲ್ಲ. ಸಂಗೀತ ಕಛೇರಿ ಕೇಳುತ್ತಾ ಕೂತಿದ್ದ ಹಿರಿಯರ ಮಧ್ಯೆ ಬಂದ ತಕ್ಷಣ ಒಬ್ಬರು ನನ್ನ ಸಂಗೀತದ ಅಭಿರುಚಿ, ಜ್ಞಾನದ ಬಗ್ಗೆ ಮುಖ ಶ್ಲಾಘನೆ ಮಾಡಿದರು. ಅವರ ಹೊಳಿಕೆಗೂ ನಾನು, 'ಇದು ಕಲ್ಯಾಣಿಯಲ್ಲವೇ?' ಎಂದು ತೋಡಿರಾಗದ ಕೀರ್ತನೆಯ ಬಗ್ಗೆ ಹೇಳಿದ್ದಕ್ಕೂ ಸರಿಹೋಯಿತು. ಅಲ್ಲಿಗೆ, ನನಗೆ ತೋಡಿ, ಕಲ್ಯಾಣಿ ಎರಡು ರಾಗಗಳ ಪರಿಚಯವೂ ಇಲ್ಲವೆಂದಾಗಿ ನನ್ನ ಸಂಗೀತ ಜ್ಞಾನದ ಟೊಳ್ಳು ಇತರರಿಗೆ ಅರಿವಾಯಿತು. ನನ್ನನ್ನು ಹೊಗಳಿದ್ದ ಹಿರಿಯರು ಮೈಪರಿಚಿಕೊಂಡರು ಅಷ್ಟೆ! ಇನ್ನೊಮ್ಮೆ ಕಾಲೇಜಿಗೆ ವಿದೇಶಿಯರೊಬ್ಬರು ಬಂದಾಗ ಅವರಿಗೆ ಎಲ್ಲವನ್ನೂ ಹೆಮ್ಮೆಯಿಂದ ವಿವರಿಸಲು ನಮ್ಮ ಪ್ರೊಫೆಸರ್ ಮುಂದಾದರು. ಕಾಲೇಜಿನ ವಿಷಯವಾಗಿ ಇದ್ದುದು, ಇಲ್ಲದ್ದನ್ನೆಲ್ಲಾ ಬಡಾಯಿ ಕೊಚ್ಚಿದ ಮೇಲೆ, 'ಬನ್ನಿ, ನಮ್ಮ ಹಾಸ್ಟೆಲ್ ನೋಡುವಿರಂತೆ. ನಮ್ಮ ಹುಡುಗರು ಬಲು ಶಿಸ್ತಿನವರು. ಆಟದಲ್ಲಿ ಆಟ, ಓದುವಾಗ ಓದು, ಈಗ ಸಂಜೆ ಎಲ್ಲಾ ಓದುತ್ತಿರುತ್ತಾರೆ' ಎಂದೆಲ್ಲಾ ಹೇಳಿ ಹಾಸ್ಟೆಲಿಗೆ ಅವರನ್ನು ಕರೆತಂದರು. ಅಲ್ಲಿ ಯಾವುದೋ ಕೋಣೆಯ ಬಾಗಿಲನ್ನು ಸರಿಸಿದರೆ ಕಂಡದ್ದೇನು...ಹುಡುಗನೊಬ್ಬ ಆರಾಮ ಕುರ್ಚಿಯ ಮೇಲೆ ಕೂತು, ಕಾಲೆರಡನ್ನೂ ಮೇಜಿನ ಮೇಲೆ ಚಾಚಿದ್ದಾನೆ, ಒಂದು ಕೈಯಲ್ಲಿ ಸಿನೆಮಾ ಪತ್ರಿಕೆ, ಇನ್ನೊಂದರಲ್ಲಿ ಸಿಗರೇಟು; ಕೋಣೆಯ ಮೂಲೆಯಲ್ಲಿ ಸಿನೇಮಾ ಹಾಡು ಕಿರುಚುವ ರೇಡಿಯೋ. ಇದಕ್ಕೂ ಮೊದಲು ಪೇಚಿಗೆ ಅದೆಷ್ಟೋ ಸಲ ಸಿಕ್ಕಿದ್ದರೋ ಏನೋ ಆ ನಮ್ಮ ಪ್ರೊಫೆಸರು. ಸ್ವಲ್ಪವೂ ಕಸಿವಿಸಿಗೊಳ್ಳದೆ 'ಓ, ನೋಡಿ ಇವನು ಇಲ್ಲಿಯವರೆಗೂ ಓದಿ ಸುಸ್ತಾಗಿ, ಈಗೆಲ್ಲೋ ಒಂದೈದು ನಿಮಿಷ ಆರಾಮ ಮಾಡುತ್ತಿದ್ದಾನೆ' ಎಂದು ವಿವರಣೆ ಕೊಟ್ಟರು. ಇವರು ಫಾಲ್‌ಸ್ಟಾಫನ ಜಾತಿಯವರು, ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅನ್ನುವವರು.

ಹೊಗಳುವಿಕೆಯ ಅಬ್ಬರದಿಂದ ಪೇಚಿಗೆ ತಾವೇ ಎಷ್ಟು ಜನ ಜನ ಸಿಕ್ಕಿದರೆ, ಸ್ವಾಭಿಮಾನದ ಸೊಕ್ಕಿನಿಂದ ಮೆರೆಯುವವರನ್ನು ಪೇಚಿಗೆ ಸಿಗಿಸುವುದು ಅಥವಾ ಬೇಸ್ತು ಬೀಳಿಸುವುದು ಬಹಳ ಸುಲಭ. ಸಾಮಾನ್ಯವಾಗಿ ಅವರ ಸ್ವಾಭಿಮಾನಕ್ಕೆ ಏನು ಕಾರಣ ಆಗಿರುತ್ತೋ ಅದೇ ಅವರ ದೌರ್ಬಲ್ಯವೂ ಆಗಿರುತ್ತೆ. ಇಂತಹ ಕಾರಣದ ಕಾಲೆಳೆದರೆ ಆಸಾಮಿ ಢೋಪ್ ಅನ್ನುವುದೇ ಸರಿ. ಹೀಗೆ ಬೇಸ್ತುಬೀಳುವುದಕ್ಕೆ ಏಪ್ರಿಲ್ ಮೊದಲ ತಾರೀಖಿಗೆ ಮುಹೂರ್ತ ಕೂಡಿ ಬರುತ್ತೆ. ಒಮ್ಮೆ ಪಂಡಿತರು, ನಿಪುಣರು, ಫಿಲಾಸಫರ್, ಪ್ರೊಫೆಸರ್ ಎಂದೆಲ್ಲಾ ಬಿರುದಾವಳಿ ಪಡೆದಿದ್ದ ಸ್ನೇಹಿತರನ್ನೂ ಬೇಸ್ತು ಬೀಳಿಸಬೇಕೆಂದು ಪಣತೊಟ್ಟೆ. ಅವರ ಸ್ವಾಭಿಮಾನದ ಕಾರಣ ನಾಟಕದಲ್ಲಿ ಅವರಿಗಿದ್ದ ಪಾಂಡಿತ್ಯ, ಅನುಭವ. ರಾತ್ರಿ ಹನ್ನೊಂದಕ್ಕೆ ಅವರು ಬಂದದ್ದನ್ನೇ ಕಾಯ್ದು ಅವರಲ್ಲಿ ಹೋಗಿ, 'ನೋಡಿ, ವೆಂಕಟರಾಯರು ನಿಮ್ಮನ್ನ ದಿನವೆಲ್ಲಾ ಹುಡುಕಿ ಈಗ ಮನೆಗೆ ಹೋದರು. ನಾಳೆ ಅವರು ನಾಟಕೋತ್ಸವ ಉದ್ಘಾಟಿಸಬೇಕಂತೆ. ನಿಮ್ಮಿಂದ ಭಾಷಣ ಬರೆಸಿಕೊಳ್ಳಲು ಬಂದಿದ್ದರು,' ಅಂದೆ. ಆಗಲೇ ಅವರನ್ನು ಭೇಟಿಯಾಗಲು ಹೊರಟವರನ್ನು, ತಡೆದು 'ನಾಳೆ ಮುಂಜಾನೆ ಅವರು ಏಳು ಗಂಟೆಗೇ ಮನೆ ಬಿಡ್ತಾರಂತೆ, ಅಷ್ಟರಲ್ಲಿ ನೀವು ಅವರಿಗೆ ವಿಷಯ ತಿಳಿಸಿದರೆ ಆಗುತ್ತದೆ ಅಂತೆ. ನನಗೆ ಗೊತ್ತು, ವೆಂಕಟರಾಯರು ಬೆಳಿಗ್ಗೆ ಎಂಟರ ಮುಂಚೆ ಹಾಸಿಗೆ ಬಿಟ್ಟವರಲ್ಲ. ಈ ನಮ್ಮ ಸ್ನೇಹಿತರೂ ಅಷ್ಟೆ. ಅವರೂ ರಾತ್ರಿ ಬಹಳ ಹೊತ್ತು ಎಚ್ಚರವಿದ್ದು ಎಲ್ಲಾ ವಿಷಯ ಬರೆದು, ಬೆಳಗಿನ ಜಾವವೇ ರಾಯರ ಮನೆಗೆ ಸೈಕಲ್ ತುಳಿದು ಹೋಗಿ ಅವರನ್ನೆಬ್ಬಿಸಿದ್ದಾರೆ. ರಾಯರೋ ಸ್ವತಃ ನಾಟಕೀಯ ವ್ಯಕ್ತಿ. ಪರಿಸ್ಥಿತಿ ಅರ್ಥ ಮಾಡಿಕೊಂಡು, ಹಾಸಿಗೆಯ ಮೇಲೆ ಕುಳಿತೇ

ಎರಡೂ ಕಣ್ಣುಗಳನ್ನು ಹಿಂಗೈಗಳಿಂದ ಹೊಸಕಿಕೊಳ್ಳುತ್ತಾ 'ಆ್ಞ, ರಾಜೂ ಹೇಳಿದನೆ? ಇದೇನು ನಾನು ಕನವರಿಸ್ತಿದ್ದೀನೋ, ನೀವು ಕನವರಿಸುತ್ತಿದ್ದಿರೋ ಅಥವಾ ಇದು ರಾಜು ಕನಸು ಕಂಡ ಫಲವೋ?' ಅಂದರಂತೆ. ಆಮೇಲೆ ನಿಪುಣರೊಬ್ಬರನ್ನು ಏಪ್ರಿಲ್ ಫೂಲ್ ಮಾಡಬಾರದಿತ್ತು ಅನಿಸಿತು ಅನ್ನಿ.

ಮರೆವಿನಿಂದ ಬರುವ ಪೇಚಿನ ಸ್ಥಿತಿ ಹೇಳಲೇ ಬೇಕಾದ್ದಿಲ್ಲ. ಮರೆತ ಹಳೆಯ ಸ್ನೇಹಿತನ ಹೆಸರನ್ನು ಉಪಾಯದಿಂದ ತಿಳಿಯಬಹುದು, ಆದರೆ ಉಪಾಯವನ್ನೇ ಬಿಟ್ಟು, 'ಓ, ನೆನಪಿಲ್ಲದೆ ಏನು' ಎಂದು ಧೈರ್ಯವಾಗಿ ಕೈಕುಲುಕಿ ಮಾತಾಡಿ, ಇನ್ಯಾರೋ ಬಂದಾಗ ಅವರಿಗೆ ಪರಿಚಯ ಮಾಡಿಕೊಡುವಾಗ 'ಇವರು, ನನ್ನ ಪರಮ ಸ್ನೇಹಿತರು, ಸ್ಕೂಲಿನಲ್ಲಿ ನಾವಿಬ್ಬರೂ ಲಂಗೋಟಿ ಸ್ನೇಹಿತರು... ಇವರು... ಇವರು' ಎಂದು ಹೆಸರು ನೆನಪಿಗೆ ಬಾರದೆ ಪೇಚಿನಲ್ಲಿ ಸಿಕ್ಕು ಒದ್ದಾಡುವವರನ್ನು ನೋಡುವುದೇ ಚೆನ್ನ. ನಮ್ಮ ಮರೆವಿಗಿಂತ ನಾವೇ ಪೇಚಾಡುವುದೇನೋ ಸರಿ, ಆದರೆ ಇನ್ನೊಬ್ಬರ ಮರೆವಿನಿಂದಾಗಿ ನಾವು ಪೇಚಾಡುವುದು ಎಂತಹ ನ್ಯಾಯ ನೀವೇ ಹೇಳಿ. ಇಂತಹ ಅನುಭವ ಒಮ್ಮೆ ಆಯಿತು. ಹೊಸ ಪರಿಚಿತರೊಬ್ಬರು ನನ್ನನ್ನು 'ಸೋಮವಾರ ನಮ್ಮ ನೇಲಿ ವಿಶೇಷ, ಅವತ್ತು ಸಂಜೆ ಖಂಡಿತಾ ನಮ್ಮನೆಗೆ ಊಟಕ್ಕೆ ಬನ್ನಿ, ಮರೆಯಬೇಡಿ. ಹೊಸ ಪರಿಚಯ ಅಂತ ಸಂಕೋಚಪಡಬೇಡಿ. ಖಂಡಿತಾ ಬನ್ನಿ' ಎಂದು ಒತ್ತಿ ಒತ್ತಿ ಹೇಳಿದ್ದರು. ಅವತ್ತು ಸಂಜೆ ಅವರ [illegible] ಅರ್ಜೆಂಟಿತ್ತೋ ಏನೋ ಒಂಬತ್ತು ಗಂಟೆಗಾದರೂ ಬಂದೇ ಬರುತ್ತಾರೆ ನೋಡೋಣ ಅಂತ ಅಲ್ಲೇ ತಿರುಗಾಡಿ ಬಂದೆ. ಕೊನೆಗೂ ಒಂಬತ್ತೂವರೆಗೆ ಗಂಡ ಹೆಂಡತಿ ಮನೆಗೆ ಬಂದೇ ಬಂದರು! ನನ್ನನ್ನು ನೋಡಿದ ಮೇಲೂ ಅವರಿಗೆ ಏನೂ ನೆನಪಾಗಲಿಲ್ಲ. 'ಓಹೋ, ನೀವಾ! ಏನು ಇಷ್ಟು ದೂರ ಬಂದಿರಿ. ಅದೂ ಈ ಹೊತ್ತಿನಲ್ಲಿ? ನಾವು ಹಾಗೇ ಬೇಜಾರಾಗಿ ಸಿನೆಮಾಕ್ಕೆ ಹೋಗಿ ಊಟಾನೂ ಮುಗಿಸಿಕೊಂಡೇ ಬಂದಿವಿ. ಅಂದ್ಹಾಗೆ ಏನಾದರೂ ಅರ್ಜೆಂಟ್ ಕೆಲಸವಿತ್ತೇನು?' ಅಂದಾಗ ಪೇಚಾಡಿದವನು ನಾನು.

ಹೀಗೆ ಪೇಚಿನ ಪ್ರಸಂಗಗಳಿಗೆ ಕೊನೆ ಮೊದಲೇ ಇಲ್ಲ. ಪ್ರತಿಯೊಬ್ಬನೂ ಒಂದಲ್ಲ ಒಂದು ಸಲ ಒಂದೊಂದು ರೀತಿಯಲ್ಲಿ ಪೇಚಿಗೆ ಸಿಕ್ಕೇ ಸಿಕ್ಕಿರುತ್ತಾನೆ. ಪೇಚಿಗೂ, ಸಂಕಟಕ್ಕೂ ಪೇಚಿನ ಪ್ರಸಂಗಕ್ಕೂ ದುಃಖದ ಬಳಲಿಗೂ ಬಹಳ ವ್ಯತ್ಯಾಸವಿದೆ. ನದಿಯ [illegible] ಆಗ ನಕ್ಕರದು ಮುಷ್ಟ ನಗೆ. ಆದರೆ [illegible] ತೊಳಲುವುದು ಸಂಕಟವಲ್ಲ ಪೇಚು, ಸ.ಳಿಯಿಂದ [illegible] ಎಂಬ ಅರಿವು ಸಂಕಟಕ್ಕೆ ಹಿನ್ನೆಲೆ. ಆದರೆ ಮೊಳಕಾಲುದ್ದ ನೀರಲ್ಲಿ ಬಿದ್ದರೆ ಇನ್ನೊಮ್ಮೆ ಕಿವಿ ಮೂಗಲ್ಲಿ ನೀರು ತುಂಬಿ ಕೆಮ್ಮುತ್ತಾನೆ. ನಗಬಹುದು ಎಂಬ ಪರಿಹಾಸ್ಯದಲ್ಲಿದೆ ಪೇಚು. ಕೆಲವರಿಗಂತೂ ಪೇಚಿನ ಪ್ರಸಂಗಗಳಲ್ಲಿ ಸಿಕ್ಕಿ [illegible] ಕುರುಚಲು ಗಿಡದಿಂದ ಪಾರಾಗಿ ಕುರುಚಲು ಗಡ್ಡದಲ್ಲಿ ಸಿಕ್ಕಿಕೊಂಡ ಅನ್ನುವ ಒಂದು ಪಂಜಾಬೀ ಗಾದೆಯಿದೆ. ಅದೇ ರೀತಿ ಪೇಚಿಗೆ ಹೇಗೋ ಸಿಕ್ಕುವ ಪ್ಯಾದೆಗಳಿಗೇನು ಕಮ್ಮಿ- [illegible] ಗಳನ್ನು ಇನ್ನೊಮ್ಮೆ ಸರಿಯಾಗಿ ನೋಡಿ, ಅವರಲ್ಲೊಬ್ಬರಾದರೂ ಇಂತಹ ಪೇಚಿನ ಪ್ಯಾದೆಗಳಿದ್ದೇ ಇರುತ್ತಾರೆ. ಹಾಗೆ ಒಂದು [illegible]!

ಅದು ಪ್ರಪಂಚದ ಮೊತ್ತ
ಮೊದಲ ಒಂದು ಹಳಿ ರೈಲೆ?

ಪತಿಯಾಳಾದ ಕುದುರೆ ರೈಲು

ಮೂಲ : ನಜಮುಲ್ ಹಸನ
ಕನ್ನಡಕ್ಕೆ: ವಿ. ನರಹರಿ

ಈ ಶತಮಾನದ ಆದಿಯಲ್ಲಿ ಒಂದೇ ಹಳಿಯ ಮೇಲೆ ಉರುಳಿದ ಮೂರು ಚಕ್ರದ ರೈಲಿನ ಮಸುಕಾದ ನೆನಪು ಮಾತ್ರ ಪತಿಯಾಳಾದ ಹಳಬರಲ್ಲಿ ಉಳಿದಿತ್ತು. ರೇಲ್ವೆಯವರಿಗೆ ಇದರ ಬಗ್ಗೆ ಏನೂ ತಿಳಿದಿರಲಿಲ್ಲ. ಆದರೆ ಬ್ರಿಟನ್ನಿನಲ್ಲಿ ಮಾತ್ರ ಅದರ ವಿಷಯವಾಗಿ ಸಂಕ್ಷಿಪ್ತ ಉಲ್ಲೇಖಗಳು ದೊರೆಯುತ್ತಿದ್ದವು.

ಪತಿಯಾಳಾದ ಲೋಕೋಪಯೋಗಿ ಇಲಾಖೆಯ ಅಂಗಳದಲ್ಲಿ ಕಳೆದ ೫೯ ವರ್ಷಗಳಿಂದ ಒಂದೇ ಹಳಿಯ ರೈಲು ಅಥವಾ ಅದರ ಅಳಿದುಳಿದ ಭಾಗ ಹುದುಗಿಕೊಂಡಿದ್ದು ಯಾರಿಗೂ ತಿಳಿದಿರಲಿಲ್ಲ. "ಲೋಕೋಪಯೋಗಿ ಇಲಾಖೆ ಅಂಗಳದಲ್ಲಿ ಒಂದೇ ಹಳಿಯ ರೈಲು" ಎಂಬ ಸೂಚನಾ ಫಲಕವು ಒಳಗಿದ್ದ ವಸ್ತುಗಳನ್ನು ಸ್ಪಷ್ಟವಾಗಿ ಸೂಚಿಸುತ್ತಿದ್ದರೂ ಅದು ಸಾರ್ವಜನಿಕರ ಕುತೂಹಲವನ್ನು ಕೆರಳಿಸಿದ್ದು ಅಷ್ಟಕ್ಕಷ್ಟೆ. ಹರುಕು ಮುರುಕಾಗಿ ತೋರಿ ಬಂದ ಅದನ್ನು ಜನ ತಿಳಿದದ್ದು ಸಹ ಹಾಗೆಯೆ. ಯಾವನೊಬ್ಬನು ಈ ಬಗ್ಗೆ ಆಸಕ್ತಿ ವಹಿಸಿದ್ದೆ ಆದರೆ ಈ ತುಕ್ಕು ಹಿಡಿದ ಯಂತ್ರಗಳು ಮತ್ತು ಹಳಿಗಳು ಹಿಂದೊಮ್ಮೆ ಕುದುರೆಗಳಿಂದ ಎಳೆಯಲ್ಪಟ್ಟ ಹಾಗೂ ಅನಂತರ ವಿಚಿತ್ರವಾದ ಮೂರು ಚಕ್ರದ ಯಂತ್ರಗಳಿಂದ ಎಳೆಯಲ್ಪಟ್ಟ ಇದು ಭಾರತದ ಒಂದೇ ಹಳಿಯ ರೈಲಿನ ಅಮೂಲ್ಯ ಏಕಮೇವ ಅವಶೇಷಗಳೆಂಬುದನ್ನು ಕಂಡುಕೊಳ್ಳಬಹುದಿತ್ತು.

'ಇಂಪೀರಿಯಲ್ ಕೆಮಿಕಲ್ಸ್'ನ ಹಿಂದಿನ ನಿರ್ವಾಹಕ ನಿರ್ದೇಶಕನೂ ಪುರಾತನ ವಸ್ತುಪ್ರಿಯನೂ ಆದ ಎಚ್. ಆರ್. ಆ್ಯಂಬ್ಲರ್‌ನಿಂದ ಅಕಸ್ಮಾತ್ತಾಗಿ ಸಂಶೋಧನಗೊಳ್ಳದಿದ್ದರೆ ಒಂದೇ ಹಳಿಯ ರೈಲು ಇತಿಹಾಸಕ್ಕೇ ದಕ್ಕುತ್ತಿರಲಿಲ್ಲ. ಅದರ ಬಗ್ಗೆ ಲಭ್ಯವಿದ್ದ ಅಲ್ಪ ಸ್ವಲ್ಪ ವಿವರಗಳನ್ನು ಆ್ಯಂಬ್ಲರನು ಓದಿ ತಿಳಿದು ಕುತೂಹಲಗೊಂಡು ಈ ಕುರಿತು ಹೆಚ್ಚಿನ ಮಾಹಿತಿ ಸಂಗ್ರಹಿಸಲು ಪ್ರಯತ್ನಿಸಿದಾಗ ೧೯೫೭ ನವೆಂಬರ್ ೨೧ರ 'ಮಾಡೆಲ್ ಇಂಜಿನಿಯರ್'ನ ಸಂಚಿಕೆಯಲ್ಲೂ ಜೆ. ಆರ್. ಡೇ ಹಾಗೂ ಬಿ. ಜಿ. ವಿಲ್ಸನ್‌ರವರ 'ಅಸಾಮಾನ್ಯ ರೇಲ್ವೆ' ಪುಸ್ತಕದಲ್ಲೂ ಆ ವಿವರಗಳನ್ನು ಪಡೆದ.

ಇಷ್ಟಾದರೂ ಕುತೂಹಲ ತೃಪ್ತಿಯಾಗುವಷ್ಟು ಮಾಹಿತಿ ಅವನಿಗೆ ದೊರೆಯಲಿಲ್ಲ. ಆದ್ದರಿಂದ ೧೯೬೨ರಲ್ಲಿ ಭಾರತಕ್ಕೆ ಭೇಟಿ ಕೊಟ್ಟು ಪತಿಯಾಳಾದಲ್ಲಿ ಒಂದೇ ಹಳಿಯ ರೈಲಿನ ಕುರುಹುಗಳು ಅಸ್ತಿತ್ವದಲ್ಲಿರುವವೇ ಎಂಬುದನ್ನು ಕಂಡುಹಿಡಿಯಲು ಆತ ತೀರ್ಮಾನಿಸಿದ. ಸಂಶೋಧನೆಯು ಆತನನ್ನು ಲೋಕೋಪಯೋಗಿ ಇಲಾಖೆಯ ಅಂಗಳಕ್ಕೆ ಕರೆದೊಯ್ದಿತು. ಅಲ್ಲಿ ಆತ ಸುತ್ತಲೂ ಮರಗಳೂ ಹುಲ್ಲೂ ಬೆಳೆದಿದ್ದ ತೆರೆದ ಕೊಟ್ಟಿಗೆಯಲ್ಲಿ ಗತಿಗಾಣದೆ ಬಿದ್ದಿರುವ ಒಂದೇ ಹಳಿಯ ರೈಲಿನ ಅವಶೇಷಗಳನ್ನು ಕಂಡ. ಹೆಚ್ಚು ಕಡಿಮೆ ಪೂರ್ಣ ಸ್ಥಿತಿಯಲ್ಲಿದ್ದ ಎರಡು ಯಂತ್ರಗಳು ಅವನ ಕಣ್ಣಿಗೆ ಬಿದ್ದವು. ಉಳಿದೆರಡು ಶಿಥಿಲವಾಗಿದ್ದವು. ಬೋಗಿಗಳ ಚೌಕಟ್ಟುಗಳು ಮಾತ್ರ ಉಳಿದಿದ್ದವು. ಅಲ್ಲಿ ತೂಗಾಡುವ ತೊಟ್ಟಿಯಿದ್ದ ಒಂದು ಹರಕು ಮುರಕು ಕೊಠಡಿಯೂ ಇತ್ತು.

'ಸಂಡೆ' ಪತ್ರಿಕೆಯ ಅನುಮತಿಯಿಂದ

ಈ ಸಂಶೋಧನೆಯಿಂದ ಉತ್ಸಾಹಿತನಾದ [illegible] ಪತ್ರಾಗಾರಗಳನ್ನು ಒರೆಗೆ ಹಚ್ಚತೊಡಗಿದಾಗ ಒಂದೇ ಹಳಿಯ ರೈಲನ್ನು ರಚಿಸಿದ. ಸಿ. ಡಬ್ಲ್ಯೂ. ಬೋಲ್ಸ್ ಎಂಬ ಇಂಜಿನಿಯರ್ ಇಂಗ್ಲೆಂಡ್‌ನಲ್ಲಿ ವಾಸವಾಗಿದ್ದಾನೆಂಬುದು ಅವನಿಗೆ ಅಲ್ಲಿ ತಿಳಿಯಿತು. ಅನಂತರ ಅವರಿಬ್ಬರಲ್ಲಿ ಪತ್ರ-ವ್ಯವಹಾರ ನಡೆಯಿತು. ಅವನು ಇಂಗ್ಲೆಂಡಿಗೆ ವಾಪಸು ಹೋಗಿ ಬೋಲ್ಸ್‌ನನ್ನು ಭೇಟಿಯಾಗ-ಬೇಕೆಂದುಕೊಂಡಾಗ, ಬೋಲ್ಸ್‌ನು ತನ್ನ ೯೦ರ ವೃದ್ಧಾಪ್ಯದಲ್ಲಿ ಸಾವನ್ನಪ್ಪಿದ ಸುದ್ದಿ ಬಂತು. ಸ್ವಾಭಾವಿಕವಾಗಿಯೆ ಆ್ಯಂಬ್ಲರ್ ನಿರಾಶೆಗೊಂಡ. "ನಾನು ಒಬ್ಬ ದೊಡ್ಡ ವ್ಯಕ್ತಿಯನ್ನು ಸಂಧಿಸುವ ಅವಕಾಶ ಕಳೆದುಕೊಂಡೆ. ಒಂದೇ ಹಳಿಯ ರೈಲಿನ ಬಗ್ಗೆ ಅವನು ತಿಳಿದಿದ್ದ ಹೆಚ್ಚಿನ ವಿಷಯಗಳು ಅವನೊಡನೆಯೇ ತೀರಿಕೊಂಡವು !" ಎಂದು ಅನಂತರ ಆ್ಯಂಬ್ಲರ್ ಬರೆದ.

ಆ್ಯಂಬ್ಲರನು ತಾನು ಸಂಗ್ರಹಿಸಿದ ತುಂಡು ತುಂಡು ವಿವರಗಳಿಂದ, ಈ ಒಂದೇ ಹಳಿಯ ರೈಲಿನ ಪೂರ್ಣ ಕಥೆಯನ್ನು ರಚಿಸಿದ. ಬ್ರಿಟಿಷ್ ರೈಲ್ವೆ ನಿಯತಕಾಲಿಕೆಯಲ್ಲಿ ಆ ಲೇಖನ [illegible]ರಲ್ಲಿ ಪ್ರಕಟವಾಯಿತು. ಇದರ ನಂತರವೇ ರೈಲ್ವೆ ಇಲಾಖೆಯವರು ತಮ್ಮ ಮೂಗಿನಡಿಯೇ ಅನಾಥವಾಗಿ ಬಿದ್ದಿದ್ದ ಅಮೂಲ್ಯವಾದ ಈ ಭಗ್ನಾವಶೇಷಗಳ ಬಗ್ಗೆ ಕಣ್ಣು ತೆರೆದದ್ದು. ಆದರೆ [illegible] ತನ್ನ [illegible]ಯಲ್ಲಿ ಅತಿ ಹಳೆಯದೆನಿಸಿದ ಈ ಯಂತ್ರಗಳನ್ನೂ ಬೋಗಿಗಳನ್ನೂ ಹೊರತೆಗೆದು, ಅವುಗಳನ್ನು ಅಮೃತಸರಕ್ಕೆ ಒಯ್ದು, ಅಲ್ಲಿ ಅವು ಈಗ ಸರಿ-ಪಡಿಸಲ್ಪಡುತ್ತಿವೆ. ಒಮ್ಮೆ ರಿಪೇರಿಗಳು ಮುಗಿದ ನಂತರ ಇವುಗಳನ್ನು ದೆಹಲಿಗೆ ತಂದು ಅಲ್ಲಿನ ಚಾಣಕ್ಯಪುರಿಯಲ್ಲಿ ರೂಪುಗೊಳ್ಳುತ್ತಿರುವ ರೇಲ್ವೆ ವಸ್ತುಸಂಗ್ರಹಾಲಯದಲ್ಲಿ ಈ ಒಂದೇ ಹಳಿಯ ರೈಲನ್ನು ಪುನರೂಪಿಸಲಾಗುವುದು. (ಇದೇ [illegible] ರಾಷ್ಟ್ರಪತಿ ಫಕ್ರುದ್ದೀನ್ ಅಲಿ ಅಹಮದರು ಈ ರೈಲ್ವೆ ವಸ್ತುಸಂಗ್ರ-ಹಾಲಯವನ್ನು ಉದ್ಘಾಟಿಸಿದರು.)

ಈ ಒಂದೇ ಹಳಿಯ ರೈಲಿಗೆ ಕುತೂಹಲಪೂರ್ಣವಾದ ಚರಿತ್ರೆಯಿದೆ. ೭೪ ವರ್ಷಗಳ ಹಿಂದೆ, ಪತಿಯಾಳಾದ ಮಹಾರಾಜ ಭೂಪೇಂದ್ರ ಸಿಂಗರಿಗೆ ಸಮರಾನಂತರ ಉಳಿದ ೫೬೦ ಕುದುರೆಗಳನ್ನು ಹೇಗೆ ಬಳಸಿಕೊಳ್ಳಬೇಕೆಂಬುದೇ ಸಮಸ್ಯೆಯಾಯಿತು. ಆಗ ತಾನೇ ಆ ಸಂಸ್ಥಾನದ ಇಂಜನಿಯರ್ ಆಗಿ ನೇಮಕಗೊಂಡ ಸಿ. ಡಬ್ಲ್ಯೂ. ಬೋಲ್ಸ್ ಎಂಬ ಒಬ್ಬ ಬ್ರಿಟಿಷ್ ತರುಣ ಇಂಜನಿಯರ್ ಇದಕ್ಕೆ ಪರಿಹಾರವನ್ನು ಒದಗಿಸಿದ. ತಾನೇ ವಿಶೇಷವಾಗಿ ರಚಿಸಿದ ೧೫ ಮೈಲು ದಾರಿಯುದ್ದಕ್ಕೆ ಉರುಳುವ ಗಾಡಿಗಳಿಗೆ ಆ ಕುದುರೆಗಳನ್ನು ನೊಗ ಹೂಡಿದ.

ಇದೊಂದು ಸರಳ ವ್ಯವಸ್ಥೆ. ಒಂದೇ ಒಂದು ಕಂಬಿಯು ಆ ವಾಹನದ ಒಟ್ಟು ತೂಕದ ಸೇಕಡಾ ತೊಂಭತ್ತೈದರಷ್ಟು ಭಾರವನ್ನು ಭರಿಸು-ತ್ತಿತ್ತು. ಉಳಿದ ತೂಕವು ಅದರ ಹಾದಿ-ಯುದ್ದಕ್ಕೂ ನೆಲದ ಮೇಲೆ ಉರುಳುವ ವಿಶೇಷ ಚಕ್ರದ ಮೇಲೆ ಬೀಳುತ್ತಿತ್ತು. ಈ ವಿಚಿತ್ರ ರೀತಿಯ ಚಕ್ರ ವ್ಯವಸ್ಥೆಯ ಮೂಲ ಉದ್ದೇಶ ಕುದುರೆಗಳು ಸುಲಭವಾಗಿ ನೊಗವನ್ನು ಎಳೆ-ಯಲು ಅನುವಾಗುವಂತೆ ಘರ್ಷಣೆಯನ್ನು ಕಡಿಮೆಮಾಡುವುದೇ ಆಗಿತ್ತು.

ಈ ಕುದುರೆ ರೈಲಿಗೆ ಅದರದೇ ಆದ ಹಿರಿಮೆ ಇತ್ತು. ಎತ್ತಿನ ಗಾಡಿಗಿಂತಲೂ ಉತ್ತಮವಾದುದನ್ನು ಕಂಡುಹಿಡಿಯುವ ಸಮಸ್ಯೆಯನ್ನು ಉಗಿಬಂಡಿಯು ಪರಿಹರಿಸುವ ಸ್ವಲ್ಪವೇ ಮೊದಲು ಇದು ಈ ಸಮಸ್ಯೆಯನ್ನು ಪರಿಹರಿಸಿತ್ತು. ಆದರೆ ಈ ಬಗೆಯ ಗಾಡಿ ಅಷ್ಟು ಜನಪ್ರಿಯವಾಗಲಿಲ್ಲ.

ತಲಾ ೧೧ ಆಣೆ ದರದಲ್ಲಿ ಈ ಕುದುರೆ ರೈಲು ತಿಂಗಳೊಂದಕ್ಕೆ ೨೦,೦೦೦ ಪ್ರಯಾಣಿಕರನ್ನು ಒಯ್ಯುತ್ತಿತ್ತು. ಮಣವೊಂದಕ್ಕೆ ಒಂದು ಆಣೆಯ ದರದಂತೆ ಸಾಮಾನುಗಳನ್ನು ಇದರ ಮೂಲಕ ಸಾಗಿಸಲಾಗುತ್ತಿತ್ತು. ಇದರಲ್ಲಿ ಪ್ರಯಾಣಿಸಿದ ಪ್ರಮುಖರಲ್ಲಿ ಭಾರೀ ಅಂಗ-ರಕ್ಷಕರ ಸಮೂಹದೊಂದಿಗೆ ಸುತ್ತಾಡುತ್ತಿದ್ದ ಅಫಘಾನಿ-ಸ್ತಾನದ ಅಮೀರನೂ ಒಬ್ಬ. ಅಮೀರನು ಹಾಸಿಗೆಯ ಮೇಲೆ ಕುಳಿತದ್ದರಿಂದ ತಾವು ಕುಳಿತುಕೊಳ್ಳುವುದು ಸರಿಯಲ್ಲವೆಂದು ತಿಳಿದು

ಆಗ ಪರಿವಾರದವರು ರೈಲು ಹೊರಡುವ ವರೆಗೂ ಶಿಸ್ತಿನಿಂದ ಒಳಗೆ ಬೆಂಚುಗಳ ಮೇಲೆ ಕುಳಿತು. ಗಾಡಿ ಪ್ರಾರಂಭವಾದ ಕೂಡಲೇ ಆನಂದವಾಗಿಯೋ ಅವರೆಲ್ಲ ಟಪಟಪ ಬೀಳತೊಡಗಿದರು.

ಈ ಕುದುರೆ ರೈಲು ಒಂದು ದಶಕದ ವರೆಗೆ ಓಡಿ ಅನಂತರ ಕಂಬಿಯ ಮೇಲಿರುವಂತಹ ಮೂರು ಚಕ್ರಗಳನ್ನು ಮತ್ತು ರಸ್ತೆಯ ಮೇಲೆ ಸಿಕ್ಕಿಸುವಂತಹ ನಾಲ್ಕನೆಯ ಒಂದು ದೊಡ್ಡ ಚಕ್ರವನ್ನು ಜೋಡಿಸಿದ್ದ ಉಗಿಯಂತ್ರಕ್ಕೆ ಶರಣಾಯಿತು. ಪಟಿಯಾಳಾ ಸಂಸ್ಥಾನದ ಒಂದೇ ಹಳಿಯ ರೈಲು ಕೊನೆಯ ಬಾರಿ ಓಡಿದ್ದು ೧೯೨೭ರಲ್ಲಿ. ಅನಂತರ ಅವನ್ನು ಯಾರೂ ಕೇಳುವವರು ಬಳಿಯಲ್ಲಿಲ್ಲ.

ಮೂಲತಃ ಪಟಿಯಾಳಾ ಸಂಸ್ಥಾನದ ಒಂದೇ ಹಳಿಯ ರೈಲು ೧೫ ಮೈಲಿಯ ದಾರಿಯುದ್ದಕ್ಕೆ ಓಡುವದಾಗಿದ್ದು, ೨೦,೦೦೦ ರೂಪಾಯಿಗಳ ವೆಚ್ಚದಲ್ಲಿ ತಯಾರಿಸಲ್ಪಟ್ಟು ಸಿರ್‌ಹಿಂದ್‌ನಿಂದ ಆಲಾಪುರ್ ಅನಂತರ ಮೋರಿಂದ ವರೆಗೂ ಓಡುತ್ತಿತ್ತು.

ಕುದುರೆ ರೈಲು ಪ್ರಾರಂಭವಾದ ಕೆಲವು ವರ್ಷಗಳ ನಂತರ, ಕುದುರೆಗಳು ನಿರ್ಗಮಿಸುವ ವರೆಗೆ ಕಾದಿದ್ದು ಅನಂತರ ಅವುಗಳಿಗೆ ಬದಲಿಯಾಗಿ ಯೊಂದೂ ೯೦೦೦ ರೂಪಾಯಿ ಬೆಲೆಯ ಉಗಿಯಂತ್ರಗಳನ್ನು ಸಿರ್‌ಹಿಂದ್‌ದಾರಿಯಲ್ಲಿ ಉಪಯೋಗಿಸಲಾಗಿತ್ತೆಂಬುದಕ್ಕೆ ಯಾವ ಪುರಾವೆಯೂ ಇಲ್ಲವೆಂದು ಆ್ಯಂಬ್ಲರ್ ಹೇಳುತ್ತಾನೆ.

ಈಗಿನ ಉಗಿಬಂಡಿಯ ತತ್ವದ ಆಧಾರದ ಮೇಲೆಯೇ ಈ ಯಂತ್ರವೂ ಕೆಲಸಮಾಡುತ್ತದೆ. ವ್ಯತ್ಯಾಸವಿರುವುದು ಚಕ್ರಗಳಲ್ಲಿ ಮಾತ್ರ. ಇಂದು ಒಂದು ಯಂತ್ರಕ್ಕೆ ೬ ಜೊತೆ ಚಕ್ರಗಳಿವೆ. ಆದರೆ ಈ ಒಂದೇ ಹಳಿಯ ರೈಲು ಕಂಬಿಯ ಮೇಲೆ ಮೂರು ಚಕ್ರಗಳೂ ಕಂಬಿಯಿಂದ ೨ ಅಡಿಗಳ ಅಂತರದಲ್ಲಿರುವಂತೆ ಜೋಡಿಸಿರುವ ೯೮ ಸೆಂ. ಮೀ. ವ್ಯಾಸವುಳ್ಳ ರಸ್ತೆಯ ಮೇಲೆ ಉರುಳುವಂತಹ ಒಂದು ಚಕ್ರವೂ ಇದಕ್ಕಿದೆ.

ರೈಲಿನ ಬೋಗಿಗಳು ಹೆಚ್ಚು ಕಡಿಮೆ ೮ ಅಡಿ ಉದ್ದ ೬ ಅಡಿ ಅಗಲ ಅಡಿ ಇದ್ದು ಕಂಬಿಯ ಮೇಲೆ ಉರುಳುವಂತಹ ೮ ಅಂಗುಲ ವ್ಯಾಸದ ಎರಡು ಚಕ್ರಗಳನ್ನೂ ಹಾಗೂ ರಸ್ತೆಯ ಮೇಲೆ ಉರುಳುವ ಒಂದು ಚಕ್ರವನ್ನೂ ಹೊಂದಿದ್ದವು, ೧೯೦೮ರಲ್ಲಿ ಇಂಥ ಬೋಗಿಗಳ ಸಂಖ್ಯೆ ಸುಮಾರು ೨೫ ಇತ್ತು.

ಈ ಕುದುರೆ ರೈಲು ಸ್ವಲ್ಪ ಕಾಲದ ವರೆಗೆ ಬಹಳ ಯಶಸ್ವಿಯಾದರೂ ಅನಂತರ ತೊಂದರೆಗಳು ಪ್ರಾರಂಭವಾದವು.

ಬೋಗಿಗಳ ಚಕ್ರಗಳು ರಸ್ತೆಯನ್ನು ಸವೆಸುವುದರ ಬಗ್ಗೆ ಪಟಿಯಾಳಾ ಸಂಸ್ಥಾನ ಹಾಗೂ ಬ್ರಿಟಿಷ್ ಸರಕಾರಗಳ ನಡುವೆ ವೈಷಮ್ಯಗಳುಂಟಾದವು.

ಈ ಕುದುರೆ ರೈಲು ಆಗ ತಾನೇ ಕಾಣಿಸಿಕೊಳ್ಳುತ್ತಿದ್ದ ಟಾಂಗಾ ಹಾಗೂ ಸಾಮಾನು ಸಾಗಿಸುವ ಟ್ರಾಕ್ಸಿಗಳೊಡನೆ ಸ್ಪರ್ಧೆಗಿಳಿದಿತ್ತು. ಸಿರ್‌ಹಿಂದ್ ನಿಲ್ದಾಣದ ಸಿಬ್ಬಂದಿ ವರ್ಗ ಒಂದೇ ಹಳಿಯ ರೈಲಿಗೆ ವಿರೋಧವಾಗಿತ್ತು. ಏಕೆಂದರೆ ಎತ್ತಿನ ಗಾಡಿಯ ಮಾಲೀಕರಿಂದ ಸಿಕ್ಕುತ್ತಿದ್ದ 'ಮಾಮೂಲು' ಇದರಿಂದಾಗಿ ನಿಂತುಹೋಗಿತ್ತು.

ಅಲಂಪುರ ಮತ್ತು ಮೋರಿಂದಗಳ ನಡುವಣ ದಾರಿಯು ೧೯೧೪ ರಲ್ಲಿ ಮುಚ್ಚಲ್ಪಟ್ಟು ಕುದುರೆಗಳನ್ನು ಹಿಂತೆಗೆದುಕೊಳ್ಳಲಾಯಿತು. ಆದರೆ ಪಟಿಯಾಳಾದ ಪತ್ರಾಗಾರಗಳಲ್ಲಿ ದಾಖಲೆಗಳು ಅವುಗಳನ್ನು ಮತ್ತೆ ಆರಂಭಿಸಲಾಯಿತೆಂಬುದನ್ನು ಸೂಚಿಸುತ್ತವೆ. ಉಗಿಯಂತ್ರಗಳು ಬಂದರೂ ಪಟಿಯಾಳಾ ಸಂಸ್ಥಾನದ ಒಂದೇ ಹಳಿಯ ರೈಲು ಜೀವಂತವಾಗಿ ಉಳಿಯಿತು. ಆದರೆ ೧೯೨೭ ರಲ್ಲಿ ಯಂತ್ರಚಾಲಕರಿಗೆ ಬಹಳಷ್ಟು ಸಮಸ್ಯೆಗಳು ಬಂದದ್ದರಿಂದ ಅವರು ಅದನ್ನು ಕೈಬಿಡಲು ಯೋಚಿಸಿದರು. ಆ ವರ್ಷದ ಅಕ್ಟೋಬರ್ ೧ ರಂದು ಈ ರೈಲುಬಂಡಿ ಇತಿಹಾಸದ ಗರ್ಭದಲ್ಲಿ ಸೇರಿಹೋಯಿತು. ✡

ಹೊರನಾಡ ಕನ್ನಡಿಗರ ಶಿಕ್ಷಣ ಸಮಸ್ಯೆಗಳು

ಔದಾರ್ಯವೋ? ಆತ್ಮವಂಚನೆಯೋ?

ಡಾ. ರಂ. ಶ್ರೀ. ಮುಗಳಿ

ಶಿಕ್ಷಣದಲ್ಲಿ ಮಾತೃಭಾಷೆಗೆ ಮೇಲಾದ ಸ್ಥಾನವಿದೆ ಎಂಬುದನ್ನು ಮನಗಾಣಿಸಿಕೊಡಬೇಕಾದ ಕಾಲ ಈಗಿಲ್ಲ. ಈ ತತ್ತ್ವವನ್ನು ಎಲ್ಲರೂ ಒಪ್ಪುತ್ತಾರೆ. ಸರಕಾರವು ಇದಕ್ಕೆ ಅನುಸರಿಸಿ ತನ್ನ ಧೋರಣೆಯನ್ನು ಸಾರಿದೆ. ಆದರೆ ಕನ್ನಡಿಗರ ಮಟ್ಟಿಗೆ ಇದರಲ್ಲಿ ಶ್ರದ್ಧೆ ನಿಚ್ಚಳವಾಗಿದೆ ಎಂದು ಹೇಳಲುಬಾರದು. ಹೊರನಾಡ ಕನ್ನಡಿಗರಲ್ಲಿ ಅನೇಕರು ಈ ಶ್ರದ್ಧೆಯಿಂದ ದೂರವಾಗಿದ್ದಾರೆ. ಎಲ್ಲರೂ ಒಪ್ಪಿ ನಡೆಯುವಂಥ ಮಾತು ಎಲ್ಲ ಕನ್ನಡಿಗರ ಎದೆಯನ್ನು ಮುಟ್ಟಿಲ್ಲ; ಕೃತಿಯಲ್ಲಿ ಇಳಿದಿಲ್ಲ ಎಂಬುದೇ ಶಿಕ್ಷಣದ ಮೂಲಭೂತ ಸಮಸ್ಯೆಯಾಗಿದೆ. ತಮ್ಮ ಭಾಷೆಗೆ ತಾವು ಮೇಲಾದ ಸ್ಥಾನವನ್ನು ಕೊಡದೆ ಅನ್ಯಭಾಷೆಗೆ ಮರುಳಾಗುವ ದೌರ್ಬಲ್ಯವು ಕನ್ನಡಿಗರ ವಿಶೇಷ ಲಕ್ಷಣವಾಗಿಬಿಟ್ಟಿದೆ. ಅದನ್ನರಿತು ಕೆಲವು ಅನ್ಯಭಾಷಿಕರು ಕನ್ನಡಿಗರನ್ನು 'ಭಾಷಾಂತರ'ಗೊಳಿಸಲು ಅಚ್ಚುಕಟ್ಟಾದ ಪ್ರಯತ್ನಗಳನ್ನು ಮಾಡುತ್ತಾರೆ. ಮೂಲದಲ್ಲಿದ್ದ ದೌರ್ಬಲ್ಯ, ಅದರ ಮೇಲಿನ ಆಘಾತದಿಂದ ಉಂಟಾದ ಇನ್ನೂ ಹೆಚ್ಚಿನ ದೌರ್ಬಲ್ಯ; ಅದರಲ್ಲಿಯೇ [illegible] ಇಲ್ಲವೇ ಅಸಂಕುಚಿತ ವ್ಯಕ್ತಿಯೆದೆ [illegible] ಆತ್ಮವಂಚನೆ, ಇವುಗಳಿಂದ ಸಮಸ್ಯೆ ಹೆಚ್ಚು ಜಟಿಲವಾಗಿದೆ. ಬೇರೆ ಯಾವ ಪ್ರಾಂತದಲ್ಲಿಯೂ ಈ ಸ್ವರೂಪದಲ್ಲಿ ಸಮಸ್ಯೆಯನ್ನು ಕಾಣಲಾರೆವು.

ಇದು ತಪ್ಪೋ ಸರಿಯೋ ಎಂಬ ಬಗ್ಗೆ ಮನಸ್ಸಿನಲ್ಲಿ ತೂಗಾಟವಿದ್ದರೆ; ಒಮ್ಮೆ ತಪ್ಪು, ಒಮ್ಮೆ ಸರಿ ಎಂಬ ಗೊಂದಲ ಉಂಟಾಗಿದ್ದರೆ; ಇದ್ದುದು ಸರಿ, ಹೊಸದು ಬೇಡ, ಅಂತೇ ತಪ್ಪು ಎಂಬ ಹಟ ಹೊಕ್ಕಿದ್ದರೆ; ಈ ತರಹದ ಮನೋವೃತ್ತಿಯನ್ನು ಮೊದಲು ತಿದ್ದಬೇಕಾಗುತ್ತದೆ. ಇವನ್ನು ಮಾಡುವಾಗ ಹೊರನಾಡ ಕನ್ನಡಿಗರು ಯಾವ ವಿವಿಧ ಪರಿಸ್ಥಿತಿಯಲ್ಲಿ ಹಾಯ್ದು ಬಂದಿದ್ದಾರೆ, ಈಗ ಎಲ್ಲಿ ಬಂದು ನಿಂತಿದ್ದಾರೆ ಎಂಬುದರ ಬಗ್ಗೆ ಚಾರಿತ್ರಿಕ ದೃಷ್ಟಿಯ ಸೂಕ್ಷ್ಮ ಅವಲೋಕನ ಬೇಕು. ಅವರನ್ನು ಕನ್ನಡಕ್ಕೆ ಒಲಿಸಿಕೊಳ್ಳಲು ಹೆಚ್ಚಿನ ಸಹಾನುಭೂತಿ ಮತ್ತು ಸಹನೆಗಳು ಬೇಕು. ವ್ಯವಹಾರಕ್ಕೆ ನಿಲುಕದ ಅಥವಾ ಇಂದಿನ ಪರಿಸ್ಥಿತಿಯಲ್ಲಿ ತತ್‌ಕ್ಷಣ ಪಲ್ಲಟ ಮಾಡಬಹುದಾದಂಥ ತತ್ತ್ವಗಳನ್ನು ಏಕ್ರದಿಂದ ಕೂಗಿಕೊಳ್ಳಬಾರದು. ಎಲ್ಲ ಕಡೆಗೆ ಒಂದೇ ಬಗೆಯಾಗಿ ಸಮಸ್ಯೆಯನ್ನು ಇದಿರಿಸುವ ಹವ್ಯಾಸವನ್ನು ಇಟ್ಟುಕೊಳ್ಳಕೂಡದು. ರೋಗಕ್ಕೆ ಸರಿಯಾದ ನಿದಾನ, ನಿದಾನಕ್ಕೆ ಸರಿಯಾದ

ಚಿಕಿತ್ಸೆ ಎಂಬ ಸೂತ್ರವನ್ನು ಅಲ್ಲಲ್ಲಿಯ ಕನ್ನಡಿಗರ ಗುಂಪುಗಳಿಗೆ ಹಾಗೂ ವ್ಯಕ್ತಿಗಳಿಗೆ ಅನ್ವಯಿಸಬೇಕು.

ಹೊರನಾಡ ಕನ್ನಡಿಗರಲ್ಲಿ ಹೊಸ ಜಾಗೃತಿಯ ಪರಿಣಾಮವಾಗಿ ಕನ್ನಡಕ್ಕೆ ಒಲಿದವರು ಹೆಚ್ಚುತ್ತಿದ್ದಾರೆ. ಅವರನ್ನೀಗ ತಂದು ಬದಿಗಿರಿಸೋಣ. ಕನ್ನಡಕ್ಕೆ ಒಲಿಯದವರು ಯಾಕೆ ಹಾಗೆ ಇದ್ದಾರೆ, ಯಾವ ಬೇರೆ ಬೇರೆ ಮನಃಸ್ಥಿತಿಯಲ್ಲಿ ಇದ್ದಾರೆ ಎಂಬುದನ್ನು ತಿಳಿದು, ಅದರಂತೆ ಅವರಿಗೆ ಕನ್ನಡ ಶ್ರದ್ಧೆಯ ದೀಕ್ಷೆ ಕೊಡಬೇಕು. ವಿದ್ಯಾವಂತರ ವರ್ಗದಲ್ಲಿ ಈ ಕ್ಲಿಯೂ ಅವರ ಬಳಕೆ ಹೆಚ್ಚುತ್ತದೆ. ಮಗುವನ್ನು ಆಡಿಸುವ ಆಳು, ದಾಯಿ ಇವರ ಪ್ರಭಾವದಿಂದ ಮಗುವಿಗೆ ಕನ್ನಡ ಬಾರದಾಗುತ್ತದೆ. ಅದರೊಡನೆ ಹೊರನುಡಿಯನ್ನು ಆಡಿ ಕನ್ನಡದ ಪರಂಪರೆಗೆ ತಡೆ ಹಾಕಿಬಿಡುತ್ತಾರೆ. ಮನೆಯಲ್ಲಿ ಈ ರೀತಿ ಮೆಲ್ಲನೆ ಕನ್ನಡಕ್ಕೆ ಗ್ರಹಣ ಹಿಡಿದು, ಕೊನೆಗೆ ಪೂರ್ಣ ಖಗ್ರಾಸವಾಗುತ್ತದೆ. ಮನೆಯ ಹೊರಗಿನ ನುಡಿ ಒಳಗಿನ ನುಡಿಯಾಗಲು, ಪರಿಸ್ಥಿತಿಯೊಡನೆ ಅವರು ಏಕಜೀವವಾಗುತ್ತಾರೆ. ಅದರಲ್ಲಿ ಕೆಲವರು ವಿಶೇಷ ಸಮಾಧಾನವನ್ನು ತಾಳುತ್ತಾರೆ. ಒಂದು ಭಾಷೆಯ ಪ್ರದೇಶದಿಂದ ಇನ್ನೊಂದಕ್ಕೆ ಅಲೆ-

---

ಕನ್ನಡದ ಹೆಸರಾಂತ ಸಾಹಿತಿ ಡಾ. ಮುಗಳಿಯವರು ತಮ್ಮ ಜೀವನದ ಬಹು ಕಾಲವನ್ನು ಶಿಕ್ಷಣಕ್ಕಾಗಿ ವ್ಯಯಿಸಿದವರು, ಕನ್ನಡದ ಗಡಿಯಾಚೆ ಇದ್ದು ಹೊರನಾಡ ಕನ್ನಡಿಗರ ಸಮಸ್ಯೆಗಳನ್ನು ಆಳವಾಗಿ ಅರಿತವರು. ಕರ್ನಾಟಕ ರಾಜ್ಯೋದಯಕ್ಕಿಂತ ಮುಂಚೆಯೇ ಅವರು ಪ್ರಸಿದ್ಧಿಸಿದ ಈ ಲೇಖನದಲ್ಲಿಯ ವಿಚಾರಗಳು ಇಂದಿಗೂ ಅಷ್ಟೇ ತಥ್ಯಪೂರ್ಣವಾಗಿವೆ. ಅವರ 'ಶಿಕ್ಷಣದ ಮುನ್ನಡೆ' ಗ್ರಂಥದಿಂದ ಇದನ್ನು ಆಯ್ದುಕೊಳ್ಳಲಾಗಿದೆ.

ಹೊರನಾಡಿನಲ್ಲಿರುವ ಕನ್ನಗರು ಹಲವಾರು ಐತಿಹಾಸಿಕ ಮತ್ತು ಇತರ ಕಾರಣಗಳಿಂದಾಗಿ ಬಲು ಬೇಗ ಕನ್ನಡವನ್ನು ಮರೆತುಬಿಡುತ್ತಾರೆ. ಅದೇ ಮರಾಠಿಗ, ತೆಲುಗ, ಬಂಗಾಲಿ, ಮಲಯಾಳಿ ತನ್ನ ತಾಯ್ನುಡಿಯನ್ನು ಇಷ್ಟು ಲಘುವಾಗಿ ಕಾಣುವುದಿಲ್ಲ. ಪ್ರಸ್ತುತ ಲೇಖನ ಈ ಸಮಸ್ಯೆಗೆ ಕನ್ನಡಿ ಹಿಡಿಯುತ್ತದೆ.

ದೃಷ್ಟಿಯಿಂದ ನೋಡಿದರೆ ಹಲವು ಗುಂಪುಗಳಾಗುತ್ತವೆ. ಕರ್ನಾಟಕದ ಹೊರಗೆ ನೌಕರಿಗಾಗಿ ಹೋಗಿ ಒಂದು ಕಡೆ ಹೆಚ್ಚು ಕಾಲ ಇದ್ದವರು ಕೆಲ ಸಮಯ ಇದ್ದವರು, ಇವರಿಬ್ಬರೂ ಪರಿಸ್ಥಿತಿವಿವಶರಾಗಿಬಿಡುತ್ತಾರೆ. ಎಲ್ಲಿ ಯಾವ ಭಾಷೆಯೋ ಅದನ್ನು ತಾವು ಆಡುತ್ತಾರೆ. ಬರಬರುತ್ತ ಚೆನ್ನಾಗಿಯೇ ಆಡುತ್ತಾರೆ. ಕನ್ನಡದ ಸಂಸ್ಕಾರವು ಮೊದಲೇ ಕಡಿಮೆಯಾಗಿದ್ದು ಭಿನ್ನ ಪರಿಸ್ಥಿತಿಯಲ್ಲಿ ಇನ್ನಿಷ್ಟು ಕಡಿಮೆಯಾಗುತ್ತದೆ. ಸಂಸ್ಕಾರವಿಲ್ಲದ ಕನ್ನಡಕ್ಕಿಂತ ಸುಸಂಸ್ಕೃತವಾದ ಅನ್ಯಭಾಷೆ ಅವರಿಗೆ ಹೆಚ್ಚು ಸೇರುತ್ತದೆ. ಹೀಗಾಗಿ ಮನೆಯವರು ಹೆಸರಿಗೆ ಮನೆಯಲ್ಲಿ ಕನ್ನಡವನ್ನುಳಿಸಿದರೂ ಯಥಾರ್ಥವಾಗಿ 'ಹಂಡಬಂಡ' ಕನ್ನಡಿಗರಾಗುತ್ತಾರೆ. ಒಂದು ಹೊಸ ಸಂಮಿಶ್ರ ಭಾಷೆ ಅವರ ನಾಲಿಗೆಯ ಮೇಲೆ ರೂಪುಗೊಳ್ಳುತ್ತದೆ. ಶಿಕ್ಷಣದಿಂದ, ವಾತಾವರಣದಿಂದ ಕನ್ನಡದ ಉತ್ತಮ ಸಂಸ್ಕಾರ ಮೊದಲು ದೊರೆಯದೆ ಇರುವುದು ಇವಕ್ಕೆಲ್ಲ ಮುಖ್ಯ ಕಾರಣವಾಗಿದೆ. ಕನ್ನಡ ಸಂಸ್ಕಾರದ ಅಭಾವ, ಭಿನ್ನಸಂಸ್ಕಾರದ ಪ್ರಭಾವ, ತಮ್ಮದು ಕಡಿಮೆ, ಕೀಳು ಎಂಬ ಮನೋಭಾವ, ಜೊತೆಗೆ ಆತ್ಮಸಮರ್ಥನೆಗಿಂತ ಪರಾನುಕರಣ ಪ್ರವೃತ್ತಿ ಇವು ವಿದ್ಯಾವಂತರಲ್ಲಿ

ಕನ್ನಡಿಗರ ಕೊರತೆಯನ್ನು ಉಂಟುಮಾಡಿದೆ. ನಮ್ಮ ದೇಶದ ಯಾವ ಭಾಷೆಯೇ ಇರಲಿ, ಅದನ್ನು ಉತ್ತಮವಾಗಿ ಆಡಿ ತೋರಿಸುವ ಹಾಗೂ ತನ್ನದಾಗಿ ಮಾಡಿಕೊಳ್ಳುವ ಭಾಷಿಕ ಶಕ್ತಿ ಕನ್ನಡಿಗರಲ್ಲಿರುವ [illegible] ಒಂದೇ ಒಂದು ಸದ್ಗುಣ. ಇವರು ಕನ್ನಡಿಗರು ಎಂದು ಗುರುತಿಸಲು ಬಾರದಷ್ಟು ಚೆನ್ನಾಗಿ ಬೇರೆ ಭಾಷೆಗಳನ್ನು ಹೊರನಾಡ ಕನ್ನಡಿಗರು ಆಡಬಲ್ಲರು. ಆದರೆ ಕನ್ನಡಿಗರು ಎಂದು ಗುರುತಿಸಲು ಬಾರದ ಬೇರೆ ಭಾಷೆಗಳಲ್ಲಿಯ ವೈಶಿಷ್ಟ್ಯವನ್ನು ತೋರಿಸುವಂತಾದರೆ ಆ ಸದ್ಗುಣ ಇನ್ನೂ ಹೆಚ್ಚುವುದು. ಅವರಲ್ಲಿಯ ವೈಗುಣ್ಯವೆಲ್ಲ ಅಳಿದುಹೋಗುವುದು, ಪ್ರಾಂತೀಯ ಮತ್ತು ಭಾರತೀಯ ದೃಷ್ಟಿಗಳ ಸಮನ್ವಯ ಸಿದ್ಧಿಸುವುದು.

ಕಾಸ್ಮಾಪೊಲಿಟನ್ ಕನ್ನಡಿಗ

ಪರಿಸ್ಥಿತಿವಶರಲ್ಲದೆ ಬುದ್ಧಿಪೂರ್ವಕವಾಗಿ ಭಾಷೆಗಳ ಬಗ್ಗೆ ಅತ್ಯಂತ ಉದಾರದೃಷ್ಟಿಯನ್ನು ತಾಳಿದವರು ಕೆಲವರಿದ್ದಾರೆ. ಯಾವ ಭಾಷೆಯಾದರೇನು, ಹೆಚ್ಚು ಚೆನ್ನಾದ ಸುಕರವಾದ ಭಾಷೆಯನ್ನು ಕಲಿಯಬೇಕು, ಮನೆಯಲ್ಲಿ ಆಡಬೇಕು ಎಂದು ತಮ್ಮನ್ನು 'ಕಾಸ್ಮಾಪೊಲಿಟನ್' (ವಿಶಾಲ) ಎಂದು [illegible], ಕನ್ನಡ ಭಕ್ತರನ್ನು 'ಪ್ಯಾರೋಕಿಯಲ್' (ಸಂಕುಚಿತ) ಎಂದು ಅವರು ಕರೆಯುತ್ತಾರೆ. ಇವರ ಔದಾರ್ಯ ಕನ್ನಡದ ಕಡೆಗೆ ಮಾತ್ರ ತೋರದಿರುವುದು [illegible]. ಮನೆಮಾತು [illegible] ಕನ್ನಡ, ಆದರೆ ಕಲಿತದ್ದು ಮರಾಠಿ, ತೆಲುಗು ಆಗಿದ್ದವರು ಕನ್ನಡ ಬಾರದಿರುವ ಪ್ರದೇಶಗಳಿಗೆ ಹೋಗಿ ನೆಲಸಿದರೆಂದರೆ ಕಲಿತ ಭಾಷೆಯನ್ನೇ ಮನೆಯ ನುಡಿ ಮಾಡಿಕೊಳ್ಳುತ್ತಾರೆ. ಕರ್ನಾಟಕದಲ್ಲಿ [illegible] ಕರ್ನಾಟಕದ ಹೊರಗೆ ಇದ್ದ ಕೆಲವರು, [illegible] ಬೇರೆ ಭಾಷೆಗೆ [illegible] ಅದನ್ನೇ [illegible]ಸುತ್ತಾರೆ. ಇಂಥವರ [illegible] ಕರ್ನಾಟಕದ [illegible] ಬಗ್ಗೆ [illegible]. ಕರ್ನಾಟಕದಲ್ಲಿ ಹುಟ್ಟಿ [illegible] ಕನ್ನಡವನ್ನು ಕಲಿತ ಕೆಲವರು ತಮ್ಮ ಮನೆಮಾತು ಕೊಂಕಣಿ, ತುಳು ಮುಂತಾದ ಉಪಭಾಷೆ ಇಲ್ಲವೆ ಮರಾಠಿ, ತೆಲುಗಿನಂತಹ ಪೂರ್ಣ ಭಾಷೆ ಇದ್ದರೆ, ಹೊರನಾಡಿಗರಾದ ಕೂಡಲೆ ಕನ್ನಡದ ಭಕ್ತಿಗೆ ಎರವಾಗಿ ಅಲ್ಲಲ್ಲಿಯ ಭಾಷೆಯೊಡನೆ ಒಂದಾಗಿಬಿಡುತ್ತಾರೆ. ಕರ್ನಾಟಕದಲ್ಲಿದ್ದಾಗ ಅನಿರ್ವಾಹವೆಂದು ಕನ್ನಡ ಕಲಿತದ್ದಾಯಿತು, ಕರ್ನಾಟಕ ಬಿಟ್ಟ ಮೇಲೆ ಕನ್ನಡವನ್ನು ಬಿಟ್ಟದ್ದಾಯಿತು. ಇವರಲ್ಲಿಯೂ ಪ್ರಾಮಾಣಿಕವಾಗಿಯೇ 'ಕಾಸ್ಮಾಪೊಲಿಟನ್' ಎಂಬ ಬಿರುದಿನ ತಾತ್ತ್ವಿಕರೂ ದೊರೆಯುತ್ತಾರೆ. ಸಾಧಾರಣ ಸಾಕ್ಷರರಾದ ವ್ಯಾಪಾರಿಗಳೂ ಉದ್ಯೋಗಿಗಳೂ ವ್ಯವಹಾರನಿಷ್ಠರಾದವರು, ಅವರಲ್ಲಿ ಮುಳುಗಿ ಏಳುವವರು, ವ್ಯವಹಾರದ ಭಾಷೆ ಯಾವುದೋ ಅದಕ್ಕೆ ನಿಷ್ಠೆಯನ್ನು ಸಲ್ಲಿಸುತ್ತಾರೆ. ಅದು ತಮಗೂ ತಮ್ಮ ಮಕ್ಕಳಿಗೂ ಚೆನ್ನಾಗಿ ಬರಲೆಂದು ಮನೆಮಾತಿನ ಕನ್ನಡವನ್ನು ಬಿಟ್ಟು, ಇಲ್ಲವೇ ಅನಿರ್ವಾಹಕ್ಕೆಂದು ಇಟ್ಟು, ಕೆಲವರು ಬೇರೆ ಭಾಷೆಯನ್ನೇ ಆಡುತ್ತಾರೆ. ಸಂಸ್ಥಾನೀ ರಾಜಕಾರಣದಲ್ಲಿ ರಾಜಭಾಷೆಗೆ ದೊರೆತ ಪ್ರಾಶಸ್ತ್ಯ, ಜನದ ಭಾಷೆಗೆ ದೊರೆತ ಅಲಕ್ಷ್ಯ, ಅನಾದರಗಳಿಂದ ಗಡಿನಾಡಿನಲ್ಲಿಯ ಕನ್ನಡಿಗರು ಪ್ರವಾಹಪತಿತರಾಗಿ ಅನ್ಯಭಾಷೆಗಳ ದಾಸಾನುದಾಸರಾಗಿ ಹೋದರು. ಈಗ ಅವರಿಗೆ ಮುಕ್ತಿ ದೊರೆತಿದ್ದರೂ ಹಿಂದಿನ ಪ್ರಬಲ ಸಂಸ್ಕಾರದಿಂದ ಅವರ ಮನಸ್ಸು ಮುಕ್ತವಾಗಿಲ್ಲ. ಕನ್ನಡವನ್ನು ಕಲಿಯುವುದೆಂದರೆ ಅವರಿಗೆ ಹೊಸ ಸಾಹಸ. ಅಂತೇ ಅವರ ಆಲಸ್ಯವನ್ನು ಕೆಣಕುವ ಕನ್ನಡತನವು ಅವರಿಗೆ ಬೇಡವಾಗಿದೆ. ನಿರಕ್ಷರರಾದವರ ದೊಡ್ಡ ಗುಣವೆಂದರೆ ಎಷ್ಟೇ ಮಿಶ್ರವಾಗಿರಲಿ, ಕೆಟ್ಟುಹೋಗಿರಲಿ, ಅಂಥ ಕನ್ನಡವನ್ನು ಅವರು ಮನೆಮಾತಿನಲ್ಲಿಯೂ [illegible] ವ್ಯವಹಾರದಲ್ಲಿಯೂ ಬಹುತರ ಬಿಟ್ಟಿಲ್ಲ, ಆದರೆ [illegible] ದೃಷ್ಟಿ ಅದರಲ್ಲಿಯೂ ಸಾಕಷ್ಟಿದೆ. ತಮ್ಮ ಮಕ್ಕಳಿಗೆ ಕನ್ನಡವನ್ನು ಕಲಿಸಲು ಅವರು ಬೇಗನೆ ಸಿದ್ಧರಾಗಲಾರರು. ಕನ್ನಡವು ಕೀಳು ತರಗತಿಯ ನುಡಿಯೆಂದೂ ಬಳಕೆಯಲ್ಲಿದ್ದ ಹೆರನುಡಿ ಉಚ್ಚಕೋಟಿಯದೆಂದೂ ಅವರ ತಿಳುವಳಿಕೆ

ದೃಢಮೂಲವಾದುದು. ಸ್ವಭಾಷೆಯ ಬಗ್ಗೆ ಅಭಿಮಾನ, ಭಕ್ತಿ, ಹಟಗಳು ಇಂತಹ ಕನ್ನಡಿಗರಲ್ಲಿ ನಷ್ಟವಾಗಿಹೋಗಿವೆ. ಭಾವನೆಯ ಬದಲು ವ್ಯವಹಾರವೇ ಬಹುಸಂಖ್ಯ ಜನತೆಯ ಮನಸ್ಸನ್ನು ಆಳುತ್ತಿದೆ.

ಮನೋವಿಜ್ಞಾನಿಯ ತೆರದಲ್ಲಿ....

ಈ ಸ್ಥೂಲ ನಿರೀಕ್ಷಣೆಯಿಂದ ಹೊರನಾಡ ಕನ್ನಡಿಗರ ವಿವಿಧ ಪರಿಸ್ಥಿತಿ ಮತ್ತು ಮನಃಸ್ಥಿತಿಯನ್ನು ತಿಳಿಯಬಹುದು. ಇದನ್ನು ನೆನೆದರೆ ಅವರ ಶಿಕ್ಷಣದ ಸಮಸ್ಯೆಗಳೆಲ್ಲ ಮೂಲತಃ ಮನೋವಿಜ್ಞಾನದ ಮತ್ತು ಸಂಸ್ಕೃತಿಯ ಸಮಸ್ಯೆಗಳಾಗಿ ತೋರುತ್ತವೆ. ಕನ್ನಡದಲ್ಲಿ ಶಿಕ್ಷಣ ಪಡೆಯಬೇಕೆಂಬ ಧ್ಯೇಯ, ನಿಷ್ಠೆ, ಆತುರ ಇವನ್ನು ಅನೇಕರಲ್ಲಿ ಪುಟಗೊಳಿಸಬೇಕಾದ ಅಗತ್ಯವಿದೆ. ಅವನ್ನು ಮಾಡದೇ ಶಿಕ್ಷಣದ ವ್ಯವಸ್ಥೆಯೊಂದರಿಂದ ಉದ್ದೇಶ ಕೈಗೂಡಲಾರದು. ಅಲ್ಲಲ್ಲಿಯ ಪರಿಸರದಲ್ಲಿ ತಲೆಯೆತ್ತಿದ ಸಮಸ್ಯೆಗಳನ್ನು ಸಂಪೂರ್ಣವಾಗಿ ಅರಿತುಕೊಂಡು ಮನೋವಿಜ್ಞಾನಿಯ ರೀತಿಯಲ್ಲಿ ಸಂಸ್ಕೃತಿಯ ಸಾಧನಗಳಿಂದ ಅವರನ್ನು ಕನ್ನಡಕ್ಕೆ ಒಲಿಸಿಕೊಳ್ಳಬೇಕಾಗುತ್ತದೆ. ಅಂತೇ ಶಿಕ್ಷಣದ ಸಮಸ್ಯೆಗಳಿಗೆ ಸರಳವಾದ ಉತ್ತರವನ್ನು ಕೊಡಲಿಕ್ಕಾಗದು. ಕನ್ನಡಕ್ಕೆ ಒಲಿಸಿಕೊಳ್ಳಲಿಕ್ಕೆ ಹೇಗೋ ಹಾಗೆ ಕನ್ನಡವನ್ನು ಕಲಿಸುವ ವಿಷಯದಲ್ಲಿಯೂ ಶಿಕ್ಷಣ ತಂತ್ರವು ಬೇರೆ ಬೇರೆಯಾಗುವುದು ಅಪರಿಹಾರ್ಯ ಹಾಗೂ ಅವಶ್ಯ. ಆದರೂ ಒಂದೆರಡು ಸಾಮಾನ್ಯ ಸೂಚನೆಗಳನ್ನು ಮಾಡಬಹುದು. ಅವನ್ನು ಸಂದರ್ಭಾನುಸಾರವಾಗಿ ಕೃತಿಗೆ ಇಳಿಸಿದಲ್ಲಿ ಎಲ್ಲ ಕಡೆಯ ಉದ್ದೇಶ ಸಾಧನೆಗೆ ನೆರವಾಗುತ್ತದೆ. ಮೊದಲನೆಯದಾಗಿ ಕನ್ನಡ ಎಂದರೆ ಸಂಕುಚಿತಭಾವ, ಕನ್ನಡ ನುಡಿ ಎಂದರೆ ಕೀಳು ನುಡಿ, ಈ ಬಗೆಯ ಕಲ್ಪನೆಗಳಿಂದಲೂ ಮನೋಭಾವಗಳಿಂದಲೂ ಹೊರನಾಡಿಗರ ಮನಸ್ಸನ್ನು ಕುಶಲವಾದ ಬಗೆಯಲ್ಲಿ ಬಿಡುಗಡೆಗೊಳಿಸಬೇಕು. ಕನ್ನಡದ ಭಾವನೆಯ ಹಿಂದೆ ಕನ್ನಡ ನಾಡಿನ ಮಾತ್ರವಲ್ಲದೆ ಭಾರತ ದೇಶದ, ಅದೇಕೆ, ಮಾನವತೆಯ ಕಲ್ಯಾಣದ ದೃಷ್ಟಿಯಿದೆ ಎಂಬುದನ್ನು ಬುದ್ಧಿಗೊಪ್ಪುವಂತೆ ತಿಳಿಸಿಕೊಡಬೇಕು. ತಪ್ಪಾದ ಕಲ್ಪನೆ ಇರಲಿ, ಮನೋವೃತ್ತಿ ಇರಲಿ, ಅದನ್ನು ತಿದ್ದಲು, ನೂರು ಸಲ ಅದು ತಪ್ಪೆಂದು ಸಾರುವುದಕ್ಕಿಂತ ಒಂದು ಸಲ ಒಪ್ಪು ಯಾವುದೆಂದು ಹೇಳಿದರೆ ಒಳಿತು.

ಅಂದರೆ ಬಾಧಕ ಅಂಶಗಗಿಂತ, ಸಾಧಕ ಅಂಶಗಳ ಮೇಲೆ ಒತ್ತುಕೊಟ್ಟು ತಿದ್ದುವುದೇ ಮನೋವಿಜ್ಞಾನದ ಮಾರ್ಗ. ಸಾಧಕ ಅಂಶಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ-ಸಂಸ್ಕೃತಿಗಳಲ್ಲಿ ಮನಸಾರೆ ಮೆಚ್ಚುವಂಥದೇನಿದೆ ಎಂಬುದನ್ನು ಎತ್ತಿತೋರಿಸುವುದು ಮುಖ್ಯವಾಗಿದೆ. ಕನ್ನಡ ಸಂಸ್ಕೃತಿಯ ಸಮಗ್ರ ದರ್ಶನವಾದಂತೆ ಕನ್ನಡತನದ ದರ್ಶನವು ತಾನೇ ಅರಳುತ್ತದೆ. ಅಜ್ಞಾನದಿಂದ ಕೂಡಿದ ಅಭಿಮಾನ ಕೊನೆಬಾಳಲಾರದು. ಈ ದೃಷ್ಟಿಯಿಂದ ಹೊರನಾಡಿನಲ್ಲಿಯ ಕರ್ನಾಟಕ ಸಂಘಗಳು, ಸಭೆ ಸಮಾರಂಭಗಳಿಗಿಂತ ಹೆಚ್ಚಾಗಿ ಒಳ್ಳೆಯ ಕನ್ನಡ ಪುಸ್ತಕಗಳ ಓದು, ಕಾವ್ಯವಾಚನ, ಚರ್ಚೆ, ವಿಮರ್ಶೆ, ಸಂಸ್ಕೃತಿಪರಿಚಯ ರೂಪವಾದ ಉಪನ್ಯಾಸ ಮುಂತಾದ ಕಾರ್ಯಕ್ರಮಗಳಿಗೆ ಹೆಚ್ಚು ಮಹತ್ವವನ್ನು ಕೊಡುವುದು ಅಗತ್ಯವಾಗಿದೆ.

ಮನೆಗೊಂದು ಶಾಲೆ

ಇನ್ನು ಶಿಕ್ಷಣ ವ್ಯವಸ್ಥೆಯ ಸಮಸ್ಯೆಯತ್ತ ಹೊರಳೋಣ. ದ್ವಿಭಾಷಿಕ ಪ್ರದೇಶಗಳಲ್ಲಿ ಕನ್ನಡಿಗರಿದ್ದಾರೆ. ಅವರ ಸ್ಥಾನ ಎಲ್ಲಿ ಎಂಬುದು ಗೊತ್ತಾಗಿಲ್ಲ. ಅವರಲ್ಲಿ ಬಹುಸಂಖ್ಯರ ಮನಸ್ಸಿನಲ್ಲಿ ಕನ್ನಡಕ್ಕೆ ಯಾವ ಹೆಚ್ಚಿನ ಸ್ಥಾನವೂ ಇಲ್ಲ. ಕನ್ನಡವು ಅವರ ಮನೆಮಾತೆಂದು ಕನ್ನಡ ಶಾಲೆಗಳನ್ನು ತೆರೆಯಹೋದರೆ, ಇಲ್ಲವೆ ಸರಕಾರಕ್ಕೆ ಬೇಡಿಕೊಂಡರೆ ಕನ್ನಡ ಶಾಲೆ ನಮಗೆ ಬೇಡವೆಂದು ಅವರು ಬೇಡಿಕೊಳ್ಳುತ್ತಾರೆ.

ಇದು ಹಾಸ್ಯಾಸ್ಪದವೇನೊ ನಿಜ. ಆದರೆ ಈ ಹಾಸ್ಯಕ್ಕೆ ಆಸ್ಪದ ದೊರೆತದ್ದು ವಿಚಿತ್ರ ಪರಿಸ್ಥಿತಿಯ ಮೂಲಕ. ಇಂಥಲ್ಲಿ ತಾಳ್ಮೆಯಿಂದ

ಕನ್ನಡದ ಸ್ಥಿತಿ ಪುಷ್ಟಿ, ಮನೋಭೂಮಿಕೆಯನ್ನು ಗಮನಿಸಿ, ಭದ್ರವಾದ ತಳಹದಿಯ ಮೇಲೆ ಶಿಕ್ಷಣ ಮಂದಿರವನ್ನು ನಿರ್ಮಿಸಬೇಕು. ದಿಲ್ಲಿಯಿಂದ ಹಳ್ಳಿಯವರೆಗೆ ಸುಸ್ಪಷ್ಟವಾಗಿ ಕರ್ನಾಟಕದ ಹೊರಗಿನ ಊರುಗಳಲ್ಲಿ ಕನ್ನಡಿಗರು ಬೇರೆ ಬೇರೆ ಪ್ರಮಾಣದಲ್ಲಿ ವಾಸವಾಗಿದ್ದಾರೆ. ಕೆಲವರು ಅಲ್ಲಿಯೇ ನೆಲೆಸಿದವರಾಗಿದ್ದಾರೆ. ಪಲವರು ಕೆಲ ವರ್ಷಗಳ ಮಟ್ಟಿಗೆ ಉಪಜೀವನಕ್ಕಾಗಿ ಇದ್ದವರಾಗಿದ್ದಾರೆ. ಇವರಿದ್ದಲ್ಲಿ ಪ್ರಾದೇಶಿಕ ಭಾಷೆ ಬೇರೆಯಾದುದು. ಅಲ್ಲಿಯ ಸಾಹಿತ್ಯ ಸಂಸ್ಕೃತಿ ಸಂಪ್ರದಾಯಗಳು ಬೇರೆಯಾದದ್ದು. ಅವನ್ನು ಅಲ್ಲಗಳೆಯಕೂಡದೆಂದು ಹೊರನಾಡ ಕನ್ನಡಿಗರಿಗೆ ಹೇಳಬೇಕಾದ ಅಗತ್ಯ ಅಷ್ಟಿಲ್ಲ. ಸಾಮರಸ್ಯ ವೃತ್ತಿ ಅವರ ಜೀವನದಲ್ಲಿ ಸೇರಿಕೊಂಡಿದೆ. ಅವರು ಪ್ರಾದೇಶಿಕ ಭಾಷೆಯನ್ನು ಕಲಿಯಬೇಕು, ಮಕ್ಕಳಿಗೆ ಕಲಿಸಬೇಕು, ಅಲ್ಲಿಯ ಜನಜೀವನದೊಡನೆ ಒಂದಾಗಬೇಕು. ಇದು ಅವರ ರಾಷ್ಟ್ರೀಯ ದೃಷ್ಟಿಯ ಸಾಫಲ್ಯ. ಜೊತೆಗೆ ಕನ್ನಡವನ್ನು ಮನೆಮಾತಾಗಿ ಇರಿಸುವುದಂತೂ ಸರಿ; ಅದರಲ್ಲಿ ಓದುಬರಹ ಕಲಿಯಬೇಕು, ಕಲಿಸಬೇಕು. ಕನ್ನಡ ಸಾಹಿತ್ಯ ಸಂಸ್ಕೃತಿಗಳೊಡನೆ ಆತ್ಮೀಯವಾದ ಸಂಬಂಧವನ್ನು ಬೆಳೆಸಬೇಕು.

ಇದು ಹೇಗೆ ಸಾಧ್ಯ ಎಂಬುದೇ ಇಲ್ಲಿ ಚರ್ಚಿಸಬೇಕಾದ ವಿಷಯ. ಇದು ಬೇಕೆ ಎಂಬುದರ ಮನವರಿಕೆಯಾದಾಗ, ಇದು ಹೇಗೆ ಎಂಬುದಕ್ಕೆ ದಾರಿ ದೊರೆಯುತ್ತದೆ. ಅಲ್ಲಲ್ಲಿಯ ಕರ್ನಾಟಕ ಸಂಘಗಳು ತಮ್ಮ ಹೊಣೆಯರಿತು ವಿಧಾಯಕ ಕಾರ್ಯವಾಗಿ ಕನ್ನಡ ಶಾಲೆಗಳನ್ನು ನಡೆಸಬೇಕು. ಪ್ರಾಥಮಿಕ ಶಿಕ್ಷಣಕ್ಕಾಗಿ ಕನ್ನಡ ಪಾಲಕರೆಲ್ಲ ತಮ್ಮ ಮಕ್ಕಳನ್ನು ತಪ್ಪದೆ ಈ ಶಾಲೆಗಳಿಗೆ ಕಳಿಸಬೇಕು. ಆದರೆ ಈ ಶಾಲೆಗಳಲ್ಲಿ ಮೂರನೇ ತರಗತಿಯಿಂದ ಮುಂದೆ ಪ್ರಾದೇಶಿಕ ಭಾಷೆಯ ಕಲಿಕೆಯನ್ನು ಅವಶ್ಯವಿಷಯವಾಗಿ ಮಾಡಬೇಕು. ಮುಂದೆ ಮಾಧ್ಯಮಿಕ ಶಾಲೆಗಳು ಕನ್ನಡದ ಮುಖಾಂತರವಾಗಿ ಇದ್ದರೆ ಅಲ್ಲಿಗೇ ಕಳಿಸಬೇಕು. ಹಾಗಿರದಿದ್ದರೆ ಪ್ರಾದೇಶಿಕ ಭಾಷೆಯ ಶಾಲೆಗಳಿಗೆ ಕಳಿಸಲು ಯಾವ ಅಡ್ಡಿಯೂ ಬರಲಾರದು. ವಿಶ್ವವಿದ್ಯಾನಿಲಯ ಶಿಕ್ಷಣವು ಪ್ರಾದೇಶಿಕ ಹಾಗೂ ರಾಷ್ಟ್ರಭಾಷೆಯ ಮಾಧ್ಯಮದಲ್ಲಿ ದೊರೆಯಬಹುದು. ಮುಖ್ಯವಾಗಿ ಕನ್ನಡದಲ್ಲಿಯೇ ಶಿಕ್ಷಣದ ಆರಂಭವನ್ನು ಮಾಡಿ ತಮ್ಮ ಮಕ್ಕಳ ಸಹಜ ವಿಕಾಸಕ್ಕೂ ಅವರಲ್ಲಿಯ ಕನ್ನಡತನದ ಬೆಳವಣಿಗೆಗೂ ಹೊರನಾಡಿನ ಹಿರಿಯರು ನೆರವಾಗಬೇಕೆಂಬುದೇ ಮೇಲಿನ ವ್ಯವಸ್ಥೆಯ ಸಾರವಾಗಿದೆ. ಇದಕ್ಕೆ ತೊಂದರೆ ತೊಡಕುಗಳು ಇಲ್ಲವೆಂದಲ್ಲ. ದೊಡ್ಡ ಪಟ್ಟಣಗಳಲ್ಲಿ ಕನ್ನಡಿಗರು ಹಲವು ಕಡೆ ಹಂಚಿಕೊಂಡು ವಾಸವಾಗಿರುತ್ತಾರೆ. ಅವರಿಗೆ ಒಂದು ಶಾಲೆಯೇಕೆ ನಾಲ್ಕು ಶಾಲೆಗಳನ್ನು ತೆರೆದರೂ ಸಣ್ಣ ಮಕ್ಕಳಿಗೆ ಅದು ಅನುಕೂಲವಾಗದು. ವಾಹನದ ವ್ಯವಸ್ಥೆ ಶ್ರೀಮಂತರಿಗೆ ಮಾತ್ರ ಸಾಧ್ಯ. ಇನ್ನು ಕೆಲವು ಕಡೆ ಒಂದು ಶಾಲೆ ತೆರೆಯುವುದು ಸಹ ಕಷ್ಟಸಾಧ್ಯವಿರುತ್ತದೆ.

ಭಾಷಿಕ ಸಂಘಟನೆಯ ವಿಷಯದಲ್ಲಿ ಕನ್ನಡಿಗರು ಇತರ ಭಾಷಾ ಬಂಧುಗಳಷ್ಟು ಮುಂದುವರಿದವರಾಗಿಲ್ಲ. ಶಾಲೆಯ ಏರ್ಪಾಡು ಆಗದಿದ್ದಲ್ಲಿ ಇಲ್ಲವೆ ಆಗುವವರೆಗೆ 'ಮನೆಗೊಂದು ಕನ್ನಡ ಶಾಲೆ' ಆಗಬೇಕು, ಮನೆಯಲ್ಲಿ ಕನ್ನಡ ವಾತಾವರಣ ಬೆಳೆಯಬೇಕು. ಪ್ರಾದೇಶಿಕ ಶಾಲೆಗಳಿಗೆ ಹೋಗುವ ಕನ್ನಡ ಮಕ್ಕಳು ಮನೆಯಲ್ಲಿ ಕನ್ನಡ ಕಲಿಯುವಂತೆಯೂ, ಕನ್ನಡ ಸಾಹಿತ್ಯ ಸಂಸ್ಕೃತಿಯ ಪರಿಚಯ ಹೊಂದುವಂತೆಯೂ ವ್ಯವಸ್ಥೆಯಾಗಬೇಕು. ಇದು ಯಶಸ್ವಿಯಾಗಬೇಕಾದರೆ ಪಾಲಕರಲ್ಲಿ ಉತ್ಸಾಹ ಜವಾಬ್ದಾರಿಗಳು ಹೆಚ್ಚಾಗಬೇಕು. ಕುಲದೇವರ ಪೂಜೆ ಮುಂತಾದ ಮನೆತನದ ಸಂಪ್ರದಾಯಗಳನ್ನು ಎಲ್ಲಿದ್ದರೂ ನಡೆಸಿಕೊಂಡು ಹೋಗುವಂತೆ, ಪಾಲಕರು ಕನ್ನಡ ಕುಲದ ಅಭಿಮಾನದಿಂದ ಕನ್ನಡತನದ ಸಂಸ್ಕಾರಗಳನ್ನು ತಾವು ಪಡೆದು ತಮ್ಮ ಮಕ್ಕಳಿಗೆ ಕೊಡಲು ಸಿದ್ಧರಾಗಬೇಕು. ತಮಗೆ ಬಿಡುವಿದ್ದ ಸಮಯದಲ್ಲಿ ಒಂದು ಘಂಟೆಯನ್ನು ಈ ಮನೆಯ ಶಾಲೆಗೆ ಮೀಸಲಿಟ್ಟು, ಸಸ್ತಕ್ಕೆ ದೊರೆಯುವ ಚಿತ್ರ ಪುಸ್ತಕಗಳನ್ನು ತರಿಸಿ ಅವುಗಳ ಸಹಾಯದಿಂದ ತಮ್ಮ ಮಕ್ಕಳಿಗೆ ಕಲಿಸಬೇಕು. ವಿಶೇಷವಾಗಿ ತಾಯಂದಿರು ಈ

ಕಾರ್ಯವನ್ನು ಕೈಕೊಳ್ಳಬೇಕಾಗಿದೆ. ಹೊರನಾಡ ಕನ್ನಡಿಗರ ಸಂಸ್ಥೆ ಈ ದಿಶೆಯಲ್ಲಿ ಮಾಡಬೇಕಾದ ಮೊದಲನೆಯ ಕಾರ್ಯವೆಂದರೆ, ಮನೆಯ ಶಾಲೆಗಳಿಗೆಂದು ಉಪಯುಕ್ತವಾದ ಸಚಿತ್ರ ಕ್ರಮಿಕ ಪುಸ್ತಕಗಳನ್ನು ಸಿದ್ಧಪಡಿಸುವುದು. ಅವುಗಳಲ್ಲಿ ಕನ್ನಡ ಸಾಹಿತ್ಯ, ಇತಿಹಾಸ ಸಂಸ್ಕೃತಿಗಳ ಪರಿಚಯವಾಗುವಂತೆಯೂ, ಅದರಿಂದ ಹೆಮ್ಮೆ ಹುಟ್ಟುವಂತೆಯೂ ಪಾಠಗಳ ಯೋಜನೆ ಇರಬೇಕು. ಇತರ ಜ್ಞಾನವಿಷಯಗಳಿಗೆ ಪ್ರಾಧಾನ್ಯವಿರಕೂಡದು. ಸಾಹಿತ್ಯ ಪರಿಷತ್ತಿನಂತೆ, ಸಂಸ್ಥೆಯ ಪರವಾಗಿ ಪರೀಕ್ಷೆಗಳನ್ನು ನಡೆಯಿಸಿ ಪ್ರಶಸ್ತಿಗಳನ್ನು ಕೊಡುವ ಕ್ರಮವನ್ನು ಜಾರಿಗೆ ತರಬಹುದು. ಅಲ್ಲಲ್ಲಿಯ ಕರ್ನಾಟಕ ಸಂಘಗಳ ಮೂಲಕ ಈ ಪರೀಕ್ಷೆಗಳನ್ನು ನಡೆಸಬಹುದು. ಅಭ್ಯಾಸ ಮಾತ್ರ ಮನೆಯಲ್ಲಿ ನಡೆಯುವುದು. ಎರಡೆರಡು ವರ್ಷಗಳಲ್ಲಿ ಅಭ್ಯಾಸದ ನಂತರ ಒಂದೊಂದು ಪರೀಕ್ಷೆಯೆಂಬುದಾಗಿ ಮಾಡಿ ಎರಡು ಮೂರು ಪರೀಕ್ಷೆಗಳನ್ನು ಏರ್ಪಡಿಸಬೇಕು. ಅದಕ್ಕೆ ತಕ್ಕ ಅಭ್ಯಾಸಕ್ರಮವನ್ನಿಟ್ಟು, ಪಠ್ಯ ಹಾಗೂ ಇತರ ಪುಸ್ತಕಗಳನ್ನು ನಿಯಮಿಸಬೇಕು. ವಿಶಿಷ್ಟವಾದ ಪಠ್ಯಗಳು ಸಿದ್ಧವಾಗುವ ವರೆಗೆ ಈಗ ದೊರೆಯುವಂಥ ಪುಸ್ತಕಗಳನ್ನೇ ಕೆಲವು ಕಾಲದ ವರೆಗೆ ಬಳಸಬಹುದಾಗಿದೆ.

ಕನ್ನಡ ವಾತಾವರಣ

ಮನೆಯಲ್ಲಿ ಕನ್ನಡ ವಾತಾವರಣವೆಂಬುದು, ಈ ಮನೆಯ ಶಾಲೆಯ ಪಠ್ಯಪುಸ್ತಕಗಳಷ್ಟೇ ಮಹತ್ವದ್ದಾಗಿದೆ. ತಂತಮ್ಮ ಯೋಗ್ಯತೆ ಮತ್ತು ಅಭಿರುಚಿಗಳಿಗೆ ಅನುಸರಿಸಿ ಹೊರನಾಡ ಕನ್ನಡಿಗರು ಇದನ್ನು ಮಾಡಬಹುದು. ಸಾಮಾನ್ಯವಾಗಿ ಇದರಲ್ಲಿಯ ಅಪೇಕ್ಷಿಸುವದರೆ ಒಳ್ಳೆಯ ಕನ್ನಡ ಪುಸ್ತಕಗಳು, ಕರ್ನಾಟಕದ ಮಹನೀಯ ವ್ಯಕ್ತಿಗಳ ಹಾಗೂ ಪ್ರೇಕ್ಷಣೀಯ ಸ್ಥಳಗಳ ಛಾಯಾಚಿತ್ರಗಳು, ಕನ್ನಡ ನಾಡಿನ 'ಗಾನದೋಸೆ'ಗಳು. ಕರ್ನಾಟಕದ ನಕಾಶೆಗಳೂ ಇವುಗಳ ಸಂಗ್ರಹಗಳೂ ಮನೆಗೆ ಅಲಂಕಾರವಾಗಬೇಕು. ಹೊರನಾಡ ಕನ್ನಡಿಗರ ಮನೆಯನ್ನು ಹೊಕ್ಕರೆ ಯಾರಿಗೂ ಕನ್ನಡ ಸಂಸ್ಕೃತಿಯ ಚಿಕ್ಕ ಪ್ರದರ್ಶನವೊಂದನ್ನು ಕಂಡ ಹಾಗೆ ಭಾಸಬೇಕು. ಮನೆ ಮಕ್ಕಳಿಗಂತೂ ಅದೊಂದು ನಿತ್ಯವಾದ ಸ್ಫೂರ್ತಿ ಸ್ಥಾನವಾಗುವುದು. ಕನ್ನಡ ವಾತಾವರಣವೆಂದು ಇಲ್ಲಿ ಹೇಳಿದ ಮಾತಿನಿಂದ ಇತರ ಅಭಿರುಚಿಗಳಿಗೆ, ವಿಶೇಷವಾಗಿ ಭಾರತೀಯ ವಾತಾವರಣಕ್ಕೆ ಅವಕಾಶವಿರಕೂಡದೆಂದು ಅಭಿಪ್ರಾಯವಲ್ಲ. ಕನ್ನಡಕ್ಕೆ ಕನ್ನಡಿಗನ ಮನೆಯಲ್ಲಿ ಪ್ರಮುಖ ಸ್ಥಾನ ದೊರೆಯಲೆಂಬುದೇ ಹಾರೈಕೆ.

ಹೊರನಾಡ ಕನ್ನಡಿಗರಲ್ಲಿ ಹಳ್ಳಿಯಲ್ಲಾಗಲಿ ಪಟ್ಟಣವಲ್ಲಾಗಲಿ ನಿರಕ್ಷರರೂ ಅಜ್ಞಾನಿಗಳೂ ಹರಡಿಕೊಂಡಿದ್ದಾರೆ. ಕೆಳಗಿನ ಮಧ್ಯಮ ವರ್ಗವೆಂಬುದೂ ಇದೆ. ಇವರಿಗೆಲ್ಲ ಮನೆಯ ಶಾಲೆ ನಿಷ್ಪ್ರಯೋಜಕ. ಯಾಕಂದರೆ ತಾವೇ ನಿರಕ್ಷರರಾದವರು ತಮ್ಮ ಮಕ್ಕಳಿಗೆ ಏನು ಕಲಿಸಬಲ್ಲರು? ಸ್ವಲ್ಪ ಮಟ್ಟಿಗೆ ಸಾಕ್ಷರರಾದ ಮಧ್ಯಮವರ್ಗದವರೂ ಇದನ್ನು ಮಾಡಲಾ-



"ನಿಮ್ಮಲ್ಲಿರುವ ತೊಂದರೆಗಳನೆಲ್ಲ ತೆರೆದ ಹೃದಯದಿಂದ ಹೇಳಿ ಪರ್ವಾಗಿಲ್ಲ, ಅಂತ... ನೀವೆ ಹೇಳಿದ್ರಲ್ಲ ಡಾಕ್ಟ್ರೆ?"

ರರು. ಇಂಥ ಸಂದರ್ಭಗಳಲ್ಲಿ ಮನೆಯ ಹೊರಗಿನ ಸಾಮೂಹಿಕ ಶಾಲೆಯ ಹೊರತು ಬೇರೆ ಉಪಾಯವಿಲ್ಲ. ಅವುಗಳನ್ನು ಸ್ಥಾಪನೆ ಮಾಡುವುದಾದರೆ ಅಲ್ಲಿಯ ಸಂಘಗಳ ಸಂಘಟನಾಶಕ್ತಿಯನ್ನೂ ಚಾತುರ್ಯವನ್ನೂ ಅವಲಂಬಿಸಿದೆ. ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕವಾಗುತ್ತಿರುವ ಈ ಕಾಲದಲ್ಲಿ ಮಾತೃಭಾಷೆಯ ಮೂಲಕ ಶಿಕ್ಷಣ ದೊರೆಯಬೇಕೆಂಬ ತತ್ತ್ವಕ್ಕೆ ಮಾನ್ಯತೆ ದೊರೆಯುತ್ತಿರುವ ಸಮಯದಲ್ಲಿ ಸರಕಾರದಿಂದ ಈ ಕಾರ್ಯಕ್ಕೆ ಸಹಾಯ ದೊರೆಯುವುದು. ಸರಕಾರವೇ ಇಂಥ ಶಾಲೆಗಳನ್ನು ನಡೆಯಿಸಿಕೊಂಡು ಹೋಗಲು ಸಿದ್ಧವಾಗಬಹುದು. ಆದರೆ ಸರಕಾರಕ್ಕೆ ಈ ಬಗ್ಗೆ ಮಾರ್ಗದರ್ಶನ ಮಾಡಲೂ ಕನ್ನಡ ಜನತೆಯ ಮನಸ್ಸನ್ನು ಕನ್ನಡಕ್ಕೆ ಒಲಿಸಿಕೊಳ್ಳಲೂ ಸಂಘಟನೆ ಅತ್ಯಗತ್ಯವಾಗಿದೆ.

ಕನ್ನಡತನ- ರಾಷ್ಟ್ರೀಯ ವ್ಯಕ್ತಿತ್ವ

ಹೊರನಾಡ ಕನ್ನಡಿಗರ ಶಿಕ್ಷಣ ಸಮಸ್ಯೆಗಳನ್ನು ಕುರಿತು ಮಾಡಿದ ಈ ವಿವೇಚನೆಯಲ್ಲಿ, ಕನ್ನಡಿಗರು ಎಲ್ಲಿದ್ದರೂ ಒಳ್ಳೆಯ ಕನ್ನಡಿಗರೂ ಭಾರತೀಯರೂ ಆಗಿ ಸುಸಂಸ್ಕೃತರಾಗಬೇಕೆಂಬ ಉದ್ದೇಶವೇ ಅಡಕವಾಗಿದೆ. ಈ ಉದ್ದೇಶವನ್ನು ಸ್ಪಷ್ಟವಾಗಿ ಕಣ್ಣ ಮುಂದಿರಿಸಿ ನಮ್ಮ ಎಲ್ಲ ಸಮಸ್ಯೆಗಳ ಪರಿಹಾರಕ್ಕೆ ತೊಡಗಬೇಕು. ಯಾವುದೇ ಒಂದು ಪ್ರಾಂತದ ನಾಗರಿಕನು ಬೇಕಾದ ಪ್ರಾಂತಕ್ಕೆ ಹೋದಮೇಲೆ ಅಲ್ಲಿಯ ಜನಜೀವನದೊಡನೆ ಏಕರಸವಾಗುವುದರ ಜೊತೆಗೆ, ತನ್ನ ಪ್ರಾಂತದ ಜೀವನದೊಡನೆ ಸಾಮರಸ್ಯವನ್ನು ಸಾಧಿಸಬೇಕು ಎಂಬ ಸಾಮಾನ್ಯ ತತ್ತ್ವವೇ ಇಲ್ಲಿದೆ. ಆದರೆ ಈ ಎರಡು ಬಗೆಯ ಸಾಮರಸ್ಯವೇಕೆ, ಅದು ಹೇಗೆ ಸಾಧ್ಯ ಎಂದು ಕೇಳುವವರಿದ್ದಾರೆ. ಯಾವನಾದರೂ ಪರಪ್ರಾಂತಕ್ಕೆ ಹೋದ ಮೇಲೆ ತನ್ನ ಪ್ರಾಂತದ ನಡೆನುಡಿಗಳನ್ನು ಬಿಟ್ಟು ಆಯಾ ಪ್ರಾಂತದ ನಡೆನುಡಿಗಳನ್ನು ಸ್ವೀಕರಿಸಬೇಕು ಎಂಬ ಸರಳವಾದ ತತ್ತ್ವವನ್ನು ಅವರು ಪ್ರತಿಪಾದಿಸುತ್ತಾರೆ. ಸರಳವಾದದ್ದು ಸುಲಭವಲ್ಲ ಎಂದರೆ ಪ್ರಶ್ನೆಯನ್ನು ಬಿಡಿಸುವಂಥದ್ದಲ್ಲ ಎಂಬುದನ್ನು ಅರಿಯರು ಅವರು. ಅಲ್ಲದೆ ನಮ್ಮ ಏಕರಾಷ್ಟ್ರ ನಿರ್ಮಾಣವು ಒಂದು ಸಂಕೀರ್ಣ ಜನಸಮೂಹದಲ್ಲಿ ಸ್ವತ್ವ ನಾಶವಾಗದಂತೆ ಐಕ್ಯ ಸಾಧಿಸುವಂತಾಗಬೇಕು ಎಂಬುದನ್ನೂ ಅವರು ಬಗೆಯರು. ಜೀವನದ ಸಹಜ ವಿಕಾಸಕ್ಕೂ ವ್ಯಕ್ತಿತ್ವರೂಪಣಕ್ಕೂ ಆಯಾ ಭಾಷೆ ಸಂಸ್ಕೃತಿಗಳ ಪರಂಪರೆ ಅತ್ಯಗತ್ಯವಾದ ಪ್ರಚೋದನೆಯನ್ನು ಒದಗಿಸುತ್ತದೆ ಎಂಬ ಕಾರಣದಿಂದ ಅವುಗಳನ್ನು ಎಲ್ಲಿದ್ದರೂ ಕಾಯ್ದುಕೊಳ್ಳಬೇಕು. ಆದರೆ ಅದರ ಅಭಿಮಾನವು ಹವಣು ಮೀರದಂತೆ, ಮನಸ್ಸು ಸಂಕುಚಿತವಾಗದಂತೆ ರಾಷ್ಟ್ರೀಯ ವ್ಯಕ್ತಿತ್ವವನ್ನು ಬೆಳೆಸಬೇಕು. ಎಲ್ಲ ಪ್ರಾಂತಗಳೂ ಎಲ್ಲ ಭಾಷೆಗಳೂ ಎಲ್ಲ ಸಂಸ್ಕೃತಿ ಪರಂಪರೆಗಳೂ ನಮ್ಮವು ಎಂಬ ಹೆಮ್ಮೆಯನ್ನು ಹೆಚ್ಚಿಸಬೇಕು. ಹೊರನಾಡ ಕನ್ನಡಿಗರು ಕನ್ನಡತನದ ಶಿಕ್ಷಣವನ್ನು ಪಡೆಯಬೇಕೆಂಬ ವಿಚಾರದಲ್ಲಿ ಕೆಲವು ವ್ಯಾವಹಾರಿಕವಾದ ಲಾಭಗಳಿವೆ. ಅದಕ್ಕಿಂತ ಹೆಚ್ಚಾಗಿ ವಿಶಾಲವಾದ, ಉಜ್ವಲವಾದ ರಾಷ್ಟ್ರೀಯ ವ್ಯಕ್ತಿತ್ವ ಸಾಧನೆಯ ಪರಮ ಲಾಭವಿದೆ. ಈ ಶ್ರದ್ಧೆಯಿಂದ ಸಾಗಿದರೆ ಅವರು ತಂತಮ್ಮ ಕ್ಷೇತ್ರಗಳಲ್ಲಿ ಪ್ರಗತಿಹೊಂದಿ ತಮ್ಮ ಪ್ರಾಂತಕ್ಕೂ ರಾಷ್ಟ್ರಕ್ಕೂ ಉತ್ತಮ ಸೇವೆ ಸಲ್ಲಿಸಲು ಅರ್ಹರಾಗುವರು. ✡

ಕಾರ್ಯಕ್ಕೆ ಕಾರಣವ ಹುಡುಕುವುದೆ? ನೆನೆಸಣ್ಣ
ಕರ್ತೃ ನವನು! ನಿನ್ನ ಆಪತ್ತೆಲ್ಲ ಅದಕಾಗಿ
ನಿತ್ಯಯೆಂದು ಬದುಕಾಗಿ ಮಹಿಮನಾಯು ಕೆಡೆ ಕಣ್ಣ
ಎಚ್ಚರದೊಳಿರು ನೀನು 'ಅಕುತೋಭಯನ್' ಆಗಿ.

— ಅಂಬಿಕಾತನಯದತ್ತ

ಅವನ ಕುಂಚದಲ್ಲಿ ಸಾವು !

ಪ. ರಾಮಕೃಷ್ಣ ಶಾಸ್ತ್ರಿ

ಆಂದ್ರೆ ಮಾರ್ಸಲನ್ ಫ್ರಾನ್ಸಿನ ಚಿತ್ರ ಕಲಾವಿದ. ೧೯೬೨ರ ಮೇ ತಿಂಗಳಲ್ಲಿ ಅವನ ಚಿತ್ರವೊಂದನ್ನು ಮಿಲಾನಿನ ಕಲಾ ಸಾಮಗ್ರಿಗಳ ಅಂಗಡಿಯಲ್ಲಿ ಇಡಲಾಗಿತ್ತು. ಅದನ್ನು ರೋಮಿನ ಒಬ್ಬ ವ್ಯಾಪಾರಿ ೩೬೦೦ ಲೈರುಗಳಿಗೆ ಕೊಂಡುಕೊಂಡ. ಚಿತ್ರವನ್ನು ಮನೆಗೆ ತೆಗೆದುಕೊಂಡು ಹೋಗಿ ಒಂದು ತಿಂಗಳಾಗುವುದರೊಳಗೆ ಆತ ಆಕಸ್ಮಾತ್ತಾಗಿ ಅಗ್ನಿಪ್ರಕೋಪಕ್ಕೆ ಬಲಿಯಾದ. ಅವನ ಹೆಂಡತಿ ಭೀಕರ ವ್ಯಾಧಿಯೊಂದಕ್ಕೆ ಬಲಿಯಾಗಿ ಪ್ರಾಣ ತೆತ್ತಳು. ಕಾರು ಅಪಘಾತದಲ್ಲಿ ಮಗನ ದೇಹ ಛಿನ್ನ-ವಿಚ್ಛಿನ್ನವಾದರೂ ಆತ ಹೇಗೋ ಬದುಕುಳಿದ.

ಮಾರ್ಸಲನ್ನನ ಚಿತ್ರಗಳನ್ನು ಒಯ್ದುವರಿಗೆಲ್ಲ ಹೀಗೆಯೇ ಆಗಿದೆ. ಇದು ಆಕಸ್ಮಿಕವೋ ಕಾಕತಾಳಿಯವೋ ಅಥವಾ ಇದಕ್ಕೆ ಬೇರೇನಾದರೂ ಕಾರಣವಿದೆಯೋ ತಿಳಿಯದು.

ಮಾರ್ಸಲನ್ ಕುಂಚ ಹಿಡಿದು ಚಿತ್ರ ಬರೆಯಲಾರಂಭಿಸಿದ್ದು ೧೯೦೨ ರಲ್ಲಿ. ಅವನು ಸತ್ತವರ ಚಿತ್ರಗಳನ್ನು ಬರೆಯುತ್ತಿದ್ದನೇ ಹೊರತು ಜೀವಂತವಿದ್ದವರ ಚಿತ್ರ ರಚನೆಗೆ ಕೈಹಾಕಲು ಯಾವಾಗಲೂ ಹಿಂಜರಿಯುತ್ತಿದ್ದ. ಇದಕ್ಕೆ ಕಾರಣವಿರದಿರಲಿಲ್ಲ. ಆದರೆ ಆ ಕಾರಣ ಯಾರಿಗೂ ಗೊತ್ತಿರಲಿಲ್ಲ. ಒಮ್ಮೆ ಫ್ರಾನ್ಸಿನ ಒಬ್ಬ ಶ್ರೀಮಂತ ತನ್ನ ಚಿತ್ರ ರಚಿಸಿಕೊಡುವಂತೆ ಒತ್ತಾಯಿಸಿದ. ಮಾರ್ಸಲನ್ ಮೊದಮೊದಲು ಒಪ್ಪದಿದ್ದರೂ ಅವನ ಬಲವಂತಕ್ಕೆ ಕಟ್ಟುಬಿದ್ದು ಬರೆಯತೊಡಗಿದ. ಚಿತ್ರ ಪೂರ್ಣವಾಗುತ್ತಲೆ ಆ ಶ್ರೀಮಂತ ಹೃದಯಾಘಾತದಿಂದ ಸತ್ತುಹೋದ.

ಅನಂತರ ಮಾರ್ಸಲನ್ ವಣಿಕನೊಬ್ಬನ ಚಿತ್ರ ರಚಿಸತೊಡಗಿದ. ಚಿತ್ರ ಮುಗಿಯುತ್ತಿದ್ದಂತೆಯೇ ಆ ವಣಿಕ ವಿದ್ಯುತ್ತಿನ ಆಘಾತಕ್ಕೆ ತಕ್ಕೆ ತುತ್ತಾದ.

ಈ ಅನುಭವದಿಂದ ಪಾಠ ಕಲಿತ ಮಾರ್ಸಲನ್ ತಾನು ಇನ್ನೆಂದಿಗೂ ಜೀವಂತವಿರುವವರ ಚಿತ್ರ ರಚಿಸಲಾರೆನೆಂದು ಪಣ ತೊಟ್ಟ. ಅವನ ಚಿತ್ರಗಳಿಗಾಗಿ ಭಾರಿ ಬೇಡಿಕೆಯಿತ್ತು. ಶ್ರೀಮಂತ ಜನ ಅದಕ್ಕಾಗಿ ಎಷ್ಟು ಬೇಕಾದಷ್ಟು ಹಣ ತೆತ್ತಲು ತಯಾರಿದ್ದರು. ಆದರೆ ಮಾರ್ಸಲನ್ ನಿರ್ದಾಕ್ಷಿಣ್ಯವಾಗಿ, ಆದರೆ ವಿನಯದಿಂದ ಅವರ ಬೇಡಿಕೆಯನ್ನು ನಿರಾಕರಿಸುತ್ತಿದ್ದ. ಕೊನೆಗೆ ಶ್ರೀಮಂತನಾದ ಅಭಿಮಾನಿಯೊಬ್ಬ ಈ ವಿಕ್ಷಿಪ್ತ ವರ್ತನೆಗೆ ಕಾರಣವೇನೆಂದು ಕೇಳಿದಾಗ ಮಾರ್ಸಲನ್ ವಿಧಿಯಿಲ್ಲದೆ ತನಗೆ ಅನಿಸಿದುದನ್ನು ಹೇಳಿದ.

ಆತ ಅದನ್ನು ಕೇಳಿ ನಕ್ಕುಬಿಟ್ಟು, "ನಿನಗೆಲ್ಲೋ ಹುಚ್ಚಿರಬೇಕು. ಇದೆಲ್ಲ ಕೇವಲ ಕಾಕತಾಲೀಯ. ನೀನೀಗ ನನ್ನ ಚಿತ್ರ ರಚಿಸು. ನಾನು ಹೇಗೆ ಸಾಯುತ್ತೇನೋ ನೋಡೋಣ," ಎಂದ. ಆಗ ಮೊದಲು ವೈದ್ಯರು ದೇಹವನ್ನು ತಪಾಸಿಸಿ, ಅವನಿಗೆ ಯಾವ ಕಾಯಿಲೆಯೂ ಇಲ್ಲವೆಂದು ದೃಢಪಡಿಸಿದರು. ಆದರೆ ಮಾರ್ಸಲನ್ ಅವನ ಚಿತ್ರ ಮುಗಿಸಿದ ಮಾರನೆ ದಿನ ಆ ಶ್ರೀಮಂತ ನಿದ್ರೆಯಲ್ಲೇ ಸತ್ತುಹೋದ.

೧೯೧೩ರಲ್ಲಿ ಮಾರ್ಸಲನ್ ಮದುವೆಯಾದ. ಗಂಡನ ಪ್ರತಿಭೆಯ ಬಗೆಗೆ ಸಾಕಷ್ಟು ಕೇಳಿದ್ದ ಹೆಂಡತಿ ತನ್ನ ಭಾವಚಿತ್ರ ರಚಿಸುವಂತೆ ಅವನನ್ನು ಒತ್ತಾಯಿಸಿದಳು. ಮಾರ್ಸಲನ್ ಎಷ್ಟು ತಿಳಿಹೇಳಿದರೂ ಅವಳು ಹಟ ಬಿಡಲಿಲ್ಲ. ಕೊನೆಗೆ ೧೯೧೪ರ ಅಕ್ಟೋಬರಿನಲ್ಲಿ ಅವನು ಅವಳ ಚಿತ್ರ ರಚನೆಗಾರಂಭಿಸಿದ. ಮುಂದೆ ಒಂದೇ ವಾರದೊಳಗೆ ಸಾವು ಅವಳನ್ನು ಬಲಿಗೆ ಹಾಕಿಕೊಂಡಿತು.

ಹೆಂಡತಿಯನ್ನು ಕಳೆದುಕೊಂಡ ಮಾರ್ಸಲನ್ನನಿಗೆ ಜಗತ್ತು ಶೂನ್ಯವಾದಂತೆನಿಸಿತು. ಕೊನೆಗೆ ಯಾವುದೋ ನಿರ್ಣಯಕ್ಕೆ ಬಂದವನಂತೆ ಅವನು ತನ್ನ ಚಿತ್ರವನ್ನೇ ಚಿತ್ರಿಸಲಾರಂಭಿಸಿದ, ಚಿತ್ರ ಪೂರ್ಣಗೊಂಡಿತು. ಮುಂದೆ ಒಂದು ವಾರದೊಳಗೇ (೧೯೧೫ ರ ಜನವರಿ ೨) ಅವನೂ ಪ್ರಾಣ ಬಿಟ್ಟ.

ಪ. ಮಹೇಂದ್ರ ಶಾಸ್ತ್ರಿ

ಆ ಪರಂಪರೆಯೇ ದಕ್ಷಿಣೋತ್ತರಗಳನ್ನು ಕೂಡಿಸಿತು

ಅಗಸ್ತ್ಯ ಪರಂಪರೆ

ಪರ್ಯಾಯವಾಗಿಯಾದರೂ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಪುರಾಣದ ಅನೇಕ ಕಥೆಗಳಲ್ಲಿ ಈ ಕೆಳಗಿನ ಎರಡು ಕಥೆಗಳೂ ಗಮನಾರ್ಹ.

ಮೊದಲಿನ ಕಥೆ ಹೀಗಿದೆ:

ಒಮ್ಮೆ ಯಾವುದೋ ಒಂದು ಕಾರ್ಯದಿಂದ ವಿಂಧ್ಯ ಪರ್ವತವು ಋಷಿಗಳ ಮೇಲೆ ಸಿಟ್ಟಿಗೆದ್ದಿತು. "ನಿಮಗೆ ಸೂರ್ಯಪ್ರಕಾಶವು ಮುಟ್ಟದಂತೆ ಮಾಡಿ ನಿಮ್ಮನ್ನು ಅಂಧಕಾರದಲ್ಲಿ ಕೆಡವುವೆನು" ಎಂದು ಅದು ಋಷಿಗಳಿಗೆ ಬೆದರಿಕೆ ಹಾಕಿ ಋಷಿಗಳನ್ನು ಮುಟ್ಟುವ ಸೂರ್ಯಕಿರಣಳಿಗೆಗೆ ತಡೆ ಹಾಕಲೆಂದು. ಆಕಾಶದತ್ತ ಮೇಲಕ್ಕೇರತೊಡಗಿತು.

ಋಷಿಗಳು ಚಿಂತಾಕ್ರಾಂತರಾದರು. ಅವರೆಲ್ಲ ತಮ್ಮ ಕಾಲದ ಅತ್ಯಂತ ಚತುರ ಮತ್ತು ಶಕ್ತಿಶಾಲಿಯಾದ ಅಗಸ್ತ್ಯ ಋಷಿಯ ಬಳಿ ಬಂದು ತಮ್ಮನ್ನು ಕಾಪಾಡಬೇಕೆಂದು ಬಿನ್ನವಿಸಿಕೊಂಡರು.

ಅಗಸ್ತ್ಯ ಋಷಿಗಳು ವಿಂಧ್ಯ ಪರ್ವತದ ಬಳಿಗೆ ಹೋಗಿ ಹೇಳಿದರು: "ನೀನು ಋಷಿಗಳ ಮೇಲೆ ಸಿಟ್ಟಿಗೆದ್ದಿರುವಿ ಎನ್ನುವುದನ್ನು ನಾನು ಬಲ್ಲೆ. ಅವರ ಪರವಾಗಿ ವಾದಿಸಲು ನಾನು ಬಂದಿಲ್ಲ. ನಾನು ದಕ್ಷಿಣ ಭಾಗದಲ್ಲಿ ತುಸು ಸಂಚಾರ ಮಾಡಿ ಬರಬೇಕೆಂದಿದ್ದೇನೆ. ನೀನು ಇದೇ ರೀತಿ ಬೆಳೆಯುತ್ತ ಹೋದಲ್ಲಿ ನಾನು ತಿರುಗಿ ಬರುವುದು ಅಸಾಧ್ಯವಾಗುವುದು. ಆದ್ದರಿಂದ ನಾನು ತಿರುಗಿ ಬರುವವರೆಗೆ ನೀನು ಬೆಳೆಯುವುದನ್ನು ನಿಲ್ಲಿಸಬೇಕು. ಎಂದು ಬಯಸುತ್ತೇನೆ. ನಾನು ತಿರುಗಿ ಬಂದ ಬಳಿಕ ನೀನು ನಿನ್ನ ಕೋಪವನ್ನು ಪ್ರಕಟಿಸಬಹುದು."

ಅಗಸ್ತ್ಯ ಋಷಿಯ ತೇಜಸ್ಸಿನ ಖ್ಯಾತಿ ತ್ರಿಭುವನದಲ್ಲಿಯೂ ಪಸರಿಸಿದ್ದಿತು. ದೇವತೆಗಳು- ಜಗತ್ಪಾಲಕ ಕೂಡ- ಅವರನ್ನು ಗೌರವಿಸುತ್ತಿದ್ದರು. ವಿಂಧ್ಯ ಪರ್ವತವು ಅಗಸ್ತ್ಯನಿಗೆ ನಮಸ್ಕಾರ ಮಾಡಿ ಅವರ ವಿನಂತಿಯನ್ನು ಮನ್ನಿಸಿ ಅವರಿಗೆ ದಾರಿಯನ್ನು ಮಾಡಿಕೊಟ್ಟಿತು.

ಆದರೆ ದಕ್ಷಿಣಕ್ಕೆ ಹೋದ ಅಗಸ್ತ್ಯ ಋಷಿ ತಿರುಗಿ ಬರಲೇ ಇಲ್ಲ. ವಿಂಧ್ಯಾಚಲವು ಬೆಳೆಯುವದನ್ನು ನಿಲ್ಲಿಸಿ ತಲೆ ತಗ್ಗಿಸಿ ನಿಂತು ಇನ್ನೂ ಅವರ ಮಾರ್ಗ ಪ್ರತೀಕ್ಷೆ ಮಾಡುತ್ತಲಿದೆ ಎನ್ನುತ್ತಾರೆ.

ಇನ್ನೊಂದು ಕಥೆ ಇಂತಿದೆ:

ಇಂದ್ರನು ವೃತ್ರಾಸುರನನ್ನು ಕೊಂದ ಬಳಿಕ ವೃತ್ರಾಸುರನ ಅನುಯಾಯಿಗಳು ಸೇಡು ತೀರಿಸಿಕೊಳ್ಳುವ ಉದ್ದೇಶದಿಂದ ಸಮುದ್ರಗರ್ಭದಲ್ಲಿ ಅಡಗಿ ಕುಳಿತರು. ಹಗಲೆಲ್ಲ ನೀರಿನಡಿ

ಇದ್ದು ರಾತ್ರಿಯಾಗುತ್ತಲೇ ಹೊರಗೆ ಬಂದು ಋಷಿಮುನಿಗಳ ಆಶ್ರಮಗಳಿಗೆ ದಾಳಿಯಿಟ್ಟು ಅವರನ್ನು ಭಕ್ಷಿಸುತ್ತಿದ್ದರು. ವಸಿಷ್ಠ, ಭರದ್ವಾಜ, ಚ್ಯವನಾದಿ ಋಷಿಗಳ ಆಶ್ರಮಗಳಲ್ಲಿಯ ಸಾವಿರಾರು ಮುನಿಗಳು ಈ ರಾಕ್ಷಸರ ಬಾಯಿಗೆ ತುತ್ತಾದರು. ದೇವತೆಗಳು ಅಗಸ್ತ್ಯ ಋಷಿಯ ಮೊರೆ ಹೊಕ್ಕರು. ಅವರನ್ನು ಸಂತಯಿಸಿ, "ಹೋಗಿ ಯುದ್ಧ ಸಿದ್ಧತೆ ಮಾಡಿ," ಎಂದು ಅಗಸ್ತ್ಯರು ಹೇಳಿಕಳುಹಿಸಿದರು. ತಾವು ಸ್ವತಃ ಸಮುದ್ರದ ಬಳಿಗೆ ಬಂದು ಒಂದೇ ಗುಟುಕಿನಲ್ಲಿ ಸಮುದ್ರದ ನೀರನ್ನೆಲ್ಲ ಕುಡಿದುಬಿಟ್ಟರು. ಋಷಿಗಳು ಬಂದು ದೇವತೆಗಳ ಸಹಾಯದಿಂದ ದೈತ್ಯರ ಸಂಹಾರವನ್ನು ಮಾಡಿ ತಮ್ಮ ಮೇಲಿನ ಸಂಕಟವನ್ನು ನಿವಾರಿಸಿಕೊಂಡರು.

ತೋರಿಕೆಗೆ ಇವೆರಡು ಕಥೆಗಳಾಗಿದ್ದರೂ ಇವುಗಳಲ್ಲಿ ಭಾರತ ಇತಿಹಾಸದ ಎರಡು ಅತ್ಯಂತ ಮಹತ್ವಪೂರ್ಣ ಅಧ್ಯಾಯಗಳು ಅಡಗಿವೆ. ಮೊದಲನೆಯ ಕಥೆಯಲ್ಲಿ ಆರ್ಯ ಸಂಸ್ಕೃತಿಯೇ ಉತ್ತರ ಭಾರತದಲ್ಲೆಲ್ಲ ಹಬ್ಬಿ ದಕ್ಷಿಣ ಭಾರತದಲ್ಲಿ ಪ್ರಥಮತಃ ಪದಾರ್ಪಣ ಮಾಡಿದ ಸಂಕೇತವಿದೆ. ಎರಡನೆಯದರಲ್ಲಿ ದಕ್ಷಿಣ ಭಾರತದಲ್ಲಿಯೂ ವ್ಯಾಪಿಸಿಕೊಂಡ ನಂತರ ಈ ಸಂಸ್ಕೃತಿಯು ಭಾರತದ ಹೊರಗಿನ ನಾಡುಗಳಲ್ಲಿ ಪಸರಿಸಿದ ವರ್ಣನೆ ಇದೆ.

ಆಧುನಿಕ ಇತಿಹಾಸ ಸಂಶೋಧನ ಕಾರ್ಯದ ದೃಷ್ಟಿಯಿಂದ ಇವೆರಡೂ ಕಥೆಗಳು ಮಹತ್ವದವಾಗಿವೆ. ಆರ್ಯ-ಸಂಸ್ಕೃತಿಯ ಇವೆರಡು ಮಹತ್ವದ ಹೆಜ್ಜೆಗಳ ಶ್ರೇಯಸ್ಸನ್ನು ಪೌರಾಣಿಕ ಪರಂಪರೆಯು ಅಗಸ್ತ್ಯ ಋಷಿಗೆ ಕೊಡುತ್ತದೆಯೆನ್ನುವದು ಮೇಲಿನ ಕಥೆಗಳಿಂದ ಸ್ಪಷ್ಟವಾಗುತ್ತದೆ. ಸಾಹಿತ್ಯ ಮತ್ತು ಧರ್ಮದ ಇನ್ನಿತರ ಅಂಶಗಳಿಂದಲೂ ಇವೆರಡು ಮಾತುಗಳಿಗೆ ಪುಷ್ಟಿ ದೊರೆಯುತ್ತದೆ ಎನ್ನುವುದು ಗಮನಿಸತಕ್ಕ ಮಾತಾಗಿದೆ.

ದ್ರಾವಿಡದೇಶವೆಂದು ಕರೆಯಲ್ಪಡುವ ದಕ್ಷಿಣ ಭಾರತ ಪ್ರದೇಶದಲ್ಲಿ ಈಗ ತಮಿಳು, ಮಲಯಾಳಿ, ಕನ್ನಡ, ತೆಲಗು ಈ ನಾಲ್ಕು ಭಾಷೆಗಳು ಮುಖ್ಯವಾಗಿದ್ದರೂ ಮೂಲತಃ ಈ ಎಲ್ಲ ಭಾಷೆಗಳು ತಮಿಳಿನಿಂದ ಹುಟ್ಟಿಕೊಂಡವು ಎಂದು ನಿರ್ವಿವಾದವಾಗಿ ಮನ್ನಿಸಲ್ಪಡುತ್ತದೆ. ತಮಿಳು ಸಾಹಿತ್ಯ ಮತ್ತು ನಾಗರಿಕತೆಯ ಪ್ರಾರಂಭವೂ ಅಗಸ್ತ್ಯ ಋಷಿಯಿಂದಾಯಿತು ಎಂದು ಮನ್ನಿಸಲ್ಪಡುತ್ತಿರುವುದು ಆಶ್ಚರ್ಯದ ಮಾತಾಗಿದೆ.

ಪುರಾತನ ತಮಿಳು ಸಾಹಿತ್ಯ ಇತಿಹಾಸದಲ್ಲಿ ಮೂರು ಮುಖ್ಯ ಕಾಲಗಳನ್ನು ಹೇಳುತ್ತಾರೆ. ಇವುಗಳಲ್ಲಿ ಪ್ರಾರಂಭದ ಎರಡು ಕಾಲಗಳ ಸಾಹಿತ್ಯ ನಷ್ಟವಾಗಿದ್ದು ಅವುಗಳಲ್ಲಿ ಪ್ರಥಮ ಕಾಲದ ಮೊದಲನೆಯ ವೈಯಾಕರಣಿ ಅಗಸ್ತ್ಯನೇ ಹೌದು. (ಅಗತ್ತಿಯಾರ್ ತಮಿಳು ಭಾಷೆಯಲ್ಲಿ 'ಆರ್' ಸನ್ಮಾನ ಸೂಚಕ ಪ್ರಯೋಗವಾಗಿದೆ) ಅಗಸ್ತ್ಯರ ವ್ಯಾಕರಣಕ್ಕೆ 'ಅಗತ್ತಿಯನ್" ಎನ್ನುತ್ತಾರೆ. ಈ ವ್ಯಾಕರಣ ಇಂದು ಉಪಲಬ್ಧವಿಲ್ಲವಾದರೂ ಇದರ ಮುಂದಿನ ತೋಲಕಾಪ್ಪಿಯಂ ರಚಿಸಿದನೆನ್ನುವ 'ತೋಲಕಾಪ್ಪಿಯನ್' ವ್ಯಾಕರಣವು 'ಅಗತ್ತಿಯನ್' ಪರಂಪರೆಯದೇ ಆಗಿದೆ ಎನ್ನುತ್ತಾರೆ. ಏಕೆಂದರೆ ಅಗಸ್ತ್ಯರ ಇಪ್ಪತ್ತು ಜನ ಪ್ರಮುಖ ಶಿಷ್ಯರಲ್ಲಿ ತೋಲಕಾಪ್ಪಿಯನೂ ಒಬ್ಬನಾಗಿದ್ದಾನೆ.

ಇದರಂತೆ ಆಗ್ನೇಯ ಏಶಿಯದ ಜಾವಾ, ಬಾಲಿ, ಇಂಡೋಚೀನ, ಮಲಯಾ ಮೊದಲಾದ ದೇಶಗಳಲ್ಲಿ ಅಗಸ್ತ್ಯರ ಹೆಸರಿನಲ್ಲಿ ಸಾಹಿತ್ಯವೂ ಅನೇಕ ಸ್ಥಳಗಳಲ್ಲಿ ಅವರ ಆಶ್ರಮಗಳೂ ಇದ್ದವೆಂದು ಗೊತ್ತಾಗಿದೆ.

ಇಲ್ಲಿ ಸ್ವಾಭಾವಿಕವಾಗಿ ಒಂದು ಸಂದೇಹ ಏಳುವುದು ಸಹಜ. ದಕ್ಷಿಣ ಭಾರತದಲ್ಲಿ ಆರ್ಯ ಸಂಸ್ಕೃತಿಯು ಪ್ರಸಾರವಾಗಲು ಎಷ್ಟೋ ಶತಮಾನಗಳು ಹಿಡಿದಿರಬಹುದು. ಇಷ್ಟೆಲ್ಲ ಕಾಲ ಅಗಸ್ತ್ಯರು ಬದುಕಿದ್ದಾದರೂ ಹೇಗೆ? ಮತ್ತೆ ಅವರು ಭಾರತದ ಹೊರದೇಶಗಳಿಗೆ ಈ

ಕಾರ್ಯಕ್ಕಾಗಿ ಹೋದದ್ದಾದರೂ ಏಂತು? ಇವರ ಉತ್ತರವೇನೂ ಕಠಿಣವಾಗಿಲ್ಲ. ಈ ವರೆಗೆ ಆಗಿಹೋದವರಲ್ಲಿ ಒಬ್ಬನೇ ಅಗಸ್ತ್ಯ-ನಿಲ್ಲ. ಆದರೆ ಅವನ ಪರಂಪರೆಯು ಈ ಕಾರ್ಯವನ್ನು ಪೂರೈಸಿರಬೇಕು. ಭಾರತದಲ್ಲಿ [illegible] ಚಾರ್ಯರ ಪರಂಪರೆ ಇಂದಿಗೂ ಕಾಣಬರುತ್ತಿದೆ.

ನಮ್ಮ ಪ್ರಾಚೀನ ಋಷಿಗಳಲ್ಲಿ ವ್ಯಾಸ, ವಸಿಷ್ಠ, ವಿಶ್ವಾಮಿತ್ರ ಮೊದಲಾದವರು ಅತಿ [illegible] ಸಂಸ್ಕೃತಿ ಪ್ರಸಾರ ದೃಷ್ಟಿಯಲ್ಲಿ ಅಗ್ರಸ್ಥಾನ ಅಗಸ್ತ್ಯ-ರನ್ನೇ ಎನ್ನಬೇಕು. ಅಗಸ್ತ್ಯರ ಪರಂಪರೆಯಲ್ಲಿ ರಾಮ ಮತ್ತು ಪರಶುರಾಮರೂ ಬರುತ್ತಾರೆ. ರಾವಣವಧೆಯ ನಿಮಿತ್ತದಲ್ಲಿ ರಾಮನು ಲಂಕೆಯವರೆಗೆ ಭಾರತೀಯ ಸಂಸ್ಕೃತಿಯ ಪ್ರಸಾರ ಮಾಡಿದನು. ಪರಶುರಾಮನು ಭೂಮಿದಾನದ ನಂತರ ಕೇರಳದಲ್ಲಿ ಆಶ್ರಯ ಪಡೆದು ಸಮಸ್ತ ಪಶ್ಚಿಮ ತೀರದಲ್ಲಿ ಈ ಪ್ರಸಾರ ಕಾರ್ಯವನ್ನು ಮಾಡಿದನು.

ಮನುಕಥನದಿಂದ ಆತನ ಕಾಲದಲ್ಲಿ ಭರತ ವರ್ಷದ ವಿಸ್ತಾರವು ದಕ್ಷಿಣದಲ್ಲಿ ವಿಂಧ್ಯಾಚಲದ ವರೆಗೆ ಮಾತ್ರ ಇತ್ತೆಂದೂ ಈ ಪ್ರದೇಶವು ಆರ್ಯಾವರ್ತವೆಂದು ಕರೆಯಲ್ಪಡುತ್ತಿತ್ತೆಂದೂ ತಿಳಿಯುತ್ತದೆ. ಆರ್ಯ ಜನರು ತಮ್ಮಲ್ಲಿ ಯಾವನಿಗಾದರೂ ಬಹಿಷ್ಕಾರ ಹಾಕಿದರೆ ಆತ ದಕ್ಷಿಣ ದಿಕ್ಕಿಗೆ ಹೋಗುತ್ತಿದ್ದನೆಂದೂ ಋಗ್ವೇ-ದದಲ್ಲಿ ಹೇಳಿದೆ. ದಕ್ಷಿಣದಲ್ಲಿ ಆಗ ಆರ್ಯ [illegible] ಇದರ ಅರ್ಥ.

ಆರ್ಯರು ದಕ್ಷಿಣ ಭಾರತದಲ್ಲಿ ಕಾಲಿಡ ತೊಡಗಿದ್ದು ಕ್ರಿಸ್ತಶಕಕ್ಕೆ ಸುಮಾರು ೨೦೦೦ ವರ್ಷಗಳ ಮೊದಲಿಗೆ ಇರಬೇಕು ಎಂದು ಕೆಲ ಇತಿಹಾಸಕಾರರ ಅಭಿಪ್ರಾಯವಿದೆ. ಸಮ್ರಾಟ ಅಶೋಕನ ಸಾಮ್ರಾಜ್ಯವು [illegible] ಇಡೀ ಭಾರತದಲ್ಲಿ ಹಬ್ಬಿತ್ತು. ಆತನ ಸಾಮ್ರಾ-ಜ್ಯದಲ್ಲಿ [illegible] ಕೂಡ ಆತನ ರಾಜಕೀಯ ಮತ್ತು ಸಾಂಸ್ಕೃತಿಕ ಸಂಬಂಧವಿದ್ದಿತೆಂಬುದಕ್ಕೆ ನಿಶ್ಚಿತ ಪ್ರಮಾಣ-ಗಳು ದೊರೆಯುತ್ತವೆ.

ಸಾಧಾರಣವಾಗಿ ಆರು ನೂರು ವರ್ಷಗಳ ಅವಧಿಯಲ್ಲಿ ಆರ್ಯ ಸಂಸ್ಕೃತಿಯು ದಕ್ಷಿಣ ಭಾರತ ದಲ್ಲಿ ಪ್ರಸಾರವಾಯಿತು ಎಂದು ನಮಗೆ ಕಂಡು ಬರುತ್ತದೆ. ಈ ಪ್ರಸಾರದ ಫಲವಾಗಿ ಆರ್ಯ ಮತ್ತು ಅನಾರ್ಯರ ತತ್ತ್ವಗಳೆರಡೂ ಮಿಶ್ರ-ವಾಗಿ ಅದು ಹೊಸತೊಂದು ರೂಪತಾಳಿತು. ಅದಕ್ಕೆ ಆರ್ಯ ಸಂಸ್ಕೃತಿ ಎಂಬ ಹೆಸರು ಹೋಗಿ ಹಿಂದು ಸಂಸ್ಕೃತಿ ಎಂಬ ಹೆಸರು ಪ್ರಾಪ್ತ-ವಾಯಿತು.

ಸಮ್ರಾಟ ಅಶೋಕನ ಕಾಲದಲ್ಲಿ ಭಾರತೀಯ ಸಂಸ್ಕೃತಿಯು ಭಾರತದ ಹೊರಗೂ ಹಬ್ಬತೊಡ-ಗಿತು. ಆಗ್ನೇಯ ಏಶಿಯದ ದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ರೂಪವೇ ಹೆಚ್ಚಾಗಿ ಪ್ರಸಾರವಾದರೆ ಮಧ್ಯ ಏಶಿಯ, ಚೀನ, ಜಪಾನ ಮತ್ತು ಕೋರಿಯಾ ಮುಂತಾದ ದೇಶಗಳಲ್ಲಿ ಭಾರತೀಯ ಸಂಸ್ಕೃತಿಯ ಬೌದ್ಧ ಸ್ವರೂಪವು ಹೆಚ್ಚಾಗಿ ಪ್ರಸಾರವಾಯಿತು.

ಇಲ್ಲಿ ಒಂದು ಮಹತ್ವದ ಮಾತನ್ನು ಗಮ-ನಿಸಬೇಕು. ಭಾರತೀಯ ಸಂಸ್ಕೃತಿಯ ಈ ಅದ್ಭುತ ಪ್ರಸಾರ ಕಾರ್ಯದಲ್ಲಿ ಹಿಂಸೆಯ [illegible] ನಡೆಯಿತು.


ಅಗಸ್ತ್ಯ ಋಷಿಯ ಉಲ್ಲೇಖ ವೇದಗಳ-ಲ್ಲಿಯೂ ಇದೆ. ಅವರು ಮಂತ್ರದ್ರಷ್ಟಾರರಾದ ಋಷಿಗಳು. ಇವರು ಕೊಡದಿಂದ ಹುಟ್ಟಿದರೆಂದೂ ಲೋಪಾಮುದ್ರೆಯನ್ನು ಲಗ್ನವಾದರೆಂದೂ ಹೇಳಲಾಗುತ್ತಿದೆ. ಲೋ ಪಾ ಮು ದ್ರೆ ಯು

ವಿದರ್ಭರಾಜನ ಮಗಳು ಎನ್ನುವುದನ್ನು ಇತಿಹಾಸಕಾರರು ಒಪ್ಪುತ್ತಾರೆ.

ತಮಿಳು ಪರಂಪರೆಯಲ್ಲಿ ಶಿವ-ಪಾರ್ವತಿಯರ ವಿವಾಹ ಕಾಲದಲ್ಲಿ ಅಗಸ್ತ್ಯರು ದಕ್ಷಿಣ ದೇಶದಲ್ಲಿದ್ದರು ಎಂದು ತಿಳಿಯುತ್ತದೆ. ಈ ಸಮಾರಂಭದಲ್ಲಿ ಭಾಗವಹಿಸಿ ಅವರು ಶಿವನನ್ನು ಪ್ರಸನ್ನ ಮಾಡಿಕೊಂಡರು. ಶಿವನು ಅವರಿಗೆ ತಮಿಳು ಭಾಷೆಯನ್ನು ಕಲಿಸಿದನು. ಅವರು ತಮಿಳು ವ್ಯಾಕರಣವನ್ನು ರಚಿಸಿದರು. ಇದರಿಂದ ಅಗಸ್ತ್ಯರ ವ್ಯಾಕರಣಕ್ಕಿಂತ ಮೊದಲು ತಮಿಳು ಭಾಷೆಗೆ ವ್ಯಾಕರಣವಿರಲಿಲ್ಲವೆನ್ನುವದು ಸಿದ್ಧವಾಗುತ್ತದೆ.

ಮುಂದೆ ಅಗಸ್ತ್ಯರು ಶಿವನ ವಂಶಜರು ಎಂದುಕೊಳ್ಳುವ ಪಾಂಡ್ಯ ರಾಜರ ಕುಲಗುರುಗಳಾದರು. ಇಲ್ಲಿ ಶಿವ–ಪಾರ್ವತಿಯರು ಉತ್ತರ ಮತ್ತು ದಕ್ಷಿಣಗಳ ಸಮನ್ವಯದ ಪ್ರತೀಕರಾಗಿದ್ದಾರೆ ಎನ್ನುವದನ್ನು ಗಮನಿಸತಕ್ಕದ್ದು. ಶಿವನು ಮೂಲತಃ ಅನಾರ್ಯರ ದೇವತೆಯೆಂದು ಹೇಳಲಾಗುತ್ತಿದ್ದು ಆತನ ವಿವಾಹ ಉತ್ತರದ ಪರ್ವತರಾಜನ ಪುತ್ರಿಯೊಂದಿಗೆ ಆಯಿತು.

ಅಗಸ್ತ್ಯರ ಆಶ್ರಮಗಳು ದಕ್ಷಿಣದಲ್ಲಿ ಅನೇಕ ಕಡೆ ಇದ್ದ ಬಗ್ಗೆ ಉಲ್ಲೇಖಗಳಿವೆ. ಅವರು ತಮ್ಮ ಪ್ರವಾಸದ ಕಾಲಗಳಲ್ಲಿ ಈ ಸ್ಥಾನಗಳಲ್ಲಿ ಕೆಲ ಕಾಲವಿದ್ದಿರಬೇಕು ಇಲ್ಲವೆ ಅವರ ಪರಂಪರೆಯವರು ಮುಂದೆ ಈ ಆಶ್ರಮಗಳನ್ನು ಸ್ಥಾಪಿಸಿರಬೇಕು. ರಾಮನು ತನ್ನ ವನವಾಸದ ಕಾಲದಲ್ಲಿ ಅಗಸ್ತ್ಯರನ್ನು ಭೆಟ್ಟಿಯಾಗಿದ್ದನು. ವಾಲ್ಮೀಕಿ ರಾಮಾಯಣದ ಉತ್ತರ ಕಾಂಡದ ಬಹುಭಾಗವು ಅಗಸ್ತ್ಯ ಋಷಿಗಳ ಮುಖದಿಂದಲೇ ಹೇಳಿಸಲ್ಪಟ್ಟಿದೆ. ✡



ಪಂಡಿತ ಜವಾಹರಲಾಲ ನೆಹರೂರವರ ಪ್ರಮುಖ ಸಾಹಿತ್ಯ ಕೃತಿಗಳೆಲ್ಲ ಅವರು ಸೆರೆಮನೆಯಲ್ಲಿದ್ದಾಗ ರಚಿಸಿದವುಗಳೇ. ಆದರೆ ಅವರು ರಾಜಕೀಯ ಕೈದಿಯಾಗಿರುತ್ತಿದ್ದುದರಿಂದ ಅವರ ಮನಸ್ಸು ಅಂಥ ಕ್ರಿಯಾತ್ಮಕ ಚಟುವಟಿಕೆಯಲ್ಲಿ ತೊಡಗಬಹುದಿತ್ತು. ಆದರೆ ಒಂದು ಹೀನ ಅಪರಾಧಕ್ಕಾಗಿ ದೀರ್ಘಾವಧಿ ಶಿಕ್ಷೆಯನ್ನು ಅನುಭವಿಸುವಾಗಲೂ ಶ್ರೇಷ್ಠ ದರ್ಜೆಯ ಸಾಹಿತ್ಯ ನಿರ್ಮಾಣ ಸಾಧ್ಯವೆಂಬುದಕ್ಕೆ ಒಂದು ಜೀವಂತ ನಿದರ್ಶನ ಇದೆ.

ಇಟಲಿಯ ಸರಿಂಗ್‌ನಲ್ಲಿ ಅಲ್‌ಫೆಡೋ ಬೋನಾಜ್ಜಿ ಈಗ ೨೪ ವರ್ಷಗಳ ಸೆರೆವಾಸ ಅನುಭವಿಸುತ್ತಿದ್ದಾನೆ. ಅವನು ೧೯೫೦ರಲ್ಲಿ ಕೊಲೆಮಾಡಿದ್ದ. ಅವನಿಗೆ ಈಗ ಐದನೆಯ ಬಾರಿಗೆ ಅವನು ರಚಿಸಿದ ಕವಿತೆಗಳಿಗೆ ಪ್ರಮುಖ ಬಹುಮಾನವೊಂದು ಬಂದಿದೆ. ಬಹುಮಾನದ ಹೆಸರು 'ಪಾಲ್ ಸೆರಿಯೋ ನ್ಯಾಷನಲ್ ಲಿಟರರೀ ಪ್ರೈಜ್'. ಅವನ 'ಸೀಕ್ರೆಟ್ ಅಬ್‌ಸೆಸ್' ಎಂಬ ಕವಿತೆಗೆ ಈ ಬಹುಮಾನ ಬಂದಿದೆ.

—ಎಸ್. ವಿಶ್ವನಾಥ


'ಝಗಮಗಿಸುವ' ಬಿಳುಪಿಗೆ
Supreme
det
detergent washing cake
ಸುಪ್ರೀಮ್ ಡೆಟ್ ಡಿಟರ್ಜೆಂಟ್ ಒಗೆಯುವ ಬಿಲ್ಲೆ

ವಕೀಲನನ್ನು ಮೀರಿಸಿದ ಪಕ್ಷಗಾರ!

ಕೇಶವಚಂದ್ರ ಗುಪ್ತ

ಪ್ರತಿನಿತ್ಯ ಮುಂಜಾನೆ ದಿನಪತ್ರಿಕೆಯನ್ನು ತೆರೆದು ನೋಡಿದಾಗ ನಗರದಲ್ಲಿ ಅನೇಕ ಅಪರಾಧಗಳು, ಅಪಘಾತಗಳು ನಡೆದು ಹೋದುದರ ವರದಿಗಳು ಕಣ್ಣಿಗೆ ಬೀಳುತ್ತವೆ. ಅದರಲ್ಲೂ ಕ್ರಿಮಿನಲ್ ಕೋರ್ಟುಗಳಲ್ಲಿಯೇ ಜೀವನವನ್ನು ಸವೆಸಿದ ನನ್ನಂತಹ ವಕೀಲನಿಗಂತೂ ಇಂಥ ವರದಿಗಳನ್ನೋದಿ ರಾತ್ರಿ ನಿದ್ದೆ ಕೂಡ ಸರಿಯಾಗಿ ಹತ್ತುವುದಿಲ್ಲ.

ನಾನು ನನ್ನ ವೃತ್ತಿಜೀವನದಲ್ಲಿ ಅನೇಕ ವಿಧದ ಪಕ್ಷಗಾರರನ್ನು ಕಂಡಿದ್ದೇನೆ. ಆದರೆ ವಕೀಲರನ್ನು ಅನಿವಾರ್ಯವೆಂಬುದಕ್ಕಾಗಿ ಮಾತ್ರ ಉಪಯೋಗಿಸುವಂತಹ ಚಾಣಾಕ್ಷ ಪಕ್ಷಗಾರರನ್ನು ನಾನು ಬಹಳ ವರುಷ ಕಂಡಿರಲಿಲ್ಲ.

೧೯೫೫ರ ಸುಮಾರಿಗೆ ಸಿಂಗಾಪುರ–ಕಲಕತ್ತೆಗಳ ನಡುವೆ ಕೊಕೇನ್ ಹಾಗೂ ಅಫುವಿನ ಕಳ್ಳ ವ್ಯಾಪಾರ ಬಲು ಬಿರುಸಿನಿಂದ ಸಾಗಿತ್ತು. ಕಲಕತ್ತಾ ಬಂದರಿನಲ್ಲಿ ಕಸ್ಟಮ್ಸ್ ಅಧಿಕಾರಿಗಳು ಪ್ರಯಾಣಿಕರ ಮೇಲೆ ಬಿಗಿಯಾದ ಕಾವಲನ್ನಿರಿಸಿದ್ದರು.

ಒಂದು ದಿನ ನನ್ನ ಪಕ್ಷಗಾರನಾದ ಶೇಖಸಾಹೇಬ ಬಂದು ಕಲಕತ್ತಾ ಬಂದರಿನಲ್ಲಿ ಕಸ್ಟಮ್ಸ್ ಅಧಿಕಾರಿಗಳು ತನ್ನ ಏಜಂಟನೊಬ್ಬನನ್ನು ಹಿಡಿದು ಅವನ ಹತ್ತಿರದಲ್ಲಿದ್ದ ೨೦೦ ಕೊಕೇನ್ ಸೀಸೆಗಳನ್ನು ವಶಪಡಿಸಿಕೊಂಡರೆಂದು ಹೇಳಿ, "ವಕೀಲಸಾಹೇಬ್, ಅವನ ಸಲುವಾಗಿ ಹಣ ಎಷ್ಟು ಖರ್ಚಾದರೂ ಚಿಂತೆಯಿಲ್ಲ. ಅವನ ಬಿಡುಗಡೆಗಾಗಿ ನೀವು ಪ್ರಯತ್ನಿಸಲೇಬೇಕು," ಎಂದು ಕೇಳಿಕೊಂಡ. ಆದರೆ ಅವನ ಮಾತಿನಲ್ಲಿ ಚಿಂತೆಯ ಅಂಶವೆಂಬುದು ಎಳ್ಳಷ್ಟೂ ಕಂಡು ಬಾರದ್ದನ್ನು ನೋಡಿ ನನಗೆ ತುಂಬ ಆಶ್ಚರ್ಯವಾಯಿತು.

ಶೇಖಸಾಹೇಬನ ಏಜಂಟನನ್ನು ಮುದ್ದೆಮಾಲು ಸಹಿತ ಹಿಡಿದಿರುವಾಗ ಅವನನ್ನು ಉಳಿಸಿಕೊಳ್ಳುವುದು ಅಸಾಧ್ಯವೇ ಇತ್ತು. ಅಲ್ಲದೆ ಅವರು ಹಿಡಿದ ವ್ಯಕ್ತಿಯೇ ಬೇರೆ, ಆಪಾದಿತನೇ ಬೇರೆ ಎಂದು ಸಾಧಿಸಬೇಕೆಂದರೆ ಅಂದು ಅವನನ್ನು ಹಿಡಿದ ಅಧಿಕಾರಿ ಕಲಕತ್ತೆಯಲ್ಲಿಯ ಮುಖ್ಯ ಕಸ್ಟಮ್ಸ್ ಅಧಿಕಾರಿಯೇ ಆಗಿದ್ದರು. ಹೀಗಿರುವಾಗ ನಾವು ಗೆಲ್ಲುವ ಸಂಭವ ಬಹಳ ಕಡಿಮೆಯಾಗಿತ್ತು. ಆದರೂ ಅದೊಂದಲ್ಲದೆ ಬೇರೆ ಮಾರ್ಗವೇ ಇರದ್ದರಿಂದ ನಾನು ಅದಕ್ಕೆ ಅಂಟಿಕೊಳ್ಳುವುದೆಂದು ನಿರ್ಧರಿಸಿದೆ.

ವಿಚಾರಣೆಯನ್ನು ಶಕ್ಯವಿದ್ದಷ್ಟು ದಿನ ಮುಂದೂಡಲು ಯತ್ನಿಸಬೇಕೆಂದು ಶೇಖಸಾಹೇಬ ನನಗೆ ಹೇಳಿದ್ದ. ಒಂದು ದೃಷ್ಟಿಯಿಂದ ಅದೂ ಅನುಕೂಲವಾಯಿತೆಂದೇ ಹೇಳಬೇಕು. ಏಕೆಂದರೆ ಕಲಕತ್ತೆಯ ಪೋಲೀಸ್ ಕೋರ್ಟುಗಳಲ್ಲೆಲ್ಲ ವಕೀಲರಿಗೆ ದಿನಕ್ಕಿಷ್ಟೆಂದು ಫೀ ದೊರೆಯುತ್ತದೆ. ವಿಚಾರಣೆ ಮುಂದೆ ಬಿದ್ದಷ್ಟು ದಿನವೂ ಆದಾಯ ಹೆಚ್ಚುತ್ತಲಿತ್ತು.

ಕೊನೆಗೊಂದು ದಿನ ವಿಚಾರಣೆಗಾರಂಭವಾಯಿತು. ಸಾಕ್ಷಿಯೆಲ್ಲ ಮುಗಿದ ಮೇಲೆ ಪದ್ಧತಿ ಪ್ರಕಾರ ಆಪಾದಿತನಾದ ನನ್ನ ಪಕ್ಷಗಾರ ಪೀರೂಮಿಯಾ(ಶೇಖಸಾಹೇಬನ ಏಜಂಟ್)-ನನ್ನು, "ಸಾಕ್ಷಿಯನ್ನೆಲ್ಲ ನೀನೀಗ ಕೇಳಿರುವಿ. ನಿನಗೇನಾದರೂ ಹೇಳುವುದಿದೆಯೇ?" ಎಂದು ಕೇಳಲಾಯಿತು.

"ಇದೆ ಹುಜೂರ್," ಎಂದು ಹೇಳಿ ಮ್ಯಾಜಿ-

(ಕೃಪೆ : ಕರ್ಮವೀರ)

[illegible]
ಮುಂದೆ ಪ್ರಯಿಂದ ಹೇಳಲಾರಂಭಿಸಿದ:

"ನನ್ನನ್ನು ಸುಳ್ಳೇ ಕೋರ್ಟಿಗೆಳೆಯಲಾಗಿದೆ ಹುಜೂರ್, ಇದು ಯಾರಾದರೊಬ್ಬರನ್ನು ತೊಂದರೆಪಡಿಸಿ ಅದರಲ್ಲೇ ಸುಖಪಡುವ ಅಧಿಕಾರಿಗಳ ಹೀನ ಪ್ರವೃತ್ತಿಗೊಂದು ನಿದರ್ಶನವಾಗಿದೆ. ನನ್ನ ಮೇಲೆ ಅವರಿಗೇನು ದ್ವೇಷವೋ ಕಾಣೆ. ನಾನು ಅಂದು ನಿಜವಾಗಿಯೂ ಒಯ್ಯುತ್ತಿದ್ದುದು ಸ್ಯಾಂಟೋನಿನ್ ಸೀಸೆಗಳು; ಆದರೆ ಅವರು ಅಸೂಯೆಯಿಂದ ಕೊಕೇನ್ ಸೀಸೆಗಳೆಂದು ಗ್ರಹಿಸಿ ನನಗೆ ತೊಂದರೆ ಕೊಡುತ್ತಿದ್ದಾರೆ ಹುಜೂರ್."

ಅವನ ಹೇಳಿಕೆ ಮುಗಿದಾಗ ನ್ಯಾಯಾಲಯದಲ್ಲೆಲ್ಲ ಒಮ್ಮೆಲೇ ಗುಜು ಗುಜು ಪ್ರಾರಂಭವಾಯಿತು. ಶೇಖಸಾಹೇಬ ಇಲ್ಲವೇ ಪೀರೂಮಿಯಾ ಈ ವಿಷಯವನ್ನು ನನಗೆ ಮೊದಲು ತಿಳಿಸಿರಲಿಲ್ಲವಾದ್ದರಿಂದ ನನಗೂ ಆಶ್ಚರ್ಯವಾಗಿತ್ತು. ಆದರೆ ಈ ಸಂದರ್ಭದ ಪ್ರಯೋಜನವನ್ನೇನು ಪಡೆಯುವುದೆಂದು ನನಗೆ ಗೊತ್ತಿದ್ದುದರಿಂದ ನಾನು ಕೂಡಲೆ ಎದ್ದು ನಿಂತು, "ಸ್ವಾಮಿ, ಸರಕಾರಿ ಪಕ್ಷದ ವಾದದಲ್ಲಿ ದೋಷವೆಲ್ಲಿದೆಂದು ಸ್ಪಷ್ಟವೇ ಇದೆ. ಕಸ್ಟಮ್ಸ್ ಅಧಿಕಾರಿಗಳು ಸೀಸೆಗಳ ಮೇಲಿನ ಲೇಬಲ್ಲುಗಳನ್ನು ನೋಡಿ ಅವುಗಳಲ್ಲಿದ್ದುದು ಕೊಕೇನ್ ಎಂದು ಬಗೆದು ನನ್ನ ಪಕ್ಷಗಾರನ ಮೇಲೆ ಖಟ್ಲೆ ಹಾಕಿದ್ದಾರೆ. ನಿಜವಾಗಿ ನೋಡಿದರೆ ಅದು ಕೊಕೇನೋ ಅಥವಾ ಬೇರಾವುದಾದರೂ ವಸ್ತುವೋ ಎಂಬುದನ್ನು ಖಚಿತಪಡಿಸಿಕೊಳ್ಳಲು ಅವರು ಕೆಮಿಕಲ್ ಎಕ್ಸಾಮಿನರ್ ಕಡೆಗೆ ಆ ಸೀಸೆಗಳನ್ನು ಕಳಿಸಬೇಕಿತ್ತು," ಎಂದು ಹೇಳಿದೆ.

ಬಹಳ ಚರ್ಚೆಯಾದ ನಂತರ ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದ ಇನ್ನೂರು ಸೀಸೆಗಳನ್ನೂ ಕೆಮಿಕಲ್ ಎಕ್ಸಾಮಿನರನೆಡೆಗೆ ಪರೀಕ್ಷೆಗಾಗಿ ಕಳಿಸಬೇಕೆಂದು ಮ್ಯಾಜಿಸ್ಟ್ರೇಟರು ನಿರ್ಣಯವಿತ್ತರು.

ಕೆಮಿಕಲ್ ಎಕ್ಸಾಮಿನರನಿಂದ ಬಂದ ವರದಿ ಪೀರೂಮಿಯಾನ ಹೇಳಿಕೆಯನ್ನೇ ಸ್ಪಷ್ಟಪಡಿಸಿತು. ಯಾವುದೊಂದು ಸೀಸೆಯಲ್ಲೂ ಕೊಕೇನ್ ಇರಲಿಲ್ಲ. ಪ್ರತಿಯೊಂದರಲ್ಲೂ ಸ್ಯಾಂಟೋನಿನ್ ಇತ್ತು! ಅವರ ಪರಿಣಾಮವೆಂದರೆ, ಪೀರೂಮಿಯಾನ ಬಿಡುಗಡೆ. ಅನಂತರ ಅವನ ಸೀಸೆಗಳೆಲ್ಲ ಅವನಿಗೆ ದೊರೆತವು.

ಆದರೆ ಈ ಸ್ಯಾಂಟೋನಿನ್ ವಿಷಯ ನನ್ನ ಪಕ್ಷಗಾರ ನನಗೆ ಮೊದಲೇ ತಿಳಿಸಿರಲಿಲ್ಲವಾದ್ದರಿಂದ ನನಗೆ ಬೇಸರವೆನಿಸಿತು. ಶೇಖಸಾಹೇಬನನ್ನು ಕರೆದು ಅವನ ವರ್ತನೆ, ನನಗೆಷ್ಟೂ ಸರಿಬರಲಿಲ್ಲವೆಂದು ಹೇಳಿ ನಿಜವಾಗಿ ನಡೆದುದಾದರೂ ಏನು? ಎಂದು ವಿಚಾರಿಸಿದೆ.

"ಅದನ್ನೆಲ್ಲ ಅಷ್ಟು ಮನಸ್ಸಿಗೆ ಹಚ್ಚಿಕೊಳ್ಳಬೇಡಿ ವಕೀಲಸಾಹೇಬರೆ, ಪೀರೂಮಿಯಾ ಬಾಡಿ ಗಾರ್ಡ್ ಮಾತ್ರವಾಗಿದ್ದ."

"ಬಾಡಿ ಗಾರ್ಡ್?"

"ಹೌದು ವಕೀಲಸಾಬರೆ ಹೇಗೆ ವರ್ತಿಸಬೇಕೆಂಬುದನ್ನು ಪೀರೂಮಿಯಾನಿಗೆ ನಾವು ಮೊದಲೇ ಕಲಿಸಿದ್ದೆವು. ನಿಜವಾಗಿಯೂ ಖೈರಾತಿ ಎಂಬ ಇನ್ನೊಬ್ಬನ ಹತ್ತಿರ ಕೊಕೇನ್ ಸೀಸೆಗಳಿರುವುದೆಂದೂ, ಪೀರೂಮಿಯಾನ ಹತ್ತಿರ ಸ್ಯಾಂಟೋನಿನ್ ಸೀಸೆಗಳಿರುವುದೆಂದೂ ಮೊದಲೇ ಗೊತ್ತುಪಡಿಸಲಾಗಿತ್ತು. ಅಲ್ಲದೆ ಅಧಿಕಾರಿಗಳಿಗೆ ಸಂಶಯ ಬರುವ ರೀತಿಯಲ್ಲಿಯೇ ಪೀರೂಮಿಯಾ ಮುಂದೆ ಮುಂದೆ ನಡೆಯುತ್ತ ಬರಬೇಕೆಂದೂ ಅವನ ಹಿಂದಿನಿಂದ ಖೈರಾತಿ ಬರಬೇಕೆಂದೂ ನಿರ್ಧಾರವಾಗಿತ್ತು. ಅಧಿಕಾರಿಗಳು ದೊಡ್ಡ ಬೇಟೆ ತಮ್ಮ ಬಲೆಗೆ ಬಿತ್ತೆಂದು ಪೀರೂಮಿಯಾನನ್ನು ಪ್ರಶ್ನಿಸುತ್ತ ಪರೀಕ್ಷಿಸುತ್ತ ಅವನಲ್ಲಿಯೇ ಮಗ್ನರಾಗಿರುವಾಗ ಖೈರಾತಿ ಏನೂ ಅರಿಯದವನಂತೆ ಮುಂದೆ ನಡೆದು ಬರಬೇಕೆಂದು ಅವರಿಬ್ಬರಿಗೂ ಹೇಳಿಡಲಾಗಿತ್ತು. ಅದರಂತೆಯೇ ನಡೆದುಬಿಟ್ಟು ಖೈರಾತಿ ಕೊಕೇನ್ ಸೀಸೆಗಳೊಂದಿಗೆ ಪಾರಾಗಿಬಿಟ್ಟ. ಪೀರೂಮಿಯಾ ಅವನನ್ನು ರಕ್ಷಿಸಿದ ಬಾಡಿ ಗಾರ್ಡ್ ಆದಂತಾಗಲಿಲ್ಲವೆ?"

"ಶೇಖ ಸಾಹೇಬ್, ನಿನಗೆ ತಲೆಯಿದೆ," ನಾನು ನಗುತ್ತ ಹೇಳಿದೆ.


"ಅಲ್ಲಾನ ಕೃಪೆ ವಕೀಲಸಾಬ್," ಅವನು ನಸುನಕ್ಕ. ✡

ಹಾರ್ಲಿಕ್ಸ್

ನಿಮಗೆ ಬಹಳ ಆಗತ್ಯವಿರುವಾಗ ಅತ್ಯುತ್ತಮ ಪೋಷಣೆ ನೀಡುತ್ತದೆ







ಗರ್ಭಿಣಿಯರಿಗೆ

ಗರ್ಭಿಣಿಯರಿಗೆ ಸಮತೂಕದ, ಜೀರ್ಣಿಸಿಕೊಳ್ಳಲು ಸುಲಭವಾದ ಆಹಾರ ಅಗತ್ಯ. ಆದ್ದರಿಂದ ಗರ್ಭಿಣಿಯರಿಗೆ ಹಾರ್ಲಿಕ್ಸ್ ಅತ್ಯಂತ ಮಾದರಿ ಆಹಾರ. ತಾಯಿಗೂ, ಮಗುವಿಗೂ ದೇಹ ನಿರ್ಮಿಸುವ ಪ್ರೋಟೀನುಗಳು ಮತ್ತು ಕಾರ್ಬೋಹೈಡ್ರೇಟ್‌ಗಳನ್ನು ಅದು ಸಮನಾದ ರೀತಿಯಲ್ಲಿ ಒದಗಿಸುತ್ತದೆ. ರಾತ್ರಿಯ ವೇಳೆ ತೆಗೆದುಕೊಂಡಲ್ಲಿ ಅದು ಮಲಬದ್ಧತೆಯನ್ನು ತಡೆಯುತ್ತದೆ ಮತ್ತು ಬೆಳಗಿನ ವೇಳೆಯ ಓಕರಿಕೆಯನ್ನು ತಪ್ಪಿಸುತ್ತದೆ.

ಅಸ್ವಸ್ಥತೆಯಲ್ಲಿ/ನಂತರ ಚೇತರಿಸಿಕೊಳ್ಳುವಾಗ

ಅಸ್ವಸ್ಥರಾದಾಗ ನಿಮ್ಮ ದೇಹವು ಅತ್ಯಮೂಲ್ಯವಾದ ಪ್ರೋಟೀನುಗಳನ್ನು ಮತ್ತು ಪೋಷಕಾಂಶಗಳನ್ನು ಕಳೆದುಕೊಳ್ಳುತ್ತದೆ. ಇದರಿಂದ ನಿಶ್ಶಕ್ತಿ ಉಂಟಾಗುತ್ತದೆ. ಹಾರ್ಲಿಕ್ಸ್ ಜೀವತಂತುಗಳನ್ನು ನಿರ್ಮಿಸುವ ಪ್ರೋಟೀನುಗಳನ್ನು, ದೇಹಕ್ಕೆ ಶಕ್ತಿ ನೀಡುವ ಕಾರ್ಬೋಹೈಡ್ರೇಟ್‌ಗಳನ್ನು ಮತ್ತು ಖನಿಜಾಂಶಗಳನ್ನು, ಜೀರ್ಣಿಸಿಕೊಳ್ಳಲು ಸುಲಭವಾದ ರೂಪದಲ್ಲಿ ಒದಗಿಸುತ್ತದೆ. ಇದರಿಂದ ಅದು ದೇಹವು ಕಳೆದುಕೊಂಡಿದ್ದ ಪೋಷಕಾಂಶಗಳನ್ನು ತುಂಬಿಕೊಡುತ್ತದೆ. ಬೇಗನೆ ಗುಣಹೊಂದಲು ನೆರವಾಗುತ್ತದೆ. ಪುನಃ ಅಸ್ವಸ್ಥರಾಗದಂತೆ ನೋಡಿಕೊಳ್ಳಲು ರೋಗನಿರೋಧಕ ಶಕ್ತಿಯನ್ನು ನಿರ್ಮಿಸುತ್ತದೆ.

ವಿಶ್ವದ್ಯಂತ ವೈದ್ಯರುಗಳು ಶಿಫಾರಸು ಮಾಡಿದ್ದಾರೆ

ಇದರಲ್ಲಿ ಆರೋಗ್ಯವಡಗಿದೆ ಹಾರ್ಲಿಕ್ಸ್.

ಹಾರ್ಲಿಕ್ಸ್ ಒಂದು ರಿಜಿಸ್ಟರ್ಡ್ ಟ್ರೇಡ್ ಮಾರ್ಕ್

ನಾಯಿಯ ಬಾಲ

ಅಮೇರಿಕನ್ ಮೂಲ : ಓ'ಹೆನ್ರಿ
ಕನ್ನಡಕ್ಕೆ : ಜಿ. ಮೃತ್ಯುಂಜಯ

"ಸೆವೆನ್ತ್ ಕ್ರಾಸ್ ಯಾರ್ರೀ— ಇಳೀರಿ." ಕಂಡಕ್ಟರ್ ಕಿರಿಚಿಕೊಳ್ಳುತ್ತಿದ್ದಂತೆ ನಿಶ್ಯಬ್ದವಾಗಿ ನಿಂತ ಬಸ್ಸಿನಿಂದ ಒಬ್ಬಿಬ್ಬರು ಇಳಿದರು, ಮತ್ತೆ ಕೆಲವರು ಬಸ್ಸಿನೊಳಕ್ಕೆ ನುಗ್ಗಿದರು. ಹತ್ತಿದ ಕೆಲವರಿಗೆ ಹತ್ತುವ ವರೆಗೆ ಇದ್ದ ಕಾತರ ಹತ್ತಿದ ನಂತರ ಕಮ್ಮಿಯಾಗಿದ್ದರಿಂದ ಅವರು ಬಾಗಿಲಿನಲ್ಲೇ ನಿಂತರು. ಉಳಿದವರು ಹತ್ತುವ ಪ್ರಯತ್ನ ಮಾಡುವಷ್ಟರಲ್ಲಿ ಕಂಡಕ್ಟರನ 'ಡಬ್ ಡಬ್' ಶಬ್ದದಿಂದ ಉತ್ತೇಜಿತವಾದಂತೆ ಗುರುಗುಟ್ಟುತ್ತ ಬಸ್ಸು ಹೊರಟಿತು. ಬಸ್ಸಿನಿಂದ ಹೊರಬಿದ್ದ ಗೋಪಾಲ ಕರ್‌ಚೀಫ್‌ನಿಂದ ಮುಖ ಒರೆಸಿಕೊಳ್ಳುತ್ತ ಅರ್ಧ ನಿಮಿಷ ಫುಟ್‌ಪಾತ್ ಮೇಲೆ ನಿಂತಿದ್ದು ನಂತರ ಮನೆ ಕಡೆ ನಿಧಾನವಾಗಿ ಹೆಜ್ಜೆ ಹಾಕಿದ, ನಿಧಾನವಾಗಿ— ಏಕೆಂದರೆ ಅವಸರಿಸುವ ಆಗತ್ಯವೇನಿದೆ? ಮದುವೆಯಾಗಿ ಎರಡು ವರ್ಷವಾಗಿ ಫ್ಲ್ಯಾಟೊಂದರಲ್ಲಿ ವಾಸಿಸುವ ತನಗೆ ಮನೆಯಲ್ಲಿ ಕಾದಿರುವ ಕೌತುಕವಾದರೂ ಏನು? ಹೆಜ್ಜೆ ಹಾಕುತ್ತ ಅವನ ಮನಸ್ಸಿನಲ್ಲಿ ಮುಂದಿನ ಕ್ಷಣಗಳು ಸ್ಪಷ್ಟವಾಗಿಯೇ ಮೂಡಿದವು.

ಮಹಡಿ ಏರುವ ಮಾರ್ಗದ ಬದಿಯ ಖೋಲಿಯಲ್ಲಿ ಚಿಲ್ಲರೆ ಬಟ್ಟೆ ಹೊಲಿಯುತ್ತಿರುವ [illegible] ತನ್ನ ಕನ್ನಡಕದೊಳಗಿಂದ ಕಣ್ಣು ಮೇಲೆತ್ತಿ, "ಮುಗೀತಾ ಆಫೀಸು?" ಎಂದು ಸಾಂಪ್ರದಾಯಿಕವಾಗಿ ಕೇಳಿ ತಲೆ ಬಗ್ಗಿಸುತ್ತಾನೆ. ಮೇಲೆ ಹತ್ತಿದರೆ, ಬಾಗಿಲಿನಲ್ಲಿ ಸುಶೀಲ ನಿಂತಿರುತ್ತಾಳೆ. ಇವನು ಬಾಗಿಲಿಗೆ ಬಂದೊಡನೆ ಅವಳು ಒಳಗೆ ಹೋಗುತ್ತಾಳೆ. ಜಗುಲಿಯ ಕುರ್ಚಿಯ ಮೇಲೆ 'ಉಶ್ಯಪ್ಪ' ಎಂದು ಕೋಟು ತೆಗೆಯುತ್ತ ಕುಳಿತೊಡನೆ ಕಾಫಿ ಲೋಟದೊಂದಿಗೆ ಬರುತ್ತಾಳೆ. ಜೊತೆಗೇ ಕಷ್ಟದಿಂದ ಕಡಿಯಬಹುದಾದ ಕೋಡಬಳೆ— ಅವಳೇ ಮಾಡಿದ್ದು; ಕಾಫಿ ಕುಡಿಯುತ್ತ ದಿನಪತ್ರಿಕೆಯ ಮೇಲೆ ಕಣ್ಣಾಡಿಸುತ್ತಾನೆ. ಆರೂವರೆ ಗಂಟೆಗೆ ಮೇಲಿನ ಮಹಡಿಯಲ್ಲಿರುವ ಲತ್ತ ಮನುಷ್ಯ ವ್ಯಾಯಾಮ ಶುರು ಮಾಡುತ್ತಿದ್ದಂತೆ ಮೇಲಿನಿಂದ ಪ್ಲಾಸ್ಟರ್ ಉದುರತೊಡಗುತ್ತದೆ. ಅದಕ್ಕೆಂದು ಹಳೆಯ ಪೇಪರ್ ನೆಲದ ಮೇಲೆ ಹರಡುತ್ತಾನೆ. ಕತ್ತಲು ಆವರಿಸತೊಡಗಿದಂತೆ, ರಸ್ತೆಯ ಆಚೆ ಬದಿಯಲ್ಲಿರುವ ಹಿಟ್ಟಿನ ಗಿರಣಿಯಿಂದ 'ಕಿರ್ರ್... ಕ್ಲಚ್ ಕ್ಲಚ್... ಗಡ್ ಗಡ್... ಕಿರ್ರ್' ಎಂದು ಕರ್ಕಶ ಶಬ್ದ ಹೊರಟು ವಾತಾವರಣವನ್ನು ತುಂಬುತ್ತದೆ. ಪಕ್ಕದ ಸೌಂಡ್ ಸಿಸ್ಟಮ್‌ನವನು ಯಾವುದೋ ಒಂದು ಸುಪ್ರಭಾತವನ್ನು ಸಾಧ್ಯವಾದಷ್ಟೂ ತಾರಕಸ್ವರದಲ್ಲಿ ಕಿರಿಲಿಸುತ್ತಾನೆ.

ಕೆಳಗಡೆ ರಸ್ತೆಯಲ್ಲಿ ಲೋಡ್ ಲಾರಿ ಗೇರಿನಲ್ಲಿ ಗುರುಗುಡುತ್ತ ನುಗ್ಗುತ್ತಿರುವಾಗ ಫ್ಲ್ಯಾಟಿಗೆ ಫ್ಲ್ಯಾಟೇ ಅದುರಿದಂತಾಗುತ್ತದೆ. ಪಕ್ಕದ



ಫ್ಲ್ಯಾಟಿನ ಶಕುಂತಲಮ್ಮ ತನ್ನ ಐದನೇ ಮಗುವಿಗೆ ಚಚ್ಚುತ್ತಾಳೆ. ಅದು ಅಯ್ಯಯ್ಯೋ ಎಂದು ಕಿರಿಚಿಕೊಳ್ಳುತ್ತದೆ. ಆಚೆ ಮನೆ ಸಾರಂಗಪಾಣಿ ನುಡಿಸುತ್ತಿರಬಹುದಾದ ಕೊಳಲಿನ ಧ್ವನಿ ಎಲ್ಲೋ ಕರಗಿಹೋಗುತ್ತದೆ.

ಗೋಪಾಲನಿಗೆ ಗೊತ್ತು; ಇದೆಲ್ಲ ಹೀಗೇ ನಡೆಯುತ್ತದೆ. ಹಾಗೆಯೇ ಏಳೂವರೆ ಗಂಟೆಗೆ ಸರಿಯಾಗಿ ಗೋಪಾಲ ಎದ್ದು ನಿಂತು ಧೈರ್ಯವನ್ನೆಲ್ಲ ಒಗ್ಗೂಡಿಸಿಕೊಂಡು ಚಪ್ಪಲಿ ಕಡೆ ಹೆಜ್ಜೆ ಹಾಕುತ್ತಿದ್ದಂತೆ ಸುಶೀಲ ತನ್ನ ಕೀರಲು ಸ್ವರದಲ್ಲಿ, "ಈಗ ಎಲ್ಲಿಗ್ ಹೊರಟಿದ್ದು, ಹೇಳಿ ಸ್ವಲ್ಪ?" ಎನ್ನುತ್ತಾಳೆ. ಅದಕ್ಕವನು. "ಎಲ್ಲೂ ಇಲ್ಲ. ಇಲ್ಲೇ ವೆಂಕಣ್ಣನ ರೂಂ ಕಡೆ ಹೋಗಿ ಬರೋಣ ಅಂತ ಅಷ್ಟೆ," ಎನ್ನುತ್ತಾನೆ.

ಈಗೀಗ ಇದೇ ಗೋಪಾಲನ ದಿನಚರಿಯಾಗಿದೆ. ಹತ್ತು ಗಂಟೆಗೋ ಹನ್ನೊಂದು ಗಂಟೆಗೋ ಮರಳುತ್ತಾನೆ. ಕೆಲವೇ ದಿನ ಸುಶೀಲ ನಿದ್ದೆ ಮಾಡಿರುತ್ತಿದ್ದಳು. ಇನ್ನು ಕೆಲ ದಿನ ಎದ್ದಿದ್ದು, ಗೋಪಾಲ ಬಂದ ನಂತರ ತನ್ನ ಮನದ ಮೂಸೆಯಲ್ಲಿ ಹಳೆಯ ನೆನಪಿನ ನಾಲ್ಕು ಚೂರು ಬಂಗಾರ ಹಾಕಿ ಕರಗಿಸಿ ಕಣ್ಣೀರಾಗಿಸುತ್ತಿದ್ದಳು.

ಇಂದು ಸಂಜೆ ಮನೆ ಬಾಗಿಲು ತಲುಪಿದ ಗೋಪಾಲನಿಗೆ ಏನೋ ಅಗಾಧ ಬದಲಾವಣೆ ಕಂಡಿತು. ಸುಶೀಲ ಅಲ್ಲಿರಲಿಲ್ಲ. ಬಾಗಿಲಿಗೆ ಬೀಗ ಹಾಕಿತ್ತು. ಬೀಗ ತೆಗೆದು ಒಳಹೊಕ್ಕರೆ ಮೂರೂ ಕೋಣೆಗಳೂ ಬಿಕೋ ಎನ್ನುತ್ತಿದ್ದವು. ಮನೆಯಲ್ಲೆಲ್ಲ ಅವಳ ಸಾಮಾನುಗಳು ಚೆಲ್ಲಾ-ಪಿಲ್ಲಿಯಾಗಿದ್ದವು. ಒಂದೆರಡು ಚಿಕ್ಕ ಕೈಚೀಲಗಳು ಅಲ್ಲೇ ನೆಲದ ಮೇಲೆ ಬಿದ್ದಿದ್ದವು. ಚಪ್ಪಲಿ ಸ್ಟ್ಯಾಂಡಿನಿಂದ ತೆರೆದು ಬಿಟ್ಟು ಹೋದ ಉಂಗುಷ್ಠ ಹರಿದ ಚಪ್ಪಲಿಗಳೆರಡು ಬಾಗಿಲ ಹತ್ತಿರ ಬಿದ್ದಿದ್ದವು. ಕಿಟಕಿಯ ಬಳಿ ತೆರೆದ ಪೌಡರ್ ಡಬ್ಬಿ ಹಾಗೇ ಇತ್ತು. ಒರಸಿಟ್ಟ ಕನ್ನಡಿ ಹಾಗೆಯೇ ಒರಗಿತ್ತು. ಉಹುಂ, ಇದು ಸುಶಿಯ ಕ್ರಮವಲ್ಲ. ಗೋಪಾಲನ ಹೃದಯ ಭಾರವಾಗುತ್ತಿದ್ದಂತೆ, ಬಾಚಣಿಗೆಗೆ ಸಿಕ್ಕಿಕೊಂಡ ಸುಶೀಲಳ ಗುಂಗುರಾದ ಉದ್ದ ಕಪ್ಪು ಕೂದಲುಗಳು

ಕಂಡವು. ಅವಳಿಗೆ ಏನೋ ಅತ್ಯವಸವಾಗಿರ ಬೇಕು. ಇಲ್ಲವಾದರೆ ಅವಳು ಯಾವಾಗಲೂ ಬಾಚಿದಾಗ ಬಂದ ಕೂದಲನ್ನೆಲ್ಲ ಬಿಸಾಡದೆ ಒಂದು ರಟ್ಟಿನ ಪೆಟ್ಟಿಗೆಯಲ್ಲಿ ಇಡುವಳು. ಚೌರಿ ಮಾಡಲು ಬರುತ್ತದಂತೆ.

ಅಡಿಗೆ ಮನೆಯಲ್ಲಿ ಗ್ಯಾಸ್ ಸ್ಟೌ ಪಕ್ಕದಲ್ಲಿ ಎದ್ದು ಕಾಣುವಂತೆ ನೋಡುತ್ತಿದ್ದ ಮಡಿಸಿಟ್ಟ ಕಾಗದ ಕಂಡಿತು. ತೆಗೆದು ನೋಡಿದರೆ–ಅವನ ಪತ್ನಿಯ ಪತ್ರ.

'ಪ್ರಿಯ ರೀ ರೀ,

ಈಗಷ್ಟೇ ನಮ್ಮಮ್ಮನಿಗೆ ಸೀರಿಯಸ್ ಅಂತ ಟೆಲಿಗ್ರಾಂ ಬಂತು. ನಾನು ನಾಲ್ಕೂವರೆಯ ನಾನ್‌ಸ್ಟಾಪ್ ಬಸ್ಸಿಗೆ ಹೋಗುತ್ತಿದ್ದೇನೆ. ಬಸ್ ಸ್ಟ್ಯಾಂಡಿಗೆ ಗಿರೀಶ ಬರಬಹುದು. ಕಾಫಿ ಮಾಡಿ ಫ್ಲಾಸ್ಕಿನಲ್ಲಿಟ್ಟಿದ್ದೇನೆ, ಕುಡಿಯಿರಿ. ಬಾದಾಮಿ ಸ್ಟೀಲ್ ಡಬ್ಬಿಯಲ್ಲಿ ಕೋಡಬಳೆ ಇದೆ, ತೆಗೆದುಕೊಳ್ಳಿ. ಯಾವಾಗಿನಷ್ಟು ಗಟ್ಟಿಯಾಗಿಲ್ಲ. ಹಾಲಿನವನಿಗೆ ಐವತ್ತು ಪೈಸೆ ಕೊಡಿ. ಗ್ಯಾಸ್ ಸ್ವಲ್ಪ ಮಾತ್ರ ಇರಬಹುದು. ಅವರಿಗೆ ತಿಳಿಸಿ. ನಿಮ್ಮ ಒಳ್ಳೆ ಕಾಲುಚೀಲಗಳು ಕಪಾಟಿನ ಮೇಲಿನ ಅರೆಯಲ್ಲಿವೆ. ನಾನು ನಾಳೆ ಪತ್ರ ಬರೀತೇನೆ.

ಅವಸರದಿಂದ,

ಸುಶೀ.'

ಕಳೆದ ಎರಡು ವರ್ಷಗಳ ವೈವಾಹಿಕ ಜೀವನದಲ್ಲಿ ಒಂದೇ ಒಂದು ರಾತ್ರಿ ಸಹ ಗೋಪಾಲ ಹಾಗೂ ಸುಶೀಲ ಬೇರೆ ಬೇರೆಯಿದ್ದುದಿಲ್ಲ. ಚೀಟಿಯನ್ನು ಗೋಪಾಲ ಮೂಕನಾಗಿ ಪದೇ ಪದೇ ಓದಿದ. ಎಂದೂ ಬದಲಾಗದ ಏಕತಾನದ ಬಾಳು ಇಂದು ಎಂದಿಗಿಂತ ಸ್ವಲ್ಪ

ಭಿನ್ನವಾಗಿತ್ತು. ಅದು ಅವನನ್ನು ವಿಸ್ಮಿತನನ್ನಾಗಿಸಿತು.

ಕುರ್ಚಿಯ ಬೆನ್ನ ಮೇಲೆ ನೀಲಿ ಹೂವು ಹೂವಿನ ಬಿಳಿಯ ಪತ್ತಲ ಬಿದ್ದಿತ್ತು. ಅದು ಸುಶೀಲ ನಿತ್ಯ ಉಡುವ ಸೀರೆ. ಅವಳ ಅವಸರದಲ್ಲಿ ಅವಳು 'ಹೋಗುವಲ್ಲಿ ಉಡುವ' ಸೀರೆಗಳು ಕಿತ್ತು ಹರಡಿದ್ದವು. ಅವಳಿಗೆ ಇಷ್ಟವಾದ ಸೀಬೆ ಹಣ್ಣು ಕತ್ತರಿಸದೆ ಟೇಬಲ್ ಮೇಲೆ ಕೂತಿತ್ತು. ದಿನಪತ್ರಿಕೆ ನೆಲದ ಮೇಲೆ ಹರಡಿಕೊಂಡು ಬಿದ್ದಿತ್ತು. ಪ್ರಕಟವಾದ 'ಬಸ್ಸು ರೈಲುಗಳ ವೇಳಾಪತ್ರಿಕೆ'ಯ ಭಾಗವನ್ನು ಚಚ್ಚೌಕವಾಗಿ ಕತ್ತರಿಸಿ ತೆಗೆದದ್ದರಿಂದ ಆ ಚೌಕದಿಂದ ಅದು ದಿಟ್ಟಿಸುವಂತೆ ಕಾಣುತ್ತಿತ್ತು. ರೂಮಿನ ಪ್ರತಿಯೊಂದು ವಸ್ತುವೂ ಒಂದು ನಷ್ಟವನ್ನು, ಅದರ ಚೈತನ್ಯ, ಅದರ ಜೀವಜೀವಾಳವೇ ಬರಿದಾದದ್ದನ್ನು ಎತ್ತಿ ಆಡುವಂತೆ ತೋರುತ್ತಿತ್ತು. ಆ ನಿರ್ಜೀವ ಅವಶೇಷಗಳ ನಡುವೆ ಹೃದಯದಲ್ಲಿ ಶೂನ್ಯಭಾವ ಆವರಿಸಿದ ಗೋಪಾಲ ನಿಂತಿದ್ದ.

ಅವನು ರೂಮನ್ನು ಸಾಧ್ಯವಾದಷ್ಟು ಓರಣಗೊಳಿಸತೊಡಗಿದ. ಅವಳ ಬಟ್ಟೆಗಳನ್ನು ಮುಟ್ಟಿದೊಡನೆ ಅವನಲ್ಲಿ ಒಂದು ರೀತಿಯ ಭೀತಿಯ ಅಲೆ ಪಸರಿಸಿದಂತಾಯಿತು. ಸುಶೀಲಳಿಲ್ಲದೆ ಅಸ್ತಿತ್ವ ಹೇಗಿರಬಹುದೆಂದು ಅವನೆಂದೂ ಯೋಚಿಸಿರಲಿಲ್ಲ. ಅವಳು ಅವನ ಬಾಳಿನಲ್ಲಿ ಎಷ್ಟು ಅವಿಭಾಜ್ಯವಾಗಿ ಬೆಸೆದುಹೋಗಿದ್ದಳೆಂದರೆ, ಅವಳು ಅವನು ಉಸಿರಾಡುವ ಗಾಳಿಯಂತಾಗಿದ್ದಳು. ಈ ಗಾಳಿ ಜೀವಿಸಿರಲು ತುಂಬಾ ಅಗತ್ಯ; ಆದರೆ ಗಮನಕ್ಕೇ ಬಾರದು. ಯಾವುದೇ ಪೂರ್ವಸೂಚನೆಯಿಲ್ಲದೆ, ತಾನು ಇರಲೇ ಇಲ್ಲವೇನೋ ಎನಿಸುವಂತೆ, ಈಗವಳು ಹೊರಟು ಹೋಗಿದ್ದಳು; ಅದೃಶ್ಯಳಾಗಿದ್ದಳು. ಹಾಗೆ ನೋಡಿದರೆ ಅದು ಬರೀ ಕೆಲ ದಿನಗಳ ಮಟ್ಟಿಗೆ, ಹೆಚ್ಚೆಂದರೆ ಒಂದೆರಡು ವಾರಗಳ ಮಟ್ಟಿಗೆ. ಆದರೆ ಅವನಿಗೆ ಮೃತ್ಯುವಿನ ಹಸ್ತವೇ ತನ್ನ ಭದ್ರ ಗೃಹಪಡೆಗೆ ಬೆರಳು ಮಾಡಿದಂತೆನಿಸಿತು.

ಗೋಪಾಲ ಕುರ್ಚಿಯ ಮೇಲೆ ಕುಳಿತು ಫ್ಲಾಸ್ಕಿನಿಂದ ಕಾಫಿ ಬಗ್ಗಿಸಿಕೊಂಡ. ಕೋಡಬಳೆ ತೆಗೆದುಕೊಂಡು ಮುಂದಿಟ್ಟುಕೊಂಡು ಅನ್ಯಮನಸ್ಕನಾಗಿ ಕಾಫಿ ಕುಡಿದ. ಎದುರಿನ ಕಿಟಕಿಯ ಮುಂದೆ ಕುಳಿತುಕೊಂಡ.

ಸಿಗರೇಟು ಸೇದುವ ಮನಸ್ಸಾಗಲಿಲ್ಲ. ಹೊರಗಡೆ ಇಡೀ ನಗರವೇ ತನ್ನ ವಿನೋದದ ವಿಕಟ ನರ್ತನದಲ್ಲಿ ಪಾಲ್ಗೊಳ್ಳಲು ಅವನನ್ನು ಕರೆಯುತ್ತಿತ್ತು. ರಾತ್ರಿಯೇ ಅವನದು. ಕೇಳುವ ಪ್ರಶ್ನೆಯಿಲ್ಲದೆ ಅವನು ಹೊರಗೆಹೋಗಿ ಅಲ್ಲಿ ಬೇರೆ ಯಾವುದೇ ಮಜಾದಾರ್ ಬ್ರಹ್ಮಚಾರಿಯಂತೆಯೇ ಮನ ಬಂದಂತೆ ಚೈನಿ ಹೊಡೆಯಬಹುದಿತ್ತು. ಬೇಕಾದರೆ ಬೆಳಗಿನವರೆಗೂ ತನ್ನ ಖುಷಿಯ ಮಧ್ಯೆ ಶಿವಪೂಜೆಯ ಕರಡಿಯಂತೆ ಬರುವ, ಮನೆಯಲ್ಲಿ ಕಾಯುವ ಸುಶೀಲಳ ನೆನಪಿನ ಕಾಟವಿಲ್ಲದೆ—ತಿರುಗಿ ಆಡಿ ಕುಣಿಯಬಹುದಿತ್ತು. ಬೇಕಾದರೆ ವೆಂಕಣ್ಣನ ರೂಮಿನಲ್ಲಿ ತನ್ನ ಪಕ್ಕಾ ದೋಸ್ತಿಗಳೊಂದಿಗೆ ಬೆಳಗಿನ ವರೆಗೂ ರಮ್ಮಿ ಹೊಡೆಯಬಹುದಿತ್ತು. ಖುಷಿಗೆ ಅಡ್ಡವಾದ ಎಲ್ಲ ಕಡೆ ಸಡಲಿಹೋಗಿವೆ; ಸುಶೀಲ ಇಲ್ಲ.

ತನ್ನ ಭಾವನೆಗಳನ್ನು ವಿಶ್ಲೇಷಣೆ ಮಾಡಲು ಗೋಪಾಲ ಅರಿಯನು. ಆದರೆ ಸುಶೀಲಳಿಲ್ಲದ ತನ್ನ ಕೊಠಡಿಯಲ್ಲಿ ಕುಳಿತಂತೆ ಅವನು ತನ್ನ ಅಸೌಖ್ಯದ ಮೂಲ ಕಾರಣವನ್ನು ಖಚಿತವಾಗಿ ಕಂಡುಕೊಂಡ. ಈಗ ತಿಳಿಯಿತವನಿಗೆ—ತನ್ನ ಸಂತೋಷಕ್ಕೆ ಸುಶೀಲ ಬೇಕು. ಡಲ್ ಯಾಂತ್ರಿಕ ದಿನಚರಿಯಿಂದಾಗಿ ಒಳಮನಸ್ಸಿಗೆ ಸರಿದುಹೋಗಿ ಅಡಗಿದ ಅವಳ ಮೇಲಿನ ಭಾವನೆಗಳು ಈಗಿನ ಅವಳ ಗೈರುಹಾಜರಿಯಿಂದ ಏಕದಮ್ ಕಲಕಿಹೋದವು. ಗಾದೆಯ ಮಾತಿನಂತೆ ಹಕ್ಕಿ ಹಾರಿಹೋದ ಮೇಲೆಯೇ ಅದರ ಕೊರಳಿನ ಸಂಗೀತದ ಇಂಪು ಹೊಳೆಯುವುದು.

'ನಾನೊಬ್ಬ ಬಕ್ರಾ ನನ್ ಮಗ,' ಅಂದುಕೊಂಡ ಗೋಪಾಲ. 'ಸುಶೀಲಳನ್ನ ಹೇಗೆ ನೋಡ್ಕೊಳ್ತಿದೇನೆ? ಅವಳ ಜೊತೆಗೆ ಇಲ್ಲಿ ಮನೇಲಿರೋ ಬದಲು ಪ್ರತಿ ರಾತ್ರಿ ಹೊರಗಡೆ ಹೋಗಿ ಆ ಕೆಲ್ಸಕ್ಕೆ ಬಾರದವರ ಜೊತೆ ಹೊತ್ತು ಕಳೆಯೋದು; ಆ ಪಾಪದ ಹುಡುಗಿ ಇಲ್ಲಿ ಬೇಜಾರುಪಟ್ಕೊಂಡು ಒಬ್ಳೇ ಇರೋದು,

ಪಾಪ! ಒಂದು ಮನೋರಂಜನೆಯೇ, ಒಂದು ವಿನೋದವೇ–ನಾನು ನೋಡಿದ್ರೆ ಹೀಗೆ. ಗೋಪಾಲ! ನೀನೇ ಕಚಡಾ ಆಸಾಮಿ... ಇನ್ನು ಸರಿಹೋಗ್ತೇನೆ. ಅವಳ್ನ ಹೊರಗಡೆ ಕರ್ಕೊಂಡು ಹೋಗಿ ಅವಳಿಷ್ಟ ಮನೋರಂಜನೆ ಒದಗಿಸ್ತೇನೆ. ವೆಂಕಣ್ಣನ ಗ್ಯಾಂಗಿಗೆ ಈ ನಿಮಿಷದಿಂದಲೇ ನಮಸ್ಕಾರ ಹೇಳ್ತೇನೆ."

ಹೊರಗಡೆ ನಗರ ಗೋಪಾಲನಿಗಾಗಿಯೇ ಅಬ್ಬರಿಸುತ್ತಿತ್ತು. ವೆಂಕಣ್ಣನ ರೂಮಿನಲ್ಲಿ ಗೆಳೆಯರ ಟೋಳಿ ಮೂರು ಪ್ಯಾಕ್ ಕಲಸಿಕೊಂಡು ಸಿದ್ಧವಾಗುತ್ತಿತ್ತು. ಆದರೆ ಗೋಪಾಲನ ವ್ಯಥಿತ ಹೃದಯವನ್ನು ಹಾಡಿಸುವ ಕೋಗಿಲೆಯ ಗಾನ ಇರಲಿಲ್ಲ.

ಗೋಪಾಲನ ಬಲಗೈ ಹತ್ತಿರ ಒಂದು ಕುರ್ಚಿ ಇತ್ತು. ಅದರ ಬೆನ್ನಿಗೆ ಸುಶೀಲಳ ಉದ್ದ ತೋಳಿನ ರವಿಕೆ. ಅದರಲ್ಲಿ ಇನ್ನೂ ಅವಳ ಮೈಮಾಟ ಅಚ್ಚೊತ್ತಿದಂತಿತ್ತು. ಅವನ ಸೌಖ್ಯ, ಸಂತೋಷಕ್ಕಾಗಿ ಅವಳು ಮಾಡುತ್ತಿದ್ದ ಕೆಲಸದಿಂದಾಗಿ ತೋಳಿನ ಮಧ್ಯದಲ್ಲಿ ನೆರಿ ನೆರಿ ಬಿಟ್ಟಿತ್ತು. ದುಂಡು ಮಲ್ಲಿಗೆಯ ನವಿರಾದ ಪರಿಮಳ ಅದರಿಂದ ಬರುತ್ತಿತ್ತು. ಗೋಪಾಲ ಅದನ್ನು ಕೈಗೆತ್ತಿಕೊಂಡು ಮೃದುವಾಗಿ ನೇವರಿಸಿ ಹಾಗೇ ದಿಟ್ಟಿಸುತ್ತ ಕುಳಿತ. ಸುಶೀಲಾ ಯಾವಾಗಲೂ 'ಮುಟ್ಟಿದರೆ ಮುನಿ'ಯಾಗಿರಲಿಲ್ಲ. ಕಣ್ಣೀರು–ಹೌದು ಕಣ್ಣೀರು–ಬಂತು ಗೋಪಾಲನ ಕಣ್ಣುಗಳಲ್ಲಿ. ಅವಳು ತಿರುಗಿ ಬಂದಾಗ ವಿಷಯವೇ ಬದಲಾಗುತ್ತದೆ. ಅವನು ಈ ವರೆಗಿನ ಎಲ್ಲ ಅಸಡ್ಡೆಯನ್ನು ಸರಿಪಡಿಸುತ್ತಾನೆ. ಅವಳಿಲ್ಲದ ಬದುಕು ಅದೆಂಥದು?

ಬಾಗಿಲು ತೆರೆಯಿತು. ಸುಶೀಲ ಕೈಯಲ್ಲೊಂದು ಪುಟ್ಟ ವ್ಯಾನಿಟಿಬ್ಯಾಗ್–ಹಿಡಿದು ಒಳಬಂದಳು. ಗೋಪಾಲ ಅವಳೆಡೆ ಮಳ್ಳನಂತೆ ನೋಡಿದ.

"ಅಬ್ಬಾ! ತಿರುಗಿ ಬಂದು ಬಿಟ್ಟೆ," ಸುಶೀಲ ಎಂದಳು, "ಅಮ್ಮನಿಗೆ ಅಷ್ಟೇನೂ ಸೀರಿಯಸ್ ಆಗಿರಲಿಲ್ಲ. ಗಿರಿ ಬಸ್ ಸ್ಟ್ಯಾಂಡಿಗೆ ಬಂದಿದ್ದ. ಸ್ವಲ್ಪ ಅಸೌಖ್ಯ ಆಗಿತ್ತಂತೆ. ಟೆಲಿಗ್ರಾಂ ಕೊಟ್ಟ ಸ್ವಲ್ಪ ಹೊತ್ತಿಗೆ ಆರಾಮಾದಳಂತೆ. ಆದ್ದರಿಂದ ನೆಕ್ಸ್ಟ್ ಬಸ್ ಹತ್ತಿಬಿಟ್ಟೆ. ಒಂದು ಲೋಟ ಬಿಸಿ ಬಿಸಿ ಕಾಫೀ ಕುಡೀಬೇಕು ನಾನು ಮೊದಲು."

ಮತ್ತೆ ಆ ಫ್ಲ್ಯಾಟಿನ ಜೀವನಯಂತ್ರದ ಗೇರಿನ ಚಕ್ರಗಳು ಗುರುಗುಟ್ಟಿ ಮೊದಲಿನ ನಡಿಗೆ ಬಂದುದನ್ನು ಯಾರೂ ಗಮನಿಸಲಿಲ್ಲ. ಒಂದು ಬೆಲ್ಟ್ ಕಳಚಿತು, ಒಂದು ಸ್ಪ್ರಿಂಗ್ ಕೂಡಿತು, ಗೇರು ಬದಲಾಯಿಸಿತು–ಚಕ್ರಗಳು ಮತ್ತೆ ಹಳೆಯ ಪಥದಲ್ಲಿ ತಿರುಗತೊಡಗಿದವು.

ಗೋಪಾಲ ಗಡಿಯಾರದೆಡೆಗೆ ನೋಡಿದ. ಗಂಟೆ ಏಳೂವರೆ. ನಿಧಾನವಾಗಿ ಎದ್ದು ನಿಂತು ಚಪ್ಪಲಿಯಲ್ಲಿ ಕಾಲು ತೂರಿಸಿದ.

"ಈಗ ಎಲ್ಲೀಗ್ ಹೊರಟಿದ್ದು, ಹೇಳಿ ಸ್ವಲ್ಪ?" ಕೀರಲು ಸ್ವರದಲ್ಲಿ ಕೇಳಿದಳು ಸುಶೀಲ.

"ಎಲ್ಲೂ ಇಲ್ಲ. ಇಲ್ಲೇ ವೆಂಕಣ್ಣನ ರೂಂ ಕಡೆ ಹೋಗಿ ಬರೋಣ ಅಂತ ಅಷ್ಟೆ," ಎಂದ ಗೋಪಾಲ. ✡



ಒಮ್ಮೆ ಅರ್ನೆಸ್ಟ್ ಹೆಮಿಂಗ್ವೆಯವರಿಗೆ ಇಂಗ್ಲೆಂಡಿನಿಂದ ಅವರ ಭಕ್ತನೊಬ್ಬ ಪತ್ರ ಬರೆದು ಕೇಳಿದ: "ಉರಿಯುತ್ತಿರುವ ದೀವಟಿಗೆಯನ್ನು ಕೈಲಿ ಹಿಡಿದುಕೊಂಡು ಹೋಗುವವರ ಮೇಲೆ ಸಿಂಹಗಳು ಎರಗುವುದಿಲ್ಲವಂತೆ, ಹೌದೆ?"

"ದೀವಟಿಗೆಯನ್ನು ಎಷ್ಟು ವೇಗದಿಂದ ತೆಗೆದುಕೊಂಡು ಹೋಗಲಾಗುತ್ತದೆಂಬುದರ ಮೇಲೆ ಅದೆಲ್ಲ ಅವಲಂಬಿಸಿದೆ," ಹೆಮಿಂಗ್ವೆ ಉತ್ತರಿಸಿದರು.

ಅಶ್ವತ್ಥವೃಕ್ಷ

ಹಲವಾರು ಟೊಂಗೆಗಳ ದಿಗಂತದಿ ಚಾಚಿ
ನೆಲಕೆ ತರಗೆಲೆಗಳ ಹರವಿ ಕಹಿ ಬೇವಿನೊಡನೆ
ಸರಸವಾಡುತ ನೂರಾರು ವರುಷಗಳಿಂದ ನಿಂತಿರುವೆ.
ಯಾರು ನಿನಗೆ ಮದುವೆ ಮಾಡಿದರೋ-ಪುಣ್ಯಾತ್ಮರು!
ನಮ್ಮ ಜನ ಗಿಡಗಳಿಗೂ ಕಲ್ಲುಗಳಿಗೂ
ಲೋಹಗಳಿಗೂ-ಇನ್ನೂ ಏತಕ್ಕೋ
ಯಾವುದಕ್ಕೋ ಮದುವೆ ಮಾಡುವರು.
ವಿಶ್ವವ್ಯಾಪ್ತಿ ಇವರ ಧರ್ಮವಲ್ಲವೆ ಹೇಳಿ?
ದಾರಿಕಾರರು ಬಂದು ದಣಿದು ಕೂತಾಗ
ಕಾಗೆ ತಲೆಯನ್ನು ಪವಿತ್ರವಾಗಿಸುವವು.
ಆದರೂ ಪವಿತ್ರವಾದುದು ಅಪವಿತ್ರ ಹೇಗೆ?
ಬುಡದಲ್ಲಿ ಕಲ್ಲು ನಾಗಗಳ ಸ್ಥಾಪಿಸಿ ಪುಣ್ಯ
ಪಡೆದ ಪುಣ್ಯವಂತರು ಎಷ್ಟೋ ಏನೋ?
ಪಾಪ, ಅವರು ಗತಿಸಿಹೋದರು ಅವರ
ಮೌಢ್ಯಕ್ಕೆ ಸಾಕ್ಷಿಯಾಗಿ ಕುಳಿತಿವೆ ನಾಗಗಳು!
ಮಕ್ಕಳಾಗಲಿ ಎಂದು ಗಿರಿ ಗಿರಿ ತಿರುಗುವ
ಯುವತಿಯರ ಕಿರಿ ಬೆವರು ಮೂಡುವುದು ಇಲ್ಲಿ
ಅವರು ಕಾಣಲು ಹುರಿ ಮೀಸೆ ಹುಚ್ಚಪ್ಪಗಳು
ಅತ್ತಿತ್ತ ಅಲೆದರೂ ಅಲೆದಾರು-ಎಷ್ಟೆಂದರೂ
ಗಂಡು-ಹೆಣ್ಣಿನ ಪ್ರಶ್ನೆ ಬ್ರಹ್ಮನಿಗೂ ಅರಿದು!
ಅಶ್ವತ್ಥವೃಕ್ಷದ ಕಥೆ ಹೇಳುವ ಮುದಿ ಗೂಬೆಗಳು
ಅಲ್ಲಲ್ಲಿ-ಕೋಲು ಕೈಯಲಿ ಹಿಡಿದು-ಸಾಗುತಿವೆ
ವಿಜ್ಞಾನ ಬೆಳಕು ತಂದರೂ ಅಶ್ವತ್ಥ ಅಂಜಿಲ್ಲ
ಏಕೆ ಅಂಜಬೇಕು? ಭಕ್ತ ಜಂಗುಳಿ ಹಿಂಡಾಗಿರುವಾಗ?

—ಬಿ. ಆರ್. ವಾಡಪ್ಪಿ


ಸೊಳ್ಳೆ ಕಡಿತಗಳಿಂದ, ಖಾತ್ರಿಯಾದ ದ್ವಿವಿಧ ರಕ್ಷಣೆಯನ್ನು ಕೇವಲ ಒಡೊಮಸ್ ನಿಮಗೆ ನೀಡುತ್ತದೆ...

ನಿಮಗೆ ಸುಖನಿದ್ರೆ ಪ್ರಾಪ್ತವಾಗುವಂತೆ ಮಾಡುತ್ತದೆ

ಒಡೊಮಸ್ ನಿಮ್ಮನ್ನು ರಕ್ಷಿಸುವ ಹಾಗೆ ಬೇರೆ ಯಾವುದೇ ಸೊಳ್ಳೆನಿರೋಧಕವು ರಕ್ಷಿಸಲಾರದು.



ಅದರ ವಾಸನೆ ಸೊಳ್ಳೆಗಳನ್ನು ದೂರಗೊಳಿಸುತ್ತದೆ



ಅದರ ಅಪೂರ್ವ ಘಟಕ ನಿಮ್ಮ ಚರ್ಮಕ್ಕೆ ಸೊಳ್ಳೆಗಳ ವಿರುದ್ಧ ರಕ್ಷಣಾ ಕವಚದಂತಿರುತ್ತದೆ—ರಾತ್ರಿಯಿಡೀ!

ಇಂದು ಭಾರತದಲ್ಲಿ ಒಡೊಮಸ್ ಅತ್ಯಧಿಕ ಮಾರಾಟವಾಗುವ ಸೊಳ್ಳೆನಿರೋಧಕ ಆಗಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ಸೊಳ್ಳೆಗಳು ನಿಮ್ಮನ್ನು ಪೀಡಿಸುವ ಮೊದಲೇ ಅವನ್ನು

ಒಡೊಮಸ್

ನಿಂದ ಓಡಿಸಿರಿ!



ಆನುವಂಶಿಕ ಸಂಕೇತ ಭಾಷೆ

ಜೆ. ಆರ್. ಲಕ್ಷ್ಮಣರಾವ್

ನ್ಯೂಕ್ಲಿಯಿಕ್ ಆಮ್ಲದ ರಚನೆ

ನ್ಯೂಕ್ಲಿಯಿಕ್ ಆಮ್ಲಗಳ ಅಣುಗಳು ಬಹು ದೊಡ್ಡವು; ಒಂದೊಂದು ಅಣುವೂ ಲಕ್ಷಾಂತರ ಪರಮಾಣುಗಳ ಸಂಯೋಗದಿಂದ ಆದುದು. ಆದರೂ ಅವುಗಳ ಅಣುರಚನೆಯಲ್ಲಿ ಒಂದು ಕ್ರಮವಿದೆ; ಒಂದು ನಿರ್ದಿಷ್ಟ ಬಗೆಯ ಘಟಕ ಅಣುವಿನದ್ದಕ್ಕೂ ಸಾವಿರಾರು ಬಾರಿ ಪುನಃ ಪುನಃ ಕಾಣಿಸಿಕೊಳ್ಳುತ್ತದೆ. ಆ ಘಟಕದ ಹೆಸರು ನ್ಯೂಕ್ಲಿಯೊಟೈಡ್. ಒಂದು ಫಾಸ್ಫಾರಿಕ್ ಆಮ್ಲದ ಒಂದು ಅಣು (ಅದನ್ನು P ಎಂದು ಕರೆಯೋಣ) ನಿರ್ದಿಷ್ಟ ಬಗೆಯ ಸಕ್ಕರೆಯ ಒಂದು ಅಣು (ಅದನ್ನು S ಎನ್ನೋಣ) ಮತ್ತು ಪ್ರತ್ಯಾಮ್ಲ (base) ಗುಣದ ಹಾಗೂ ನೈಟ್ರೋಜನ್ ಉಳ್ಳ ಕಾರ್ಬನಿಕ ಸಂಯುಕ್ತದ ಒಂದು ಅಣು (ಇದು B), ಈ ಮೂರು ಸೇರಿ ಒಂದು ನ್ಯೂಕ್ಲಿಯೊಟೈಡ್ ಅಣುವಾಗುವುದು: P–S–B.

```
---- P – S – P – S – P – S – P – S – P – S ------
         |       |       |       |       |
         B       B       B       B       B
```

ಇಂತಹ ನೂರಾರು ಇಲ್ಲವೆ ಸಾವಿರಾರು ನ್ಯೂಕ್ಲಿಯೊಟೈಡ್‌ಗಳು ಒಂದಕ್ಕೊಂದು ಸೇರಿಕೊಂಡು ನ್ಯೂಕ್ಲಿಯಿಕ್ ಆಮ್ಲದ ದೈತ್ಯಾಣು ರೂಪುಗೊಳ್ಳುವುದರಿಂದ ನ್ಯೂಕ್ಲಿಯಿಕ್ ಆಮ್ಲವನ್ನು ಕೆಲವು ವೇಳೆ ಪಾಲಿನ್ಯೂಕ್ಲಿಯೊಟೈಡ್ ಎಂದು ಕರೆಯುವುದೂ ಉಂಟು.

ನ್ಯೂಕ್ಲಿಯೊಟೈಡ್‌ಗಳು, ಅಂದರೆ P–S–B ಗಳು, ಒಂದರೊಡನೊಂದು ಸೇರಿಕೊಳ್ಳುವಾಗಲೂ ಒಂದು ಕ್ರಮದಲ್ಲಿ ಸೇರಿಕೊಳ್ಳುವವು. ಸಾಲಿನಲ್ಲಿರುವ ಯಾವುದೇ ನ್ಯೂಕ್ಲಿಯೊಟೈಡ್ ತೆಗೆದುಕೊಂಡರೆ, ಅದರಲ್ಲಿರುವ ಫಾಸ್ಫಾರಿಕ್ ಆಮ್ಲ ಹಿಂದಿನದರ ಸಕ್ಕರೆಗೆ ತಗುಲಿಕೊಂಡಿರುವುದು, ಅದರ ಸಕ್ಕರೆ ಮುಂದಿನದರ ಫಾಸ್ಫಾರಿಕ್ ಆಮ್ಲಕ್ಕೆ ತಗುಲಿಕೊಂಡಿರುವುದು. ಪರಿಣಾಮವಾಗಿ, ನೈಟ್ರೋಜನ್ ಪ್ರತ್ಯಾಮ್ಲ ಸಾಲಿನಲ್ಲಿರುವುದಿಲ್ಲ; ಸಾಲಿನಲ್ಲಿರುವ ಸಕ್ಕರೆಗೆ ತಗುಲಿಕೊಂಡು ನೇತಾಡುವಂತೆ ಕಾಣುವುದು. ಹೀಗಾಗಿ ಒಟ್ಟು ನ್ಯೂಕ್ಲಿಯಿಕ್ ಆಮ್ಲ P ಮತ್ತು Sಗಳ ಒಂದು ಸರಪಣಿಯಾಗಿದ್ದು, ಅದರ ಉದ್ದಕ್ಕೂ B ಅಣುಗಳು Sಗಳಿಗೆ ತಗಲಿಕೊಂಡು ನೇತಾಡುತ್ತಿರುವುವು.

ನ್ಯೂಕ್ಲಿಯಿಕ್ ಆಮ್ಲಗಳ ರಚನೆಯಲ್ಲಿ ಪಾಲುಗೊಳ್ಳುವ ಫಾಸ್ಫಾರಿಕ್ ಆಮ್ಲದ ಎಲ್ಲ ಅಣುಗಳು ಒಂದೇ ಬಗೆಯವು. ಅದರಲ್ಲಿ ಎರಡು ಅಥವಾ ಮೂರು ಬಗೆ ಇಲ್ಲ. ಆದರೆ, ಸಕ್ಕರೆ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

250-7

ಎರಡು ಬಗೆಯವಿವೆ: ರೈಬೋಸ್ ಮತ್ತು ಡಿಆಕ್ಸಿರೈಬೋಸ್. ನ್ಯೂಕ್ಲೆಯಿಕ್ ಆಮ್ಲದ ಕೆಲವು ಅಣುಗಳಲ್ಲಿ ರೈಬೋಸ್ ಅಣುಗಳೇ ಇರುತ್ತವೆ. ಇನ್ನು ಕೆಲವದರಲ್ಲಿ ಡಿಆಕ್ಸಿರೈಬೋಸ್ ಅಣುಗಳೇ ಇರುತ್ತವೆ. ಮೊದಲನೆಯ ಬಗೆಯ ನ್ಯೂಕ್ಲೆಯಿಕ್ ಆಮ್ಲಕ್ಕೆ ರೈಬೊನ್ಯೂಕ್ಲೆಯಿಕ್ ಆಮ್ಲ ಎಂಬ ಹೆಸರು ಕೊಟ್ಟು ಹ್ರಸ್ವವಾಗಿ ಇದನ್ನು RNAಎಂದು ಕರೆಯುತ್ತಾರೆ. ಎರಡನೆ ಬಗೆಯ ನ್ಯೂಕ್ಲೆಯಿಕ್ ಆಮ್ಲಕ್ಕೆ ಡಿಆಕ್ಸಿರೈಬೋನ್ಯೂಕ್ಲೆಯಿಕ್ ಇಮ್ಲ ಎಂಬ ಹೆಸರು ಕೊಟ್ಟು ಅದನ್ನು ಹ್ರಸ್ವವಾಗಿ DNA ಎಂದು ಕರೆಯುತ್ತಾರೆ. ಈ ಎರಡು ಬಗೆಯ ನ್ಯೂಕ್ಲೆಯಿಕ್ ಆಮ್ಲಗಳಲ್ಲಿ ಕಾಣಬರುವ ನೈಟ್ರೋಜನ್ ಪ್ರತ್ಯಾಮ್ಲಗಳೂ ಸ್ವಲ್ಪ ಮಟ್ಟಿಗೆ ಬೇರೆ ಬೇರೆ. RNA ರಚನೆಯಲ್ಲಿ ನಾಲ್ಕು ಬಗೆಯ ನೈಟ್ರೋಜನ್ ಪ್ರತ್ಯಾಮ್ಲಗಳು ಪಾಲುಗೊಳ್ಳುತ್ತವೆ: ಅಡೆನೀನ್ (A), ಗ್ವಾನೀನ್ (G), ಸೈಟೋಸೀನ್ (C) ಮತ್ತು ಯೂರಸಿಲ್ (U). RNA ರಚನೆಯಲ್ಲಿ ಪಾಲುಗೊಳ್ಳುವ ನೈಟ್ರೋಜನ್ ಪ್ರತ್ಯಾಮ್ಲಗಳೂ ನಾಲ್ಕೇ. ಅವುಗಳಲ್ಲಿ ಮೂರು RNA ಯಲ್ಲಿ ಕಂಡುಬರುವ A, G ಮತ್ತು Cಗಳೇ. ಆದರೆ, ಯೂರಸಿಲ್ DNAಯಲ್ಲಿರುವುದಿಲ್ಲ. ಅದರ ಬದಲು ಥೈಮೀನ್ (T) ಎಂಬ ಬೇರೊಂದು ಪ್ರತ್ಯಾಮ್ಲವಿರುತ್ತದೆ.

ಅತ್ಯಂತ ಕೆಳಮಟ್ಟದ ಕೆಲವೇ ಕೆಲವು ಜೀವಿಗಳನ್ನು ಬಿಟ್ಟರೆ ಇತರ ಎಲ್ಲ ಜೀವಗಳಲ್ಲಿಯೂ ಆನುವಂಶಿಕ ಮಾಹಿತಿ ಇರುವುದು DNA ರೂಪದಲ್ಲಿ. ಕ್ರೋಮೋಸೋಮುಗಳ ಉದ್ದಕ್ಕೂ ಅಳವಡಿಸಿಕೊಂಡಿರುವ ಜೀನ್‌ಗಳು DNA ಅಣುಗಳು. ಆದುದರಿಂದ DNA ಅಣುವಿನ ರಚನೆಯನ್ನು ಈಗ ಗಣನೆಗೆ ತೆಗೆದುಕೊಳ್ಳೋಣ. ಈಗಾಗಲೇ ವಿವರಿಸಿರುವಂತೆ DNA ಅಣುವಿನಲ್ಲಿ ಫಾಸ್ಫಾರಿಕ್ ಆಮ್ಲ (P) ಮತ್ತು ಡಿಆಕ್ಸಿರೈಬೋಸ್ (S) ಅಣುಗಳು ಒಂದಾದ ಮೇಲೊಂದರಂತೆ ಬರುವ ಉದ್ದವಾದ ಸರಪಣಿ ಇದ್ದು, ಅದರಲ್ಲಿನ Sಗಳಿಗೆ A, G, C ಮತ್ತು Tಗಳು ತಗಲಿಕೊಂಡು ತೂಗಾಡುತ್ತಿರುವುವು ಎಂದಿಟ್ಟುಕೊಳ್ಳಬಹುದು. ಇಲ್ಲಿ ಬರುವ A, G, C ಮತ್ತು Tಗಳ ಅನುಕ್ರಮ ಒಂದೊಂದು DNA ಅಣುವಿನಲ್ಲಿ ಒಂದೊಂದು ರೀತಿ ಇರಬಹುದು. ಒಟ್ಟು ಅಣುವಿನಲ್ಲಿ ಸಾವಿರಾರು ನ್ಯೂಕ್ಲಿಯೊಟೈಡುಗಳಿರುವುದರಿಂದ, ಅವುಗಳ ಅನುಕ್ರಮ ಬೇರೆ ಇರುವ ಕೋಟ್ಯಂತರ ಅಣುಗಳು ಸಾಧ್ಯ. ಅಂತಹ ಯಾವುದೇ ಅಣುವಿನಲ್ಲಿರುವ A, G, C, T ಗಳ ಅನುಕ್ರಮವೇ ಸಂಕೇತಭಾಷೆಯಲ್ಲಿರುವ ಆನುವಂಶಿಕ ಮಾಹಿತಿ.

```
– P – S – P – S – P – S – P – S – P – S – P – S – P – S –
      |       |       |       |       |       |       |
      A       T       G       T       C       A       A
```

ಈಗ ಎರಡು ಪ್ರಶ್ನೆಗಳು ಸಹಜವಾಗಿ ಏಳುವುವು. ದೊಡ್ಡ ಜೀವಿಯೊಂದರ ಪ್ರತಿಯೊಂದು ಜೀವಕೋಶದ ನ್ಯೂಕ್ಲಿಯಸ್ಸಿನಲ್ಲಿಯೂ ನಿರ್ದಿಷ್ಟ ಜೀನಿನ ಯಥಾವತ್ ನಕಲು ಇರುವುದು ನಿಜವಾದರೆ, ಪ್ರತಿಯೊಂದು ಸಲ ಕೋಶ ವಿದಳನವಾಗುವಾಗಲೂ ಅದರಲ್ಲಿರುವ ಒಂದೊಂದು ಜೀನೂ ತನ್ನ ಕರಾರುವಾಕ್ಕಾದ ನಕಲನ್ನು ತಯಾರಿಸಿ ಅದನ್ನು ಒಂದು ಜನ್ಯಕೋಶಕ್ಕೆ ಕಳಿಸಿ, ತಾನು ಇನ್ನೊಂದು ಜನ್ಯಕೋಶಕ್ಕೆ ಹೋಗುವುದು ಎಂದಾಯಿತು. ಪ್ರಾಯಶಃ ಕ್ರೋಮೋಸೋಮುಗಳು ಸೀಳಿಕೊಂಡು ಎರಡಾಗುವಾಗ ನಡೆಯುವ ಕ್ರಿಯೆ ಇದೇ ಇರಬಹುದು. ಜೀನು ತನ್ನ ಕರಾರುವಾಕ್ಕಾದ ನಕಲನ್ನು ತಯಾರಿಸುವುದು ಹೇಗೆ? ಎರಡನೆಯ ಪ್ರಶ್ನೆ ಎಂದರೆ, DNAಯ ಈ ರಚನೆಗೂ ಅದು ಉತ್ಪತ್ತಿ ಮಾಡುವ ಪ್ರೋಟೀನಿನ ರಚನೆಗೂ ಇರುವ ಸಂಬಂಧವೇನು?

DNA ಅಣು ಎಂಬುದು, P ಮತ್ತು S

ಗಳಿಂದ ರಚಿಸಿರುವ ಮತ್ತು A,G,C ಮತ್ತು T ಗಳನ್ನು ತೂಗುಹಾಕಿರುವ ಒಂದು ಸರಪಣಿ ಎಂದು ಹೇಳಲಾಗಿದೆಯಷ್ಟೆ? ವಾಸ್ತವವಾಗಿ ಅದು ಅಂತಹ ಸರಪಣಿಯು ಎರಡು ಎಳೆಗಳ ಜೋಡಿ. ಜೋಡಿಯಲ್ಲಿರುವ ಎಳೆಗಳು ಒಂದಕ್ಕೊಂದು ಸಂಬಂಧವಿಲ್ಲದ ಸ್ವತಂತ್ರ ಎಳೆಗಳಲ್ಲ. ಎರಡು ಎಳೆಗಳೂ ಜೋಡಿಗೂಡುವಾಗ ಒಂದರ ಮೇಲಿನ Aಗೆ ಅಭಿಮುಖವಾಗಿ ಇನ್ನೊಂದರ T ಇರುವುದು; Gಗೆ ಅಭಿಮುಖವಾಗಿ C ಇರುವುದು.


```
-P-S-P-S-P-S-P-S-P-S-P-S-
   |   |   |   |   |   |
   A   T   T   G   C   T
   :   :   :   :   :   :
   T   A   A   C   G   A
   |   |   |   |   |   |
-P-S-P-S-P-S-P-S-P-S-P-S-
```

ಆದುದರಿಂದ ಒಂದು ಎಳೆಯ ಮೇಲಿನ A, G, C, Tಗಳ ಅನುಕ್ರಮ ಇನ್ನೊಂದು ಎಳೆಯ ಮೇಲಿನ A, G, C, Tಗಳ ಅನುಕ್ರಮವನ್ನು ಅವಲಂಬಿಸಿದೆ. ಎರಡು ಎಳೆಗಳೂ ಪರಸ್ಪರ ಪೂರಕ ಎಳೆಗಳು. DNA ಅಣುವಿನ ಈ ಚಿತ್ರ ಒಂದು ಏಣಿಯನ್ನು ನೆನಪಿಗೆ ತರುತ್ತದೆಯಲ್ಲವೆ? ಈ ಏಣಿಯ ಒಂದು ತುದಿಯನ್ನು ಭದ್ರವಾಗಿ ಹಿಡಿದುಕೊಂಡು ಇನ್ನೊಂದು ತುದಿಯನ್ನು ತಿರುಚಿದರೆ ಏನಾಗುವುದು? P ಮತ್ತು Sಗಳಿಂದ ರಚಿತವಾಗಿರುವ ಎರಡು ದಂಡಗಳಲ್ಲಿ ಒಂದೊಂದು ತಿರುಚಿಕೊಂಡು, ಸೀಸೆಯ ಕಾರ್ಕ್ ತೆಗೆಯಲು ಬಳಸುವ ಸ್ಕ್ರೂ ಆಕಾರವನ್ನು ತಾಳುವವು. ಈ ಆಕೃತಿಗೆ ಹೆಲಿಕ್ಸ್ ಎಂದು ಹೆಸರು. A T ಅಥವ G Cಗಳಿಂದ ರಚಿತವಾಗಿರುವ ಜತೆ ಮೆಟ್ಟಿಲುಗಳು ಜೋಡಿಯಾಗಿರುವ ಹೆಲಿಕ್ಸ್‌ಗಳೆರಡನ್ನೂ ಭದ್ರವಾಗಿ ಬಂಧಿಸಿರುವುವು.

DNA ಅಣು ತನ್ನ ಸಹಜ ಸ್ಥಿತಿಯಲ್ಲಿ ಹೀಗೆ ಜೋಡಿ ಹೆಲಿಕ್ಸ್ ಆಕಾರದಲ್ಲಿರುವುದೆಂದೂ ಆ ಎರಡು ಹೆಲಿಕ್ಸ್‌ಗಳನ್ನು ಬಂಧಿಸುವ ಪ್ರತ್ಯಾಮ್ಲಗಳು ಹೇಗೆಂದರೆ ಹಾಗೆ ಜೊತೆಗೂಡದೆ, ಸದಾ Aಯು Tಯೊಡನೆ ಮತ್ತು Gಯು Cಯೊಡನೆ ಜೊತೆಗೂಡಿರುವುವೆಂದು ಮೊತ್ತಮೊದಲು ಕಂಡುಹಿಡಿದವರು ಬ್ರಿಟನ್ನಿನ ಎಫ್. ಎಚ್. ಸಿ. ಕ್ರಿಕ್ ಮತ್ತು ಅಮೇರಿಕದ ಜೆ. ಡಿ. ವಾಟ್ಸನ್. ಡಾರ್ವಿನ್ನನ ವಿಕಾಸವಾದದ ತರುವಾಯ ಜೀವವಿಜ್ಞಾನದಲ್ಲಿ ಆದ ಅತ್ಯಂತ ದೊಡ್ಡ ಕ್ರಾಂತಿ ಎಂದರೆ, ವಾಟ್ಸನ್ ಮತ್ತು ಕ್ರಿಕ್ ಅವರ ಈ ಆವಿಷ್ಕಾರ ಎಂಬುದು ಅನೇಕ ವಿಜ್ಞಾನಿಗಳ ಅಭಿಪ್ರಾಯ. ಏಕೆಂದರೆ, ಆನುವಂಶಿಕ ಸಂಕೇತಧಾರೀ ಅಣು ತನ್ನ ಕರಾರುವಾಕ್ ನಕಲುಗಳನ್ನು ಉತ್ಪತ್ತಿ ಮಾಡಿ ದೇಹದ ಎಲ್ಲ ಜೀವಕೋಶಗಳಿಗೂ ಆ ನಕಲುಗಳನ್ನು ಹಂಚುವುದು ಹೇಗೆ ಎಂಬ ಮೂಲಭೂತ ಪ್ರಶ್ನೆಗೆ ಇದು ಸಮರ್ಪಕ ಉತ್ತರವನ್ನು ಒದಗಿಸುತ್ತದೆ. ಅದು ಹೇಗೆಂಬುದನ್ನು ನೋಡೋಣ.

ಕೋಶವಿದಳನಕ್ಕೆ ಪೂರ್ವಭಾವಿಯಾಗಿ ಕ್ರೋಮೋಸೋಮುಗಳು ಸೀಳಿ ಎರಡಾಗುವಾಗ ಬಹುಶಃ ಆಗುವುದೇನೆಂದರೆ, DNA ಅಣುವಿನ ಜೋಡಿ ಎಳೆಗಳು ಮೊದಲು ಬೇರೆಬೇರೆಯಾಗುತ್ತವೆ. ಕೋಶದ್ರವದಲ್ಲಿ ದೊರಕುವ ಫಾಸ್ಫಾರಿಕಾಮ್ಲ, ಡಿಆಕ್ಸಿರೈಬೋಸ್ ಮತ್ತು A, T, G, C ಪ್ರತ್ಯಾಮ್ಲಗಳ ಅಣುಗಳು ಈ ಎರಡು ಬಿಡಿ ಎಳೆಗಳನ್ನೇ ಎರಕದ ಅಚ್ಚುಗಳಂತೆ ಉಪಯೋಗಿಸಿಕೊಂಡು ಅವುಗಳ ಮೇಲೆ ಪೂರಕ ಎಳೆಗಳನ್ನು ರೂಪಿಸಿಕೊಳ್ಳುತ್ತವೆ. ಹಾಗೆ ಮಾಡುವಾಗ ಎಂದಿನಂತೆ Aಗಳು Tಗಳನ್ನು, Tಗಳು Aಗಳನ್ನು, Gಗಳು Cಗಳನ್ನು ಹಾಗೂ Cಗಳು Gಗಳನ್ನು ಆಕರ್ಷಿಸುವುದರಿಂದ,

ಜೋಡಿಯಿಂದ ಬಿಡಿಸಿಕೊಂಡ ಎರಡು ಎಳೆಗಳೂ ತಮ್ಮ ತಮ್ಮ ಪೂರಕ ಎಳೆಗಳನ್ನು ಕರಾರುವಾಕ್ಕಾಗಿ ನಿರ್ಮಿಸಿಕೊಳ್ಳುವುವು. ಪರಿಣಾಮವಾಗಿ ಒಂದರಿಂದೊಂದು ಭಿನ್ನವಲ್ಲದ ಎರಡು ಎಳೆ ಜೋಡಿಗಳು ರೂಪುಗೊಳ್ಳುವುವು.



(i) ಎಳೆ ಜೋಡಿ

(ii) ಬೇರ್ಪಟ್ಟು, ಅನಂತರ

(iii) ಎರಡು ಎಳೆ ಜೋಡಿಗಳಾಗಿವೆ

ಭೀಮ ಜರಾಸಂಧನನ್ನು ಸೀಳಿ ಬಿಸುಟಾಗ ಎರಡು ಸೀಳುಗಳೂ ಸೇರಿಕೊಂಡು ಜರಾಸಂಧ ಪುನಃ ಎದ್ದು ನಿಲ್ಲುತ್ತಿದ್ದ ಎಂಬ ಕತೆ ಉಂಟಷ್ಟೆ? ಹಾಗೆ ನಡೆಯುವಾಗ ಜರಾಸಂಧನ ಎಡಪಕ್ಕದ ಸೀಳು ಹೊಸದೊಂದು ಬಲ ಸೀಳನ್ನು ನಿರ್ಮಿಸಿಕೊಂಡು ಅದರೊಡನೆ ಸೇರಿಕೊಂಡರೆ ಇಬ್ಬರು ಜರಾಸಂಧರು ಎದ್ದು ನಿಲ್ಲುವುದಿಲ್ಲವೇ? ಇದು ನಡೆಯುವುದು ಅದೇ ರೀತಿ. ಜೀನ್‌ಗಳ ಪ್ರತಿಕೃತಿಗಳು ಸೃಷ್ಟಿಯಾಗುವ ನಿಗೂಢ ಸಮಸ್ಯೆಗೆ ಕೇವಲ ನೈಸರ್ಗಿಕ ಕ್ರಿಯೆಗಳ ಆಧಾರದ ಮೇಲೆ ತೃಪ್ತಿಕರವಾದ ಉತ್ತರದನ್ನು ನೀಡುವುದು ಇದರಿಂದ ಸಾಧ್ಯವಾಯಿತು. ಈ ಮೊದಲು ಎತ್ತಿದ ಎರಡು ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರ ದೊರೆತಂತಾಯಿತು. ಎರಡನೆಯ ಪ್ರಶ್ನೆ, DNA ರಚನೆಗೂ ಪ್ರೋಟೀನ್ ರಚನೆಗೂ ಇರುವ ಸಂಬಂಧವನ್ನು ಕುರಿತದ್ದು.

ಪ್ರೋಟೀನುಗಳ ರಚನೆ

ಪ್ರೋಟೀನುಗಳೂ ದೈತ್ಯಾಣುಗಳೇ. ಅಲ್ಲದೆ, ನ್ಯೂಕ್ಲೆಯಿಕ್ ಆಮ್ಲದ ಅಣುಗಳಲ್ಲಿ ಹೇಗೋ ಹಾಗೆ, ಪ್ರೋಟೀನ್ ಅಣುಗಳ ರಚನೆಯಲ್ಲಿಯೂ ಒಂದು ಕ್ರಮ ಇದೆ. ಅದರಲ್ಲಿಯೂ ಒಂದು ನಿರ್ದಿಷ್ಟ ಬಗೆಯ ಘಟಕ ಅಣುವಿನುದ್ದಕ್ಕೂ ಸಾವಿರಾರು ಬಾರಿ ಪುನಃ ಪುನಃ ಕಾಣಿಸಿಕೊಳ್ಳುತ್ತದೆ. ಈ ಘಟಕಗಳನ್ನು ರಸಾಯನ ವಿಜ್ಞಾನಿಗಳು ಅಮೈನೋ ಆಮ್ಲಗಳೆಂದು ಕರೆಯುತ್ತಾರೆ. ಗ್ಲೈಸೀನ್, ಅಲೆನೀನ್ ಲೈಸೀನ್, ಟ್ರಿಪ್ಟೊಫೇನ್ ಮುಂತಾದ ಹೆಸರುಗಳಿರುವ ಸುಮಾರು ಇಪ್ಪತ್ತು ಅಮೈನೊ ಆಮ್ಲಗಳು ಬೇರೆ ಬೇರೆ ಅನುಕ್ರಮದಲ್ಲಿ ಪೋಣಿಸಿಕೊಂಡು ಬೇರೆ ಬೇರೆ ಪ್ರೋಟೀನುಗಳಾಗುತ್ತವೆ. DNA ಯಲ್ಲಿ A, T, G ಮತ್ತು Cಗಳು ಬೇರೆ ಬೇರೆ ಅನುಕ್ರಮದಲ್ಲಿ ಮತ್ತು ಸಾವಿರಗಟ್ಟಲೆ ಸಂಖ್ಯೆಯಲ್ಲಿ ಜೋಡಿಸಿಕೊಳ್ಳುವುದರಿಂದ ಹೇಗೆ ಪರಸ್ಪರ ಭಿನ್ನವಾದ ಕೋಟ್ಯಂತರ DNA ಅಣುಗಳು ರೂಪುಗೊಳ್ಳುವುದು ಸಾಧ್ಯವೋ, ಹಾಗೆಯೇ ಈ ಇಪ್ಪತ್ತು ಬಗೆಯ ಅಮೈನೊ ಆಮ್ಲಗಳು (A_1, A_2, A_3, ……A_{20} ಎಂದು ಅವುಗಳನ್ನು ಕರೆಯಬಹುದು) ಬೇರೆ ಬೇರೆ ಅನುಕ್ರಮದಲ್ಲಿ ಮತ್ತು ಸಾವಿರಗಟ್ಟಲೆ ಸಂಖ್ಯೆಯಲ್ಲಿ ಜೋಡಿಸಿಕೊಳ್ಳಬಲ್ಲವಾದುದರಿಂದ, ಪರಸ್ಪರ ಭಿನ್ನವಾದ ಕೋಟ್ಯಂತರ ಪ್ರೋಟೀನ್


ಅಣುಗಳು ರೂಪುಗೊಳ್ಳುವುದು ಸಾಧ್ಯ.

ಪ್ರತಿಯೊಂದು ಜೀನೂ, ಅಂದರೆ DNA ಅಣುವೂ, ತನ್ನ ವಿಶಿಷ್ಟ ರಚನೆಯನ್ನವಲಂಬಿಸಿದಂತೆ, ಒಂದು ನಿರ್ದಿಷ್ಟ ರಚನೆಯ ಪ್ರೋಟೀನನ್ನು ಉತ್ಪತ್ತಿ ಮಾಡಿ, ಅದನ್ನು ಕಾರ್ಯರಂಗಕ್ಕಿಳಿಸಿ, ಆ ಮೂಲಕ ಜೀವಿಯ ಒಂದು ನಿರ್ದಿಷ್ಟ ಆನುವಂಶಿಕ ಲಕ್ಷಣಕ್ಕೆ ಕಾರಣವಾಗುವುದು ಎಂಬ ನಮ್ಮ ಈ ಹಿಂದಿನ ತಿಳಿವಳಿಕೆಯನ್ನು ಈಗ ಪುನರಾವಲೋಕನ ಮಾಡಿದರೆ, ಒಂದು ತೀರ್ಮಾನಕ್ಕೆ ಬರುವುದು ಅನಿವಾರ್ಯ: DNA ಅಣುವಿನ ಉದ್ದಕ್ಕೂ ಇರುವ A, T, G, Cಗಳ ಅನುಕ್ರಮಕ್ಕೂ ಆ DNA ಅಣು ಉತ್ಪಾದಿಸುವ ಪ್ರೋಟೀನಿನಲ್ಲಿರುವ A_1, A_2, A_3, ಇತ್ಯಾದಿಗಳ ಅನುಕ್ರಮಕ್ಕೂ ನೇರ ಸಂಬಂಧವಿರುವುದು ಸ್ಪಷ್ಟ.

ಪ್ರೋಟೀನ್ ಉತ್ಪಾದನೆ


ಜೀನುಗಳೆಂದು ನಾವು ಕರೆಯುವ DNA ಅಣುಗಳು ಇರುವುದು, ನ್ಯೂಕ್ಲಿಯಸ್‌ನಲ್ಲಿರುವ ಕ್ರೋಮೋಸೋಮುಗಳಲ್ಲಿ–ಆನುವಂಶಿಕ ಮಾಹಿತಿಯ ಸಂಗ್ರಹಾಲಯದಲ್ಲಿ. ಪ್ರೋಟೀನುಗಳು ನಿಜವಾಗಿಯೂ ಉತ್ಪತ್ತಿಯಾಗುವುದು ನ್ಯೂಕ್ಲಿಯಸ್ಸಿನ ಹೊರಗಡೆ ಇರುವ ಕೋಶದ್ರವದಲ್ಲಿ. ಈ ಅಂಶವನ್ನು ವಿಜ್ಞಾನಿಗಳು ಖಚಿತಪಡಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ; ನ್ಯೂಕ್ಲಿಯಸ್‌ನಂತೆಯೇ ಕೋಶದ್ರವದಲ್ಲಿ ತೇಲಾಡುತ್ತಿರುವ ರೈಬೋಸೋಮ್ ಎಂಬ ಇನ್ನೊಂದು ಕಾಯದ ಮೇಲ್ಮೈ ಮೇಲೆ ಈ ಪ್ರೋಟೀನ್‌ಗಳ ತಯಾರಿಕೆ ನಡೆಯುವುದೆಂಬ ಅಂಶವನ್ನೂ ಅವರು ಖಚಿತವಾಗಿ ತೋರಿಸಿದ್ದಾರೆ. ಅಂದ ಮೇಲೆ, ಸೂಕ್ತ ಸಮಯದಲ್ಲಿ ನಿರ್ದಿಷ್ಟ ಜೀನ್‌ನಲ್ಲಿರುವ ಮಾಹಿತಿಯನ್ನು ರೈಬೋಸೋಮ್‌ಗೆ ಹೊತ್ತು ತರುವ ಒಬ್ಬ ದೂತನಿರಬೇಕು. ಈ ಕರ್ತವ್ಯವನ್ನು ನಿರ್ವಹಿಸುವುದು ಒಂದು ಬಗೆಯ RNA ಎಂಬುದು ಈಗ ತಿಳಿದುಬಂದಿದೆ. ಈ RNAಗೆ ದೂತ RNA (messenger RNA) ಎಂದು ನಾಮಕರಣ ಮಾಡಿದ್ದಾರೆ. ದೂತ RNAಯು ಯಾವ ರೂಪದಲ್ಲಿ ಮಾಹಿತಿಯನ್ನು ಹೊತ್ತು ತರುವುದೆಂಬುದು ಈಗ ಗೊತ್ತಾಗಿದೆ.

DNA ಅಣು ತನ್ನ ನಕಲನ್ನು ತಯಾರಿಸುವುದಕ್ಕೆ ಪೂರ್ವಭಾವಿಯಾಗಿ ಅದರಲ್ಲಿ ಜೋಡಿಯಾಗಿರುವ ಎಳೆಗಳು ಪ್ರತ್ಯೇಕಗೊಂಡು, ಒಂದೊಂದು ಎಳೆಯೂ ಒಂದು ಎರಕದ ಅಚ್ಚಿನಂತೆ ಕೆಲಸ ಮಾಡಿ, ಅವು ತಮ್ಮ ತಮ್ಮ ಪೂರಕ DNA ಎಳೆಗಳನ್ನು ರೂಪಿಸಿಕೊಳ್ಳುವವಷ್ಟೆ? ಈ ಕ್ರಿಯೆಯನ್ನೇ ಸ್ವಲ್ಪ ಬದಲಾಯಿಸಿ ಅವು ಪ್ರೋಟೀನ್ ತಯಾರಿಕೆಗೆ ಬೇಕಾಗುವ ದೂತ RNAಯನ್ನು ತಯಾರು ಮಾಡಿ ರೈಬೋಸೋಮ್‌ಗೆ ಕಳಿಸಿಕೊಡುವುವು. ಇಲ್ಲಿ ಒಂದು ಅಂಶವನ್ನು ಮಾತ್ರ ಮರೆಯಬಾರದು; RNAಯಲ್ಲಿ T (ಥೈಮೀನ್) ಇರುವುದಿಲ್ಲ; ಅದರ ಬದಲು U (ಯೂರಸಿಲ್) ಇರುವುದು. ಆದುದರಿಂದ ಎರಕದ ಅಚ್ಚಿನಂತೆ ವರ್ತಿಸುವ DNA ಎಳೆಯ ಮೇಲೆ RNA ರೂಪುಗೊಳ್ಳುವಾಗ DNA ಎಳೆಯಲ್ಲಿನ Gಗೆ ಅಭಿಮುಖವಾಗಿ C, Cಗೆ ಅಭಿಮುಖವಾಗಿ G ಮತ್ತು Tಗೆ ಅಭಿಮುಖವಾಗಿ A ಬಂದು ಕೂಡುವುದೇನೋ ಸರಿ. ಆದರೆ, DNA ಎಳೆಯ Aಗೆ ಅಭಿಮುಖವಾಗಿ T ಬದಲು U ಬಂದು ಕೂಡುತ್ತದೆ. ಹೀಗಾಗಿ



DNA ಜೋಡಿ ಎಳೆ

ಪ್ರತ್ಯೇಕಗೊಂಡ ಎಳೆಗಳು



ಎರಡು ಎಳೆಗಳಲ್ಲಿ ಕೆಳಗಿನದರ
ಮೇಲೆ RNA
ರೂಪುಗೊಳ್ಳುವುದು.



ದೂತ RNA

DNA ಯಲ್ಲಿನ A, T, G ಮತ್ತು C ಗಳ ಅನುಕ್ರಮಕ್ಕೆ ಅನುರೂಪವಾದ A, U, G ಮತ್ತು C ಗಳ ಅನುಕ್ರಮವಿರುವ ದೂತ RNA ರೂಪುಗೊಂಡು, ರೈಬೋಸೋಮ್‌ಗೆ ಪ್ರಯಾಣ ಮಾಡಿ, ಅದರ ಮೇಲೆ ಹರಡಿಕೊಂಡು ಮಲಗುತ್ತದೆ. ಈಗ ಈ ದೂತ RNA ಒಂದು ಎರಕದ ಅಚ್ಚಿನಂತೆ ವರ್ತಿಸಿ, ಅದರ ಮೇಲೆ ಅದಕ್ಕೆ ಅನುರೂಪವಾದ ಪ್ರೋಟೀನ್ ರೂಪುಗೊಳ್ಳುವುದು.


ಆನುವಂಶಿಕ ಸಂಕೇತಭಾಷೆಯ ತಿರುಳು ಎನ್ನಬಹುದಾದ ಪ್ರಶ್ನೆ ಉದ್ಭವಿಸುವುದು ಇಲ್ಲಿ. ದೂತ RNAಯಲ್ಲಿರುವ A, U, G ಮತ್ತು C ಎಂಬ ಪ್ರತ್ಯಾಮ್ಲಗಳ ಅನುಕ್ರಮವೇ ಅದರ ಮೇಲೆ ರೂಪುಗೊಳ್ಳುವ ಪ್ರೊಟೀನ್ ಅಣುವಿನಲ್ಲಿನ ಅಮೈನೊ ಆಮ್ಲಗಳ ಅನುಕ್ರಮವನ್ನು ನಿರ್ಧರಿಸುವುದಾದರೆ, ಯಾವ ಪ್ರತ್ಯಾಮ್ಲಕ್ಕೆ ಅಭಿಮುಖವಾಗಿ ಯಾವ ಅಮೈನೊ ಆಮ್ಲ ಬಂದು ಕೂಡಿಕೊಳ್ಳುವುದು? ಪ್ರತ್ಯಾಮ್ಲಗಳು ಇರುವುದೇ ನಾಲ್ಕು ಬಗೆಯವು. ಅಮೈನೊ ಆಮ್ಲಗಳಾದರೋ ಇಪ್ಪತ್ತು ಬಗೆಯುವಿವೆ. ಇದೆಂತಹ ಸಂಕೇತ ಭಾಷೆ ಇದ್ದೀತು?

ಈ ಸಮಸ್ಯೆಗೆ ಪರಿಹಾರ ಸೂಚಿಸಿದವರು ಜಾರ್ಜ್ ಗೇಮೋವ್ ಎಂಬ ಭೌತ ವಿಜ್ಞಾನಿ. ಅವರ ವಾದಸರಣಿ ಅತ್ಯಂತ ಸರಳ. ಒಂದೊಂದು ಅಮೈನೊ ಆಮ್ಲಕ್ಕೆ ಒಂದೊಂದು ಪ್ರತ್ಯಾಮ್ಲ (A, G, C ಅಥವಾ T) ಸಂಕೇತವಾಗಿರುವುದು ಸಾಧ್ಯವಿಲ್ಲವಾದರೆ ಒಂದೊಂದು ಅಮೈನೊ ಆಮ್ಲಕ್ಕೂ AU, UG, GC, AC, UU ಮುಂತಾದ ಒಂದೊಂದು ಪ್ರತ್ಯಾಮ್ಲ ಜೋಡಿ ಸಂಕೇತವಾಗಿರಬಹುದೆ? ಇರುವ ನಾಲ್ಕು ಪ್ರತ್ಯಾಮ್ಲಗಳಲ್ಲಿ ಅಂತಹ ಎಷ್ಟು ಜೋಡಿಗಳಾಗಿರುತ್ತವೆ? ಲೆಕ್ಕ ಹಾಕಿ ನೋಡಿದರೆ ಹದಿನಾರು ಜೋಡಿಗಳಾಗುತ್ತವೆ. ಅದೂ ಸಾಲದು. ಏಕೆಂದರೆ, ಇಪ್ಪತ್ತು ಬೇರೆ ಬೇರೆ ಅಮೈನೊ ಆಮ್ಲಗಳಿವೆ. ಒಂದೊಂದು ಅಮೈನೋ ಆಮ್ಲಕ್ಕೂ AAA, AUA, AGC, UAC ಮುಂತಾದ ಒಂದೊಂದು ಪ್ರತ್ಯಾಮ್ಲ ತ್ರಿವಳಿ ಸಂಕೇತವಾಗಿರಬಹುದೆ? ಅಂತಹ ಎಷ್ಟು ತ್ರಿವಳಿಗಳು ಸಾಧ್ಯ? ಲೆಕ್ಕ ಹಾಕಿ ನೋಡಿದಾಗ ಅರವತ್ತನಾಲ್ಕು ತ್ರಿವಳಿ ಸಾಧ್ಯ ಎಂದು ಕಂಡುಬಂತು. ಇಪ್ಪತ್ತಕ್ಕಿಂತ ಬಹಳವೇ ಹೆಚ್ಚಾಯಿತಲ್ಲ? ಆದರೇನು? ಒಂದೊಂದು ಅಮೈನೊ ಆಮ್ಲಕ್ಕೂ ಒಂದೊಂದು ಪ್ರತ್ಯಾಮ್ಲ ತ್ರಿವಳಿ ಸಂಕೇತವಾಗಿರುವುದರ ಜೊತೆಗೆ ಕೆಲವು ಸಂದರ್ಭದಲ್ಲಿ ಎರಡು ಅಥವಾ ಮೂರು ತ್ರಿವಳಿಗಳು ಒಂದೇ ಅಮೈನೊ ಆಮ್ಲಕ್ಕೆ ಸಂಕೇತವಾಗಿರಬಹುದಲ್ಲವೆ? ವಾಸ್ತವ ಸ್ಥಿತಿ ನಿಜಕ್ಕೂ ಹೀಗೆಯೇ ಇರಬೇಕು ಎಂದು ಗೇಮೋವ್ ಸೂಚಿಸಿದರು. ಅಂದಿನಿಂದ ಈ ಸಂಕೇತ ಭಾಷೆಯ ರಹಸ್ಯವನ್ನು ಭೇದಿಸುವುದು ವಿಜ್ಞಾನಿಗಳನೇಕರ ಹೆಬ್ಬಯಕೆಯಾಗಿ ಪರಿಣಮಿಸಿತು. ಅದಕ್ಕಾಗಿ ತೀವ್ರ ಸ್ಪರ್ಧೆ ಪ್ರಾರಂಭವಾಯಿತು.

ಸಂಕೇತ ಭಾಷೆಯ ಮೊತ್ತ ಮೊದಲ ಅಕ್ಷರವನ್ನು ಕಂಡು ಹಿಡಿದವರು ನಿರೆನ್‌ಬರ್ಗ್ ಮತ್ತು ಮೆಥಿಯಾಸ್ ಎಂಬ ವಿಜ್ಞಾನಿಗಳು.

ಅವರು ಒಂದು ಜಾಣ್ಮೆಯ ಪ್ರಯೋಗವೊಂದನ್ನು ಯೋಜಿಸಿದರು. ಕೇವಲ ಯೂರಸಿಲ್ (U) ಮಾತ್ರವೇ ಇರುವ ಒಂದು RNA ತುಣುಕನ್ನು ಅವರು ಕೃತಕವಾಗಿ ತಯಾರಿಸಿದರು. ಅಂದರೆ, ಅದರಲ್ಲೆಲ್ಲಾ UUUUUU... ರೈಬೋಸೋಮ್‌ಗಳನ್ನೂ ಒಳಗೊಂಡಂತೆ ಕೋಶದ್ರವದಂಥ ಪರಿಸರವನ್ನೇ ಕೃತಕವಾಗಿ ನಿರ್ಮಿಸಿ, ಅದರಲ್ಲಿ ಈ ಕೃತಕ RNA ತುಣುಕುಗಳನ್ನೂ ಎಲ್ಲ ಬಗೆಯ ಅಮೈನೊ ಆಮ್ಲಗಳನ್ನೂ ಹಾಕಿ, ಅದರಲ್ಲಿ ಪ್ರೊಟೀನ್ ಉತ್ಪತ್ತಿಯಾಗುವುದೇ ಎಂದು ಪರೀಕ್ಷಿಸಿದರು. ಉತ್ಪತ್ತಿಯಾಯಿತು ! ಆ ಕೃತಕ ಪ್ರೊಟೀನ್ ತುಣುಕಿನಲ್ಲಿ ಫೀನೈಲ್ ಅಲೆನೀನ್ ಎಂಬ ಅಮೈನೊ ಆಮ್ಲದ ಅಣುಗಳೇ ಒಂದರೊಡನೊಂದು ಪೋಣಿಸಿಕೊಂಡಿದ್ದುವು. ಆದುದರಿಂದ ಫೀನೈಲ್ ಅಲೆನೀನ್ ಎಂಬ ಅಮೈನೋ ಆಮ್ಲಕ್ಕೆ ಸಂಕೇತ UUU ಎಂದು ತೀರ್ಮಾನಿಸಿದರು. ಅಂದರೆ, ರೈಬೋಸೋಮ್‌ಗಳ ಮೇಲೆ ಹರಡಿಕೊಂಡ ಈ RNA ಅಣುವಿನ ಮೇಲೆ ಒಂದೊಂದು, UUU ತ್ರಿವಳಿಯೂ ಒಂದೊಂದು ಫೀನೈಲ್ ಅಲೆನೀನ್ ಅಣುವನ್ನೇ ಆಕರ್ಷಿಸಿದುದರಿಂದ ಬರೀ ಆ ಅಣುಗಳೇ ಪೋಣಿಸಿಕೊಂಡು ಒಂದು ಪ್ರೋಟೀನ್ ತುಣುಕು ರೂಪುಗೊಂಡಿತೆಂಬುದು ಸಾರಾಂಶ.

ಅಲ್ಲಿಂದ ಮುಂದೆ ಬಗೆಬಗೆಯ ತಂತ್ರಗಳನ್ನುಪಯೋಗಿಸಿ ನಾನಾ ಬಗೆಯ ಪ್ರಯೋಗಗಳನ್ನು ಯೋಜಿಸಿ, ಎಲ್ಲ ಅರವತ್ತನಾಲ್ಕು ಪ್ರತ್ಯಾಮ್ಲ ತ್ರಿವಳಿಗಳ 'ಅರ್ಥ'ವನ್ನೂ ಹೊರಗೆಡಹಿದ್ದಾರೆ. ಇಂದು ಆನುವಂಶಿಕ ಸಂಕೇತ ಭಾಷೆ ತನ್ನ ರಹಸ್ಯವನ್ನು ಬಿಟ್ಟುಕೊಟ್ಟಿದೆ. ಆ ರಹಸ್ಯವನ್ನು ವಿಜ್ಞಾನಿಗಳು ಭೇದಿಸಿದುದು ಒಂದು ರೋಮಾಂಚಕಾರಿ ಸಾಹಸ ಕಥೆ. ಇದರಲ್ಲಿ ಪಾತ್ರವಹಿಸಿದ ಅನೇಕಾನೇಕ ವಿಜ್ಞಾನಿಗಳಲ್ಲಿ ಅತ್ಯಂತ ಪ್ರಮುಖರು ಹರಗೋಬಿಂದ ಖೋರಾನಾ ಅವರು. ಅವರಿಗೆ ನೊಬೆಲ್ ಬಹುಮಾನವನ್ನು ನೀಡಿದುದು ಇದಕ್ಕಾಗಿಯೇ. ✡



ಮನಸ್ಸಿನ ನಾಟಕ

ನಾಟಕ ಪ್ರಾರಂಭವಾಗಿತ್ತು. ಆದರೆ, ಒಬ್ಬನೇ ಒಬ್ಬ ಪ್ರೇಕ್ಷಕ ಒಂದು ಮೂಲೆಯಲ್ಲಿ ಕುಳಿತು ನಾಟಕ ನೋಡುತ್ತಿದ್ದ.

ಸ್ವಲ್ಪ ವೇಳೆಯ ನಂತರ ೮-೧೦ ವರ್ಷ ವಯಸ್ಸಿನ ಬಾಲಕನೊಬ್ಬನ್ನು ನೋಡಲು ಒಳಗೆ ಬಂದನು. ನಾಟಕಗೃಹ ಪೂರ್ಣ ಖಾಲಿಯಾಗಿದ್ದುದರಿಂದ ಮುಂದಿನ ಸಾಲಿನ ಒಂದು ಕುರ್ಚಿಯಲ್ಲಿ ಕುಳಿತ. ಸ್ವಲ್ಪ ವೇಳೆಯಲ್ಲಿ ಬೇಸರವಾಗಿ ಮತ್ತೊಂದು ಕಡೆಗೆ ಹೋಗಿ ಕುಳಿತನು, ಅಲ್ಲಿಯೂ ಬೇಸರವೆನಿಸಿತು. ಹೀಗೆ ನಾಲ್ಕೈದು ಸ್ಥಳಗಳಲ್ಲಿ ಕುಳಿತು ಬದಲಾಯಿಸಿದರೂ ಅವನ ಮನಸ್ಸಿಗೆ ಸಮಾಧಾನವೇ ಆಗಲಿಲ್ಲ.


ಕೊನೆಗೆ, ಅಲ್ಲಿ ಕುಳಿತ ಆ ಒಬ್ಬನೇ ಪ್ರೇಕ್ಷಕನ ಹಿಂದಿನ ಸ್ಥಳದಲ್ಲಿಯೇ ಕುಳಿತನು. ಸ್ವಲ್ಪ ಸಮಯದ ನಂತರ, "ಸಾರ್! ನಿಮ್ಮ ಟೊಪ್ಪಿಗೆಯನ್ನು ಸ್ವಲ್ಪ ತೆಗೆಯುತ್ತೀರಾ! ನನಗೆ ನಾಟಕ ಕಾಣಿಸುತ್ತಿಲ್ಲ" ಎಂದನಾ ಬಾಲಕ.


– ವಿನಾಯಕ ಕುಲಕರ್ಣಿ

ಪ್ಯುರಿಟಸ್

ಸಾಮಾನ್ಯ ನಳದ ನೀರಿನ ಕಲ್ಮಷಗಳನ್ನು ಸೋಸಿ, ಕುಡಿಯಲು 100% ನಿರಪಾಯಕರವಾಗುವಂತೆ ಹೇಗೆ ಮಾಡುತ್ತದೆಂದು ನೋಡಿರಿ

ನೀರಿನ ಮೂಲಕ ಹರಡುವ ವಾಂತಿಭೇದಿ,
ಟೈಫಾಯ್ಡ್, ಆಮಶಂಕೆ, ಜಠರದ ಮತ್ತು ಕರುಳಿನ
ಊತ ಇತ್ಯಾದಿ ವ್ಯಾಧಿಗಳು ಬರದಂತೆ ತಡೆಯಲು
ಇದಕ್ಕಿಂತ ಉತ್ತಮ ಉಪಾಯ ಇನ್ನೊಂದಿಲ್ಲ.







ನಿಮ್ಮವರ ಕ್ಷೇಮಕ್ಕಾಗಿ
ಮುಂಜಾಗ್ರತೆ ವಹಿಸಿ. ಇಂದೇ
ಪ್ಯುರಿಟಸ್ ಕೊಳ್ಳಿರಿ.

ಎಚ್ಚರಿಕೆ
ನಿಜವಾದ ಪ್ಯುರಿಟಸ್ ಫಿಲ್ಟರ್ ನಿಮಗೆ ಸಿಗುತ್ತದೆಂದು ಖಾತ್ರಿ ಮಾಡಿಕೊಳ್ಳಿರಿ. ಮೇಲಿನ ಅರೆಯ ಪ್ಯುರಿಟಸ್ ಲೇಬಲನ್ನು ಗಮನಿಸಿರಿ. ಕ್ಯಾಂಡಲ್‌ನ ಲೋಹಾಧಾರದ ಮೇಲೆ ಪ್ಯುರಿಟಸ್ ಹೆಸರು ಮತ್ತು ರಿಜಿಸ್ಟ್ರೇಷನ್ ನಂಬರ್ 196501 ಇರುವುದನ್ನು ನೋಡಿಕೊಳ್ಳಿರಿ.

ಬಲ್ಸಾರಾ
ಸುಖಮಯ ಜೀವನಕ್ಕೆ ಆಧುನಿಕ ಸಾಧನಗಳು
BALSARA

ವೃತ್ತಿಯಿಂದ ಗಣಿತಶಾಸ್ತ್ರಜ್ಞ
ಅವರು ನಮ್ಮ ಇತಿಹಾಸಕ್ಕೆ
ಹೊಸ ಅರ್ಥವಿತ್ತರು

ಪ್ರೊಫೆಸರ್ ಕೊಸಾಂಬಿ

ಆರ್. ಪೂರ್ಣಿಮಾ

ಚರಿತ್ರೆಯನ್ನು ಬರೆಯುವುದಕ್ಕಿಂತ ಅದನ್ನು ಬದಲಾಯಿಸುವುದೇ ಹೆಚ್ಚು ಮುಖ್ಯ ಎನ್ನುವ ಮಾತೇ ಪ್ರೊಫೆಸರ್ ಡಿ. ಡಿ. ಕೊಸಾಂಬಿಯವರು ಮಿಕ್ಕ ಇತಿಹಾಸಕಾರರಿಗಿಂತ ಹೇಗೆ ಭಿನ್ನರಾಗಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಭಾರತೀಯ ಚರಿತ್ರೆಯ ಬಗ್ಗೆ ವಸ್ತುವಾದಿ ವೈಜ್ಞಾನಿಕ ಚಿಂತನೆಯನ್ನು ನಡೆಸಿ, ಅದರ ಬಗ್ಗೆ ಗ್ರಂಥಗಳನ್ನು ಬರೆದ ಹಿರಿಯ ಇತಿಹಾಸಕಾರರಲ್ಲಿ ಕೊಸಾಂಬಿಯವರು ಪ್ರಮುಖರು. ಚರಿತ್ರೆ ಎಂದರೆ ರಾಜರ ಸೋಲು-ಗೆಲವುಗಳ ರಮ್ಯ ಕಥೆಯೆಂಬ ಕಲ್ಪನೆಯೇ ಇನ್ನೂ ಅನೇಕ ಇತಿಹಾಸಕಾರರಲ್ಲಿ ಉಳಿದಿರುವಾಗ, "ಒಬ್ಬ ರಾಜನ ಹೆಸರನ್ನು ತಿಳಿದುಕೊಳ್ಳುವುದಕ್ಕಿಂತ ಮುಖ್ಯವಾದದ್ದು ಆತನ ಪ್ರಜೆಗಳ ಬಳಿ ನೇಗಿಲು ಇತ್ತೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವುದು" ಎಂದು ಕೊಸಾಂಬಿ ನಂಬಿದ್ದರು. ಈ ಗಣಿತಶಾಸ್ತ್ರಜ್ಞ— ಇತಿಹಾಸಕಾರ, ಭಾರತೀಯ ಚರಿತ್ರೆಯನ್ನು ಕುರಿತು ಅಧ್ಯಯನ ನಡೆಸುವುದಕ್ಕೆ ಹೊಸ ಮಾರ್ಗವನ್ನೇ ಹಾಕಿಕೊಟ್ಟರು. ಇದಕ್ಕಾಗಿ ಅವರನ್ನು ವೈಜ್ಞಾನಿಕ ಭಾರತೀಯ ಚರಿತ್ರೆಯ ಜನಕ ಎಂದು ಕರೆದು ಗೌರವಿಸಲಾಗಿದೆ. ಅವರ ವಸ್ತುವಾದಿ ದೃಷ್ಟಿಕೋನವನ್ನು ಒಪ್ಪದ ಸಂಶೋಧಕರು ವಿದ್ವಾಂಸರನೇಕರು, "ಅವರೊಬ್ಬ ಇತಿಹಾಸಕಾರರೇ ಅಲ್ಲ" ಎಂದು ಮೂಗು ಮುರಿಯುತ್ತಾರೆ. ಇತರರು ಏನೇ ಹೇಳಲಿ, ಭಾರತೀಯ ಚರಿತ್ರೆಯ ಮೂಲಗತಿಯನ್ನು ಸರಿಯಾಗಿ ಗ್ರಹಿಸಿದವರಲ್ಲಿ ಕೊಸಾಂಬಿಯವರು ಅಗ್ರಗಣ್ಯರು.

ದಾಮೋದರ ಧರ್ಮಾನಂದ ಕೊಸಾಂಬಿಯವರು ೧೯೦೭ರ ಜುಲೈ ೩೧ರಂದು ಗೋವೆಯ ಕೊಸ್ಬೆನ್‌ನಲ್ಲಿ ಜನಿಸಿದರು. ಅವರ ಮನೆತನವು ಶಿಷ್ಟತೆಗೆ ವಿದ್ವತ್ತಿಗೆ ಹೆಸರಾಗಿತ್ತು. ಅವರ ತಂದೆ ಧರ್ಮಾನಂದ ಕೊಸಾಂಬಿಯವರು ಬೌದ್ಧ ಧರ್ಮದ ಅಧಿಕೃತ ವಿದ್ವಾಂಸರಾಗಿದ್ದರು. ವಿದ್ವತ್ ವಾತಾವರಣದಲ್ಲಿ ಬೆಳೆದ ದಾಮೋದರ ಕೊಸಾಂಬಿಯವರಿಗೆ ಅಲ್ಲಿನ ಸಾಂಪ್ರದಾಯಿಕ ದೃಷ್ಟಿಕೋನ ಮೈಗೂಡಲಿಲ್ಲ. ಧರ್ಮಾನಂದರು ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಬೋಧಿಸಲು ತೆರಳಿದಾಗ ದಾಮೋದರ ಕೊಸಾಂಬಿಯವರು ಅಲ್ಲಿನ ಕೇಂಬ್ರಿಜ್ ಲ್ಯಾಟಿನ್ ಸ್ಕೂಲಿನಲ್ಲಿ ಓದಲು ಸೇರಿದರು. ನಂತರ ಹಾರ್ವರ್ಡ್ ವಿಶ್ವವಿದ್ಯಾಲಯದಿಂದ ಗಣಿತ, ಇತಿಹಾಸ ಮತ್ತು ಭಾಷೆಗಳು— ಈ ಅಪರೂಪ ಒಕ್ಕೂಟದ ವಿಷಯಗಳಲ್ಲಿ ಅವರು ಪದವೀಧರರಾದರು. ಭಾರತಕ್ಕೆ ಮರಳಿದ ನಂತರ ದಾಮೋದರ ಕೊಸಾಂಬಿಯವರು ಮೊದಲು ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ನಂತರ ಅಲಿಘಡ ಮುಸ್ಲಿಮ್ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡಿದರು. ಅನಂತರ ಪುಣೆಯ ಹೆಸರಾಂತ ಫರ್ಗ್ಯುಸನ್ ಕಾಲೇಜಿನಲ್ಲಿ ಗಣಿತಶಾಸ್ತ್ರದ ಪ್ರಾಧ್ಯಾಪಕರಾಗಿ ಕಲಿಸಿದರು. ಮುಂದೆ ಮುಂಬಯಿಯ ತಾತಾ ಮೂಲಭೂತ ಸಂಶೋ-

ಧನ ಸಂಸ್ಥೆಯಲ್ಲಿ ಗಣಿತ ವಿಭಾಗದ ಮುಖ್ಯಸ್ಥರಾಗಿ ನೇಮಕರಾದರು. ಅವರು ಬರೆದ ಇತಿಹಾಸದಲ್ಲಿ ಕಾಣಬರುವ ವೈಜ್ಞಾನಿಕ ನಿಖರತೆ ಅವರು ಕಲಿತ, ಬೋಧಿಸಿದ ಗಣಿತಶಾಸ್ತ್ರದ ಬಳುವಳಿಯಾಗಿದೆ ಎಂಬುದರಲ್ಲಿ ಸಂದೇಹವೇ ಇಲ್ಲ. ವಿಜ್ಞಾನ ಮತ್ತು ಇತಿಹಾಸಗಳೆರಡರಲ್ಲೂ ಪ್ರಾವೀಣ್ಯ ಪಡೆದಿದ್ದರೂ ಭಾರತದ ಬುದ್ಧಿಜೀವಿಗಳು ಅವರನ್ನು ಮುಖ್ಯವಾಗಿ ಸ್ಮರಿಸುವುದು ಅವರು ಇತಿಹಾಸಕ್ಕೆ ಕೊಟ್ಟ ಕಾಣಿಕೆಗಾಗಿಯೇ.

ಕೊಸಾಂಬಿಯವರ ಪ್ರತಿಭೆ ವಿಜ್ಞಾನ ಮತ್ತು ಇತಿಹಾಸಗಳೆರಡಕ್ಕೇ ಸೀಮಿತವಾಗಿಲ್ಲ. ಭರ್ತೃಹರಿಯ 'ಶತಕತ್ರಯ', ವಿದ್ಯಾಕರನ 'ಸುಭಾಷಿತ ರತ್ನಕೋಶ', ಪರಬಲನ 'ಚಿಂತಾಮಣಿ ಸಾರಣಿಕಾ', ಮುಂತಾದುವನ್ನು ಅವರು ಸಂಪಾದಿಸಿದ್ದಾರೆ. ಭರ್ತೃಹರಿಯ ನಿಖರವಾದ ವಿಮರ್ಶೆಯನ್ನು ನೀಡಿದ ಕೀರ್ತಿ ಅವರಿಗೆ ಸೇರುತ್ತದೆ. ಭೌತಶಾಸ್ತ್ರ, ಗಣಿತಶಾಸ್ತ್ರ, ಜ್ಯಾಮಿತಿ, ಸಾಮಾಜಿಕ ಸಮಸ್ಯೆಗಳು, ಮಾನವಶಾಸ್ತ್ರ, ಭಾಷಾವಿಜ್ಞಾನ ಇತಿಹಾಸ, ಸಾಹಿತ್ಯ, ಅರ್ಥಶಾಸ್ತ್ರ, ಸಮಾಜಶಾಸ್ತ್ರ, ತತ್ತ್ವಶಾಸ್ತ್ರ, ಪ್ರಾಚೀನ ಇತಿಹಾಸ ಹೀಗೆ ಹಲವಾರು ವಿಷಯಗಳ ಬಗ್ಗೆ ಸುಮಾರು ನೂರಾ ಇಪ್ಪತ್ತೇಳು ಲೇಖನಗಳನ್ನು ಅವರು ಬರೆದಿದ್ದಾರೆ. ಅವರ ವೈಜ್ಞಾನಿಕ ಬರಹಗಳು ದೇಶವಿದೇಶಗಳಲ್ಲಿ ಖ್ಯಾತಿ ಪಡೆದಿವೆ. ಅವರ ಮುಖ್ಯ ಗ್ರಂಥಗಳು ನಾಲ್ಕು: 1) An introduction to the study of Indian history (1956), 2) Exasperating essays: Exercise in the dialectial method (1957), 3) Myth and Reality: Studies in the formation of Indian culture (1962), 4) The culture and civilization of ancient India in historical out-line (1965).

ಭಾರತದ ವೈಭವಯುತ ಪ್ರಾಚೀನತೆಯ ಬಗ್ಗೆ ಎಲ್ಲಾ ಇತಿಹಾಸಕಾರರೂ ಅತಿಯಾಗಿ ಹೆಮ್ಮೆ ತಾಳುತ್ತಾರೆ, ಆದರೆ ಕೊಸಾಂಬಿಯವರು ಪ್ರಾಚೀನ ಭಾರತದ ಆರ್ಥಿಕ ಸ್ಥಿತಿಗತಿಗಳ ವಿವೇಚನೆಗೆ ತೊಡಗುತ್ತಾರೆ. "ಭಾರತದ ಯೋಜನೆಗಳ ಬಗ್ಗೆ ಮಾತನಾಡುವಷ್ಟೇ ಸುಲಭವಾಗಿ ಭಾರತದ ವೈಭವೋಪೇತ ಪ್ರಾಚೀನ ಕಾಲದ ಬಗ್ಗೆ, ವಾಸ್ತವಾಂಶಗಳನ್ನು ಗಮನಿಸದೆ ಮಾತನಾಡಲಾಗಿದೆ" ಎಂದವರು ಹೇಳುತ್ತಾರೆ. ಜಗತ್ತಿನ ಮಿಕ್ಕ ಎಲ್ಲ ಜನಾಂಗಗಳಂತೆಯೇ ಭಾರತೀಯರು ಕೂಡ ನಾಗರಿಕತೆಯನ್ನು ತಲುಪಲು ಅಸಂಖ್ಯಾತ ಕೋಟಲೆಗಳನ್ನು ಹಾದು ಬಂದಿದ್ದಾರೆ; ಜೀವಿತವನ್ನು ಸುಲಭ ಮಾಡಿಕೊಳ್ಳುವುದಕ್ಕೆ ಮುಂಚೆ ಅನೇಕ ಕಷ್ಟಕರವಾದ ಘಟ್ಟಗಳನ್ನು ತಲುಪಿದ್ದಾರೆ; ಉತ್ಪಾದನಾ ಸಾಧನಗಳನ್ನು ಎಲ್ಲರಂತೆಯೇ ಕಾಲಾನುಕ್ರಮದಲ್ಲಿ ಕಂಡುಕೊಂಡಿದ್ದಾರೆ; ಪ್ರಾಚೀನ ಶಿಲಾಯುಗದ ಮಾನವನು ನಲವತ್ತು ವರ್ಷಗಳಿಗಿಂತ ಹೆಚ್ಚಾಗಿ ಬದುಕುತ್ತಿರಲಿಲ್ಲವೆಂಬುದನ್ನು ಸಾವಿರಾರು ವರ್ಷಗಳ ಹಿಂದಿನ ಮೂಳೆಗಳು ಖಚಿತವಾಗಿ ತೋರಿಸುತ್ತವೆ. ಎಂದೆಲ್ಲ ವಿವರಿಸುತ್ತ ಕೊಸಾಂಬಿಯವರು ಪ್ರಾಚೀನ ವೈಭವದ ಬಗ್ಗೆ ಅಬ್ಸೆಷನ್ ಇರುವವರ ಕಣ್ತೆರೆಸಲು ಪ್ರಯತ್ನಿಸುತ್ತಾರೆ. ವೈಭವಪೂರ್ಣವಾಗಿದ್ದ ಸ್ವರ್ಣಯುಗವೊಂದನ್ನು ನಾವು ಮರೆತಿದ್ದೇವೆ ಎಂದು ಆಲಾಪ ಮಾಡುವವರಿಗೆ ಕೊಸಾಂಬಿ ಹೇಳುತ್ತಾರೆ: "ಸ್ವರ್ಣಯುಗ- ಅಂಥದೇನಾದರೂ ಇದ್ದರೆ, ಅದು ಭವಿಷ್ಯದಲ್ಲಿದೆ; ಹಿಂದೆ ಇರಲಿಲ್ಲ."

ಭಾರತದ ಪೌರಾಣಿಕ, ಐತಿಹಾಸಿಕ ಘಟನೆಗಳು, ವ್ಯಕ್ತಿಗಳ ಬಗ್ಗೆ ಕೊಸಾಂಬಿಯವರು ನೀಡಿರುವ ವಿಶ್ಲೇಷಣೆಗಳು ತೀರ ಹೊಸದಾಗಿ ನಿಲ್ಲುತ್ತವೆ. ಯದುಕುಲ ನಾಯಕ ಶ್ರೀಕೃಷ್ಣ, ಭಗವದ್ಗೀತೆ, ಬೌದ್ಧ ಧರ್ಮ ಇತ್ಯಾದಿ ವಿಷಯಗಳ ಬಗ್ಗೆ ಅವರು ನಡೆಸಿರುವ ಅಧ್ಯಯನ ತುಂಬ ಮೌಲಿಕವಾಗಿವೆ. ನಾಲ್ಕು ವರ್ಣಾಶ್ರಮಗಳನ್ನು ನಾನು ಸೃಷ್ಟಿಸಿದ್ದೇನೆ ಎಂದು ಹೇಳುವ ಕೃಷ್ಣನ ಗೀತೋಪದೇಶವನ್ನು, ಆಳುವ ವರ್ಗದ ಕೃಪೆಗೆ ಜೀವಿಸುತ್ತಿದ್ದ ಬ್ರಾಹ್ಮಣ ವರ್ಗವು ತನ್ನ ತಾತ್ತ್ವಿಕ ನಿಲುವನ್ನು ಸ್ಥಾಪಿಸುವ ಸಲುವಾಗಿ ಮಹಾಭಾರತದಲ್ಲಿ ಸೇರಿಸಿದೆ; ಆದರೆ ಮಹಾಭಾರತದಲ್ಲಿ ಕಾಣಬರುವಂತೆ ಕೃಷ್ಣನಿಗೆ ಯಾವುದೇ ನೈತಿಕ ತತ್ತ್ವವನ್ನು ಹೇಳಲೂ

[illegible] ಭಕ್ತಿತತ್ತ್ವವು ಕೂಡ ಊಳಿಗ ಮಾನ್ಯತೆಯು [illegible], ಇದನ್ನು ಭಗವದ್ಗೀತೆಯು ಮೂಲಕ ಸ್ಥಾಪಿಸಲಾಯಿತು ಎಂದು ಕೊಸಾಂಬಿ ಗುರುತಿಸಿದ್ದಾರೆ. ಭಾರತದ ಮಿಕ್ಕ ಎಲ್ಲ 'ಆಧ್ಯಾತ್ಮಿಕ' ಸರಕಿನಂತೆ (ಗೀತೆಯು [illegible] ಕನಿಷ್ಠ ಭೌತಿಕ ಅಗತ್ಯಗಳನ್ನೂ ಒದಗಿಸಲು [illegible] ಹುಟ್ಟಿಕೊಂಡಿದೆ ಎಂಬ ವಿವರಣೆ ಕೊಸಾಂಬಿಯುವರಿಗೆ ಭಾರತದ ಇತಿಹಾಸದ ಬಗ್ಗೆ ಇದ್ದ ಮೂಲ ತಿಳುವಳಿಕೆಯನ್ನು ಎತ್ತಿ ಹಿಡಿಯುತ್ತದೆ.

ತನ್ನ ಕಾಲದ [illegible] ಸಾಮಗ್ರಿಗಳನ್ನು ವಿಶ್ಲೇಷಿಸಿ, ಚರಿತ್ರೆಯನ್ನು ಬರೆಯಹೊರಡುವ ಯಾವುದೇ ಇತಿಹಾಸಕಾರನಿಗೂ ಒಂದು ತಾತ್ತ್ವಿಕ ತಳಹದಿ ಇದ್ದೇ ಇರುತ್ತದೆ. ಎಲ್ಲ ಇತಿಹಾಸಕಾರರೂ ತಾವು ಬರೆಯುವ ಇತಿಹಾಸಕಾರರೂ ತಾವು ಬರೆಯುವ ಇತಿಹಾಸದಲ್ಲಿ ಒಂದು ಮೂಲಗತಿಯನ್ನು ಗುರುತಿಸುತ್ತಾರೆ. ಇದೇ ಅವರ ದೃಷ್ಟಿಕೋನವೂ ಆಗಿರುತ್ತದೆ. ಅವರು ಬದ್ಧರಾಗಿರುವ ತಾತ್ತ್ವಿಕ 'ದೃಷ್ಟಿಕೋನ, ಅವರ ಬರವಣಿಗೆಯ ಮೌಲ್ಯವನ್ನು ನಿರ್ಧರಿಸುತ್ತದೆ. ಕೊಸಾಂಬಿಯುವರ ಮಾರ್ಕ್ಸ್‌ವಾದಿ ದೃಷ್ಟಿಕೋನ ಅವರ ಬರಹಕ್ಕೆ ಹೆಚ್ಚು [illegible] ರಿಂದಲೇ ಅವರಿಗೆ "ಸಮಾಜ ಎಂದರೆ ಬರೇ ಆಳುವವರಲ್ಲ, ಆಳಿಸಿಕೊಳ್ಳುವವರು ಕೂಡ." ಕೊಸಾಂಬಿಯುವರು "ಚರಿತ್ರೆ ಎಂದರೆ ಉತ್ಪಾದನಾ ಸಾಧನಗಳು ಮತ್ತು ಉತ್ಪಾದನಾ ಸಂಬಂಧಗಳಲ್ಲಿ ಆದ ಬದಲಾವಣೆಗಳ ಕಾಲಾನುಕ್ರಮಣಿಕೆ" ಎಂಬ ತಮ್ಮ ನಂಬಿಕೆಯನ್ನೇ ಎಲ್ಲ [illegible]. ಇದಕ್ಕಾಗಿ ಅವರು ಅನೇಕ ಸಾಂಪ್ರದಾಯಿಕ ಇತಿಹಾಸಕಾರರ ಕಡು ವಿರೋಧವನ್ನು ಎದುರಿಸಬೇಕಾಯಿತು.

೧೯೬೬ ರ ಜೂನ್ ೨೯ ರಂದು ನಿಧನರಾದ ಕೊಸಾಂಬಿಯುವರು ಪಶ್ಚಿಮದ ಮತ್ತು ಪೂರ್ವದ ಅನೇಕ ದೇಶಗಳನ್ನು ಸಂದರ್ಶಿಸಿದ್ದರು. ವಿಶ್ವಶಾಂತಿ ಮಂಡಲಿಯ ಸದಸ್ಯರಾಗಿದ್ದರು. ರಷ್ಯ, ಚೀನಗಳಲ್ಲಿ ಆದ ಕ್ರಾಂತಿಯ ನಂತರದ ಪ್ರಗತಿಯನ್ನು ಬಿಚ್ಚು ಮನಸ್ಸಿಂದ ಮೆಚ್ಚಿಕೊಳ್ಳುತ್ತಿದ್ದರು. ಇತಿಹಾಸದ ಬಗ್ಗೆ ತಮ್ಮ ಸೈದ್ಧಾಂತಿಕ ನಿಲುವನ್ನು ವಿರೋಧಿಸುವ ಅನೇಕರೊಂದಿಗೆ ಕೂಡ ಅವರಿಗೆ ವೈಯಕ್ತಿಕ ಸ್ನೇಹವಿತ್ತು. ಬರೆಯುವಾಗ ಕೊಸಾಂಬಿಯುವರು ಅನೇಕ ಬಾರಿ ಸಣ್ಣ ಸಣ್ಣ ವಿವರಗಳಲ್ಲೇ ಮುಳುಗಿ ಹೋಗುತ್ತಾರೆ ಎಂಬ ಟೀಕೆಯೂ ಇದೆ. ಆದರೆ ಮೂಲಗತಿಯನ್ನು ಗುರುತಿಸುವುದನ್ನು ಅವರು ಮರೆಯುತ್ತಿರಲಿಲ್ಲ. ವ್ಯಕ್ತಿಯ ಭೌತಿಕ ಅಗತ್ಯಗಳು ಮೊದಲು ಪೂರೈಕೆಯಾದ ಹೊರತು ಮಾನವನ ಪರಿಪೂರ್ಣತೆ ಸಾಧ್ಯವಿಲ್ಲ ಎಂದು ಅವರು ನಂಬಿದ್ದರು. "ಸಾಮಾಜಿಕ ಅನ್ಯಾಯಗಳ ಮೂಲ ಕಾರಣಗಳು ಈಗ ಮಾನವನ [illegible] ತಪ್ಪಿಸಿಕೊಂಡಿಲ್ಲ. ಅವುಗಳ [illegible] ಹೊರತು ಆಧ್ಯಾತ್ಮದಲ್ಲಿಲ್ಲ" ಎಂದು ಅವರು ಸಾರಿದರು. ಆಧುನಿಕ ಉತ್ಪಾದನೆಗೆ ವಿಜ್ಞಾನವೇ ತಳಹದಿಯಾಗಿದೆ, ಉತ್ಪಾದನಾ ಸಂಬಂಧಗಳು ಅಡ್ಡಿಪಡಿಸದಿದ್ದರೆ ಪ್ರತಿಯೊಬ್ಬರ ಭೌತಿಕ ಅಗತ್ಯಗಳನ್ನೂ ಖಂಡಿತ ಪೂರೈಸಬಹುದು ಎಂಬ ಈ ಭರವಸೆ ಒಬ್ಬ ಇತಿಹಾಸಕಾರನಿಗೆ ಬಂದದ್ದು ಅವರು ನಂಬಿದ ಸಿದ್ಧಾಂತದಿಂದಲೇ ಹೊರತು ಅವರ ಇತಿಹಾಸದ ಪಾಂಡಿತ್ಯದಿಂದಲ್ಲ; ಪ್ರಾಚೀನ ಭವ್ಯ ಭಾರತದ ಬಗ್ಗೆ ಕೊಸಾಂಬಿಯುವರು ಎಂದೂ ಪುಳಕಗೊಳ್ಳಲಿಲ್ಲ. ಗತೇತಿಹಾಸದ ಬಗ್ಗೆ ಕೆಲಸ ಮಾಡುತ್ತಿದ್ದರೂ ಅವರ ಕಣ್ಣುಗಳು ಭವಿಷ್ಯತ್ತನ್ನು [illegible]. ✡

ನೂರು ವರ್ಷ ಹಿಂದೆ ಹೇಳಿದ್ದ ಭವಿಷ್ಯವಿದು!

ಇಂದಿಗೆ ಒಂದು ನೂರಾ ಒಂದು ವರ್ಷಗಳ ಹಿಂದೆ ಪ್ರಕಟವಾದ ಲೇಖನವಿದು. ಮುಂಬಯಿಯಲ್ಲಿ ಪ್ರಸಿದ್ಧವಾಗುತ್ತಿದ್ದ 'ದಾತರಡು' (ಕೊಡಲಿ) ಎಂಬ ಪಾರಸಿ ಗುಜರಾತಿ ಪತ್ರಿಕೆಯ ಮೇ ೨೫, ೧೮೭೬ ರ. ಸಂಚಿಕೆಯಲ್ಲಿ ಅಂದಿನಿಂದ ನೂರು ವರ್ಷಗಳ ನಂತರ- ಅಂದರೆ ೧೯೭೬ರಲ್ಲಿ ಭಾರತ ಹಾಗೂ ಜಗತ್ತು ಹೇಗಿರುತ್ತವೆ ಎಂಬೊಂದು ಲೇಖನ ಬಂತು. ಅಂದು ಬರೆದವರು ಜ್ಯೋತಿಶ್ಶಾಸ್ತ್ರದ ಆಧಾರದಿಂದ ಬರೆದರೋ ಅಥವಾ ತರ್ಕದಿಂದಲೋ ಎಂಬುದನ್ನು ತಿಳಿಯಲು ಯಾವ ಆಧಾರವೂ ಸಿಕ್ಕಿಲ್ಲ. ಆದರೆ ಒಂದು ಮಾತು ಮಾತ್ರ ನಿಜ–ಅಂದಿನ ಲೇಖಕ ಹೇಳಿದ್ದರಲ್ಲಿ ಕೆಲವಂಶ ಈಗ ಸರಿಯಾಗಿ ಘಟಿಸಿರಲಿಕ್ಕಿಲ್ಲ, ಆದರೆ ಸಾಕಷ್ಟು ಸಂಗತಿಗಳು ನಿಜವಾಗಿಯೇ ಪರಿಣಮಿಸಿವೆ. ಅಲ್ಲದೆ ಒಂದು ಶತಮಾನದ ಹಿಂದೆ ಕಲ್ಪನೆಗೂ ನಿಲುಕದಿದ್ದ ಅವರ ಕೆಲ ವಿಚಾರಗಳು ಇಂದು ನಿಜವಾಗಿ ಪರಿಣಮಿಸಿವೆ. ಈ ದೃಷ್ಟಿಯಿಂದ ಈ ಲೇಖನವನ್ನು ನೋಡಬೇಕು.

ಎಂ. ಕೆ. ದೇಸಾಯಿ

ಇಂದಿಗೆ ನೂರು ವರ್ಷಗಳ ನಂತರದ ಮಾತು. ಅಂದರೆ ೧೯೭೬ರ ವೇಳೆಗೆ ನಿಮ್ಮ ಮೊಮ್ಮಕ್ಕಳೋ ಮರಿಮಕ್ಕಳೋ ವಯಸ್ಕರಾದಾಗ ನಿಮ್ಮ ಸ್ಥಿತಿ ಏನಾಗಬಹುದು, ಈಗಿನ ಜೀವನದ ರೀತಿಗೂ ಆಗಿನದಕ್ಕೂ ಯಾವ ಬದಲಾವಣೆಗಳನ್ನು ನೀವು ಕಂಡುಕೊಳ್ಳಬಹುದು ಎಂಬುದನ್ನು ಕಲ್ಪಿಸುವುದು ಅಸಾಧ್ಯವೇ ಸರಿ. ಆದರೂ ನಿಮ್ಮ ಓದಿಗಾಗಿ ಮುಂದಿನ ಜೀವನದಲ್ಲಿ ಏನೇನು ಬದಲಾವಣೆಗಳಾಗಬಹುದು ಎಂಬುದರ ಕಲ್ಪನೆಯನ್ನು ನಿಮಗೆ ಇಲ್ಲಿ ತಂದುಕೊಡುತ್ತೇನೆ.

ಆಗಿನ ಸಾಮಾಜಿಕ ಸ್ಥಿತಿ :

ಪ್ರಪಂಚದ ಎಲ್ಲ ದೇಶಗಳಲ್ಲಿ ಭಾರೀ ಬದಲಾವಣೆಗಳು ಕಂಡುಬರುತ್ತವೆ. ಈಗ ಮನೆಯ ನಾಲ್ಕು ಗೋಡೆಗಳ ನಡುವೆ ಹುದುಗಿ ಕುಳಿತಿರುವ, 'ಘೋಷಾ'ದಲ್ಲಿರುವ ಸ್ತ್ರೀಯರು ಸ್ವತಂತ್ರರಾಗಲು ಯತ್ನಿಸುತ್ತಾರೆ–ಪಾರಸೀ ಸ್ತ್ರೀಯರು ಕೂಡ. ಹಿಂದೂ ಸಮಾಜದಲ್ಲಿ ಪುನರ್ವಿವಾಹ ಜಾರಿಗೆ ಬರುತ್ತದೆ. ವೈಧವ್ಯ ದುಃಖವೆಂಬುದು ಇತಿಹಾಸ ಕಾಲದ ಯಾವುದೋ ಒಂದು ಕಾಡು ರೀತಿಯೆಂದು ಪರಿಗಣಿಸಲ್ಪಡುತ್ತದೆ. ವಯಸ್ಕ ತರುಣ–ತರುಣಿಯರು ತಮ್ಮ ಮನಸ್ಸಿಗೆ ಬಂದವರನ್ನು ಜೀವನ ಸಂಗಾತಿಗಳನ್ನಾಗಿ ಆಯ್ಕೆ ಮಾಡಿಕೊಳ್ಳುವರು ಮತ್ತು ಸ್ವತಂತ್ರ ಸಂಸಾರಗಳನ್ನು ನಡೆಸುವರು. ಕ್ರಿಶ್ಚಿಯನ್ನರಲ್ಲಿ–ಅವರಲ್ಲೂ ವಿಶೇಷವಾಗಿ ಜರ್ಮನ್, ಅಮೇರಿಕನ್, ಆಂಗ್ಲ ಹಾಗೂ ಫ್ರೆಂಚ್ ಜನಗಳಲ್ಲಿ–ಮದುವೆಯೊಂದು ಧಾರ್ಮಿಕ ವಿಧಿಯಾಗಿ ಉಳಿಯದೇ ಕಾನೂನಿಗನುಗುಣವಾಗಿ ನಡೆಯುವ ಕ್ರಮವೆನಿಸುವದು. ಮದುವೆ ಒಂದು ಸಾಮಾಜಿಕ ಒಪ್ಪಂದ(social contract)ವೆನಿಸುವದು ಅರ್ಥಾತ್ ಒಂದು ನಿಶ್ಚಿತ ಕಾರ್ಯಕ್ಕಾಗಿ ನಿಶ್ಚಿತ ಅವಧಿಯವರೆಗೆ ಇಬ್ಬರು ವ್ಯಕ್ತಿಗಳು ಪರಸ್ಪರರನ್ನು ಬಂಧಿಸಿಕೊಳ್ಳುತ್ತಾರೆ ಹಾಗೂ ಕೂಡಿ ನಡೆಯದಿದ್ದಾಗ ಬೇರ್ಪಡುತ್ತಾರೆ. ಲಗ್ನದ ಕುರಿತು ಅವರಲ್ಲಿ ಲಿಖಿತ ಒಪ್ಪಂದವೂ ಆಗಬಹುದು.

ಧಾರ್ಮಿಕ ಸ್ಥಿತಿ :

ಧಾರ್ಮಿಕ ವಿಷಯದಲ್ಲಿ ಇಂದಿರುವುದರ ಅರ್ಧದಷ್ಟು ಮಾತ್ರ ಆಸ್ಥೆ ಆಗಿನ ಜನರಲ್ಲಿ ಉಳಿವುದು. ಮುಸಲ್ಮಾನರಲ್ಲಿ ಇಂದಿನ ಧಾರ್ಮಿಕ



ಸ್ಥಿತಿಗಿಂತ ಬಹಳ ಬದಲಾವಣೆಯು ಕಂಡು ಬರುವದು. ಪಾರಸಿಗಳಲ್ಲಿ ಈಗಿರುವ ಧಾರ್ಮಿಕ ರೀತಿನೀತಿಗಳು ಆಗ ತೀರ ಕ್ವಚಿತ್ತಾಗಿ ಕಂಡು ಬರುವವು. ಅದೇ ರೀತಿ ಅವರ ಧರ್ಮಾಚರಣೆ, ಉಪಾಸನೆ ಮುಂತಾದವುಗಳಲ್ಲಿ ಹೊಸ ಶೋಧಗಳ ಪರಿಣಾಮವಾಗಿ ಹಾಗೂ 'ಅವೆಸ್ತಾ'ಕ್ಕೆ ಹೊಸ ಅರ್ಥ ಹೇಳುವುದರಿಂದ ಬದಲಾವಣೆಯಾಗುವುದು. ಅಷ್ಟೇ ಅಲ್ಲ, ಕ್ರಿಶ್ಚಿಯನ್ನರಲ್ಲಿ ತಮ್ಮ ಧರ್ಮದ ಬಗ್ಗೆ ಅಶ್ರದ್ಧೆ ಮೂಡುವದಲ್ಲದೆ ನಾಸ್ತಿಕರ ಸಂಖ್ಯೆಯೂ ಹೆಚ್ಚುವುದು. ಆದರೂ ಕ್ರಿಶ್ಚಿಯನ್ ಧರ್ಮಪ್ರಸಾರವು ಇಂದಿಗಿಂತ ಬಹಳ ಹೆಚ್ಚಾಗುವದು. ಆಫ್ರಿಕ, ತುರ್ಕಸ್ತಾನ, ಇರಾಣ ಮತ್ತು ಮಧ್ಯ ಏಶಿಯ ಮುಂತಾದ ಭಾಗಗಳಲ್ಲಿನ ಜನ ಕ್ರಿಶ್ಚಿಯನ್ ಧರ್ಮವನ್ನು ಸ್ವೀಕರಿಸುವರು.

ವೈಜ್ಞಾನಿಕ ಸ್ಥಿತಿ :

ವೈಜ್ಞಾನಿಕ ವಿಷಯವಾಗಿ ಇಂದು ನಾವು ಅದ್ಭುತವೆಂದುಕೊಂಡಿರುವ ಅನೇಕ ಸಂಗತಿಗಳು [illegible] ವವು. 'ಯಾವುದೂ ಅಸಾಧ್ಯವಲ್ಲ; ಯಾವುದೂ ಅಶಕ್ಯವಲ್ಲ' ಎಂಬುದನ್ನು ವಿಜ್ಞಾನಿಗಳು ಸಿದ್ಧಪಡಿಸುವರು. ರೈಲುಗಾಡಿಗಳು, ಟ್ರಾಮುಗಳು ಓಣಿ ಓಣಿಗಳಲ್ಲಿ ಸಂಚರಿಸುವವು. ತಂತಿಗಳನ್ನು ಮನೆಮನೆಗೆ ಎಳೆಯಲಾಗುವುಲ್ಲದೆ ಮನೆಯಲ್ಲಿಯೇ ಕುಳಿತು ನೂರಾರು, ಸಾವಿರಾರು ಮೈಲು ದೂರದಲ್ಲಿರುವವರೊಂದಿಗೆ ಮಾತನಾಡುವ ಸೌಲಭ್ಯವೊದಗುವದು. ಬಲೂನಿನಲ್ಲಿ ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸುಲಭವಾಗಿ ಯಾನಿಸಬಹುದು. ಅಷ್ಟೇ ಅಲ್ಲ, ದೊಡ್ಡ ಶಹರಗಳಲ್ಲಿ ಒಂದು ಸ್ಥಳದಿಂದ ಮತ್ತೊಂದಕ್ಕೆ ಕೂಡ ಬಲೂನಿನಲ್ಲಿಯೇ ಸಂಚರಿಸಬಹುದು. ಅದಕ್ಕಾಗಿ ನಗರಮಧ್ಯದಲ್ಲಿ ಅನೇಕ ಕಡೆಗಳಲ್ಲಿ ಬಲೂನು ನಿಲ್ದಾಣಗಳೂ ಸ್ಥಾಪಿಸಲ್ಪಡುವವು. ವಿದ್ಯುತ್ತಿನ ವಿಷಯದಲ್ಲಿ ಎಷ್ಟೊಂದು ಪ್ರಚಂಡ ಶೋಧನೆಗಳಾಗುವವೆಂದರೆ, ಅನೇಕ ಅಸಾಧ್ಯ ರೋಗಗಳನ್ನು ಔಷಧಗಳ ಸಹಾಯವಿಲ್ಲದೆ ಬರಿ ವಿದ್ಯುತ್ತಿನಿಂದ ನಿವಾರಿಸುತ್ತಾರೆ. ಮನುಷ್ಯನು ಕಾಣುವ ಕನಸುಗಳಿಗೂ ವಿದ್ಯುತ್ತಿನ ಜೋಡಣೆಯಾಗಿ ಆ ವಿಷಯದ ಹೊಸತೊಂದು ಶಾಸ್ತ್ರವೇ ಹುಟ್ಟಿಕೊಳ್ಳುವುದು. ಮೃತ ತರುಣರನ್ನು ವಿದ್ಯುತ್ತಿನ ಮೂಲಕ ಮತ್ತೆ [illegible] ಪ್ರಯತ್ನವೂ [illegible].

ಚಂದ್ರನ ನಕ್ಷೆ ತಯಾರಿಸಲ್ಪಡುವುದರ ಜೊತೆಗೆ ಅದು ಮಕ್ಕಳ ಅಭ್ಯಾಸಕ್ರಮದಲ್ಲಿ ಪಠ್ಯವಾಗುವುದು. ಚಂದ್ರನ ಮೇಲಿಳಿಯುವುದು ಹೇಗೆಂಬ ಬಗ್ಗೆ ಮಹಾನ್ ವಿಜ್ಞಾನಿಗಳು, ಖಗೋಳಶಾಸ್ತ್ರಜ್ಞರಲ್ಲಿ ಚರ್ಚೆಯಾಗುವುದು. ಹೊಸ ಹೊಸ ಖಂಡಗಳ ಶೋಧವೂ ಉತ್ತರ ಮತ್ತು ದಕ್ಷಿಣ ಧ್ರುವಗಳಲ್ಲಿನ

ಅದ್ಭುತ ಪ್ರದೇಶಗಳ ಶೋಧನೆಗಳೂ ನಡೆಯು ವವು. ಅಷ್ಟೇ ಅಲ್ಲ, ಈ ನವಪ್ರದೇಶಗಳೊಂದಿಗೆ ಸುಗಮ ಸಂಪರ್ಕ ಸ್ಥಾಪಿತವಾಗುವುದು. ಸುಯೇಜ್ ಕಾಲುವೆಯು ಭೂಮಿಯ ಮೇಲೆ ನಿರ್ಮಿತವಾದಂತೆಯೆ ಆಫ್ರಿಕದ ಸಹರಾ ಮರು-ಭೂಮಿಯು ಸಮುದ್ರವಾಗಿ ರೂಪಾಂತರಿ-ಸಲ್ಪಟ್ಟು ಆ ಖಂಡದಲ್ಲಿ ಹೊಸ ನಗರಗಳೂ ಬಂದರಗಳೂ ಹುಟ್ಟಿ ವ್ಯಾಪಾರದಲ್ಲಿ ತೊಡಗು ವವು. ಮಧ್ಯ ಏಶಿಯದಲ್ಲಿ ರೇಲ್ವೆಯ ಜಾಳಿ-ಗೆಯೇ ಪಸರಿಸುವುದು. ಪೆಸಿಫಿಕ್ ಮತ್ತು ಅಟ್ಲಾಂಟಿಕ್ ಸಾಗರಗಳನ್ನು ಕಾಲುವೆಯ ಮೂಲಕ ಜೋಡಿಸಲಾಗುವುದು.

ಸೌರಮಂಡಳದಲ್ಲಿ ಈಗ ನಿಮಗೆ ತಿಳಿದಿರು ವುದರ ಎರಡರಷ್ಟು ಗ್ರಹಗಳು ಶೋಧಿಸಲ್ಪಡು-ವವು. ಇಂದು ಶಾಲೆಗಳಲ್ಲಿ ಕಲಿಸ್ಪಡುತ್ತಿರುವ ವ್ಯಾಕರಣಶಾಸ್ತ್ರಕ್ಕಿಂತಲೂ ಹೆಚ್ಚಿನ ಮಹತ್ವ ಆಗಿನ ಶಾಲೆಗಳಲ್ಲಿ ಖಗೋಳಶಾಸ್ತ್ರಕ್ಕೆ ಸಿಗು-ವದು. ಅಲ್ಲದೆ 'ತೌಲನಿಕ ಭಾಷಾಶಾಸ್ತ್ರ'ವು ಹೆಚ್ಚು ಹೆಚ್ಚಾಗಿ ವಿದ್ಯಾರ್ಥಿಗಳಿಗೆ ಕಲಿಸಲ್ಪಡು ವದು. ಸ್ತ್ರೀಶಿಕ್ಷಣಕ್ಕೆ ಎಲ್ಲಿಲ್ಲದ ಮಹತ್ವ ಬಂದು ಅವರು ಸಮಾಜದಲ್ಲಿ ಪುರುಷರಿಗೆ ಸಮಾನ ಹಕ್ಕುಗಳನ್ನೂ ದೊಡ್ಡ ದೊಡ್ಡ ಹುದ್ದೆಗಳನ್ನೂ ಪಡೆಯುವರು.

ರಾಜಕೀಯ ಕ್ಷೇತ್ರ :

ಅಮೇರಿಕದಾದ್ಯಂತ ಬಹುತೇಕ ರಾಜ್ಯಗಳು ಲೋಕಸತ್ತಾತ್ಮಕವೆನಿಸುವವು. ಯುರೋಪಿನ ಇಂಗ್ಲಂಡ್, ಫ್ರಾನ್ಸ್, ಜರ್ಮನಿ, ಆಸ್ಟ್ರಿಯಾ, ಇಟಲಿ ಮತ್ತು ಸ್ಪೇನ್ ಸಹ ಲೋಕಸತ್ತಾತ್ಮಕ ರಾಷ್ಟ್ರಗಳಾಗಬಹುದು. ಆಸ್ಟ್ರೇಲಿಯಾ ಖಂಡ ವೆಲ್ಲ ಒಂದು ಪ್ರಜಾಸತ್ತಾತ್ಮಕ ದೇಶವೆನಿ-ಸುವುದು. ಆಫ್ರಿಕದ ಒಂದೆರಡು ಸಂಸ್ಥಾನ ಗಳಲ್ಲೂ ಪ್ರಜಾಪ್ರಭುತ್ವ ಬರಬಹುದು. ಹಿಂದುಸ್ಥಾನದ ಬಹುಭಾಗ ರಶಿಯಾದ ಅಂಕಿತ-ಕ್ಕೊಳಗಾಗಬಹುದು. ಮಧ್ಯ ಏಶಿಯವು 'ನವ-ರಶಿಯಾ ಎಂಬ ಹೆಸರು ಪಡೆಯುವುದಲ್ಲದೆ ಅಲ್ಲಿಯ ಆಡಳಿತವೆಲ್ಲ ರಶಿಯದ ಕೈಯಲ್ಲೇ ಉಳಿಯು-ವುದು. ಕಾಬೂಲಿನ ಅಮೀರ, ಇರಾಣದ ಶಾಹ ಮತ್ತು ತುರ್ಕಸ್ತಾನದ ಸುಲ್ತಾನರು ರಶಿಯದ ಮಾಂಡಲೀಕರಾಗುವರು. ಅಲ್ಲದೆ ರಶಿಯನ್ನರು ಈಗ ಮಧ್ಯ ಏಶಿಯದಲ್ಲಿ ಹೊಕ್ಕಿರುವಂತೆಯೇ ಆಗ ಚೀನದೊಂದಿಗೆ ಯುದ್ಧಕ್ಕಿಳಿದಿರುವರು. ಫ್ರಾನ್ಸ್ ಮತ್ತು ಜರ್ಮನಿಗಳು ಸತತವಾಗಿ ಪರ ಸ್ಪರ ಯುದ್ಧ ಮಾಡಿ ಸುಸ್ತಾದ ನಂತರ ಒಪ್ಪಂ-ದದ ಮೂಲಕ ಮತ್ತೆ ಶಾಂತಿ ನೆಲೆಸುವುದು. ತುರ್ಕಿ ಸಾಮ್ರಾಜ್ಯ ಒಡೆದುಹೋಗಿ ಆ ಸ್ಥಾನ ದಲ್ಲಿ ಹಲವಾರು ರಾಜ್ಯಗಳು ಹುಟ್ಟಿಕೊಳ್ಳುವ ದಲ್ಲದೆ ತುರ್ಕಿ ಹೆಸರು ಸಹ ಸಾಮ್ರಾಜ್ಯ ದೊಂದಿಗೇ ನಿರ್ನಾಮವಾಗುವುದು. ಪಾರ್ಸಿಗಳು ಆಗ ಚಿಕ್ಕ ಸಂಸ್ಥಾನವನ್ನು ಕಟ್ಟಿಕೊಳ್ಳಲು ಯೋಚಿಸುವರಾದರೂ ಈಗಿನಂತೆ ಒಂದೆಡೆಗೆ ಇರಲಾರರು. ಅವರು ಯುರೋಪ್, ಆಫ್ರಿಕ, ಅಮೇರಿಕಗಳಿಗೆ ಹೋಗಿ ನೆಲೆಸುವವರು. ಅದ ರಲ್ಲೂ ಯುರೋಪಿನಲ್ಲಿ ಜರ್ಮನಿ, ಅಮೇರಿಕದಲ್ಲಿ ಯು. ಎಸ್. ಎ. ಏಶಿಯದಲ್ಲಿ ಮಧ್ಯ ಏಶಿಯ ಗಳತ್ತ ಆಕರ್ಷಿಸಲ್ಪಡುವರು.

ಸಾಮಾನ್ಯ :

ಪ್ರಪಂಚಾದ್ಯಂತ ಜರ್ಮನ್ ಭಾಷೆಗೆ ವಿಶೇಷ ಪ್ರಚಾರ ಸಿಕ್ಕುವುದು. ಹಿಂದುಸ್ತಾನ-ದಲ್ಲಿ ರಶಿಯನ್ ಭಾಷೆಯ ಕಲಿಕೆಯ ಒಲವು ಹೆಚ್ಚಾಗಬಹುದು. ಅಲ್ಲದೇ ದೇಶದಾದ್ಯಂತ ರಾಷ್ಟ್ರಭಾಷೆಯೆಂದು 'ಹಿಂದುಸ್ತಾನಿ'ಯನ್ನು ಜನ ಬಳಸಬಹುದು. ಪಾರ್ಸಿಗಳ ಭಾಷೆ ಶುದ್ಧ ಗುಜರಾತಿಯಾಗುವದು. ಹಿಂದೂ ಜನ-ರಲ್ಲಿ ಧೋತರ ಉಡುವವರ ಸಂಖ್ಯೆ ತೀರ ಕೈ ಬೆರಳೆಣಿಕೆಯಷ್ಟಾಗುವುದು. ಮುಂಬಯಿಯಲ್ಲಿ ಈಗಿನ ಬ್ಯಾಕ್‌ಬೇ ಭಾಗ ಸಾಲದಾಗಿ ಮಲ ಬಾರ್ ಹಿಲ್ ವರೆಗಿನ ಸಮುದ್ರ ಭಾಗವನ್ನು ತುಂಬಿಕೊಳ್ಳಲಾಗುವುದು. ಕೊನೆಗೆ 'ದಾತರಡು' ವಿನ ಈ ತರುಣ ಸಂಪಾದಕ ನೂರು ವರ್ಷಗಳ ನಂತರ ಮುದುಕನೆಂದು ಗುರುತಿಸಲ್ಪಡುವನು.

ಅಲ್ಲದೆ ನಾವು ಇಂದು ಬರೆದಿರುವ ಈ ಭವಿಷ್ಯ ಕಥನವನ್ನು ನಮ್ಮ ಮೊಮ್ಮಕ್ಕಳು ಓದಿ ಇದರಲ್ಲಿಯ ಬಹುಭಾಗ ಸತ್ಯವಾದದ್ದನ್ನು ಕಂಡು ಅಂದಿನ ಜನ ಆಚ್ಚರಿಪಟ್ಟಾರು ✡

ಒಂದು ಆಸ್ಪತ್ರೆಯಲ್ಲಿ ಅವರಿಬ್ಬರೂ ಪಾಲುಗಾರರು. ಅವರಲ್ಲೊಬ್ಬ ತನ್ನ ಮೃತ್ಯು ಸನ್ನಿಹಿತವಾಗಿರುವುದನ್ನು ಮನಗಂಡು ಇನ್ನೊಬ್ಬನನ್ನು ಕರೆದು ಹೇಳಿದ: "ಮಿತ್ರ, ಸಾಯುವ ಹೊತ್ತಿನಲ್ಲಿ ನಾನು ಸುಳ್ಳಾಡಲಾರೆ. ಕಳೆದ ವರ್ಷ ಐವತ್ತು ಸಾವಿರ ರೂಪಾಯಿ ಅಪಹರಿಸಿದ್ದು ನಾನೇ. ಕಾರ್ಮಿಕರನ್ನು ಕಂಪನಿಯ ವಿರುದ್ಧ ಎತ್ತಿ ಕಟ್ಟಿದ್ದೂ ನಾನೇ. ಅದಕ್ಕಾಗಿ ನೀನು ನನಗೆ ಯಾವ ಶಿಕ್ಷೆಯನ್ನಾದರೂ ಕೊಡು; ಸೇಡು ತೀರಿಸಿಕೊ."

"ನೀನೇನೂ ದುಃಖಿಸಬೇಕಿಲ್ಲ- ನಿನಗೆ ಈಗ ವಿಷ ಹಾಕಿದ್ದು ನಾನೇ." ಎರಡನೆಯ ಪಾಲುಗಾರ ಉತ್ತರಿಸಿದ.

*

ಭರ್ತಿ ತುಂಬಿದ್ದ ಬಸ್ಸಿನಲ್ಲಿ ಒಂದು ಸೀಟಿನ ಮೇಲೆ ಇಬ್ಬರು ಪ್ರಯಾಣಿಕರು ಕುಳಿತಿದ್ದರು. ತನ್ನ ಬದಿಯಲ್ಲಿಯುವನು ಕಣ್ಣು ಮುಚ್ಚಿಕೊಂಡು ಕುಳಿತದ್ದನ್ನು ಕಂಡ ಇನ್ನೊಬ್ಬ ಕೇಳಿದ: "ಏನಿದು ನೀವು ಕಣ್ಣು ಮುಚ್ಚಿಕೊಂಡು ಕುಳಿತುಬಿಟ್ಟಿದ್ದೀರಲ್ಲಾ?"

"ಹೆಣ್ಣುಮಕ್ಕಳು ಬಸ್ಸಿನಲ್ಲಿ ನಿಂತು ಪ್ರಯಾಣ ಮಾಡುವುದನ್ನು ನಾನು ಕಣ್ಣಾರೆ ನೋಡಲಾರೆ," - ಬಂದ ಉತ್ತರ.

-ಎನ್. ಕೆ. ನರಸಿಂಹಮೂರ್ತಿ

*

"ಡಾರ್ಲಿಂಗ್, ನಾನು ನಿನ್ನನ್ನು ಎಷ್ಟೊಂದು ಪ್ರೀತಿಸುತ್ತೇನೆಂದರೆ ರಾತ್ರಿ ನನಗೆ ನಿದ್ರೆಯೇ ಬರುವುದಿಲ್ಲ."

"ಕ್ಷಮಿಸಿ ಡಿಯರ್, ಕೇವಲ ನಿದ್ದೆ ಬಾರದುದಕ್ಕೋಸ್ಕರ ನನ್ನನ್ನು ಪ್ರೀತಿಸುವುದಾದರೆ ನಾನು ಖಂಡಿತ ನಿಮ್ಮನ್ನು ಮದುವೆಯಾಗಲಾರೆ."

-ಶ್ರೀರಾಮುನ್

ಸರಕಾರಿ ಪ್ಯೂನನ ದಿನಚರಿ

ಬೆಳಿಗ್ಗೆ:

"ಸಾಹೇಬರು, ಇನ್ನೂ ಬಂದಿಲ್ಲ ಸ್ವಾಮಿ."

"ಬಹುಶಃ ಇನ್ನೇನು ಬರಬಹುದು, ಸ್ವಾಮಿ."

"ಸಾಹೇಬರು ತಡವಾಗಿ ಬರುತ್ತೇನೆ ಅಂತ ಫೋನ್ ಮಾಡಿದರು, ಬುದ್ಧಿ."

"ಅವರು ಈಗ ತಾನೇ ಒಳಗೆ ಇದ್ದರು, ಆದರೆ ಪುನಃ ಹೊರಗಡೆ ಹೋಗಿದ್ದಾರೆ."

"ಸಾಹೇಬರು ಊಟಕ್ಕೆ ಹೋಗಿದ್ದಾರೆ."

ಮಧ್ಯಾಹ್ನ:

"ಇನ್ನೇನು ಬಂದುಬಿಡುತ್ತಾರೆ ಸ್ವಾಮಿ."

"ಸಾಹೇಬರು ಇನ್ನೂ ಬಂದಿಲ್ಲ, ಅರ್ಜೆಂಟ್ ಕೆಲಸ ಇತ್ತಾ?"

"ಸಾಹೇಬರು ಇಲ್ಲೇ ಕಾಫಿಗೆ ಹೋಗಿರಬೇಕು, ಅವರ ಕೋಟು ಕುರ್ಚಿಲೇ ಇದೆ."

"ಹೌದು ಸ್ವಾಮಿ, ಈಗ ತಾನೇ ಒಳಗೆ ದ್ದರು- ಯಾವುದೋ ಮಿಟಿಂಗ್ ಇರಬೇಕು; ಹೆಡ್ ಆಫೀಸಿಗೆ ಹೋಗಿರಬೇಕು."

"ನನಗೆ ಸರಿಯಾಗಿ ಗೊತ್ತಿಲ್ಲ ಸ್ವಾಮಿ, ಅವರು ಬರುತ್ತಾರೋ, ಇಲ್ಲವೋ?"

"ಇಲ್ಲ ಸ್ವಾಮಿ, ಅವರು ಇವತ್ತು ರಜಾ ಹಾಕಿದ್ದಾರೆ."

-ಎಚ್. ವಿ. ಶ್ರೀಕಂಠ

ಗರ್ಭಿಣಿಯ ಗಾಬರಿ

ಯುಗೋಸ್ಲೋವಿಯಾ ದೇಶದಲ್ಲಿ ಗರ್ಭಿಣಿಯೊಬ್ಬಳು ತನ್ನ ಆರನೆಯ ಮಗುವನ್ನು ನಿರೀಕ್ಷಿಸುತ್ತಿದ್ದಳು.

ಅದೊಂದು ದಿನ ಆಕೆ ವರ್ತಮಾನ ಪತ್ರಿಕೆಯೊಂದನ್ನು ಓದುತ್ತಿದ್ದಾಗ ಇದ್ದಕ್ಕಿದ್ದ ಹಾಗೆ ಆಕೆ ಗಾಬರಿಯಿಂದ ಗಟ್ಟಿಯಾಗಿ ಕಿರುಚಿಕೊಂಡಳು. ಏಕೆಂದರೆ ಆ ಪತ್ರಿಕೆಯಲ್ಲಿದ್ದ ಸುದ್ದಿ ಇದು:

'ಪ್ರಪಂಚದಲ್ಲಿ ಹುಟ್ಟುವ ಪ್ರತಿ ಆರನೆಯ ಮಗುವೂ ಚೈನೀಸ್ ಮಗುವಾಗಿರುತ್ತದೆ!'

-ಎಸ್. ವಿಶ್ವನಾಥ

ಕುಡುಕರಿಬ್ಬರು ದಾರಿಯಲ್ಲಿ ನಡೆದಿದ್ದರು. ಅವರಲ್ಲೊಬ್ಬನು ಮೇಲೆ ಆಕಾಶದ ಕಡೆಗೆ ಕೈಮಾಡಿ, "ಲೋ... ನೋಡು... ಸೂರ್ಯ ಎಷ್ಟು ಸುಂದರವಾಗಿ ಕಾಣುತ್ತಿದ್ದಾನೆ," ಎಂದಾಗ ಮತ್ತೊಬ್ಬನು "ಹುಚ್ಚಪ್ಪ... ಅದು ಸೂರ್ಯವಲ್ಲ, ಚಂದಪ್ಪ," ಎಂದ.

ಆದರೆ, ಅವರಿಬ್ಬರೂ ತಮ್ಮ ವಾದ ಬಿಡದೆ, ಜಗಳವಾಡುತ್ತ, ಅದೇ ದಾರಿಯಲ್ಲಿ ಸಾಗುತ್ತಿದ್ದ ಒಬ್ಬನನ್ನು ನಿಲ್ಲಿಸಿ ಕೇಳಿದರು. ಆ ಮೂರನೆಯ ಮಹಾಶಯನು, ಮುಂದೆ ಹೋಗಿ, "ಅದು ಏನೋ ನನಗೆ ಗೊತ್ತಿಲ್ಲ. ನಾನು ಈ ಊರಿಗೆ ಹೊಸಬ, ಇಂದೇ ಬಂದಿದ್ದೇನೆ," ಎಂದು ತಾನೇ ಮುಂದೆ ನಡೆದನು.

*

ಮುಖ್ಯ ರಸ್ತೆಯ ಬದಿಯಲ್ಲಿ, ಒಂದು ವಿದ್ಯುತ್ ಕಂಬದ ಮೇಲೆ, ಎಲ್ಲರಿಗೂ ಕಾಣುವಂತೆ, ಕೆಂಪು ಅಕ್ಷರಗಳಲ್ಲಿ ಈ ರೀತಿ ಬರೆದಿದ್ದರು. "ಅಪಾಯ! ೪೪೦-ವೋಲ್ಟ್. ಮುಟ್ಟಿದರೆ ಎರಡು ವರ್ಷ ಜೈಲು ಶಿಕ್ಷೆ."

-ವಿನಾಯಕ ಕುಲಕರ್ಣಿ

*

ಸಾಧು : ನನಗೆ ಅವತಾರಗಳಲ್ಲಿ ವಿಶ್ವಾಸವಿಲ್ಲ. ಜಗತ್ತೆಲ್ಲಾ ಬ್ರಹ್ಮಮಯ. ಇದರಲ್ಲಿ ನಾನು ನೀವು ಎಲ್ಲರೂ ಅವತಾರಿಗಳೆ.

ಕಿಲಾಡಿ: ಓ ಹಾಗೇನು, ಹಾಗಾದರೆ ದಶಾವತಾರಗಳಲ್ಲಿ ನಿಮ್ಮದು ಯಾವ ಅವತಾರ?

*

ಗುರುಗಳು: ರಾಮು ನೀನು ಸ್ವರ್ಗಕ್ಕೆ ಹೋಗಲಿಚ್ಛಿಸುತ್ತೀಯೋ, ಇಲ್ಲಾ ನರಕಕ್ಕೋ?

ರಾಮು: ಎಲ್ಲಿಗೂ ಹೋಗುವುದಿಲ್ಲ ಸಾರ್. ಸ್ಕೂಲು ಬಿಟ್ಟ ಮೇಲೆ ಎಲ್ಲಿಗೂ ಹೋಗದೆ ಸೀದಾ ಮನೆಗೆ ಬರಬೇಕೆಂದು ಅಮ್ಮ ಹೇಳಿದ್ದಾರೆ.

*

ಆಫೀಸರರೊಬ್ಬರು ತಮ್ಮ ಕೈಕೆಳಗಿನ ಜವಾನನ ಮೇಲೆ ಕೋಪಗೊಂಡು ಕಿಡಿಕಿಡಿಯಾಗಿ ಯದ್ವಾತದ್ವಾ ರೇಗಾಡಿದರು:

"ಏನೋ ಇದು, ಆಫೀಸಿನ ವೇಳೆಯಲ್ಲಿ ಬಾಗಿಲಲ್ಲಿ ಬಿದ್ದುಕೊಂಡು ನಿದ್ದೆ ಮಾಡಲೆಂದೇ ನೀನಿರುವುದು? ಅದರಲ್ಲೂ ಹಾಗೆ ಗೊರಕೆ ಹೊಡೆಯೋದೆ? ನಿನ್ನನ್ನು ಕೆಲಸದಿಂದ ತೆಗೆದುಹಾಕಿದ್ದೇನೆ. ಇನ್ನು ಮೇಲೆ ಆಫೀಸಿಗೆ ಕಾಲಿಡಬೇಡ. ನಿನ್ನ ಹಾಳು ಗೊರಕೆಯಿಂದ ನನ್ನ ನಿದ್ದೆಯೂ ಕೆಡುತ್ತೆ."

-ಎಸ್. ಎ. ಚಂಗಾವಿ



[illegible]

ಬೊಳುವಾರು ಮಹಮದ್ ಕುಂಞಿ

ಗೋಡೆಯ ಗಡಿಯಾರ ನಾಲ್ಕು ಬಾರಿ ಹೊಡೆದುಕೊಂಡು ಹತ್ತು ನಿಮಿಷಗಳಾಗಿತ್ತು. ಬಿಸಿಲಿನ ಬೇಗೆಯೊಂದಿಗೆ ವ್ಯರ್ಥ ಹೋರಾಟ ನಡೆಸುತ್ತಿದ್ದ ಫ್ಯಾನಿನ ಕರಕರ ಸಪ್ಪಳವೊಂದಿಲ್ಲವಾದಲ್ಲಿ ನನ್ನ ಡಿಸ್ಪೆನ್ಸರಿ ನಿಶ್ಶಬ್ದ. ಕಂಪೌಂಡರ್ ರಾಮು ಕೆಳಗಿನ ಹೋಟೆಲಿಗೆ ಹೋಗಿದ್ದಿರಬೇಕು. ಇಲ್ಲವಾದಲ್ಲಿ ಬಾಟಲುಗಳ ಸದ್ದಿಗೆ ವಿರಾಮಭಂಗವಾಗುತ್ತಿರಲಿಲ್ಲ. ಮಾಮೂಲು ಪೇಶಂಟ್ ಗಳಾರೂ ಬಂದಿರುವುದಿಲ್ಲ. ಗ್ರೇಯ 'ಎನಾಟಮಿ' ಕೈಯಲ್ಲಿ ಹಿಡಿದುಕೊಂಡು ಕಿಟಕಿಯಿಂದ ರಸ್ತೆಯನ್ನು ನೋಡುತ್ತಿದ್ದೆ. ನಿರ್ಜೀವವಾಗಿದ್ದ ಟೆಲಿಫೋನು ಒಮ್ಮೆಂದೊಮ್ಮೆಗೆ ಜೀವ ತಳೆದು ಕಿರುಚಿಕೊಳ್ಳತೊಡಗಿದಾಗ ಯಾಂತ್ರಿಕವಾಗಿ ರಿಸೀವರನ್ನೆತ್ತಿಕೊಂಡು, "ಹಲೋ..., ರಾವ್ ಸ್ಪೀಕಿಂಗ್," ಎಂದೆ.

"ಹಲೋ..., ನಾನು ಬಾಲಸುಬ್ರಮಣ್ಯಮ್..., ಹಾ..., ಅದೇ Sales rep; ಹಾಂ...; ಇಂದು ಸಂಜೆ ಐದಕ್ಕೆ ಬರುತ್ತೇನೆ. ಇನ್ನೊಂದೇ ತಾಸು. ಒಂದು ಮುಖ್ಯವಾದ ವಿಷಯ ಮಾತನಾಡುವುದಿದೆ, O.K.?" ಎಂದು ಬಡಬಡನೇ, ಆದರೂ ಸ್ಪುಟವಾಗಿ ನುಡಿದು, ನಾನು 'ಹೂಂ...' ಎನ್ನಬೇಕೆನ್ನುವ ಮೊದಲೇ ರಿಸೀವರ್ ನಿರ್ಜೀವವಾಗುತ್ತದೆ.

ಬಾಲಸುಬ್ರಮಣ್ಯಮ್ ಯಾವಾಗಲೂ ಹಾಗೆಯೇ. ಅರಳು ಹುರಿದಂತೆ ಮಾತನಾಡುತ್ತಿದ್ದ. ಅದೂ, ಎಷ್ಟು ಬೇಕೋ ಅಷ್ಟು. ನನಗವನ ಪರಿಚಯವಾದದ್ದೂ ಹೀಗೆಯೆ.

ಇಂತಹದೇ ಒಂದು ಸಂಜೆ ಇದೇ ಕುರ್ಚಿಯಲ್ಲಿ ಕುಳಿತಿದ್ದೆ. ಮಾಮೂಲಿನಂತೆ ಗಿರಾಕಿಗಳಾರೂ ಬಂದಿರುವುದಿಲ್ಲ. ಬಾಗಿಲಲ್ಲಿ ಯಾರದೋ ನೆರಳು ಕಂಡಂತಾದಾಗ ತಲೆಯೆತ್ತಿದ್ದೆ. ಮೂವತ್ತೈದರ ಗಡಿ ದಾಟಿರದ ಒಬ್ಬ ವ್ಯಕ್ತಿ, ತರುಣನೆಂದೇ ಹೇಳಬಹುದು— ಸುಂದರವಾಗಿದ್ದ. ಬೆಲೆ ಬಾಳುವ ಉಡುಪಿಗೆ ಒಪ್ಪುವ ಕಿರುನಗೆಯ ಮುಖ. ಸುಖಜೀವಿಯೆನಿಸಿತ್ತು.

"Good evening doctor, ನಾನು ಒಳ ಬರಬಹುದೆ?" ಎಂದ. "ಬನ್ನಿ" ಎಂದೆ. "ಕುಳಿತುಕೊಳ್ಳಿ" ಎಂದು ಎದುರಿದ್ದ ಕುರ್ಚಿಯತ್ತ ಬೊಟ್ಟು ಮಾಡಿದೆ. ಕುಳಿತುಕೊಂಡ. 'ಏನು?' ಎನ್ನುವಂತೆ ನೋಡಿದೆ. ಆತ ಆರಂಭಿಸಿದ್ದ :

"ನನ್ನ ಹೆಸರು ಬಾಲಸುಬ್ರಮಣ್ಯಮ್, Glaxoರವರ representative."

ಥತ್ತೇರಿಕಿ, ಇದೇನು ' ವಕ್ರಿಸಿತಲ್ಲಪ್ಪಾ, ಎನಿಸಿತ್ತು. ನಾನೇ ಗಿರಾಕಿಗಳಿಗಾಗಿ ಕಾಯುತ್ತಿದ್ದರೆ, ಇವನೇ ಗಿರಾಕಿಗಳನ್ನು ಅರಸಿಕೊಂಡು ಬಂದಂತಿತ್ತು. ನನ್ನ ಮುಖದಲ್ಲಿಯ ಸೌಮ್ಯತೆ ಮಾಯವಾಗಿರುವುದನ್ನು ಅವನು ಗುರುತಿಸಿರಬೇಕು.

"ಡಾಕ್ಟ್ರೇ... ನನಗೆ ಮದುವೆಯಾಗಿದೆ. ಇಬ್ಬರು ಮಕ್ಕಳು. ಮೊದಲನೆಯವಳು ಉಷಾ, ಎರಡನೆಯವಳು ರೂಪ. ಉಷಾಳಿಗೆ ನಾಲ್ಕು ವರ್ಷ, ರೂಪಾಳಿಗೆ ಎರಡು ತುಂಬಿದೆ..." ನನಗೊಂದೂ ಅರ್ಥವಾಗಲಿಲ್ಲ.

ಅವನ ಕಂಪೆನಿಯ ಗುಣಗಾನ ನಿರೀಕ್ಷಿಸಿದ್ದ ನನಗೆ, ಅವನ ಸಂಸಾರದ ಪರಿಚಯ ಕೇಳಿದಾಗ ಅಚ್ಚರಿ-ಯೆನಿಸಿತ್ತು. ಅವನು ಗಿರಾಕಿಯನ್ನರಸಿ ಬಂದಿಲ್ಲ ಎನ್ನುವುದು ಕೇಳಿದಾಗ ಸಂತೋಷವಾಗಿತ್ತು. "ಹೂಂ...," ಎಂದೆ. ಮುಂದುವರಿಸಿದ್ದ, "ನನ್ನ ಹೆಂಡತಿಗೀಗ ಎಂಟು ತಿಂಗಳು." ಪ್ರತಿ-ಯೊಂದು ಶಬ್ದವನ್ನೂ ಇಡಿಯಾಗಿ, ಅಸ್ಖಲಿತ-ವಾಗಿ ಹೇಳುತ್ತಿದ್ದ. ಹೆರಿಗೆಯ ಬಗ್ಗೆ ಸಲಹೆ ಪಡೆಯಲು ಬಂದಿರಬೇಕೆಂದುಕೊಂಡೆ. "ನನ್ನಿಂದ ಯಾವ ಸಹಾಯವಾಗಬೇಕಿತ್ತು?" ಎಂದೆ. "ಡಾಕ್ಟರ್, ನಾನು ಮೊದಲೇ ತಿಳಿಸಿದಂತೆ Sales representative. ಒಂದು ವಾರ ಊರಲ್ಲಿದ್ದರೆ, ಮೂರು ವಾರ ಟೂರ್ ಇರುತ್ತೆ. ಮನೆಯಲ್ಲಿ ಅವಳೊಬ್ಬಳೇ...; ಈ ಹೆರಿಗೆ-ಯೊಂದು ಮುಗಿದರೆ ನಂತರ... ಮಕ್ಕಳು ಬೇಡಾಂತ...."

"Good idea..." ನಾನು ಆತನ ಮಾತಿಗೆ ಸಹಕರಿಸಿದ್ದೆ. ಅವನ ಬಗ್ಗೆ ಅಭಿಮಾನವೆನಿಸಿತ್ತು. ಚಿಕ್ಕ ಸಂಸಾರದ ಸುಖ ಕಾಣ ಹೊರಟಿದ್ದ ಆತನ ಬಗ್ಗೆ ಹೆಮ್ಮೆಯೆನಿಸಿ, "ಈ ಸಲ ಹೆರಿಗೆಯಾದ ನಂತ್ರ ಬಂದು ಕಾಣಿ. ಸಂತೋಷದಿಂದ ಸಹಕರಿ-ಸುತ್ತೇನೆ," ಎಂದಿದ್ದೆ. ಆತ ವಂದಿಸಿ ನಡೆದಿದ್ದ. ಮೊದಲ ಭೇಟಿಯಲ್ಲಿಯೇ ತನ್ನ ಬಗೆಗೆ ಸದಭಿ-ಪ್ರಾಯ ಉಂಟಾಗುವಂತೆ ವರ್ತಿಸಿದ್ದ. ಸ್ಫುಟ-ವಾಗಿ ಮಾತನಾಡಿ, ನಾಜೂಕಾಗಿ ನಾಗರಿಕತೆ-ಯಿಂದ ವ್ಯವಹರಿಸಿದ ಆತನ ವ್ಯಕ್ತಿತ್ವಕ್ಕೆ ಮಾರುಹೋಗಿದ್ದೆ.

ಮತ್ತೆರಡು ತಿಂಗಳ ನಂತರ ಡಿಸ್ಪೆನ್ಸರಿಗೆ ಬಂದಿದ್ದ. ಗಂಡು ಮಗುವಿನ ತಂದೆಯಾಗಿದ್ದೇ-ನೆಂದು ಹೆಮ್ಮೆಯಿಂದ ಹೇಳಿದ್ದ. ಶುಭಾಶಯ ಹೇಳಿದೆ. Vasectomyಯ ಬಗ್ಗೆ ವಿವರವಾಗಿ ತಿಳಿಸಿದೆ. ಅವನಿಗೂ ಕೆಲವಂಶ ತಿಳಿದಿತ್ತು. ಆಪರೇಶನ್ನಿಗೆ ಆತನ ಮನೆಯವರ ಸಮ್ಮತಿಯ ಬಗ್ಗೆ ವಿಚಾರಿಸಿದಾಗ ಇನ್ನೂ ಕೇಳಲಿಲ್ಲವೆಂದ. ವಿಚಾರಿಸಿ ಮತ್ತೆ ಕಾಣುತ್ತೇನೆಂದು ಹೇಳಿ ಹೋದ ಆತ ಮತ್ತೆರಡು ತಿಂಗಳು ಮುಖ ತೋರಿಸಿರಲಿಲ್ಲ. ಆತನ ವ್ಯವಹಾರ ಜೋರಾಗಿದ್ದಿ ರಬೇಕೆಂದುಕೊಂಡು ನಾನು ಸುಮ್ಮನಾಗಿದ್ದೆ.

ಒಂದು ದಿನ ಬೆಳಿಗ್ಗೆ ಮಿಂಚಿನಂತೆ ಪ್ರತ್ಯಕ್ಷ-ನಾದ. ನಾನು ಯಾವನೋ ಒಬ್ಬ ರೋಗಿ-ಯೊಡನೆ ಮಾತನಾಡುತ್ತಿದ್ದೆ. ಆತನನ್ನು ಕಂಡು ತಲೆಯೆತ್ತುತ್ತಲೇ, "ಡಾಕ್ಟರ್... ಇಂದು ನಿಮ್ಮ ರಾತ್ರಿಯೂಟ ನಮ್ಮನೇಲಿ. ಮನೇಲಿ ತಿಳಿಸಿದ್ದೇನೆ. ಇಲ್ಲವೆನ್ನಬೇಡಿ ಹಾ..., ರಾತ್ರಿ ಎಂಟಕ್ಕೆ ಬರುತ್ತೇನೆ. ರೆಡಿಯಾಗಿರಿ," ಎಂದು ಉತ್ತರಕ್ಕೂ ಕಾಯದೆ ಮಾಯವಾಗಿದ್ದ.

ಮಧ್ಯಾಹ್ನ ಊಟದ ಸಮಯದಲ್ಲಿ ನನ್ನವಳಿಗೆ ಹೇಳಿದೆ-ರಾತ್ರಿ ಊಟಕ್ಕೆ ಬರಲಾಗುವುದಿಲ್ಲ, ವೇಮ. ಅವಳೇನೂ ಅಡ್ಡಿ ಮಾಡಲಿಲ್ಲ. ಅವಳಿಗೆ ಅಭ್ಯಾಸವಾಗಿದೆ. ಡಾಕ್ಟರನಿಗೆ ಹೇಳಿ ಮಾಡಿ-ಸಿದ ಹೆಂಡತಿಯವಳು.

ಆತ ಎಂಟಕ್ಕೆ ಸರಿಯಾಗಿ ಬಂದಿದ್ದ. ನನ್ನಲ್ಲಿ ಕಾರು ಇರುವ ಕಾರಣ, ಅವನ ಸ್ಕೂಟರನ್ನು ಕಾರಿನಲ್ಲಿ ಹಿಂಬಾಲಿಸಿದೆ. ಮನೆ ಸ್ವಲ್ಪ ದೂರವೇ ಇತ್ತು.

ಪುಟ್ಟ ಮನೆ; ಸುಂದರವಾಗಿತ್ತು. ಅಂಗಳದಲ್ಲಿ ಹೂದೋಟವಿದ್ದಿರಬೇಕು. ಕತ್ತಲಲ್ಲಿ ಸರಿಯಾಗಿ ಕಾಣಿಸಲಿಲ್ಲ.

"ಇವಳು..." ಆತ ಆರಂಭಿಸಿದ್ದ ತನ್ನ ಜೊತೆಗಾತಿಯ ಪರಿಚಯ ಮಾಡಿಸಲು. ಆದರೆ ಅವಳೇ ಮುಂದುವರಿಸಿದ್ದಳು, "ಮಿಸೆಸ್ ಬಾಲ ಸುಬ್ರಮಣ್ಯಮ್, ಹೆಸರು ಚಂಪಾ..." ಎರಡೂ ಕೈ ಜೋಡಿಸಿ ನಮಸ್ಕರಿಸುವಾಗ ಬಹಳ ಸುಂದರಿಯಾಗಿ ಕಂಡಳು. ಎರಡು ತಿಂಗಳ ಹಸಿ ಬಾಣಂತಿ. ಇಪ್ಪತ್ತೈದು ದಾಟಿದ್ದರೂ, ಇನ್ನೂ ಹದಿನೆಂಟೇ ತುಂಬಿಲ್ಲ ಎನ್ನಬಹುದಾದ ಬಳುಕುವ ನೀಳ ದೇಹ. ಯಾರನ್ನಾದರೂ ಸೆರೆ ಹಿಡಿಯಬಲ್ಲ ಚೂಪು ಕಣ್ಣುಗಳು. ಭಾಗ್ಯವಂತ, ಈ ಸುಬ್ರಮಣ್ಯಮ್ ಎನಿಸಿತ್ತು.

ಊಟವೂ ಅವಳಂತೇ ಸೊಗಸಾಗಿತ್ತು. ಮಕ್ಕಳು ನಿದ್ರಿಸಿದ್ದವು. ನಂತರ ಮಾತು. ಕುಟುಂಬ ಯೋಜನೆಯ ಬಗ್ಗೆ ನನಗೇ ತಿಳಿಸುವ ಹೇಳುವಂತೆ, ನಿರರ್ಗಳವಾಗಿ ಮಾತನಾಡುವ ಅವಳನ್ನು ಕಂಡಾಗ ದಿಟ್ಟ ಹೆಣ್ಣು ಎಂದು-ಕೊಂಡೆ.

ಮುಂದೆ ಕೆಲವು ದಿನಗಳಲ್ಲಿ ಅವನಿಗೆ

vasectomy ಮಾಡಿಯಾಗಿತ್ತು. ನನ್ನ ಆದೇಶದಂತೆ, ಪರಿಚಿತ ಸರಕಾರಿ ಡಾಕ್ಟರರೇ ಮಾಡಿದ್ದರು. ಆತನಿಗೆ ಧೈರ್ಯ ತುಂಬಲು ನಾನು ಆತನ ಬಳಿ ನಿಂತಿದ್ದೆ. ವಾರದೊಳಗೆ ಆತ ತನ್ನ ಎಂದಿನ ದಿನಚರಿಗೆ ಹೊಂದಿಕೊಂಡು ಬಿಟ್ಟಿದ್ದ. ನಾನವನನ್ನು ಮರೆತುಬಿಡಬಹುದಿತ್ತು. ಆದರೆ ಚಂಪಾ ಮರೆಯದಂತೆ ಮಾಡಿದ್ದಳು.

ವಾರಕ್ಕೊಮ್ಮೆಯಾದರೂ ಡಿಸ್ಪೆನ್ಸರಿಗೆ ಬಂದು, 'ಡಾಕ್ಟ್ರ, ಆ ಮದ್ದು ಬರ್ಕೊಡಿ', 'ಡಾಕ್ಟ್ರ, ಈ ಟಾನಿಕ್ ಹೇಗೆ?' ಎಂದು ವಿಚಾರಿಸುವ ನೆಪದಲ್ಲಿ ಅರ್ಧ ತಾಸಾದರೂ ಹರಟುತ್ತಿದ್ದಳು. ಅವಳ ಈ ಸಂಬಂಧವಿಲ್ಲದ ಹರಟೆ ನನಗೂ ಒಂದು ರೀತಿಯ ಅವ್ಯಕ್ತ ಸಂತೋಷವನ್ನುಂಟುಮಾಡುತ್ತಿತ್ತು. ಅತ್ಯಾಧುನಿಕವಾಗಿ ಶೃಂಗಾರಗೊಂಡು ಬರುತ್ತಿದ್ದ ಆಕೆಯನ್ನು ಒಂದು ವಾರ ಕಾಣದಿದ್ದಲ್ಲಿ, ಏನನ್ನೋ ಕಳೆದುಕೊಂಡಂತೆ ಅನ್ನಿಸುವಂತಾಗಿತ್ತು. ನನಗರಿವಿಲ್ಲದೆ ನಾನವಳತ್ತ ಸರಿಯ ತೊಡಗಿದ್ದೆ. ಅವಳೂ ಅದಕ್ಕೆ ಇಂಬು ನೀಡುವಂತೆ ವರ್ತಿಸುತ್ತಿದ್ದಳು. ಬಾಲ ಸುಬ್ರಮಣ್ಯಮ್ ಊರಲ್ಲಿ ಇರುವುದೇ ಅಪರೂಪವಾಗಿತ್ತು. ಬಂದಾಗಲೆಲ್ಲಾ ನನ್ನನ್ನು ಕಂಡು, ಮಾತನಾಡಿಸಿಕೊಂಡು ಹೋಗುತ್ತಿದ್ದ. ಆತ ಊರಲ್ಲಿದ್ದಾಗ ಚಂಪಾ ತಪ್ಪಿಯಾದರೂ ನನ್ನಲ್ಲಿಗೆ ಬರುತ್ತಿರಲಿಲ್ಲ. ಅವಳ ಈ ನಡವಳಿಕೆ ನನಗರ್ಥವಾಗಿತ್ತು. ನಕ್ಕು ಸುಮ್ಮನಾಗಿದ್ದೆ.

ನನ್ನ ಹೊಸ ದಿನಚರಿಯನ್ನು ಶಾಮು ಮಾತ್ರ ಸಂಶಯದಿಂದ ನೋಡುವಂತೆ ಕಾಣಿಸುತ್ತಿತ್ತು. ಆತ ಬಾಯಿ ಬಿಟ್ಟು ಏನೂ ಹೇಳಿರದಿದ್ದರೂ ಚಂಪಾ ಬಂದಿರುವಾಗ ಆತನ ಬಾಟಲುಗಳ ಸಪ್ಪಳಗಳಿಂದ ನಾನು ಊಹಿಸಿದ್ದೆ. ಕೊನೆಕೊನೆಗೆ ಆತನಿಗೂ ನನ್ನ ದಿನಚರಿ ಅಭ್ಯಾಸವಾಗಿದ್ದಿರಬೇಕು; ಸುಮ್ಮನಾಗಿದ್ದ. ಬೇರಾರೂ ನಮ್ಮನ್ನು ಸಂಶಯಿಸುವಂತಿರಲಿಲ್ಲ. ನಾನು ಜನಪ್ರಿಯ ಡಾಕ್ಟರ್, ಮತ್ತವಳು ನನ್ನ



ಪೇಶಂಟ್–ಅಷ್ಟೆ. ನನ್ನ ಕಾರಿನಲ್ಲಿ ಪಲವಾರು ಹೆಣ್ಣು ರೋಗಿಗಳು ಕುಳಿತಿದ್ದಾರೆ. ಚಂಪಾಳೂ ಕುಳಿತಿದ್ದುದು ಅಚ್ಚರಿಯೇನಲ್ಲ.

ಗಡಿಯಾರ ಟಿಕಿಟಿಕಿಸುತ್ತಾ ಒಂದೊಂದಾಗಿ ನಿಮಿಷಗಳನ್ನು ಕೊಲ್ಲುವ ಕಾಯಕ ನಡೆಸಿರುತ್ತದೆ. ಕಳೆದ ಎರಡು ತಿಂಗಳಿನಿಂದ ಬಾಲಸುಬ್ರಮಣ್ಯಮ್‌ನ ದರ್ಶನವಾಗಿರಲಿಲ್ಲ. ಒಂದು ತಿಂಗಳ ಉತ್ತರ ಭಾರತದ ಪ್ರವಾಸ ಮುಗಿಸಿ ನಾನು ವಾರದ ಹಿಂದೆಯಷ್ಟೇ ಡಿಸ್ಪೆನ್ಸರಿ ಪುನರಾರಂಭಿಸಿದ್ದೆ. ಚಂಪಾಳ ಭೇಟಿಯೂ ಆಗಿರಲಿಲ್ಲ. ಈಗ ಏಕಾಯೇಕಿ ಬಾಲಸುಬ್ರಮಣ್ಯಮ್‌ನನ್ನು ಎದುರಿಸುವುದು ಯಾಕೋ ಬೇಡವೆನಿಸುತ್ತದೆ. ಆದರೆ ತಪ್ಪಿಸಿಕೊಳ್ಳುವಂತಿಲ್ಲ. ಇನ್ನು ಕೆಲವೇ ನಿಮಿಷಗಳೊಳಗೆ ಆತ ಬರುವವನಿದ್ದ. ಗಡಿಯಾರದ ದೊಡ್ಡ ಮುಳ್ಳು ಹನ್ನೊಂದನ್ನು ದಾಟಿತ್ತು; ಚಿಕ್ಕದು ಐದರ ಮೇಲೆ ಕುಳಿತಿತ್ತು.

ಆತ ಬರುವ ಮೊದಲು ಫೋನು ಮಾಡಿ ಯಾಕೆ ತಿಳಿಸಿದ...? ಮೊದಲೆಂದೂ ಹಾಗೆ ಮಾಡಿರಲಿಲ್ಲ. ನನ್ನ ಮತ್ತು ಚಂಪಾಳ ಬಗ್ಗೆ ಯಾರಾದರೂ ಆತನ ಕಿವಿಯನ್ನು ಊದಿರಬಹುದೇ? ಚಂಪಾಳಿಗೆ ಏನಾದರೂ ಕಾಯಿಲೆಯಾಗಿದೆಯೇ?– ಬರೇ ಪ್ರಶ್ನೆಗಳೇ ಒಂದರ ಬೆನ್ನಿಗಂಟಿಕೊಂಡು ಇನ್ನೊಂದಾಗಿ ಮೂಡಿ ಬರುತ್ತಿದ್ದುವೇ ಹೊರತು ಯಾವುದಕ್ಕೂ ಉತ್ತರ ಕಾಣದೆ, ಎಲ್ಲವೂ ಗೋಜಲು ಗೋಜಲಾಗಿ ಮನಸ್ಸೆಲ್ಲಾ ಅಸ್ತವ್ಯಸ್ತವಾಗಿರುವಾಗ ಹೊರಗಡೆ ಸ್ಕೂಟರ್ ಬಂದು ನಿಂತ ಸಪ್ಪಳ ಕೇಳುತ್ತದೆ. ನಗುವಿನ ಮುಖವಾಡ ಧರಿಸಿ ಅವನನ್ನು ಎದುರಿಸಲು ಸಿದ್ಧವಾಗುತ್ತೇನೆ.

ಬಾಗಿಲು ದಾಟಿ ಒಳಗೆ ಬಂದ. ಎಂದಿನಂತೆ ನಮಸ್ಕಾರ ಕೂಡ ಹೇಳಲಿಲ್ಲ. ನಾನು ಹೇಳುವ ಮೊದಲೇ ಕುರ್ಚಿಯಲ್ಲಿ ಕುಸಿಯುವವನಂತೆ ಕುಳಿತ, ಮುಖ ಪೂರ್ತಿ ಇಳಿದಿತ್ತು. ಕಣ್ಣುಗಳಲ್ಲಿ ಹಿಂದಿನ ಕಳೆ ಕಾಣಿಸಲಿಲ್ಲ. ತುಂಬಾ ಬದಲಾದಂತೆ ಕಾಣಿಸಿದ.

"ಹಲೋ, ಹೇಗಿದ್ದೀರಾ...?" ಎಂದೆ. ನನ್ನ ಸ್ವರದ ನಾಟಕೀಯತೆ ನನಗೇ ನಾಚಿಕೆಯನ್ನುಂಟು ಮಾಡಿತ್ತು. ಅವನು ಅತ್ತಿತ್ತ ನೋಡಿದ. ನಂತರ ನನ್ನನ್ನು ನೇರವಾಗಿ ದಿಟ್ಟಿಸಿ, "ನಿಮಗೀಗ ಬಿಡುವಿದೆಯೇ...?" ಎಂದ. ಈ ಪ್ರಶ್ನೆಯ ಅಗತ್ಯವಿರಲಿಲ್ಲ. ಬಿಡುವು ಮಾಡಿಕೊಳ್ಳಲು ಫೋನಿನಲ್ಲಿ ಮುಂದಾಗಿಯೇ ಹೇಳಿ ಬಂದಿದ್ದ. ನಾನೇನೂ ಉತ್ತರಿಸಲಿಲ್ಲ. ಅವನೇ ಮುಂದುವರಿದ.

"ಬನ್ನಿ ಡಾಕ್ಟ್ರೇ, ಎಲ್ಲಾದ್ರೂ ಹೊರಗೆ ಹೋಗೋಣ. ನಿಮ್ಮಲ್ಲಿ ಕೆಲವು ವಿಷಯ ಕೇಳುವುದಿದೆ," ಎಂದು ಕುರ್ಚಿಯಿಂದೆದ್ದು, ನಾನು ಖಂಡಿತಾ ಹಿಂಬಾಲಿಸುತ್ತೇನೆ ಎಂದು ನಿರ್ಧರಿಸಿದವನಂತೆ ಹೊರಗೆ ನಿಲ್ಲಿಸಿದ್ದ ಸ್ಕೂಟರ್‌ಗೆ ಜೀವ ತುಂಬಿ ಕುಳಿತುಕೊಂಡ. ನನಗೆ ಅವ್ಯಕ್ತ ಭಯವುಂಟಾಗುತ್ತದೆ. ಈತನೊಡನೆ ಹೋಗಲೇ ಬೇಡವೇ ಎಂದು ನಿರ್ಧರಿಸಲಾರದವನಾಗುತ್ತೇನೆ. ನನ್ನನ್ನು ಒಯ್ದು ಏನಾದರೂ ಮಾಡಿಬಿಟ್ಟರೆ? ಎನ್ನುವ ಯೋಚನೆ ನಡುಕವನ್ನುಂಟುಮಾಡುತ್ತದೆ. ಆತ ಸ್ಕೂಟರ್‌ನ ಹಾರ್ನ್ ಬಾರಿಸುತ್ತಾನೆ. ನಾನು ಬೇರೇನೂ ಉಪಾಯಗಾಣದೆ ಸಮ್ಮೋಹಿನಿಗೊಂಡಂತೆ ನಡೆದು ಆತನ ಹಿಂದೆ ಕುಳಿತುಕೊಳ್ಳುತ್ತೇನೆ.

ಸ್ಕೂಟರ್ ಹೊರಟಿತು. ಒಂದೊಂದೇ ಕಟ್ಟಡ ಹಿಂದೆ ಸರಿದಂತೆ, ನನಗೆ ಹಿಂದಿನ ಘಟನೆಗಳೆಲ್ಲ ಒಂದೊಂದಾಗಿ ನೆನಪಾಗುತ್ತಿದ್ದುವು. ದಾರಿಯುದ್ದಕ್ಕೂ ಆತ ಮೌನಿ. ಸ್ಕೂಟರ್ ಪಾರ್ಕೊಂದರ ಗೇಟನ್ನು ದಾಟಿದಾಗ ಸ್ವಲ್ಪ ಸಮಾಧಾನವಾಗಿತ್ತು. ಸ್ಕೂಟರನ್ನು ಒಂದು ಕಡೆ ನಿಲ್ಲಿಸಿದಾಗ, ಹಿಂದೆ ಕುಳಿತಿದ್ದ ನಾನು ಇಳಿಯಲೇಬೇಕಾಯಿತು, ಇಳಿದೆ. ಆತನೂ ಇಳಿದು ಸ್ಟ್ಯಾಂಡ್ ಹಾಕಿ ಹತ್ತಿರದಲ್ಲಿದ್ದ ಕಲ್ಲು ಬೆಂಚಿನತ್ತ ಕಾಲೆಳೆದ. ನನ್ನನ್ನು 'ಬಾ' ಎನ್ನಲಿಲ್ಲ, ಹಿಂಬಾಲಿಸಿದೆ. ಕಲ್ಲು ಬೆಂಚಿನ ಮೇಲೆ ಆತ ಕುಳಿತಾಗ, ಆತನ ಆಮಂತ್ರಣ ನಿರೀಕ್ಷಿಸದೆ ನಾನೂ ಅವನ ಪಕ್ಕದಲ್ಲಿ ಕುಳಿತೆ. ಆತನ ಪ್ರತಿಯೊಂದು ನಡವಳಿಕೆಯೂ ನನಗೆ ವಿಚಿತ್ರ ಅನುಭವವನ್ನುಂಟುಮಾಡುತ್ತಿತ್ತು. ಆತ ಸುಮ್ಮನೆ ಕುಳಿತು ಶೂನ್ಯ ದಿಟ್ಟಿಸುತ್ತಿದ್ದ.

ಪಾರ್ಕಿನಲ್ಲಿ ರಿಪೇರಿ ಕೆಲಸ ನಡೆಯುತ್ತಿತ್ತು.

ಹತ್ತಿರದಲ್ಲೇ ಇದ್ದ ದೊಡ್ಡ ಮಾವಿನ ಮರ- [illegible] ಬಂದನಿಕೆ ಗಳನ್ನು ಕೆಲಸಗಾರರು ಕತ್ತರಿಸುತ್ತಿದ್ದರು. ಬಾಲಸುಬ್ರಮಣ್ಯಮ್ ಒಮ್ಮೆಲೇ ಹೇಳಿದ, "ಡಾಕ್ಟರ್.... ಈ ಬಂದನಿಕೆಗಳು ಯಾಕೆ ಬೆಳೆ- ಯುತ್ತವೆ?" ಒಗಟಿನಂತಿತ್ತು ಈ ಪ್ರಶ್ನೆ. ನನಗೇನೂ ಅರ್ಥವಾಗಲಿಲ್ಲ.

"ಅಂದ್ರೆ...?" ಎಂದೆ.

"ಈ ಮರ ಆಸರೆ ಕೊಟ್ಟ ಕಾರಣವಲ್ಲದೇ ಅವು ಬೆಳೆದದ್ದು ?" ಎಂದ.

"ರೀ ಸುಬ್ರಮಣ್ಯಮ್, ಏನಾಗಿದೆ ನಿಮಗೆ? ವಿಷಯ ಏನೂಂತ ತಿಳಿಸಿ," ಎಂದೆ.

"ಡಾಕ್ಟರ್, ನನ್ನ ಹೆಂಡತಿಗೀಗ ಎರಡು ತಿಂಗಳು..." ಗರ್ಭವಾಗಿದೆ" ಹೇಳಿದ. ನನಗೆ ಸಿಡಿಲೆರಗಿದಂತಾಯಿತು. ನನ್ನ ಆದೇಶದಂತೆ ನನ್ನ ಪರಿಚಿತ ಡಾಕ್ಟರರೇ ಆತನಿಗೆ vasectomy ಮಾಡಿದ್ದರು-ಅದೂ ನನ್ನ ಕಣ್ಮುಂದೆ. ಈಗ ಅವನ ಹೆಂಡತಿಗೆ ಎರಡು ತಿಂಗಳು! ಯಾವ ರೀತಿ ಯಲ್ಲಿ ಉತ್ತರಿಸಬೇಕೆಂದು ತಿಳಿಯದೆ ಯೋಚಿಸ ತೊಡಗಿದೆ.

ಅವನೇ ಬಾಯಿ ತೆರೆದ, "ಡಾಕ್ಟರ್, ಇದು ಸಾಧ್ಯವೆ ? Vasectomy failure ಆಗು- ತ್ತದೆಯೆ ?" ನಾನು ಯಾವ ರೀತಿಯ ಉತ್ತರ ನೀಡಬೇಕೆಂದು ಪರೋಕ್ಷವಾಗಿ ಸೂಚಿಸಿದ. ಸ್ವಲ್ಪ ಸುಧಾರಿಸಿಕೊಂಡೆ. ನಿಧಾನವಾಗಿ ಹೇಳಿದೆ:

"ನೋಡ್ರೀ......ಸುಬ್ರಮಣ್ಯಮ್, ನಿಮ್ಗೆ vasectomy ಮಾಡಿದ್ದೇನೋ ನಿಜ. ಆದ್ರೆ... ಮುಂದೆ ಮಕ್ಕಳೇ ಆಗಬಾರದ್ದೂಂತೇನೂ ಇಲ್ಲ. ಸಾವಿರದಲ್ಲಿ ಒಂದೋ, ಎರಡೋ ಈ [illegible] ಕೆಲವಿವೆ. Take it easy. ನಿಮ್ಮದೂ ಯಾಕೆ ಹೀಗಾಗಿರಬಾರದು ? ನಾಳೆ ಬನ್ನಿ. ಪರೀಕ್ಷೆ ಮಾಡಿಯೇ ಹೇಳುತ್ತೇನೆ," ಎಂದೆ. ನನಗವ- ನಿಂದ ಬಿಡುಗಡೆಯ ಅವಶ್ಯಕತೆಯಿತ್ತು.

[illegible] ಸ್ಕೂಟರ್ ಬಳಿ ನಡೆದ. ಪಾರ್ಕಿನ ಕೆಲಸಗಾರರು ಬಂದನಿಕೆ ಗಳನ್ನು ಹೊರೆಯಾಗಿ ಕಟ್ಟಿ ಹೊತ್ತುಕೊಂಡು ಹೋಗುತ್ತಿದ್ದರು. ನಾನು ಸ್ಕೂಟರ್‌ನ ಹಿಂದೆ ಕುಳಿತೆ. ಡಿಸ್ಪೆನ್ಸರಿ ಸಮೀಪ ನನ್ನನ್ನಿಳಿಸಿದ ಆತ ಏನೂ ಮಾತನಾಡದೆ ಹೋದ.

ಡಿಸ್ಪೆನ್ಸರಿಯಲ್ಲಿ ಕುಳಿತುಕೊಳ್ಳುವುದು ನನ್ನಿಂದ ಸಾಧ್ಯವಾಗುವುದಿಲ್ಲ. ಒಂದೆರಡು ರೋಗಿಗಳು ನನಗಾಗಿ ಕಾಯುತ್ತಿದ್ದರು. ಯಾಂತ್ರಿಕವಾಗಿ ಅವರಿಗೆ ಚೀಟಿ ಬರೆದುಕೊಟ್ಟು, ಶಾಮುವಿಗೆ ಡಿಸ್ಪೆನ್ಸರಿ ಮುಚ್ಚಲು ಹೇಳಿ, ನಾನು ಮನೆಯತ್ತ ಕಾರು ಹೊರಡಿಸುತ್ತೇನೆ.

ಅವೇಳೆಯಲ್ಲಿ ಮನೆಗೆ ಬಂದ ನನ್ನನ್ನು ಇವಳು ಅಚ್ಚರಿಯಿಂದ ನೋಡುತ್ತಾಳೆ. ತಲೆ ನೋಯು- ತ್ತಿದೆಯೆಂದು ಆಕೆಗೆ ಹೇಳಿ ನನ್ನ ಕೋಣೆ ಸೇರುತ್ತೇನೆ.

ನಾಳೆ ಬರುವ ಆತನನ್ನು ಯಾವ ರೀತಿಯಲ್ಲಿ ಸಮಾಧಾನಪಡಿಸಬೇಕೆಂದು ತಿಳಿಯುವುದಿಲ್ಲ; ಆಸ್ಪತ್ರೆಗೆ ಅವನನ್ನು ಕಳುಹಿಸಿ Semen test ಮಾಡಿಸಬಹುದು. ಪೊಸಿಟಿವ್ ಆದರೆ ಬದುಕಿದೆ. ಅದಾಗದಿದ್ದರೆ ? ಯೋಚಿಸಲೂ ಭಯವಾಗು- ತ್ತದೆ.

ಚಂಪಾಳ ರೂಪ ಕಣ್ಣ ಮುಂದೆ ನರ್ತಿಸತೊಡ ಗುತ್ತದೆ. ಇಪ್ಪತ್ತೈದರ ಆ ಹೆಣ್ಣು 'ಇಪ್ಪತ್ತರ ಹೆಣ್ಣುತನ'ದಲ್ಲಿ ಆಹ್ವಾನಿಸುತ್ತಾಳೆ.

"ಹಲೋ ಡಾಕ್ಟರ್..., ಇಂದೇಕೋ ತುಂಬಾ ಬೋರು; ಅಪ್ರೂನೂ ಇಲ್ಲ. ನೀವು ತುಂಬಾ ಬೀಜೀನಾ ?"

"ಏನ್ರೀ ಡಾಕ್ಟ್ರೇ... ಎಲ್ಲಿಗೇಂತ ಹೊರಟಿ ದ್ದೀರಾ ? ನಾನು ಸಿನಿಮಾಕ್ಕೇಂತ ಹೊರಟೆ. ಆದ್ರೆ ಯಾರೂ ಕಂಪನೀನೆ ಇಲ್ಲಾ..."

"ಇಲ್ರಿ... ಇನ್ನೊಂದಿನ; ಈವತ್ತು ಅವ್ರು ಬರ್‍ತಾರೆ... please..."

"ಅಬ್ಬಾ... ನೀವು ಕಾಣುವಂತೆ ಅಲ್ಲಾ...! ಪರವಾಗಿಲ್ಲ ಬಿಡಿ, but natural... ಪ...ಪಾ ..."

ಅವಳ ಪ್ರತಿಯೊಂದು ಮಾತೂ ಕಿವಿಯಲ್ಲಿ ಪ್ರತಿಧ್ವನಿಸಿದಂತಾಗುತ್ತದೆ. ಆ ಸ್ಲೀವ್- ಲೆಸ್ ರವಕೆ, ಪಾರದರ್ಶಕ ಸೀರೆ, ತುಂಬು ಯೌವನದ ವಯ್ಯಾರದ ನಡಿಗೆ, ಮೋಡಿ ಹಾಕುವ ಮಾದಕ ಕಣ್ಣುಗಳು... ಇನ್ನೂ ಏನೇನೋ...

ಕುಳಿತಲ್ಲಿ ಕುಳಿತಿರಲಾರದೆ ಅತ್ತಿತ್ತ ಚಡಪಡಿಸುವಂತಾಗುತ್ತದೆ. ಕೊನೆಗೆ ಧೈರ್ಯ ತಂದುಕೊಂಡು ಆಸ್ಪತ್ರೆಗೆ ಫೋನು ಮಾಡುತ್ತೇನೆ. ಐದು ನಿಮಿಷ ಏನೇನೋ ಬಡಬಡಿಸುತ್ತೇನೆ. 'ಒಂದು ಸಂಸಾರ ಉಳಿಬೇಕಾಗಿದೆ' ಎಂಬುದನ್ನು ಒತ್ತಿ ಹೇಳುತ್ತೇನೆ. 'O. K. ರಾಪ್' ಎಂದು ಕೇಳಿಸಿದಾಗ ತೃಪ್ತಿಯಿಂದ, ನಿಟ್ಟುಸಿರು ಬಿಡುವಂತಾಗುತ್ತದೆ.

ರಾತ್ರಿಯೂಟ ರುಚಿಸುವುದಿಲ್ಲ ಎಲ್ಲವೂ ಯಾಂತ್ರಿಕವಾಗಿ ನಡೆಯುತ್ತದೆ. ಯಾರಲ್ಲೂ ಹೆಚ್ಚು ಮಾತನಾಡದೆ ಕೋಣೆ ಸೇರುತ್ತೇನೆ. ಒಂಟಿಯಾದಾಗ ಮತ್ತೆ ಯೋಚನೆಗಳು ಒಂದೊಂದಾಗಿ ಕೊಂಡಿ ಕಳಚತೊಡಗುತ್ತವೆ.

ಚಂಪಾ ಈ ರೀತಿ ಯಾಕೆ ಮಾಡಿದಳು? ನನ್ನಲ್ಲೂ ತಿಳಿಸಲಿಲ್ಲವೇಕೆ? ನಾನು ಒಂದು ತಿಂಗಳು ಊರಲ್ಲಿಲ್ಲದ ಕಾರಣ ಈ ಅನಾಹುತ ಘಟಿಸಿತೆ? ಅವಳು ಉದ್ದೇಶಪೂರ್ವಕವಾಗಿಯೇ ಈ ರೀತಿ ಮಾಡಿದಳೆ? ಹಾಗಾದರೆ ಅವಳ ಉದ್ದೇಶವಾದರೂ ಏನು? ಉತ್ತರವಿಲ್ಲದ ಪ್ರಶ್ನೆಗಳು ಕಾಡಿಸತೊಡಗಿದುವು.

ಬೆಳಿಗ್ಗೆ ಹತ್ತಕ್ಕೆ ಆತ ಡಿಸ್ಪೆನ್ಸರಿಗೆ ಬಂದಿದ್ದ. semen test ಗೆಂದು ಆತನನ್ನು ಆಸ್ಪತ್ರೆಗೆ ಶಾಮುವಿನೊಡನೆ ಕಳುಹಿಸಿ, ನಂತರ ಸಾಯಂಕಾಲ ಬಂದು ಕಾಣುವಂತೆ ತಿಳಿಸಿದೆ. ಆಸ್ಪತ್ರೆಗೆ ಫೋನುಮಾಡಿ, ಆತನಿಗೇನೂ ಹೇಳಿದೆ ರಿಪೋರ್ಟನ್ನು ನನಗೇ ಕಳುಹಿಸಲು ಹೇಳಿದೆ. ಮಿತ್ರ ಡಾಕ್ಟರರು ಎಲ್ಲದಕ್ಕೂ 'ಹೂಂ'ಗುಟ್ಟಿದ ನಂತರವೇ ರಿಸೀವರನ್ನು ಕೆಳಗಿರಿಸಿದ್ದೆ.

ಸಂಜೆ, ಶಾಮು Lab. report ಹೊತ್ತು ತಂದ. ಓದಿದೆ. ನಾನೆಣಿಸಿದಂತೆಯೇ ಇತ್ತು. ಆತ ತಂದೆಯಾಗುವ ಹಕ್ಕನ್ನು ಕಳೆದುಕೊಂಡಿದ್ದ. ಆತನನ್ನು ಯಾವ ರೀತಿಯಲ್ಲಿ ಎದುರಿಸಬೇಕೆಂದು ನಿರ್ಧರಿಸಿ, ಅವನನ್ನು ನಿರೀಕ್ಷಿಸತೊಡಗಿದೆ. ರೋಗಿಗಳತ್ತ ಪೂರ್ಣ ಗಮನವೀಯುವುದು ಸಾಧ್ಯವಾಗುವುದಿಲ್ಲ. ಟಿಕಿಟಿಕಿಸುತ್ತಾ ಕಳೆದು ಹೋಗುತ್ತಿದ್ದ ಒಂದೊಂದೇ ನಿಮಿಷಗಳು, ಇನ್ನು ಹೆಚ್ಚು ಸಮಯವೇನಿಲ್ಲ ಎಂದು ಎಚ್ಚರಿಸುತ್ತಿರುವಂತೆ ಅನಿಸುತ್ತದೆ.

ಗೋಡೆ ಗಡಿಯಾರ ಐದು ಬಾರಿ ಬಾರಿಸುತ್ತಲೇ ಇರುವಂತೆ, ಆತನ ಸ್ಕೂಟರ್ ಬಾಗಿಲ ಬಳಿ ಬಂದು ನಿಲ್ಲುತ್ತದೆ. ಒಳಗೆ ಬಂದವನೇ, "ಏನಾಯಿತು ಡಾಕ್ಟರ್...?" ಎಂದು ಆತುರದಿಂದ ಪ್ರಶ್ನಿಸುತ್ತಾನೆ. ಆತನನ್ನು ಕುಳಿತುಕೊಳ್ಳಲು ಹೇಳಿ, ಬಾಯಿಪಾಠ ಮಾಡಿಕೊಂಡಿದ್ದ ಮಾತನ್ನು ಒಪ್ಪಿಸಿದೆ: "ನೋಡ್ರೀ... ನಿಮ್ಗೆ ಮಾಡಿದ ಆಪರೇಶನ್ನಿನಲ್ಲಿ ಒಂದು ಚಿಕ್ಕ ತಪ್ಪಾಗಿದೆ. ನೀವಿನ್ನೂ ತಂದೆಯಾಗಬಲ್ಲಿರಿ. ಪರವಾಗಿಲ್ಲ, ನಾಡದು ಮಂಗಳವಾರ ಬನ್ನಿ, ನಾನೇ ಸರಿಪಡಿಸುತ್ತೇನೆ."

ಆತ ಕುರ್ಚಿಯಿಂದ ಒಮ್ಮೆಲೆ ಎದ್ದು ನಿಂತು, "ಅಯ್ಯೋ ಡಾಕ್ಟರ್, ನಾನು ಹೂವನ್ನು, ಸುಮ್ಮನೆ ಬಂದನಿಕೆಯೆಂದು ಶಂಕಿಸಿದ್ದೆ. ಪಾಪ, ಚಂಪಾ ತುಂಬಾ ನೊಂದುಕೊಂಡಿದ್ದಾಳೆ; ಬರುತ್ತೇನೆ, ನಮಸ್ಕಾರ," ಎಂದು ತನ್ನ ಮೊದಲಿನ ನಗೆಯೊಂದಿಗೆ ವಂದಿಸಿ ಹಿಂತೆರಳುತ್ತಾನೆ.

'ನಾನೇ ಸರಿಪಡಿಸುತ್ತೇನೆ,' ಎಂದಿದ್ದೆ. ಸರಿಪಡಿಸಿಕೊಳ್ಳಲೇಬೇಕೆಂದುಕೊಂಡು ಸರಕಾರಿ ಆಸ್ಪತ್ರೆಯತ್ತ ಕಾರು ಹೊರಡಿಸುತ್ತೇನೆ. ಕಾರಿನಲ್ಲಿ ತೇಲುತ್ತಿರುವಾಗ ಯೋಚಿಸಿದೆ; ನಾನು ಸುಳ್ಳು ಹೇಳಿ ಉಳಿಸಿದ್ದು ಆತನ ಸಂಸಾರವನ್ನೇ, ಅಥವಾ ನನ್ನದನ್ನೇ...? ನಾನು ನಿಜ ಹೇಳಿದ್ದರೆ ಆತನ ಸಂಸಾರ ಹಾಳಾಗುತ್ತಿತ್ತು. ಅದೇ ರೀತಿ ಚಂಪಾ ನಿಜ ಹೇಳಿದ್ದರೆ...? ಅಬ್ಬಾ...ಯೋಚಿಸುವಾಗಲೂ ನಡುಕವುಂಟಾಗಿತ್ತು. ಆತ ಬಂದನಿಕೆಯನ್ನೇ ಹೂವೆಂದುಕೊಂಡು ಸ್ವಾಗತಿಸಲು ಹೋಗಿದ್ದ. ನಾನು ಬಂದನಿಕೆಯನ್ನು ಶಾಶ್ವತವಾಗಿ ಕಿತ್ತೊಗೆಯಲು ಸರಕಾರಿ ಆಸ್ಪತ್ರೆಯ ಹೆಬ್ಬಾಗಿಲು ದಾಟಿದ್ದೆ. ✡

ಸ್ವಾತಂತ್ರ್ಯ ಸಂವಿಧಾನವನ್ನವಲಂಬಿಸಿಲ್ಲ, ಸ್ವತಂತ್ರವಾಗಬೇಕೆಂಬ ಸಂಕಲ್ಪವನ್ನವಲಂಬಿಸಿದೆ.

– ರಾಜಾಜಿ

ಜೂನ್ - 1977

ಈ ರಾಜ್, ಜಯಗಢ ಪ್ರದೇ?

ತೆರೆದಿದ್ದು ಜಯಗಢ ದುರ್ಗವನ್ನು ಮಾತ್ರ ಏಕೆ ಮುಚ್ಚಿಡಲಾಗಿತ್ತು? ಎಂಬ ಪ್ರಶ್ನೆ ಏಳುವುದು ಸ್ವಾಭಾವಿಕ. ಈ ಪ್ರಶ್ನೆಗಳಿಗೆ ಉತ್ತರವನ್ನು ಇತಿಹಾಸದ ಪುಟಗಳಲ್ಲಿ ಹುಡುಕಬಹುದು. ಆದರೆ ಅಲ್ಲಿಯೂ ಸರಿಯಾದ ವಿವರಣೆ ದೊರಕುತ್ತಿಲ್ಲ. ರಾಜಸ್ಥಾನದ ಇತಿಹಾಸಕ್ಕೆ ಸಂಬಂಧಿಸಿದ ಬೃಹದ್‌ಗ್ರಂಥಗಳಲ್ಲಿ ಈ ಜಯಗಢ ದುರ್ಗದ ಬಗೆಗೆ ಕೆಲವೇ ಪಂಕ್ತಿಗಳು ಸಿಗುತ್ತವೆ. ರಾಜಸ್ಥಾನದ ಇತಿಹಾಸವನ್ನು ಆಳವಾಗಿ ಅಭ್ಯಸಿಸಿದ ಟಾಡ್ ಕೂಡ ಈ ದುರ್ಗದ ಬಗ್ಗೆ ಹತ್ತು ಪಂಕ್ತಿಗಳಿಗಿಂತ ಹೆಚ್ಚು ಬರೆದಿಲ್ಲ. ರಾಜಸ್ಥಾನದ ಈ ದುರ್ಗವನ್ನು ಪ್ರವೇಶಿಸಿ ನೋಡಿದ್ದೇನೆಂದು ಹೇಳಿಕೊಳ್ಳುವವರು ಈಗ

ಲಕ್ಷ್ಮಿ ಇಲ್ಲಿ ಅಡಗಿಕೊಂಡಿದ್ದಾಳೆ!

ಎಸ್. ರೇವಣ್ಣ

ಕೆಲವು ತಿಂಗಳುಗಳಿಂದ ರಾಜಸ್ಥಾನದ ಜಯಗಢ ದುರ್ಗ ಜನತೆಯಲ್ಲಿ ಕುತೂಹಲವನ್ನು ಕೆರಳಿಸಿದೆ. ಸುಮಾರು ನೂರು ಕೋಟಿ ರೂಪಾಯಿಗಳ ಖಜಾನೆ ಈ ದುರ್ಗದಲ್ಲಿ ಅಡಗಿದೆ ಎಂಬ ಅಭಿಪ್ರಾಯವಿದೆ. ಅದನ್ನೇ ಈಗ ಭಾರತ ಸರಕಾರ ಶೋಧಿಸುತ್ತದೆ. ಅನೇಕ ಪುರಾತತ್ತ್ವ-ತಜ್ಞರು, ಸೈನ್ಯದ ಇಂಜನೀಯರುಗಳು, ಅಲ್ಲದೆ ೨೦೦ ಜನ ಕೂಲಿಯಾಳುಗಳು ಈ ಖಜಾನೆಯ ಶೋಧದಲ್ಲಿ ತೊಡಗಿದ್ದಾರೆ.

ಈ ಜಯಗಢ ದುರ್ಗ ಯಾವಾಗ, ಹೇಗೆ ನಿರ್ಮಿತವಾಯಿತು? ಇದರಲ್ಲಿ ಯಾರು ಖಜಾನೆಯನ್ನು ಹೂತಿಟ್ಟರು? ಈ ವಿಷಯ ಇವರೆಗೂ ಏಕೆ ಬೆಳಕಿಗೆ ಬಂದಿರಲಿಲ್ಲ? ಪ್ರಾಚೀನ ಯಾರೂ ಇಲ್ಲ. ರಾಜಪರಿವಾರದವರು ಮಾತ್ರ ತಮ್ಮ ಜೀವಮಾನದಲ್ಲಿ ಒಂದು ಸಲವೋ ಎರಡು ಸಲವೋ ಪ್ರವೇಶಿಸಿರಬಹುದು. ಹೀಗಿರುವಾಗ ಇದರ ರಹಸ್ಯ ಇನ್ನೂ ಹೆಚ್ಚಾಗುವುದು ಸಹಜ.

ಅಕಬರನ ಬಳಿ ಪ್ರಧಾನ ಸೇನಾಪತಿಯಾಗಿದ್ದ ರಾಜಾ ಮಾನಸಿಂಹ ಮೊಗಲ್ ಸಾಮ್ರಾಜ್ಯವನ್ನು ವಿಸ್ತರಿಸುವ ಸಲುವಾಗಿ ತನ್ನ ಜೀವನವನ್ನೇ ಮುಡುಪಾಗಿಟ್ಟಿದ್ದ. ಅಕಬರನ ಪರವಾಗಿ ಆತ ೬೭ ಯುದ್ಧಗಳಲ್ಲಿ ಭಾಗವಹಿಸಿದ್ದನೆಂಬ ಪ್ರತೀತಿ ಇದೆ. ಕಾಬುಲ್, ಕಂದಹಾರ, ಬಂಗಾಲ, ಪಂಜಾಬ, ಗುಜರಾತ, ಮುಂತಾದ ಪ್ರಾಂತಗಳನ್ನು ಗೆದ್ದು ಅಕಬರನಿಗಾಗಿ ಮಾನಸಿಂಹ ವಶಪಡಿಸಿಕೊಂಡ. ಪ್ರತಿ ಸಲ ವಿಜಯ ಗಳಿಸಿದ

ಆತ ಅಕಬರನ ಧ್ವಜವನ್ನು ಹಾರಿಸಿ ಅಲ್ಲಲ್ಲಿ ಆಸ್ತಿಪಾಸ್ತಿಗಳನ್ನೆಲ್ಲಾ ಕೊಳ್ಳೆ ಹೊಡೆಯುತ್ತಿದ್ದ. ಹೀಗೆ ಅಲ್ಲಿ ಲೂಟಿ ಮಾಡಿದ ಎಲ್ಲಾ ಅಮೂಲ್ಯ ವಸ್ತುಗಳನ್ನೂ ತಾನೇ ಇಟ್ಟುಕೊಳ್ಳುತ್ತಿದ್ದ. "ಝೋಂಡಾ ತುಮ್ಹಾರಾ, ಮಾಲ್ ಹಮಾರಾ" (ಪತಾಕೆ ನಿಮ್ಮದು, ಫಲ ನಮ್ಮದು) ಎಂಬ ಒಂದು ಒಪ್ಪಂದ ಅಕಬರ ಮತ್ತು ಮಾನಸಿಂಹರ ನಡುವೆ ಇದ್ದಿತೆಂದು ಪ್ರತೀತಿ ಇದೆ. ಈ ರೀತಿ ಎಲ್ಲ ಪ್ರದೇಶಗಳಲ್ಲೂ ಮೊಗಲರ ಧ್ವಜ ಹಾರಾಡುತ್ತಿದ್ದರೆ, ಆ ಪ್ರದೇಶಗಳಲ್ಲಿನ ಅಪಾರ ಧನಸಂಪತ್ತು ಮಾನಸಿಂಹನ ಕೈಗೆ ಬರುತ್ತಿತ್ತು.

ಲೂಟಿ ಮಾಡಿದ ವಸ್ತುಗಳನ್ನು ರಾಜಾಮಾನಸಿಂಹ ಒಂಟೆಗಳ ಮೇಲೆ ಹೇರಿಕೊಂಡು 'ಆಮೇರ್' ಎಂಬ ಪ್ರದೇಶಕ್ಕೆ ತರುತ್ತಿದ್ದ. ಹೀಗೆ ಅಲ್ಲಿ ಕೆಲವೇ ವರ್ಷಗಳಲ್ಲಿ ಕೋಟ್ಯಂತರ ರೂಪಾಯಿಗಳಷ್ಟು ಬೆಲೆ ಬಾಳುವ ವಸ್ತುಗಳ ಸಂಗ್ರಹವಾಯಿತು. ಆಮೇರಿನಲ್ಲಿ ಈ ಖಜಾನೆ ಇಡುವುದು ಅಪಾಯಕರವೆಂದು ತಿಳಿದು ರಾಜಾಮಾನಸಿಂಹನು ಹತ್ತಿರದಲ್ಲೇ ಒಂದು ಬೆಟ್ಟದ ಮೇಲೆ ಈ ಖಜಾನೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಒಂದು ಕೋಟೆಯ ನಿರ್ಮಾಣವನ್ನು ಪ್ರಾರಂಭಿಸಿದ. ಅತ್ಯಂತ ಚತುರನೂ ದೂರದರ್ಶಿಯೂ ಆದ ಅವನಿಗೆ ಮೊಗಲ್ ಚಕ್ರವರ್ತಿಗಳ ಮೇಲೆ ಎಳ್ಳಷ್ಟೂ ನಂಬಿಕೆ ಇರಲಿಲ್ಲ. ಬಹುಶಃ ಈ ಕಾರಣದಿಂದಲೆ ಆತ ಅಕಬರನನ್ನು ಕೂಡ ಆಮೇರಿಗೆ ಆಹ್ವಾನಿಸಲಿಲ್ಲ.

ದುರ್ಗದ ನಿರ್ಮಾಣ ಪ್ರಾರಂಭವಾಗುವಷ್ಟರಲ್ಲೆ ರಾಜಾಮಾನಸಿಂಹ ಸತ್ತುಹೋದ. ಅನಂತರ ಆಮೇರಿನ ಸಿಂಹಾಸನದ ಮೇಲೆ ಮಿರ್ಜಾ ರಾಜಾ ಜಯಸಿಂಹ ಆಸೀನನಾದ. ಖಜಾನೆಯ ವೃದ್ಧಿಯ ಕಾರ್ಯದಲ್ಲಿ ಇವನೂ ಮಾನಸಿಂಹನನ್ನೇ ಅನುಕರಿಸಿದ. ದುರ್ಗದ ನಿರ್ಮಾಣ ಕಾರ್ಯವನ್ನು ಜಯಸಿಂಹ ತ್ವರಿತಗೊಳಿಸಿದ. ಈ ಮಧ್ಯೆ ಜಯಸಿಂಹನಿಗೂ ಔರಂಗಜೇಬನಿಗೂ ಮನಸ್ತಾಪ ಉಂಟಾಯಿತು. ಔರಂಗಜೇಬನ ದೃಷ್ಟಿ ಈ ಖಜಾನೆಯ ಮೇಲೆ ಬಿದ್ದು ವಶಪಡಿಸಿಕೊಳ್ಳಬಹುದೆಂಬ ಹೆದರಿಕೆಯಿಂದ ಆತ ದುರ್ಗ ನಿರ್ಮಾಣವಾಗುತ್ತಿರುವಾಗಲೇ ಒಳಗಡೆ ಒಂದು ಸ್ಥಳದಲ್ಲಿ ಈ ಭಾರಿ ಖಜಾನೆಯನ್ನು ಹೂತಿಟ್ಟ.

ಮಿರ್ಜಾ ರಾಜಾ ಜಯಸಿಂಹನ ನಂತರ ಸವಾಯಿ ಜಯಸಿಂಹನ ಕಾಲದಲ್ಲಿ ದುರ್ಗದ ನಿರ್ಮಾಣ ಪೂರ್ತಿಗೊಂಡಿತು. ಸವಾಯಿ ಜಯಸಿಂಹನ ಹೆಸರನ್ನನುಸರಿಸಿ ಈ ದುರ್ಗಕ್ಕೆ 'ಜಯಗಢ'ವೆಂದು ಹೆಸರಿಡಲಾಯಿತು. ಗೋಪ್ಯವಾಗಿ ಇಟ್ಟಿರುವ ಖಜಾನೆಯ ವಿಷಯ ಅವನಿಗೆ ತಿಳಿದಿತ್ತು. ಸವಾಯಿ ಜಯಸಿಂಹನು ಕೂಡ ಲಕ್ಷಾಂತರ ರೂಪಾಯಿಗಳಷ್ಟು ಬೆಲೆ ಬಾಳುವ ವಜ್ರ ವೈಢೂರ್ಯಗಳನ್ನು ಸಂಗ್ರಹಿಸಿ ಈ ಖಜಾನೆಗೆ ಸೇರಿಸಿದ.

ಸವಾಯಿ ಜಯಸಿಂಹನ ನಂತರ ಜಯಪುರ, ಆಮೇರುಗಳಲ್ಲಿ ರಾಜಕೀಯ ಸ್ಥಿತಿ ಹದಗೆಟ್ಟಿತು. ಅನಂತರ ಅಧಿಕಾರಕ್ಕೆ ಬಂದ ರಾಜರುಗಳಿಗೆ ಈ ಖಜಾನೆಯ ವಿಷಯ ತಿಳಿದಿತ್ತೋ ಇಲ್ಲವೋ ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಕೆಲವು ರಾಜರುಗಳಿಗೆ ಈ ವಿಷಯ ಗೊತ್ತಿದ್ದರೂ ಖಜಾನೆಗೆ ಹೋಗುವ ಮಾರ್ಗ ಗೊತ್ತಿರಲಿಲ್ಲ. ಈವರೆವಿಗೂ ಈ ದುರ್ಗದಲ್ಲಿ ಐಶ್ವರ್ಯದ ಸಂಗ್ರಹ ಹಾಗೆಯೇ ಉಳಿದುಕೊಂಡಿದ್ದು ಈ ಕಾರಣದಿಂದಲೆ.

ಪ್ರಾರಂಭದಿಂದಲೇ ಈ ದುರ್ಗದ ಸಂರಕ್ಷಣೆಯ ಹೊಣೆ 'ಮೀಣಾ' ಎಂಬ ಪಂಗಡದ ಜನರ ಮೇಲಿತ್ತು. ಅವರು ಸಾಮಾನ್ಯವಾಗಿ ಸ್ವಾಮಿಭಕ್ತರು ಹಾಗೂ ವಿಶ್ವಾಸಪಾತ್ರರು. ಆದ್ದರಿಂದಲೇ ರಾಜಾ ಮಾನಸಿಂಹನು ದುರ್ಗದ ಸಂರಕ್ಷಣೆಯ ಭಾರವನ್ನು ಅವರಿಗೆ ವಹಿಸಿದ್ದ. ಅಂದಿನಿಂದಲೇ ರಾಜರು ತಮ್ಮ ಜೀವನದಲ್ಲಿ ಒಂದು ಸಾರಿ ಮಾತ್ರ ಖಜಾನೆಯನ್ನು ನೋಡುವ ಪದ್ಧತಿ ಜಾರಿಗೆ ಬಂತು. ಮಿರ್ಜಾ ರಾಜಾ ಜಯಸಿಂಹನು ಸಂಪೂರ್ಣ ಖಜಾನೆಯನ್ನು ದುರ್ಗದಲ್ಲಿ ಬಚ್ಚಿಡುವಾಗ ಯಾರಿಗೂ ಖಜಾನೆಯ ಮಾರ್ಗ ಗೊತ್ತಾಗಬಾರದೆಂದೂ ರಾಜರುಗಳಿಗೆ ಸಹ ಮಾರ್ಗ ತೋರಿಸಬಾರದೆಂದೂ ಮೀಣಾ ಜನರಿಗೆ ಆದೇಶ ನೀಡಿದ್ದ. ಈ ಆದೇಶವನ್ನು ನೂರಾರು ವರ್ಷಗಳ ವರೆಗೂ ಅವರು ಪಾಲಿಸಿಕೊಂಡು ಬಂದರು. ಹೀಗಾಗಿ

ರಾಜನು ಜೀವನದಲ್ಲಿ ಒಂದು ಸಾರಿ ಮಾತ್ರ ಖಜಾನೆಯನ್ನು ನೋಡಲು ಸಾಧ್ಯವಿತ್ತು. ಆ ಸಮಯದಲ್ಲಿ ಮೀಣಾ ಪಂಗಡದ ಸರದಾರ ಅವನ ಕಣ್ಣುಗಳಿಗೆ ಬಟ್ಟೆ ಕಟ್ಟಿ ತನ್ನ ಹೆಗಲ ಮೇಲೆ ಅವನನ್ನು ಹೊತ್ತುಕೊಂಡು ಖಜಾನೆಯ ಬಳಿಗೆ ಕರೆದೊಯ್ಯುತ್ತಿದ್ದ. ಅಲ್ಲಿ ಕಣ್ಣುಪಟ್ಟಿ ಬಿಚ್ಚಿದ ನಂತರ ರಾಜನು ತನಗೆ ಬೇಕಾದಷ್ಟು ಐಶ್ವರ್ಯ ವನ್ನು ತೆಗೆದುಕೊಂಡು ನಂತರ ಪುನಃ ಕಣ್ಣು ಪಟ್ಟಿಯೊಡನೆ ಅವನನ್ನು ಹೊತ್ತುಕೊಂಡು ಹೊರಕ್ಕೆ ಬರುತ್ತಿದ್ದ. ಈ ರೀತಿ ಮೀಣಾ ಜನರು ಕೊನೆಯವರೆಗೂ ಈ ಪರಂಪರೆಯನ್ನು ಬಹಳ ತತ್ಪರತೆಯಿಂದ ಪಾಲಿಸಿಕೊಂಡು ಬಂದರು.

ಆದರೆ ಮಹಾರಾಣಿ ಗಾಯಿತ್ರೀದೇವಿಯ ಪತಿ ರಾಜಾ ಮಾನಸಿಂಹನ ಕಾಲದಲ್ಲಿ ಈ ಪರಂಪರೆ ಮುಗಿದುಹೋಗಿತ್ತು. ಒಮ್ಮೆ ರಾಜಾ ಮಾನಸಿಂಹನು ಕಣ್ಣುಪಟ್ಟಿ ಕಟ್ಟಿಸಿ ಕೊಂಡು ಖಜಾನೆಯನ್ನು ನೋಡಿದ. ಆತ [illegible] [illegible] ನೋಡಬೇಕೆಂದು ಇಚ್ಛೆ ಪಟ್ಟಾಗ ಮೀಣಾ ಸರದಾರನು ಒಪ್ಪಲಿಲ್ಲ. ಮೀಣಾ ಜನರನ್ನು ಒಲಿಸಿಕೊಳ್ಳಲು ಮಾನ- ಸಿಂಹ ಬಹಳ ಪ್ರಯತ್ನಪಟ್ಟ. ಪ್ರಲೋ- ಭನೆಗಳನ್ನು ತೋರಿಸಿದ. ಆದರೆ ಮೀಣಾ ಜನರು ಅವನ ಯಾವ ಪ್ರಲೋಭನೆಗಳಿಗೂ ಬಗ್ಗದೆ ಪರಂಪರೆಯನ್ನು ಉಳಿಸಿಕೊಂಡರು. ಆಗ ಮಾನಸಿಂಹನು ಒಂದು ಸೈನ್ಯವನ್ನೇ ಕಟ್ಟಿ- ದುರ್ಗದ ಮೇಲೆ ಆಕ್ರಮಣ ಮಾಡಿ ತುಪಾಕಿ, ಬಂದೂಕುಗಳ ಬಲದಿಂದ ಮೀಣಾ ಜನರನ್ನು ದುರ್ಗದಿಂದ ಹೊರಗಟ್ಟಿದ. ಅಂದಿನಿಂದ ದುರ್ಗದ ಸಂರಕ್ಷಣೆಯ ಹೊಣೆ ರಜಪೂತರ ಪಾಲಿಗೆ ಬಂತು. ಈ ಘಟನೆ ನಡೆದದ್ದು ೧೯೪೨-೪೩ ರಲ್ಲಿ.

ತನ್ನ ಪೂರ್ವಜ ರಾಜಾ ಮಾಧೋ- ಸಿಂಹನ ಬಳಿ ನೌಕರನಾಗಿದ್ದ ಬಾಲಾಜಿ ಖವಾಸ- ನಿಗೆ ಈ ಖಜಾನೆಯ ರಹಸ್ಯ ಗೊತ್ತಿದೆಯೆಂದು ರಾಜಾ ಮಾನಸಿಂಹನಿಗೆ ತಿಳಿದಿತ್ತು. ಮಾನ- ಸಿಂಹನು ಆ ನೌಕರನಿಗೆ ಅನೇಕ ರೀತಿಯ ಆಶ್ವಾ- ಸನೆಗಳನ್ನು ಕೊಟ್ಟ, ಹೆದರಿಸಿದ, ಬೆದರಿಸಿದ. ಇಷ್ಟಾದರೂ ಬಾಲಾಜಿ ಖವಾಸನು ಖಜಾನೆಯ ರಹಸ್ಯವನ್ನು ಹೇಳಲು ನಿರಾಕರಿಸಿದ. ಈ



ಮಧ್ಯೆ ೧೯೭೦ರಲ್ಲಿ ರಾಜಾ ಮಾನಸಿಂಹನು ಪೋಲೋ ಆಡುತ್ತಿರುವಾಗ ಅಸು ನೀಗಿದ. ಅಂದಿನಿಂದ ಈ ಖಜಾನೆಯ ಸಂಶೋಧನೆ ನಿಂತು ಹೋಯಿತು.

ರಾಜಾ ಮಾನಸಿಂಹನ ಉತ್ತರಾಧಿಕಾರಿಗಳಾದ ಜಯಪುರದ ರಾಜಾ ಭವಾನಿಸಿಂಹರಿಗೆ ಈ ಖಜಾನೆಯ ವಿಷಯ ಗೊತ್ತಿರಲಿಲ್ಲ. ಕಳೆದ ವರ್ಷ ಇನ್‌ಕಮ್ ಟ್ಯಾಕ್ಸ್ ಅಧಿಕಾರಿಗಳು ಮಹಾರಾಣಿ ಗಾಯಿತ್ರೀದೇವಿಯ ಭವನದ ಮೇಲೆ ದಾಳಿ ಮಾಡಿದಾಗ ಸುಮಾರು ೧೦ಕೋಟಿ ರೂಪಾಯಿಗಳ ಖಜಾನೆ ಬೆಳಕಿಗೆ ಬಂತು. ಆಗ ಮರೆತು ಹೋಗಿದ್ದ ಜಯಗಢ ದುರ್ಗದ ಈ ರಹಸ್ಯಮಯ ಖಜಾನೆಯ ವಿಷಯ ಪುನಃ ಸ್ಮರಣೆಗೆ ಬಂದಿತು.

ಇತ್ತೀಚೆಗೆ ರಾವ್ ಕೃಪಾರಾಮನ ವಂಶಜರೊಬ್ಬರು ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳಿಗೆ ಜಯಗಢ ದುರ್ಗದ ಖಜಾನೆಯ ಒಂದು ನಕ್ಷೆಯನ್ನು ಕೊಟ್ಟರು. ರಾವ್ ಕೃಪಾರಾಮ ಸವಾಯಿ ಜಯಸಿಂಹನ ವಿಶ್ವಾಸಪಾತ್ರ ದಿವಾನನಾಗಿದ್ದ. ಜಯಸಿಂಹನು ಕೃಪಾರಾಮನಿಗೆ ನಕ್ಷೆಯ ಒಂದು ಕಾಪಿಯನ್ನು ಕೊಟ್ಟಿದ್ದ. ಇದೇ ನಕ್ಷೆಯನ್ನು ರಾವ್ ಕೃಪಾರಾಮನ ವಂಶಜರು ಇನ್‌ಕಮ್‌ಟ್ಯಾಕ್ಸ್ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ.

ಈ ನಕ್ಷೆಯನ್ನು ಚರ್ಮದ ಮೇಲೆ ಮಾಡಲಾಗಿದ್ದು ಒಂದು ಕಡೆ ಧುಂಧಾರಿ ಮತ್ತೊಂದು ಕಡೆ ಪಾರಸಿಯ ಬರವಣಿಗೆ ಇದೆ. ಮೊದಲು ಅಧಿಕಾರಿಗಳು ಈ ನಕ್ಷೆಯ ವಿಷಯದಲ್ಲಿ ಅಷ್ಟು ಆಸಕ್ತಿ ತೋರಿಸಲಿಲ್ಲ. ಅದನ್ನು ಪರೀಕ್ಷೆಗೊಳಪಡಿಸಿದಾಗ ಅದು ಐತಿಹಾಸಿಕ ಕಾಲದಲ್ಲಿ ತಯಾರಿಸಿದ ನಕ್ಷೆಯೆಂದು ಖಚಿತವಾಯಿತು. ಚರ್ಮದ ಮೇಲಿರುವ ಕಾಗದ ಮತ್ತು ಮಸಿ ೨೫೦ ವರ್ಷಗಳಷ್ಟು ಹಳೆಯದೆಂದು ಊಹಿಸಲಾಗಿದೆ. ಈ ನಕ್ಷೆಯ ಆಧಾರದ ಮೇಲೆ ಭಾರತ ಸರಕಾರ ಖಜಾನೆಯನ್ನು ಶೋಧಿಸಬೇಕೆಂದು ನಿರ್ಣಯ ಮಾಡಿತು. ಈಗ ಈ ಖಜಾನೆಯ ಶೋಧನೆಯ ಕಾರ್ಯ ಮುಂದುವರಿದಿದೆ.

ನಕ್ಷೆಯ ವಿವರಣೆ ಬಹಳ ರಹಸ್ಯಮಯವಾಗಿದೆ. ಅದರಲ್ಲಿ ಬರೆದಿರುವಂತೆ ದುರ್ಗದ ಒಳಗಡೆ ಒಂದು ನೀರಿನ ಕೊಳದ ಮುಖಾಂತರ ಖಜಾನೆಗೆ ದಾರಿಯಿದೆ. ಆದರೆ ದುರ್ಗದಲ್ಲಿ ಏಳು ಕೊಳಗಳಿವೆ. ಯಾವ ಕೊಳದ ಮುಖಾಂತರ ಹೋಗಬೇಕೆಂಬುದು ಸ್ಪಷ್ಟವಿಲ್ಲ. ಮತ್ತೆ ಅದರಲ್ಲಿ ಬರೆದಿರುವಂತೆ 'ಒಂದು ಕೊಳದಲ್ಲಿ ಶಿವಪೋಲ್ ಇದೆ. ಅಲ್ಲಿಂದ ಸುಮಾರು ೧೬೦ ಗಜದಷ್ಟು ಕೆಳಕ್ಕೆ ಕೊಳದಿಂದ ಖಜಾನೆಗೆ ದಾರಿ ಹೋಗುತ್ತದೆ. ಆ ನಕ್ಷೆಯಲ್ಲಿ ಇಂತಿಷ್ಟು ಹೆಜ್ಜೆಗಳು ಎಡಗಡೆ ಮತ್ತು ಬಲಗಡೆ ಹೋಗಬೇಕು; ನೇರವಾಗಿ ಇಂತಿಷ್ಟು ಹೆಜ್ಜೆಗಳೇ ಹೋಗಬೇಕು. ಅಲ್ಲಿ ಒಂದು ಪೀಠವಿದೆ. ಆ ಪೀಠದ ಮೇಲೆ ಐದು ಬೆಳ್ಳಿಯ ನಾಣ್ಯಗಳು ಮತ್ತು ಬೀಗದ ಕೈ ಇರುವುದು. ಅದರ ಎದುರಿನಲ್ಲೇ ಪ್ರವೇಶದ್ವಾರವಿರುವುದು. ಬೀಗದ ಕೈಯಿಂದ ಬೀಗ ತೆಗೆಯಿರಿ. ಮೆಟ್ಟಲುಗಳಿವೆ. ಮೆಟ್ಟಲುಗಳನ್ನು ಹತ್ತಿ ಬಂದರೆ ಅಂಗಳ ಕಾಣುವುದು. ಅಲ್ಲಿರುವ ಪೆಟ್ಟಿಗೆಗಳಲ್ಲಿ ಮತ್ತು ಕಲಶಗಳಲ್ಲಿ ಖಜಾನೆ ಇದೆ' ಎಂದೆಲ್ಲಾ ವಿವರಣೆ ಇದೆ.

ಅನೇಕ ದಿನಗಳ ವರೆಗೂ ಶಿವಪೋಲ್ ಪತ್ತೆಯಾಗಲಿಲ್ಲ. ಮೂರೂ ಕೊಳಗಳನ್ನು ಅಗೆದು ಖಾಲಿ ಮಾಡಲಾಯಿತು. ಆದರೆ ಖಜಾನೆಯ ಮಾರ್ಗ ಪತ್ತೆಯಾಗಲಿಲ್ಲ. ಆ ಕೊಳಗಳಲ್ಲಿ ಕೆಲವು ಕತ್ತಿಗಳು ಹಾಗೂ ಬಂದೂಕುಗಳು ಮಾತ್ರ ದೊರೆತಿವೆ.

ಬಹಳ ದಿನಗಳ ವರೆಗೆ ಸತತವಾಗಿ ಪ್ರಯತ್ನ ನಡೆಸಿದ್ದರಿಂದ ಶಿವಪೋಲ್ ಇತ್ತೀಚೆಗಷ್ಟೇ ಶಿವಪೋಲ್ ಪತ್ತೆಯಾಗಿದೆ. ಇದೇ ಆಧಾರದ ಮೇಲೆ ತೀವ್ರ ಗತಿಯಿಂದ ಶೋಧಕಾರ್ಯ ಮುಂದುವರಿದಿದೆ. ಈ ವರೆಗೂ ಜಿದಂಬರ ರಹಸ್ಯವಾಗಿದ್ದ ಜಗತ್ತಿನಲ್ಲೇ ಅತ್ಯಮೂಲ್ಯವಾದ ಈ ಖಜಾನೆಯ ರಹಸ್ಯ ಬಯಲಾಗುವ ದಿನ ಇನ್ನು ದೂರವಿಲ್ಲ.

ರೋಮೇನ್ ರೋಲಾಂಡ್: ಮಾನವಶ್ರೇಷ್ಠ

ಪಿ. ವಿ. ಶಾಸ್ತ್ರಿ

ನ[illegible]. ಬೇಕಾದರೆ ಸಾಯಿ. ಆದರೆ ಆಗಲೂ ನೀನು ಮನುಷ್ಯನಾಗಿರು. ಮೊದಲು ನಿನ್ನಲ್ಲಿ ನಂಬಿಕೆಯಿಡು; ಆಮೇಲೆ ದೇವರಲ್ಲಿ. ಆತ್ಮ ವಿಶ್ವಾಸವುಳ್ಳವರು ಕೆಲವರೇ ಆದರೂ ಈ ಜಗತ್ತನ್ನು ಮುಂದೆ ನಡೆಯಿಸಿದವರು ಅವರೇ' ಎಂದ ಆದರ್ಶವಾದಿ ರೋಮೇನ್ ರೋಲಾಂಡ್. 'ನೋವಿನ ಗರ್ಭದಿಂದಲೇ ಸಂತೋಷದ ಶಿಶು ಹುಟ್ಟಿ ಬರಬೇಕು. ಬದುಕಿನ ಹೋರಾಟದಲ್ಲಿ ಆತ್ಮದ ಗೆಲುವಿನ ನಗೆಯಾಗಿ ಆನಂದ ಅವತರಿಸಿ ಬರುತ್ತದೆ' ಎಂದುಸುರಿದ ಅವರು ಆಶಾವಾದಿ. ಕೇವಲ ಸ್ವಾರ್ಥಪರ [illegible] ಸಮಾಜ-ವನ್ನು ಉದ್ಧರಿಸಲೆಂದೇ ರೋಲಾಂಡರು 'ಜೀನ್ ಕಿಸ್ಟೋಫ್'ನ್ನು ಬರೆದರು. ಅದು ೧೯೧೩ ರಲ್ಲಿ ಫ್ರೆಂಚ್ ಅಕಾಡಮಿಯ ಗ್ರ್ಯಾಂಡ್ ಪಾರಿತೋಷಕವನ್ನು ಗೆದ್ದಿತು. ೧೯೧೫ರಲ್ಲಿ ನೋಬೆಲ್ ಸಾಹಿತ್ಯ ಪುರಸ್ಕಾರ ಅದೇ ಕೃತಿಗೆ ದೊರೆಯಿತು.

'ಜೀನ್ ಕ್ರಿಸ್ಟೋಫ್' ಒಂದು ಗದ್ಯ ಮಹಾ-[illegible] ಸಮಾಜದ ಜೀವನದರ್ಶನ. ಅಲ್ಲಿರುವುದು ತತ್ವ [illegible] ನಿರಾಶಾಮಯವಾದ ಒಂದು ಯಥಾರ್ಥ ಚಿತ್ರ.

ಇಂಥ ಸಮಾಜವನ್ನುದ್ಧರಿಸುವುದು ಹೇಗೆ ಎಂಬುದು ರೋಲಾಂಡರ ವ್ಯಥೆ. ಅದೇ ಕಥೆ-ಯಾಯಿತು ಅವರ ಕೃತಿಗಳಲ್ಲಿ. ಅವರು ಮಹಾತ್ಮರ ಜೀವನಚರಿತ್ರೆಗಳನ್ನು ಬರೆದರು. 'ಮಂತ್ರ ಮುಗ್ಧ ಆತ್ಮ' (ದಿ ಸೋಲ್ ಎಂಚಾಂಟೆಡ್) ಎಂಬ ಏಳು ಭಾಗಗಳ ಮಹಾ ಕಾದಂಬರಿಯನ್ನು ಬರೆದರು. 'ತೋಳಗಳು' (ದಿ ವೂಲ್ವ್ಸ್) ಅಂಥ ನಾಟಕಗಳನ್ನು ರಚಿಸಿದರು. ಯುದ್ಧ ಕಾಲದಲ್ಲಿ 'ಜರ್ನಲ್ ಡಿ ಜನೇವಾ' ಪತ್ರಿಕೆಗಳ [illegible]



ಬೀರಿದರು.

ಅವರ ಕಥಾನಾಯಕರು ಪ್ಲುಟಾರ್ಕ್‌ನ ಕೃತಿಗಳ ನಾಯಕರಂತೆ ರಾಜವಂಶಸಂಭೂತರಲ್ಲ, ಜಗತ್ಪ್ರಸಿದ್ಧ ಯೋಧರೂ ಅಲ್ಲ. ನೀಷೆ ವರ್ಣಿಸಿದ ಅತಿ- ಮಾನವರನ್ನು ಅವರು ನಾಯಕರನ್ನಾಗಿ ಆರಿಸಿಕೊಳ್ಳಲಿಲ್ಲ. ಜೀನ್ ಕ್ರಿಸ್ತೋಫ್‌ದಲ್ಲಿ ಅವರೇ ಹೇಳಿಕೊಂಡಂತೆ, "ನನ್ನ ನಾಯಕರು ಚಾರಿತ್ರ್ಯವುಳ್ಳವರು. ನಿರ್ಮಲಾಂತಃಕರಣದ ನಿರ್ಭೀತ ಮಾನವತಾವಾದಿಗಳು."

ರೋಲಾಂಡರು ಬೀಥೋವನ್, ಮೈಕೇಲ್ ಏಂಜೆಲೋ, ಟಾಲ್‌ಸ್ಟಾಯ್, ರೂಸೋ, ಡಾಂಟೆ, ಹಾಕ್, ಸಂತ ಲೂಯಿ, ಹ್ಯಾಂಡೆಲ್, ಗಯಟೆ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ಮಹಾತ್ಮಾ ಗಾಂಧೀಜಿಯವರನ್ನು ಮಾತ್ರ ಎಲ್ಲ ವ್ಯಕ್ತಿಗಳಿಂದ ಪರಿಪೂರ್ಣರಾದ ಮಹಾವ್ಯಕ್ತಿಗಳೆಂದು ಹೇಳಿದ್ದಾರೆ. ಇವರಿಗೆ ಪ್ರಾದೇಶಿಕತೆಯ ಬಂಧನವಿಲ್ಲ, ಕಾಲದ ಗಡಿಯಿಲ್ಲ. ಇವರೆಲ್ಲ ಮಾನವಕುಲದ ಉದ್ಧಾರಕ್ಕೆ ಆದರ್ಶಪೂರ್ಣ ಜೀವನಗಳನ್ನು ಇಟ್ಟು ಹೋದವರು.

ಮಹಾ ಪುರುಷರೆಂದರೆ ಅವರ ದೃಷ್ಟಿಯಲ್ಲಿ ಅವತಾರೀಪುರುಷರಲ್ಲ, ಅವರೂ ನಮ್ಮವರಲ್ಲಿ ಸಮಾವೇಶಗೊಳ್ಳುವವರೇ. ಕುರಿಗಳನ್ನು ತರುಬಿ ಕೊಂಡು ಹೋಗುವ ಕುರುಬರಲ್ಲ. ಅವರು ದನದ ಮುಂದೆಯು ಮುಂದಿರುವ ನಂದಿಗಳಂತೆ!

೧೮೬೬ರ ಜನವರಿ ೨೯ರಂದು ಫ್ರಾನ್ಸಿನ ಕ್ಲೆಮ್ಸಿ ಎಂಬ ಚಿಕ್ಕ ಹಳ್ಳಿಯಲ್ಲಿ ಜನಿಸಿದರು. ತಂದೆ ಪ್ರಜಾಪ್ರಭುತ್ವವಾದಿ, ವೃತ್ತಿಯಿಂದ ವಕೀಲ. ತಾಯಿ ಸಂಗೀತಪ್ರಿಯೆ. ಇಬ್ಬರೂ ನಿಷ್ಠಾವಂತ ಕ್ಯಾಥೋಲಿಕರು. ತಂದೆಯ ತಾರ್ಕಿಕ ವಿಚಾರ ಸರಣಿ, ತಾಯಿಯ ಸಂಗೀತಪ್ರಿಯವಾದ ಹೃದಯಮಾಧುರ್ಯದ ಸಮನ್ವಯವಾಗಿ ಜನ್ಮವೆತ್ತಿದ್ದ ಮಗು ರೋಲಾಂಡರು. ಅವರು ಅಕ್ಷರ ಕಲಿಯುವ ಮೊದಲೇ ಸಂಗೀತ ಕಲಿತರು. ಬಾಲ್ಯದಲ್ಲಿ ಅನಾರೋಗ್ಯದ ಬಾಧೆಯನ್ನು ಸಂಗೀತ, ಸಾಹಿತ್ಯಗಳಿಂದ ತಕ್ಕಮಟ್ಟಿಗೆ ಕಡಿಮೆ ಮಾಡಿಕೊಂಡರು. ೧೮೮೯ರಲ್ಲಿ ಇತಿಹಾಸ, ಭೂಗರ್ಭಶಾಸ್ತ್ರಗಳಲ್ಲಿ ಪದವೀಧರರಾದರು. ಬಳಿಕ ಇಟಲಿ, ಸಿಸಿಲಿಗಳಲ್ಲಿ ಪ್ರವಾಸ ಮಾಡಿ ಪಶ್ಚಿಮ ಯುರೋಪಿನ ಸಮಾಜವನ್ನು ಆಳವಾಗಿ ಅಭ್ಯಸಿಸಿದರು. ಅಲ್ಲಿಯ ಆದರ್ಶವಾದಿಗಳೊಂದಿಗೆ ಸ್ನೇಹ ಬೆಳೆಸಿದರು. ಫ್ರಾನ್ಸಿಗೆ ಮರಳಿದ ಮೇಲೆ ಭಾಷಾವಿಜ್ಞಾನಿಯಾದ ಮೈಕೇಲ್ ಬ್ರೇಲ್‌ನ ಮಗಳು ಮೇರಿಯನ್ನು ಮದುವೆಯಾದರು.

ಅವರು ಶ್ರದ್ಧಾವಂತ ಬೌದ್ಧಿಕವಾದಿಗಳು; ಸಮಾಜಪ್ರಜ್ಞೆಯುಳ್ಳ ವ್ಯಾವಹಾರಿಕ ಆದರ್ಶವಾದಿಗಳೂ ಹೌದು. ಪರೋಪಕಾರ, ಪರಹಿತ ಚಿಂತನೆಗಳಲ್ಲಿಯೇ ಮಗ್ನರಾದ ಸ್ವಾತಂತ್ರ್ಯವಾದಿಗಳು; ಪ್ರಜಾತಂತ್ರವಾದಿಗಳು. ಅವರು ಲೆನಿನ್, ನೀಷೆಯನ್ನು ಮೆಚ್ಚಿದ ಕ್ರಾಂತಿಕಾರಿ; ಸಮಾಜವಾದಿಗಳು. ಟಾಲ್‌ಸ್ಟಾಯ್, ಗಾಂಧೀಜಿಯವರನ್ನು ಪೂಜಿಸಿದ ಅವರು ಶಾಂತಿವಾದಿ; ಸರ್ವೋದಯವಾದಿಗಳು.

ಮೊದಲನೇ ಮಹಾಯುದ್ಧ ಪ್ರಾರಂಭವಾದಾಗ ವಿಶ್ವಮೈತ್ರಿ-ಶಾಂತಿಗಳ ಅಗತ್ಯವನ್ನು ಕುರಿತು ಲೇಖನಗಳನ್ನು ಬರೆದು ತತ್ಪರಿಣಾಮವಾಗಿ ಜರ್ಮನಿಯಲ್ಲಿ ಮಾತ್ರವೇ ಅಲ್ಲ, ತಾವು ಜನಿಸಿದ ಫ್ರಾನ್ಸಿನಲ್ಲೂ ಜನತೆಯಿಂದ ಅಪಖ್ಯಾತಿಗೀಡಾದರು. ಅವರ ಸಾಹಿತ್ಯ ಕೃತಿಗಳು ಬಹಿಷ್ಕರಿಸಲ್ಪಟ್ಟವು. ಸ್ವೀಡನ್ನಿನ ನೊಬೆಲ್ ಅಕಾಡೆಮಿಯಲ್ಲೂ ಮತಭೇದ ತಲೆಯೆತ್ತಿತು. ಅವರೆ ಸ್ಪೇನಿನ ಲೇಖಕ ಫಿರೆರ್ಮಗಾಲ್ಡೋ ಪರಮೋಚ್ಚ ಆದರ್ಶವಾದ, ಪೂರ್ಣಜೀವನದ ಮಾಧುರ್ಯ, ಮಾನವಕುಲದ ಬಗೆಗಿನ ಆರ್ದ್ರ ಪ್ರೇಮ, ಸತ್ಯನಿಷ್ಠೆಗಳು 'ಜೀನ್ ಕ್ರಿಸ್ತೋಫ್'ದ ಕೊಡುಗೆಯೆಂದು ಘೋಷಿಸಿದರು. ಎರಡನೇ ಮಹಾಯುದ್ಧದ ಹೊತ್ತಿಗೆ ಅವರು ಸಂಪೂರ್ಣ ಸಮಾಜವಾದಿಯಾಗಿದ್ದರು. "ಬನ್ನಿ, ಮಾನವ ಕುಲ ಗಂಡಾಂತರದಲ್ಲಿದೆ. ನಾವೆಲ್ಲ ಸೇರಿ ಉಳಿಸೋಣ" ಎಂದು ಶಾಂತಿವಾದಿಗಳನ್ನು ಜಾಗ್ರತಗೊಳಿಸಿದರು; ಪ್ರಾರ್ಥಿಸಿದರು. ಅವರ ಲೇಖನಗಳು ಬರ್ಲಿನ್ನಿನಲ್ಲಿ ಬಿರುಗಾಳಿಯೆಬ್ಬಿಸಿದವು. ಅದೇ ಸಮಯದಲ್ಲಿ ಅವರು ಸ್ವಿಟ್ಜರ್ಲೆಂಡಿಗೆ ತೆರಳಿದರು. ಅಲ್ಲಿ ಅವರನ್ನು ಗೃಹಬಂಧನದಲ್ಲಿರಿಸಲಾಯಿತು.

ಅಶಾಂತಿಯ ಅಗ್ನಿಕುಂಡದಲ್ಲಿ ಉರಿಯುತ್ತಿದ್ದ ಪಾಶ್ಚಾತ್ಯ ರಾಷ್ಟ್ರಗಳ ಸ್ಥಿತಿಗತಿಗಳನ್ನು ಕುರಿತು ಟಾಲ್‌ಸ್ಟಾಯ್‌ರಿಗೆ ಒಂದು ಹೃದಯವ್ಯಾಪಕವಾದ ಪತ್ರ ಬರೆದರು. ಅದು ತಮ್ಮನ್ನು ಕಣ್ಣೀರುಗರೆಯುವಂತೆ ಮಾಡಿತೆಂದು ಟಾಲ್‌ಸ್ಟಾಯ್ ಒಂದೆಡೆ ಬರೆದಿದ್ದಾರೆ.

'ಪಾಶ್ಚಾತ್ಯರ ದೃಷ್ಟಿ ಸಂಕುಚಿತವಾಗಿದೆ. ರೋಮನ್ನರ ಸಾಮ್ರಾಜ್ಯ ವೈಭವ, ಆಶೋತ್ತರಗಳು ಸಂಪೂರ್ಣವಾಗಿ ಮರೆತುಹೋಗಿವೆ. ಆದರೆ ಏಶಿಯವಿನ್ನೂ ಆಶಾದಾಯಕವಾಗಿದೆ. ಪೂರ್ವ ಅಪೂರ್ವವಾಗಿದೆ. ಮಂಗಲಮಯ ಶಾಂತಿ ಅಲ್ಲಿ ವಿಜೃಂಭಿಸುತ್ತಿದೆ' ಎಂದು ಘೋಷಿಸಿದ ಅವರಿಗೆ ಪೌರಸ್ತ್ಯ ರಾಷ್ಟ್ರಗಳಲ್ಲಿ ಅಪಾರ ನಂಬುಗೆ.

೧೯೩೫ರಲ್ಲಿ ಅವರು ಮ್ಯಾಕ್ಸಿಂ ಗಾರ್ಕಿಯ ಆಮಂತ್ರಣದ ಮೇರೆಗೆ ರಶಿಯಕ್ಕೆ ಭೆಟ್ಟಿಯಿತ್ತರು. ನೀತಿ, ಧರ್ಮಗಳು ಸಾಧಿಸಲಾಗದ್ದನ್ನು ಗಾರ್ಕಿ ಕಲಾಮಾಧ್ಯಮದಿಂದ ಮಾಡಿ ತೋರಿಸಿದ್ದರು. ಹತ್ತೊಂಭತ್ತನೆಯ ಶತಮಾನದ ಕೊನೆಯ ದಶಕಗಳು ಕಂಡ ಕನಸುಗಳನ್ನು ಇಪ್ಪತ್ತನೆಯ ಶತಮಾನದಲ್ಲಿ ರಶಿಯವು ನನಸಾಗಿಸಿದುದನ್ನು ನೋಡಿದ ರೋಲಾಂಡರು— 'ಆಧುನಿಕ ಯುರೋಪ್ ಮತ್ತು ಅದರ ಸಾಹಿತ್ಯ ಸರ್ವನಾಶವನ್ನು ತಪ್ಪಿಸಿಕೊಳ್ಳಲು ಸಮಾಜವಾದಕ್ಕೇ ಮೊರೆಹೋಗಬೇಕು' ಎಂದು ಅಭಿಪ್ರಾಯಪಟ್ಟರು. ಸಮಾಜವಾದದತ್ತ ಒಲಿಯಲು ಅವರಿಗೆ ಎರಡು ಕಾರಣಗಳಿದ್ದವು. ಒಂದು ಶಾಂತಿಸ್ಥಾಪನೆಗಾಗಿ ಅವರು ಎರಡು ಮಹಾಯುದ್ಧ ಕಾಲಗಳಲ್ಲಿ ಪಟ್ಟ ಪ್ರಯತ್ನಗಳು ಅವರಿಗೆ ರಾಷ್ಟ್ರದ್ರೋಹಿಯೆಂಬ ಬಿರುದನ್ನು ಸಾಮ್ರಾಜ್ಯವಾದಿಗಳಿಂದ ತಂದಿತ್ತಿದ್ದವು. ಎರಡನೆಯದಾಗಿ ಅವರು ಅಂತಾರಾಷ್ಟ್ರೀಯತಾವಾದಿಗಳೂ; ಮಾನವತಾವಾದಿಗಳೂ ಆಗಿದ್ದರು. ೧೯೪೦ರ ಹೊತ್ತಿಗೆ 'ರಾಷ್ಟ್ರೀಯ ಸಾಹಿತ್ಯದ ಕಾಲ ಮುಗಿಯಿತು' ಎಂದು ಉದ್ಗರಿಸಿದ ಅವರು, "ನನ್ನ ಕಲೆಯ ಸ್ವಪ್ನ, ನನ್ನ ಜೀವನದ ಆಕಾಂಕ್ಷೆಗಳು, 'ಜೀನ್ ಕ್ರಿಸ್ಟೋಫ್'ನ ಭಾವನೆಗಳನ್ನೆಲ್ಲ ಸಮಾಜವಾದದ ಕ್ರಾಂತಿ ವಸ್ತುಸ್ಥಿತಿಗಿಳಿಸಿದೆ" ಎಂದು ತೃಪ್ತಿಪಟ್ಟರು.

"ಮೂವತ್ತು ಶತಮಾನಗಳ ಪೂರ್ವದಿಂದಲೂ ಭಾರತದ ಧರ್ಮವೃಕ್ಷವು ಹೊಸ ಟಿಸಿಲು, ನೂತನ ಫಲ-ಪುಷ್ಪಗಳಿಂದ ಶೋಭಿಸುತ್ತದೆ. ಭಾರತ ದೇವರನ್ನು ಹಡೆಯುವ ಪುಣ್ಯಗರ್ಭವಾಗಿದೆ. ಮಾನವಕುಲವನ್ನು ವಿನಾಶದ ದವಡೆಯಿಂದ ತಪ್ಪಿಸಲು ಅದು ಅವಿಶ್ರಾಂತವಾಗಿ ಪ್ರಯತ್ನಿಸುತ್ತಲೇ ಇದೆ" ಎಂದ ರೋಲಾಂಡರಿಗೆ ಭಾರತೀಯ ಧರ್ಮಶಾಸ್ತ್ರ, ಸಾಹಿತ್ಯದಲ್ಲಿ ಅಪಾರ ಶ್ರದ್ಧೆ, ಪ್ರೀತಿಯಿತ್ತು. ೧೯೨೩ರಲ್ಲಿ ಗಾಂಧೀಜಿಯವರ ಸತ್ಯ, ಅಹಿಂಸೆ-ಪ್ರೇಮಗಳ ಅಪೂರ್ವ ತತ್ತ್ವಗಳಿಂದ ಪ್ರಭಾವಿತರಾದ ಅವರು ಗಾಂಧೀಜಿಯವರನ್ನು ಭೇಟಿಯಾದರು. ೧೯೨೪ರಲ್ಲಿ ಗಾಂಧೀಜಿಯ ಜೀವನಚರಿತ್ರೆಯನ್ನು ಬರೆದರು. ಆಧುನಿಕ ನಾಗರಿಕತೆಯ ಬಗೆಗಿನ ಗಾಂಧಿಯವರ ಎಲ್ಲ ವಿರೋಧಗಳನ್ನು ರೋಲಾಂಡರು ಒಪ್ಪಿರಲಿಲ್ಲ. ಆದರೂ ಗಾಂಧೀಜಿಯಲ್ಲಿ ಸದ್ಗುಣ ಬುದ್ಧಿವಂತಿಕೆಗಳೆರಡರ ಸಮಾನ ಸಂಗಮವಿದೆಯೆಂದು ಒಪ್ಪಿದರು. ಅವರು ರಾಮಕೃಷ್ಣ ಪರಮಹಂಸರನ್ನು ಏಸುವಿನ ಕಿರಿಯ ಸಹೋದರನೆಂದು ಕರೆದರು. ವಿವೇಕಾನಂದರನ್ನು ಭೂತಕಾಲದ ಗಳಿಕೆ, ವರ್ತಮಾನದ ಸಾಹಸ, ಭವಿಷ್ಯತ್ತಿನ ಆಶೋತ್ತರಗಳ ಸಾಕಾರರೂಪವೆಂದು ವರ್ಣಿಸಿದರು. ಕ್ರಾಂತಿಕಾರಿ ಸುಭಾಸರನ್ನು ತಮ್ಮ ಮನೆಗೆ ಆಮಂತ್ರಿಸಿ ಸತ್ಕರಿಸಿದ್ದರು. ಆದರೆ ಅವರು ಹಿಟ್ಲರನೊಂದಿಗೆ ಒಪ್ಪಂದಕ್ಕೆ ಸಿದ್ಧವಾದುದನ್ನು ವಿರೋಧಿಸಿದರು. ರವೀಂದ್ರರ ಅಣ್ಣನ ಮಗ ಸೋಮೇಂದ್ರನಾಥ ಟಾಗೋರ ಅನೇಕ ಬಾರಿ ರೋಲಾಂಡರಲ್ಲಿ ತಂಗಿದ್ದರು. ಅವರು ಗಾಂಧೀಜಿಯ ತತ್ತ್ವಗಳನ್ನು ಖಂಡಿಸಿದಾಗ ರೋಲಾಂಡರು ತಿಳುವಳಿಕೆ ಕೊಟ್ಟಿದ್ದರು. ಬರ್ಲಿನ್ನಿನಲ್ಲಿ ಹಿಟ್ಲರನು ಸುಭಾಸರನ್ನು ಸ್ವಾಗತಿಸಿದ ಸಂದರ್ಭವನ್ನು ನೆನೆದು ೧೯೪೨ ಮೇದಲ್ಲಿ ತಮ್ಮ ದಿನಚರಿಯ ಪುಟವೊಂದರಲ್ಲಿ ಹೀಗೆ ಬರೆದಿದ್ದಾರೆ: "ಕೇವಲ ಉತ್ಸಾಹಿಗಳಾದ ಭಾವನಾವಾದಿ ಬಂಗಾಲಿಗಳಿಗೆ ಬುದ್ಧಿವಂತಿಕೆಯ ರಾಜಕಾರಣ ಗೊತ್ತೇ ಇಲ್ಲ. ಸೊಕ್ಕು, ಪ್ರತೀಕಾರದ ಮನೋಭಾವಕ್ಕೆ ತುತ್ತಾಗುವ ಅಪಕ್ವ [illegible]

ಬಿಡೆವು ಅದು ಗಾದು ಏನೂ ಮಾಡಲಾರ-ದೆಂಬುದೇ ಅವರ ವಿಶ್ವಾಸ!"

ನೆಹರೂರವರ ವ್ಯಕ್ತಿತ್ವ ಕಲಾಪೂರ್ಣವಾದುದು. ಗಾಂಧೀಜಿಯವರ ನಂತರದ ನಿಜವಾದ ಭಾರತದ ದೊಡ್ಡ ಪ್ರಜೆ. ನೆಹರೂರವರಲ್ಲಿ ಕಮ್ಯೂನಿಸ್ಟ್‌ಪರ ಅನುಕಂಪದ ಭಾವನೆಗಳಿವೆ-ಯೆಂದು ಗುರುತಿಸಿದ ರೋಲಾಂಡರು, ಹಾಗೆಯೆ ಸ್ಪಷ್ಟವಾಗಿ ಬರಹದ ಮೂಲಕ ವ್ಯಕ್ತಪಡಿಸಿದ್ದಾರೆ.

ಎರಡನೆಯ ಮಹಾಯುದ್ಧದಿಂದ ಗಾಸಿ-ಗೊಂಡ ರೋಲಾಂಡರು ಯುದ್ಧದ ವಿಷಯವನ್ನೇ ಮರೆತವರಂತೆ ಜಿನೇವಾಕ್ಕೆ ತೆರಳಿ, ಅಂತಾರಾಷ್ಟ್ರೀಯ ರೆಡ್‌ಕ್ರಾಸ್ ಸಂಸ್ಥೆಗೆ ತಮ್ಮನ್ನೇ ಸಮರ್ಪಿಸಿಕೊಂಡರು. ತಮ್ಮ ಜೀವನಯಾತ್ರೆಯ ಕೊನೆಯ ಹಂತದಲ್ಲಿ ಸಾಗುತ್ತಿದ್ದ ಅವರು ಸುತ್ತಲೂ ನೋಡಿದ್ದರು. ಎಲ್ಲ ಮಾಯೆ, ಕಣ್ಣುಕಟ್ಟುವ ಮಬ್ಬು, ಅರ್ಥವಾಗದ ಗದ್ದಲ, ಗೊಂದಲ ಇವುಗಳ ನಡುವೆ ಅವರ ಬದುಕೊಂದು ಆದರ್ಶವಾದದ ದುರಂತವೇ ಆಯಿತೆನ್ನಬೇಕು. ಗಾಟ್‌ಫೆಡ್ ಅವರನ್ನು ಕುರಿತು ಹೇಳಿದ್ದಾರೆ: "ನಾವು ಮಾಡುತ್ತಿರುವುದು ನಾವು ಇಚ್ಛಿಸಿದ್ದನ್ನಲ್ಲ. ನಮ್ಮ ಬದುಕೇ ಬೇರೆ, ಅವರ ಬಗೆಗಿನ ಬಯಕೆಯೇ ಬೇರೆ. ಆದರೆ ಮಹಾತ್ಮರು ಹೀಗೇ ಬದುಕಬೇಕೆಂಬ ಇಚ್ಛೆಯ-ನ್ನೆಂದೂ ಬಿಡುವುದಿಲ್ಲ. ಅವರ ಗುಂಟವೇ ಅವರ ಹೋರಾಟ. ಆದರೆ ನಾವೇಕೆ ಅವರ ಹಾಗೆ ಮಾಡಲಿಲ್ಲವೆಂದು ನಮ್ಮ ಮೇಲೇ ಸಿಟ್ಟು ಮಾಡಿಕೊಳ್ಳಬೇಕು? ನಮಗೇನು ಮಾಡಲು ಸಾಧ್ಯವೋ ಅದನ್ನೇ ಮಾಡೋಣ. ಉತ್ತಮವಾದುದನ್ನೇ ಮಾಡೋಣ." ಅದರಂತೆ ಡಾ. ರಾಧಾಕೃಷ್ಣನ್ನರು ಒಂದೇ ಮಾತಿನಲ್ಲಿ ರೋಲಾಂಡರ ಜೀವನ ಸಿದ್ಧಾಂತವನ್ನು ಹೀಗೆ ಹೇಳಿದ್ದಾರೆ: "ಜೀನ್ ಕ್ರಿಸ್ತೋಫ್ ಹೇಳಿದ ಹಾಗೆ ನಾವು ಪರಸ್ಪರನ್ನು ಪ್ರೀತಿಸಲೆಂದು ಹುಟ್ಟಿದ್ದೇವೆ; ದ್ವೇಷಿಸಲಲ್ಲವೆಂಬ ಮಾತು ರೋಲಾಂಡರಿಗೂ ಅನ್ವಯಿಸುತ್ತದೆ."

ಬದುಕಿನಲ್ಲಿ ನೋವು, ನರಳಾಟಗಳನ್ನು ಕಂಡು ಉಂಡು ದುಃಖಿಸಿದರೂ ರೋಲಾಂಡರು ತಮ್ಮ ಸಾವಿನ ಕೊನೆಯ ಗಳಿಗೆ ಅಂದರೆ (೧೯೪೪ ನೇ ಡಿಸೆಂಬರ್ ೩೦) ರ ವರೆಗೂ ಮಾನವೋದ್ಧಾರದ ವಿಷಯದಲ್ಲಿ ಆಸೆಯನ್ನು ಬಿಟ್ಟುಕೊಟ್ಟಿರಲಿಲ್ಲ. 'ಜೀನ್ ಕ್ರಿಸ್ತೋಫ್'ನ ನಾಯಕ ಕೊನೆಯಲ್ಲಿ ಹುಡುಗನನ್ನು ಕುರಿತು ಕೇಳುತ್ತಾನೆ, "ನೀನಾರಯ್ಯ?" ಎಂದು.

"ನಾನು ನಾಳಿನ ಬೆಳಕು" ಎಂದುತ್ತರಿಸುತ್ತಾನೆ ಆ ಹುಡುಗ.

ಆ ಬೆಳಗು ನಾವು! ✡

ಜರ್ಮನ್ ಸರಕಾರ ಪೋಲೀಸ್ ಅಧಿಕಾರಿಯೊಬ್ಬನನ್ನು ತರಬೇತಿಗಾಗಿ ಅಮೇರಿಕಕ್ಕೆ ಕಳಿಸಿತು. ಆತ ಚೆನ್ನಾಗಿಯೇ ತರಬೇತಿ ಪಡೆದನೆನ್ನಬೇಕು; ಅಮೇರಿಕದ ನೆಲವನ್ನು ಮುಟ್ಟಿ ಮೂರು ತಿಂಗಳಾಗುವಷ್ಟರಲ್ಲೇ ಅವನ ಮೇಲೆ ಕಳವು ದರೋಡೆ ಹಾಗೂ ಲಂಚಗುಳಿತನದ ಆರೋಪಗಳನ್ನು ಹೊರಿಸಲಾಯಿತು.

*

ಗಂಡ: ಪ್ರಿಯೆ, ಈಗ ಹೇಗೂ ನಮ್ಮ ಮದುವೆಯಾಗಿಬಿಟ್ಟಿದೆಯಲ್ಲ. ಇನ್ನು ನಿನ್ನಲ್ಲಿ ನಾನು ಕಂಡ ಕೆಲ ಕುಂದುಕೊರತೆಗಳನ್ನು ನಿನಗೆ ಹೇಳಿಬಿಡಲು ಅಡ್ಡಿಯಿಲ್ಲ.

ಹೆಂಡತಿ: ಅದೆಲ್ಲ ಈಗೇಕೆ ದೊರೆ? ನನ್ನ ಕೊರತೆಗಳೆಲ್ಲವೂ ನನಗೆ ಚೆನ್ನಾಗಿ ಗೊತ್ತು. ಅವು ಇದ್ದುದರಿಂದಲೇ ನನಗೆ ಈಗ ಸಿಕ್ಕಿರುವುದಕ್ಕಿಂತ ಒಳ್ಳೆಯ ಗಂಡ ಸಿಕ್ಕಲಿಲ್ಲ.

ಇದುವೇ ಜೀವ ಇದು ಜೀವನ

ಒಮ್ಮೆ ಟ್ಯಾಕ್ಸಿಯಲ್ಲಿ ಪ್ರಯಾಣಿಸುತ್ತಿದ್ದಾಗ ಯಾವುದೋ ಒಂದು ಕಟ್ಟೆಯ ಬಳಿ ಟ್ಯಾಕ್ಸಿ ನಿಂತಿತು. ನನ್ನ ನಿದ್ರೆಗೂ ಭಂಗ ಬಂದಿತೆನ್ನಿ. ಒಬ್ಬ ಧೋತರ ಉಟ್ಟ ಉದ್ದ ಕೂದಲಿನ ಮಹಾಶಯರು ಗಾಡಿಯಿಂದ ಇಳಿದು ಹೊರಟುಹೋದರು. ಅವರ ಬದಲಾಗಿ ಹತ್ತಿದವರು ಒಬ್ಬ ಬಣ್ಣದ ಲುಂಗಿ ಉಟ್ಟ ಕಪ್ಪನೆಯ ವ್ಯಕ್ತಿ ಹಾಗೂ ಚಿಕ್ಕ ಹುಡುಗಿ. ಮತ್ತೆ ಟ್ಯಾಕ್ಸಿ ತನ್ನ ಕರ್ತವ್ಯದಲ್ಲಿ ತಲ್ಲೀನವಾಗಿತ್ತು. ಚಾಲಕ ಎಂದಿನಂತೆ ಆ ಕಪ್ಪು ವ್ಯಕ್ತಿಯಲ್ಲಿ ಹಣ ಕೇಳಿದ. ಆತ ಎರಡು ನೋಟನ್ನು ತೆಗೆದು ಕೊಟ್ಟ. ಕಡಿಮೆ ಹಣ ಕಂಡು ಚಾಲಕ, "ಇದೇನು ಅಪ್ಪಾ? ಇನ್ನೆರಡು ರೂಪಾಯಿ," ಅಂದ.

ಕಪ್ಪು ವ್ಯಕ್ತಿ, ತನ್ನಲ್ಲಿ ಹಣವಿಲ್ಲ, ಉಪಕಾರವಾಗುತ್ತದೆ ಎಂದು ಏನೇನೋ ಹೇಳುತ್ತಿರುವಾಗಲೇ ಚಾಲಕನಿಗೆ ಸಿಟ್ಟು ನೆತ್ತಿಗೇರಿತ್ತು. ಕಾರಿನಲ್ಲಿ ಬಿಸಿ ವಾತಾವರಣ ಉಂಟಾಗಲು ಹೆಚ್ಚು ವೇಳೆ ಹಿಡಿಯಲಿಲ್ಲ. ತಡಮಾಡದೆ ಚಾಲಕ ಗಕ್ಕನೆ ಬ್ರೇಕ್ ಒತ್ತಿ ಗಾಡಿ ನಿಲ್ಲಿಸಿ, "ಇಲ್ಲೇ ಇಳಿದುಬಿಡು. ನೀ ಕೊಟ್ಟ ಹಣ ಇಲ್ಲಿಗೆ ತೀರಿತು," ಅಂದ. ಕಪ್ಪು ವ್ಯಕ್ತಿ ಚಿಕ್ಕ ಹುಡುಗಿಯೊಡನೆ ತನ್ನ ಭಾಷೆಯನ್ನು ಕನ್ನಡದಿಂದ ಮಲೆಯಾಳಕ್ಕೆ ಬದಲಾಯಿಸಿ, "ನಿನ್ನಲ್ಲಿ ಹಣವಿದೆಯಾ?" ಎಂದು ಕೇಳಿದ. ಚಾಲಕನ ಮುಖದ ಮೇಲೆ ಅಪೂರ್ವ ಬದಲಾವಣೆ ಉಂಟಾಯಿತು. ಆತ ಮಲಯಾಳದಲ್ಲೇ ಮಾತನಾಡಿ ಮತ್ತೆ ಅವರೀರ್ವರನ್ನೂ ಟ್ಯಾಕ್ಸಿಯಲ್ಲಿ ಕುಳ್ಳಿರಿಸಿ ಚಾಲನೆಯ ಗುಂಡಿ ಒತ್ತಿದ.

—ಕದಂಬ

ಚಿಕ್ಕ ಮಕ್ಕಳ ಅವಲೋಕನ ಶಕ್ತಿ ಒಂದೊಂದು ಸಲ ನಮ್ಮ ಜೀವನದಲ್ಲಿನ ಕೆಲವು ಸಂಗತಿಗಳನ್ನು ಸ್ವಾರಸ್ಯಕರ ದೃಷ್ಟಿಕೋನದಲ್ಲಿ ತೋರಿಸುತ್ತವೆ. ಒಂದು ಹಬ್ಬದ ದಿನ ನನ್ನ ಮೂರು ವರ್ಷದ ಮಗನನ್ನು ಕರೆದುಕೊಂಡು ಅಂಗಡಿಗೆ ಹೊರಟೆ. ಅಂಗಡಿಗೆ ಹೋಗುವ ದಾರಿಯಲ್ಲಿ ಎಲ್ಲರ ಮನೆಯ ಮುಂಭಾಗವೂ ಅಂದವಾದ ರಂಗೋಲಿಯಿಂದ ಅಲಂಕರಿಸಲ್ಪಟ್ಟಿತ್ತು. ನನ್ನ ಮಗನು, "ಈ ರಂಗೋಲಿ ಚೆನ್ನಾಗಿದೆ, ಆ ರಂಗೋಲಿ ಬಣ್ಣ ಬಣ್ಣವಾಗಿ ಚೆನ್ನಾಗಿದೆ" ಎಂದು ಪರಿಸರದ ಸೌಂದರ್ಯವನ್ನು ಮೆಚ್ಚುತ್ತಾ ಜತೆಗೆ ಬಂದ.

ಅಂಗಡಿಯಲ್ಲಿ ಸಾಮಾನುಗಳಿಗೆ ಕಾದು ನಿಂತಿದ್ದಾಗ ಅಲ್ಲಿಗೆ ಒಬ್ಬರು 'ಸಾಹುಕಾರ್' ಬಂದರು. ಸಂಪ್ರದಾಯಸ್ಥರಾಗಿದ್ದ ಅವರ ಮುಖದಲ್ಲಿ ನಾಮವು ಶೋಭಿಸುತ್ತಿತ್ತು.

ನನ್ನ ಮಗ ಅವರನ್ನು ತದೇಕಚಿತ್ತನಾಗಿ ನೋಡಿ, "ಅಪ್ಪಾ! ಅವರು ಮುಖದ ಮೇಲೆ ಏಕಪ್ಪಾ ರಂಗೋಲಿ ಹಾಕಿಕೊಂಡಿದ್ದಾರೆ?" ಎಂದು ಕೇಳಿದ.

"ಅದು ರಂಗೋಲಿ ಅಲ್ಲ ಮಗೂ, ಅಮ್ಮ ಹಣೆಗೆ ಕುಂಕುಮ ಇಟ್ಟುಕೊಳ್ಳುವಂತೆ, ಹಣೆಗೆ 'ನಾಮ' ಇಟ್ಟುಕೊಳ್ಳುವುದು ಇವರ ಪದ್ಧತಿ," ಎಂಬ ನನ್ನ ವಿವರಣೆ, ಘೊಳ್ಳನೆ ನಗುತ್ತಿದ್ದ ಸುತ್ತಮುತ್ತಲಿನವರಿಗೆ ಕೇಳಿಸಿತೋ ಇಲ್ಲವೋ ನನಗೆ ತಿಳಿಯದು.

—ಎಂ. ಆರ್. ಚಿದಂಬರ

ಈಚೆಗೆ ನಾನು ಕೆನಡಾ ದೇಶಕ್ಕೆ ಹೋದಾಗ ಒಂದು ದಿನ ಊಟ ಮುಗಿಸಿ ವ್ಯಾಸಂಗ ಮಾಡುತ್ತಾ ಕೂತಿದ್ದೆ. ರಾತ್ರಿ ಒಂಭತ್ತು ಗಂಟೆ ಇರಬಹುದು. ಬಾಹ್ಯ ಪ್ರಜ್ಞೆಯೂ ಇಲ್ಲದೆ ತದೇಕಚಿತ್ತನಾಗಿದ್ದ ಸಮಯ. ಬೆಚ್ಚಿಬಿದ್ದೆ. ಅರೆಕ್ಷಣವೇ ಬೇಕಾಯ್ತು, ಟೆಲಿಫೋನ್ ಬಾರಿಸುತ್ತಿದೆ ಎಂದು ಅರಿವಾಗಲು. ಅರೆನಿದ್ದೆಯಿಂದ

ಎದ್ದವನ ರೀತಿ "ಹಲೋ" ಅಂದೆ. "ನಮಸ್ಕಾರ, congratulations" ಅಂದರು ಕಾಂತಿ. ಇದೇನಿದು? ನನಗೇನಾಯಿತು congratulations ಹೇಳಿಸಿಕೊಳ್ಳಲು? ನನ್ನ ಮನಸ್ಸು ಇಲ್ಲದ್ದನ್ನು ಅರಸಿ ಹೊರಟಿತ್ತು. "ಊರಿಂದ ಕಾಗದ ಬಂತೂ, ನನಗೆಲ್ಲಾ ತಿಳೀತೂ ಎಲ್ಲಾ ಗುಟ್ಟು ಗಿಟ್ಟದ್ದೀರಲ್ಲಾ." "ಏನ್ರಿ ಅದು, ನನಗೇನೂ ಗೊತ್ತಾಗ್ತನೇ ಇಲ್ಲ, ನೀವು ಹೇಳ್ತಿರೋದು!" "ಆಹಾಹಾಹಾ! ನಮ್ಮ ತಂದೆ ಕಾಗದ ಬರೆದಿದಾರೆ, ನಿಮ್ಮ uncle ಸಿಕ್ಕಿದ್ದರಂತೆ. ಎಲ್ಲಾ ಗೊತ್ತು ಮಾಡಿದಾರಂತಲ್ಲಾ. ನಮಗೆ ಹೇಳಬಾರದು ಅಂತಿದ್ರೋ?" ನನಗೆ ತಲೆಬುಡವೇ ಗೊತ್ತಾಗಲಿಲ್ಲ. ಮದುವೆ ವಿಚಾರ ಮಾತಾಡುತ್ತಿರಬಹುದು ಅಂತ ಊಹಿಸಿದೆ. ಛೆ! ಅದು ಹೇಗೆ ಸಾಧ್ಯ? ಅಥವಾ ಏನಾದರೂ, ಗೋಪಣ್ಣ ಏನೋ ಯೋಚನೆ ಮಾಡುತ್ತಿದ್ದು ಇವರ ತಂದೆಯ ಹತ್ತಿರ ಮಾತಾಡಿರಬಹುದೋ? ಒಂದು ಕ್ಷಣದಲ್ಲಿ ಮನಸ್ಸು ಎಲ್ಲೆಲ್ಲೊ ಓಡಾಡಿಬಿಟ್ಟಿತು. ಅವರು ಇನ್ನೂ ಹೇಳುತ್ತಿದ್ದರು, "ನಿಮ್ಮ ಜೀವನ ಸಂಗಾತಿ ಬಹಳ ಚೆನ್ನಾಗಿ ಸಂಗೀತ ಹೇಳ್ತಾಳಂತೆ..." ಇಷ್ಟೊಂದು ಹೇಳುತ್ತಿರುವಾಗ ಅದು ನಿಜವೇ ಇರಬೇಕು. ಆದರೆ ನನಗೇ ತಿಳಿಯದೆ... ಅದು ಹೇಗೆ? ಕಾಗದ ಏನಾದರೂ miss ಆಯಿತೋ? ನಾನು ವಾಪಸ್ಸು ಹೋದ ವೇಳೆ- ಅಂದರೆ ಇನ್ನೂ ಒಂದೂವರೆ ವರ್ಷದ ಮೇಲಿನ ಮಾತು ಈಗೇಕೆ?... ನನಗೇನೋ ಒಂದೂ ಅರ್ಥವಾಗಲಿಲ್ಲ. ಪೂರ್ಣವಾಗಿ ಸೋತಿದ್ದೆ. "ಅವಳ ಹೆಸರು ಕೂಡ ನನಗೆ ಗೊತ್ತು." ಕೇಳೇಬಿಡೋಣ ಅಂತ "ಏನದು?" ಅಂದೆ. "ಸೋನಿಯಾ" ಅಂದರು ನಿರಾಶೆ ತೋರಿದಂತಾಯಿತು. ಮರುಕ್ಷಣದಲ್ಲಿ ನಗುವೆ ನಗು. ನನ್ನ ಮಂದ ಬುದ್ಧಿಗೆ ಅದೆಷ್ಟು ಸಿಕ್ಕಿತೋ! ಆ ದಿನವೇ ಸೋನಿಯಾ ಟೇಪ್ ರೆಕಾರ್ಡರ್ ಕೊಂಡಿದ್ದೆ. ಕಾಂತಿ ನಿಜವೇ ನುಡಿಯುತ್ತಿದ್ದರು. 'ಜೀವನ ಸಂಗಾತಿ' ಅನ್ವರ್ಥನಾಮವಲ್ಲವೇ ?

— ಕಾ. ಸು. ಸುಬ್ಬರಾಯ

ತಮ್ಮ ಮಗಳಿಗೆ ಎಂಥ ಗಂಡ ದೊರೆಯಬೇಕು ಎಂಬುದರ ಬಗ್ಗೆ ಕೆಲವು ತಾಯಂದಿರಿಗೆ ನಿಶ್ಚಿತ ಕಲ್ಪನೆ ಇರುತ್ತದೆ. ಇದೊಂದು ವಿಶಿಷ್ಟ ಮಾದರಿ.

ಸಂಕೋಚ ಸ್ವಭಾವದ ಹಾಗೂ ಸಂಘರ್ಷದೆಗೆ ಅಂಜುವ ಯುವಕನೊಬ್ಬ ತನ್ನ ಪ್ರೇಯಸಿಯು ಹೊರಗೆ ಬರಬಹುದೆಂದು ಅರ್ಧ ಗಂಟೆಯ ವರೆಗೆ ಆವಳ ಮನೆಯ ಮುಂದೆ ಕಾಯುತ್ತ ನಿಂತಿದ್ದ.

ಒಮ್ಮೆಲೆ ಆ ಮನೆಯ ಬಾಗಿಲು ತೆರೆಯಿತು. ಹೊರಗೆ ಬಂದವಳು ಪ್ರೇಯಸಿಯಾಗಿರಲಿಲ್ಲ; ಅವಳ ತಾಯಿಯಾಗಿದ್ದಳು.

"ನೀನು ಇಲ್ಲೇಕೆ ನಿಂತಿರುವಿ ?" ಎಂದು ಅವಳು ಕೇಳಿದಳು.

"ಶಾಂತಾ, ನಿಮ್ಮ ಮಗಳು ಶಾಂತಾನಿಗಾಗಿ..." ಎಂದು ತಡವರಿಸುತ್ತ ಆ ತರುಣ ಉತ್ತರಿಸಿದ.

"ಓ, ಶಾಂತಾನಿಗಾಗಿ ನಿಂತ ಕಾಮಣ್ಣನೇ ನೀನು? ಈಗಲೇ ಇಲ್ಲಿಂದ ಹೊರಡು. ಅವಳಿಗೆ ಯೋಗ್ಯನಾದ ವರ ನೀನಲ್ಲ. ಅವಳ ತಂದೆಯು ನನ್ನನ್ನು ಪ್ರೀತಿಸುತ್ತಿದ್ದಾಗ ಒಮ್ಮೆ ನಾನು ಹೊರಬಾಗಿಲಿಗೆ ಬರಲಿಲ್ಲ. ಆಗ ಅವರು ಕಂಪೌಂಡಿನ ಗೋಡೆಯನ್ನು ಹಾರಿ ಬಂದು, ಬೊಗಳುತ್ತಿರುವ ನಾಯಿಯನ್ನು ಕೊಂದುಹಾಕಿದರು. ಕಿಟಕಿಯ ಕಾಜುಗಳನ್ನು ಒಡೆದು ಒಳಗೆ ಬಂದರು. ನನ್ನ ತಂದೆಯನ್ನು ಕೋಣೆಯಲ್ಲಿ ಕಟ್ಟಿಹಾಕಿ, ನಾನಿದ್ದಲ್ಲಿಗೆ ಬಂದು, 'ಕಾಂತಿ ಇಂದು ಸಂಜೆಯ ಒಳಗೆ ಯಾವುದೇ ಪರಿಸ್ಥಿತಿಯಲ್ಲಿ ನನ್ನ ಮದುವೆ ಆಗಲೇಬೇಕು' ಎಂದು ಹೇಳಿದರು. ಅಂಥ ಗಂಡು ನಮ್ಮ ಶಾಂತಿಗೆ ಬೇಕು. ತಿಳಿಯಿತೇ ?"

—ಸಂಜೀವ ಲಕ್ಷ್ಮೇಶ್ವರ



★ ಪ್ರಭಾಕರ ಹೆಗಡೆ

ಯಕ್ಷಗಾನದ ಹೆಗಡೆಯವರು

ಪ್ರಪಂಚದ ಜಾನಪದ ನೃತ್ಯ ನಾಟಕ ರಂಗಕ್ಕೆ ಯಕ್ಷಗಾನದ ರೂಪದಲ್ಲಿ ಕರಾವಳಿ ಕರ್ನಾಟಕದ ಕೊಡುಗೆ ಅತ್ಯಮೋಘ. ವೇಷ-ಭೂಷಣಗಳ ವರ್ಣವೈಭವ, ಲಯಬದ್ಧ ಸಾಹಿತ್ಯ, ಚಂಡೆಮದ್ದಳೆಗಳ ಹಿಮ್ಮೇಳದೊಂದಿಗೆ ನವರಸಭರಿತವಾದ ಪೌರಾಣಿಕ ಕಥಾನಕಗಳನ್ನು ಪ್ರಭಾವಶಾಲಿಯಾಗಿ ಪ್ರದರ್ಶಿಸುವ ಈ ಕಲೆ ಅಗ್ಗದ ಅಭಿರುಚಿಯ ಈ ಕಾಲದಲ್ಲಿ ಒಂದೆ ಜಟ್ಟಿದೆಯಾದರೂ ಅದರ ಉಚ್ಛ್ರಾಯಕ್ಕಾಗಿ ಅಹರ್ನಿಶಿ ಪ್ರಯತ್ನಿಸುತ್ತಿರುವವರಲ್ಲಿ ಹೊನ್ನಾವರ ತಾಲೂಕಿನ ಚಿಟ್ಟಾಣಿ ರಾಮಚಂದ್ರ ಹೆಗಡೆಯವರೂ ಒಬ್ಬರು.

ಸಹಜವೇಷದಲ್ಲಿ ಅವರನ್ನು ಕಂಡಾಗ ಇವರೊಬ್ಬ ಕಲಾವಿದರೆಂದು ಗುರುತಿಸುವುದೂ ಕಷ್ಟ. ಐವತ್ತರ ಹೆಗಡೆಯವರು ಉಡುಪಿನಲ್ಲಿ ಸರಳ. ಎಲ್ಲರೊಡನೆಯೂ ಅಸಹಜವೆನ್ನಿಸುವಷ್ಟು ಬೆರೆಯುತ್ತಾರೆ. ಬಿರುಸು ಮಾತು ಇವರ ಬಳಿ ಸುಳಿಯದು. ಮನೆತನದಿಂದ ಕೃಷಿಕರು. ಗಾಳಿಗೆ ತೊನೆಯುವ ಅಡಿಕೆ ಮರವೇರಿ ಗೊನೆ ಕೀಳಬಲ್ಲವರಾದ ಹೆಗಡೆಯವರು ರಂಗದ ಮೇಲೆ ಸಲೀಸಾಗಿ ನರ್ತಿಸಬಲ್ಲವರಾದದ್ದು ಒಂದು ರೀತಿಯಲ್ಲಿ ಸ್ವಾಭಾವಿಕವೇ ಅನ್ನಬೇಕು. ಮನೆತನದ ಪರಂಪರೆಯಲ್ಲಿ ವೇಷ ಕಟ್ಟಿದವರಲ್ಲವಾದರೂ ಯಕ್ಷಗಾನದತ್ತ ಒಲವು, ಶ್ರದ್ಧೆ ಇವರಿಗೆ ಜನ್ಮತಃ ಬಂದದ್ದು.

ಬಾಲ್ಯದಿಂದಲೇ ಯಕ್ಷಗಾನ ಅವರನ್ನು ಕೈ ಮಾಡಿಕರೆಯಿತು. ಕೇರಿಯ ಮಕ್ಕಳನ್ನು ಕೂಡಿಸಿ ಅಡಿಕೆ ತೋಟದಲ್ಲಿ ಹೆಜ್ಜೆ ಹಾಕಿ ಕುಣಿದದ್ದು; ತಾಯಿಗೆ ತಿಳಿಯದಂತೆ ರಾಮಕೃಷ್ಣಭಟ್ಟರ ಯಕ್ಷಗಾನ ತರಗತಿಗೆ ಸೇರಿ ಕುಣಿತ ಕಲಿತದ್ದು; ರಾತ್ರಿ ಮನೆಯವರೆಲ್ಲ ಮಲಗಿದಾಗ ಮೆಲ್ಲಗೆ ಅಟ್ಟದಿಂದ ಇಳಿದು ನೃತ್ಯ ಕಲಿಯಲು ಹೋದದ್ದು ಮುಂತಾದ ಸ್ವಾರಸ್ಯಕರ ನೆನಪುಗಳನ್ನು ಆಗಾಗ ಮೆಲುಕುಹಾಕುವುದೆಂದರೆ ಹೆಗಡೆಯವರಿಗೆ ಎಲ್ಲಿಲ್ಲದ ಪ್ರೀತಿ.

ಅವರು ಮೊದಲು ರಂಗಕ್ಕಿಳಿದದ್ದು ಆಂಜನೇಯನ ಪಾತ್ರದಲ್ಲಿ–ಹದಿನೆಂಟರ ಹರೆಯದಲ್ಲಿ. ಅಲ್ಲಿಂದ ಅವರು ಇನ್ನೂ ಅನೇಕ ಪಾತ್ರಗಳಲ್ಲಿ ಕಾಣಿಸಿಕೊಂಡರೂ ಜನಮನ್ನಣೆಯನ್ನು ಗಳಿಸಿಕೊಂಡಿದ್ದು 'ಕಾಳಿದಾಸ' ಪ್ರಸಂಗದ ಕಲಾಧರನ ಪಾತ್ರದಲ್ಲಿ. ಆ ಪಾತ್ರವನ್ನು ಹೆಗಡೆಯವರು ಎಷ್ಟು ಕಲಾತ್ಮಕವಾಗಿ ಅಭಿನಯಿಸಿದ್ದರೆಂದರೆ ಇಂದಿಗೂ ಅವರನ್ನು ಕಲಾಧರ ಹೆಗಡೆ ಎಂದು ಗುರುತಿಸುವ ಜನ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಇಪ್ಪತ್ತರಲ್ಲಿ ಹೆಗಡೆಯವರು ವ್ಯವಸಾಯ

ಮೇಳದ ನಟರಾಗಿ ದುಡಿಯಲಾರಂಭಿಸಿದರು. ಇಂದಿಗೂ ಅವರು ವ್ಯವಸಾಯ ಮೇಳದ ನಟರೇ. ಈ ಹದಿನೆಂಟು ವರ್ಷಗಳ ಅವಧಿಯಲ್ಲಿ ಅವರು ತಮ್ಮದೇ ಆದ ನರ್ತನಶೈಲಿಯನ್ನು ರೂಪಿಸಿ ಕಲಾಪ್ರಪಂಚಕ್ಕೆ ಹೊಸ ಆಯಾಮವೊದಗಿಸಿ-ದ್ದಾರೆ.

ಹೆಗಡೆಯವರು ಅಭಿಜಾತ ಕಲಾವಿದರು. ಭಸ್ಮಾಸುರ, ಕೀಚಕ, ಮಾಗಧ, ದುಷ್ಟಬುದ್ಧಿ, ಗದಾಪರ್ವದ ಕೌರವ ಮೊದಲಾದ ಪಾತ್ರಗಳನ್ನು ಅಭಿನಯಿಸುವುದರಲ್ಲಿ ಅವರದು ಯಾವಾಗಲೂ ಒಂದು ಕೈ ಮುಂದು. ಎರಡು ವರ್ಷಗಳ

ಕೌರವನಾಗಿ...



ಹಿಂದೆ ಮುಂಬಯಿಯ ಪ್ರಸಿದ್ಧ ಷಣ್ಮುಖಾನಂದ ಹಾಲಿನಲ್ಲಿ ಇವರ 'ಭಸ್ಮಾಸುರ' ಒಂದೇ ಪ್ರಯೋಗಕ್ಕೆ ಎಪ್ಪತ್ತೈದು ಸಾವಿರ ರೂಪಾಯಿಗಳನ್ನು ಗಳಿಸಿತು. ಇವರ ನಾಟಕಕ್ಕೆ ಕನ್ನಡ ತಿಳಿಯದ ಮರಾಠಿಗರೂ ಮಾರುಹೋದರೆನ್ನುವುದು ಇವರ ನೈಪುಣ್ಯಕ್ಕೆ ಸಾಕ್ಷಿ, ಹಾಗೆಯೇ ಕಲಾ-ಪ್ರತಿಭೆಗೆ ಭಾಷೆಯ ಬಂಧನವಿಲ್ಲ ಎನ್ನುವುದರ ಜ್ವಲಂತ ನಿದರ್ಶನ. ಇವರ ನಾಟಕ ನಡೆಯುತ್ತಿ-ದ್ದಷ್ಟು ಕಾಲವೂ ಪ್ರಸಿದ್ಧ ಕಂಪೆನಿಯೊಂದರ ಅಧಿಕಾರಿಗಳಾದ ಮರಾಠಿ ಭಾಷಿಕರೊಬ್ಬರು ದಿನಾಲು ಮನೆಯಿಂದ ಕಾಫಿ ತಂದಿತ್ತು ಸತ್ಕರಿಸಿದ್ದನ್ನು ಹೆಗಡೆಯವರು ಆಗಾಗ ನೆನೆಯುಕೊಳ್ಳುತ್ತಾರೆ.

ಮಳೆಗಾಲದಲ್ಲಿ ವ್ಯವಸಾಯ ಮೇಳಗಳ ಸಂಚಾರವಿಲ್ಲ. ಆ ದಿನಗಳಲ್ಲಿ ಮುಂಬಯಿ, ಬೆಂಗಳೂರು, ಹುಬ್ಬಳ್ಳಿ, ಮಂಗಳೂರುಗಳಿಂದ ಯಕ್ಷಗಾನ ಕಾರ್ಯಕ್ರಮ ನಡೆಸಿಕೊಡಲು ಇವರಿಗೆ ಕರೆ ಬರುತ್ತದೆ. ಅದನ್ನು ಮನ್ನಿಸಿ ಅವರು ಕಾರ್ಯಕ್ರಮಗಳನ್ನು ನಡೆಸಿ ಕೊಟ್ಟಾಗ ಅವನ್ನು ನೋಡಲು ಜನ ಕಿಕ್ಕಿರಿದು ನೆರೆಯುತ್ತಾರೆ. ಇವರು ಮಾಡುವ ಯಕ್ಷಗಾನ ಪ್ರಸಂಗಗಳನ್ನು ಜನಸಾಮಾನ್ಯರಷ್ಟೇ ಅಲ್ಲ, ಹಿಂದಿನ ರಾಜ್ಯಪಾಲ ಮೋಹನಲಾಲ ಸುಖಾಡಿಯಾರಂತಹ ಪ್ರತಿಷ್ಠಿತರೂ ಮೆಚ್ಚಿದ್ದಿವೆ. ಶಿವರಾಮ ಕಾರಂತರ ಬಳಿ ಯಕ್ಷಗಾನ ಕಲೆ-ಯನ್ನು ಆಳವಾಗಿ ಅಭ್ಯಸಿಸಿದ ಅಮೇರಿಕದ ಡಾ. (ಕುಮಾರಿ) ಮಾರ್ಥಾ ಆ್ಯಷ್‌ಟನ್ ಹೆಗಡೆಯವರ ಪಾತ್ರಗಳನ್ನು ಮೆಚ್ಚಿ ಹಲವು ಸಲಹೆ-ಗಳನ್ನು ನೀಡಿದ್ದಾರೆ. ಇವರು ತಮ್ಮ ಸಂಗಡಿಗರೊಡನೆ ಅಭಿನಯಿಸಿದ 'ಸುಧನ್ವಾರ್ಜುನ' ಟೆಲಿ-ವಿಷನ್ ಪ್ರಸಾರಕ್ಕಾಗಿ ಚಿತ್ರಿತವಾಗಿದೆ.

ಬಿಡುವಿನ ಸಮಯದಲ್ಲಿ ಕೈಗೆ ಸಿಕ್ಕಿದ ಪುಸ್ತಕಗಳನ್ನು ಎತ್ತಿಕೊಳ್ಳುವುದು ಹೆಗಡೆಯವರಿಗೆ ಬಹು ಪ್ರಿಯವಾದದ್ದು. ಅ. ನ. ಕೃ. ಅವರ ಅಚ್ಚುಮೆಚ್ಚಿನ ಸಾಹಿತಿ. ಪುಸ್ತಕಪ್ರಪಂಚದ ಆಚೆ ಬಂದರೆ ಅವರಿಗೆ ಚಲನಚಿತ್ರದ ಗೀಳಿದೆ.

ಅವು ಪಾತ್ರಗಳ ರಸಭಾವ ಪ್ರೋಷಣೆಗೆ ಚಲಚ್ಚಿತ್ರದಿಂದ ಪ್ರೇರಣೆ ಪಡೆಯುತ್ತೇನೆ ಎನ್ನುತ್ತಾರೆ ರಾಮಚಂದ್ರ ಹೆಗಡೆಯವರು. ಕನ್ನಡದಲ್ಲಿ ರಾಜಕುಮಾರ, ತೆಲುಗಿನಲ್ಲಿ ಎನ್. ಟಿ. ರಾಮರಾವ್ ಅವರು ಹೆಗಡೆಯವರ ಮೆಚ್ಚಿನ ನಟರು. ನಟ ಉದಯಕುಮಾರರೊಂದಿಗೆ ಅವರಿಗೆ ವೈಯಕ್ತಿಕ ಪರಿಚಯ-ವಿಶ್ವಾಸ ಇದೆ. ಹೊನ್ನಾವರದಲ್ಲೊಮ್ಮೆ ಇವರ 'ದುಷ್ಟಬುದ್ಧಿ' ಪಾತ್ರವನ್ನು ನೋಡಿ ಉದಯಕುಮಾರರು ರಂಗವೇರಿ ಬಂದು ಉದ್ದಂಡ ನಮಸ್ಕಾರ ಹಾಕಿದ್ದರು !

ಹೆಗಡೆಯವರು ಅಭಿನಯಿಸುವ ಪಾತ್ರಗಳನ್ನು ಇತರ ಮೇಳಗಳ ನಟರೂ ಅಭಿನಯಿಸುತ್ತಾರೆ. ಆದರೆ ಹೆಗಡೆಯವರ ವೈಶಿಷ್ಟ್ಯ ಅವರದೇ. ಹೊನ್ನಾವರ ತಾಲೂಕಿನ ಗುಣವಂತೆಯಲ್ಲಿ ಸುಮಾರು ನಾಲ್ಕು ವರ್ಷಗಳ ಹಿಂದೆ ಕೆರೆಮನೆ ಶಿವರಾಮ ಹೆಗಡೆಯವರು ಭೀಮನ ಪಾತ್ರ ವಹಿಸಿದ ಸಂದರ್ಭದಲ್ಲಿ ಇವರು ಕೀಚಕನಾಗಿ ತೋರಿದ ಅಭಿನಯಸಾಮರ್ಥ್ಯವನ್ನು ಕಂಡವರೆಲ್ಲ ಇಂದಿಗೂ ನೆನೆಯುತ್ತಾರೆ.

ಹೆಗಡೆಯವರು ಸ್ವತಃ ಪ್ರಯೋಗಶೀಲರು. ಅವರದು ಯಕ್ಷಗಾನದ ಬಗೆಗೆ ಜಡಧೋರಣೆಯಲ್ಲ. ಅವರಲ್ಲಿ ಹೊಸದನ್ನು ನಿರ್ಮಿಸುವ ಹುಮ್ಮಸ್ಸಿದೆ; ಹೊಸದನ್ನು ಸ್ವಾಗತಿಸುವ ಹೃದಯವೈಶಾಲ್ಯವಿದೆ. ಕಾರಂತರ ಪ್ರಯೋಗವನ್ನವರು ಮೆಚ್ಚಿಕೊಂಡಿದ್ದಾರೆ. ಹಿರಿಯ ಕಲಾವಿದರ ಬಗೆಗೆ ಭಕ್ತಿ-ಗೌರವ, ಕಿರಿಯರ ಬಗೆಗೆ ವಾತ್ಸಲ್ಯ ಇವರ ವ್ಯಕ್ತಿತ್ವಕ್ಕೆ ಮೆರುಗಿತ್ತಿವೆ. ಚಿಟ್ಟಾಣಿ ರಾಮಚಂದ್ರ ಹೆಗಡೆಯವರಿಂದು ನಶಿಸುತ್ತಿರುವ ಯಕ್ಷಗಾನಕ್ಕೊಂದು ದೊಡ್ಡ ಆಸ್ತಿ. ❀



ಕೀಚಕನ ಪಾತ್ರದಲ್ಲಿ ಹೆಗಡೆ

ಒಂದು ಪುಸ್ತಕದಿಂದ ಏನಾದರೂ ಎತ್ತಿಕೊಂಡರೆ ಅದಕ್ಕೆ ಕೃತಿಚೌರ್ಯ ಎನ್ನುತ್ತಾರೆ, ಅದೇ ಯಾವುದೊಂದು ದರ್ಶನದಿಂದ ಎತ್ತಿಕೊಂಡು ಹೇಳಿದರೆ ಅದಕ್ಕೆ ಸಂಶೋಧನೆಯೆಂಬ ಮನ್ನಣೆ ದೊರೆಯುತ್ತದೆ.

-ಸೋನಿಯಾ ಲೆವಿಂಗರ್

ನಾವು ಹೇಗೆ ಉಸಿರಾಡಿಸುತ್ತೇವೆ?

ಡಾ. ಎ. ಸಿ. ಉಡುಪ

ಒಬ್ಬ ವ್ಯಕ್ತಿ ಜನಿಸಿದಂದಿನಿಂದ ಸಾಯುವವರೆಗೆ ನಿರಂತರವಾಗಿ ಉಸಿರಾಡಿಸುತ್ತಿರುವನಾದರೂ ಎಲ್ಲರ ಉಸಿರಾಟದ ವೇಗ ಒಂದೇ ಆಗಿರುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ನವಜಾತ ಶಿಶುವೊಂದು ನಿಮಿಷಕ್ಕೆ ಸುಮಾರು ೪೦ ಬಾರಿ ಉಸಿರಾಡಿದರೆ ವಯಸ್ಕವ್ಯಕ್ತಿ ನಿಮಿಷವೊಂದಕ್ಕೆ ೧೪ರಿಂದ ೨೦ ಬಾರಿ ಉಸಿರಾಡುತ್ತಾನೆ. ಪ್ರಾಯಪ್ರಬುದ್ಧ ವ್ಯಕ್ತಿ ಪ್ರತಿ ಬಾರಿ ಉಸಿರೆಳೆದುಕೊಳ್ಳುವಾಗಲೂ ಸುಮಾರು ೫೦೦ ಮಿಲಿಲೀಟರಿನಷ್ಟು ವಾಯುವನ್ನು ಒಳಸೇವಿಸಿ ಸುಮಾರಾಗಿ ಅಷ್ಟನ್ನೇ ಹೊರಗೆ ಬಿಡುತ್ತಾನೆ. ಮಹಿಳೆಯರಲ್ಲಿ ಉಸಿರಾಟದ ವೇಗ ಪುರುಷರಿಗಿಂತ ತುಸು ಹೆಚ್ಚು. ಉಸಿರಾಟದ ವೇಗ ಉದ್ವೇಗ, ಭಯ, ಕೋಪ ಅಥವಾ ಸಂತೋಷ ಹೀಗೆ ಹಲವಾರು ವಿಷಯಗಳನ್ನವಲಂಬಿಸಿರುತ್ತದೆ. ಅಂತೆಯೇ ವಿಪರೀತ ಆಯಾಸವಾದಾಗ, ಜ್ವರ ಬಂದು ಬಿಸಿಯಾದಾಗ ಅಥವಾ ಶ್ವಾಸಕೋಶಕ್ಕೆ ಸಂಬಂಧಿಸಿದ ಇತರ ರೋಗ ತಟ್ಟಿದಾಗ ಉಸಿರಾಟದ ತೀವ್ರತೆ ಹೆಚ್ಚುವುದುಂಟು. ಮಿದುಳಿನೊಳಗೆ ನೀರು ತುಂಬಿಕೊಂಡ ಮೆನಿಂಜೈಟಿಸ್‌ನಂತಹ ರೋಗದಲ್ಲಿ, ಮೂತ್ರ ಬಂದಾಗಿ ರಕ್ತದಲ್ಲಿ ಯೂರಿಯಾದ ಅಂಶ ಹೆಚ್ಚುತ್ತಿರುವಾಗ, ಮಧುಮೇಹ ನಿಯಂತ್ರಣ ತಪ್ಪಿದಾಗ ಹಾಗೂ ಅಫೀಮು ಮುಂತಾದ ಮಾದಕ ವಸ್ತುಗಳನ್ನು ಸೇವಿಸಿದಾಗ ಉಸಿರಾಟದ ಗತಿ ಸಾಮಾನ್ಯಕ್ಕಿಂತ ಮಂದವಾಗಿರುವುದುಂಟು.

ಉಸಿರಾಟ ಮತ್ತು ನಾಡಿ ಇವುಗಳ ನಡುವೆ ಬಹಳಷ್ಟು ಹೊಂದಾಣಿಕೆ ಕಂಡುಬರುವುದೇ ದೇಹವೆಂಬ ವಿಚಿತ್ರ ಯಂತ್ರದ ಕಾರ್ಯವಿಧಾನದ ಸ್ವಾರಸ್ಯ. ವಯಸ್ಕನಲ್ಲಿ ನಾಡಿ ನಿಮಿಷವೊಂದಕ್ಕೆ ಸರಾಸರಿಯಾಗಿ ೭೨ ಬಾರಿ ಮಿಡಿಯುತ್ತಿದ್ದು ಆತ ಅದೇ ಅವಧಿಯಲ್ಲಿ ಸುಮಾರು ೧೮ ಬಾರಿ ಉಸಿರಾಡುವನು. ಹೃದಯಾಘಾತವಾದಾಗ ಅಥವಾ ನ್ಯುಮೋನಿಯದಂತಹ ರೋಗ ಸೋಂಕಿದಾಗ ಉಸಿರಾಟ ಇನ್ನೂ ತೀವ್ರವಾಗಿ ಉಸಿರಾಟ ಮತ್ತು ನಾಡಿ ಬಡಿತದ ನಡುವಣ ನಿಷ್ಪತ್ತಿ ೧:೩ ಇಲ್ಲವೇ ೧:೨ ಅಥವಾ ಕೆಲವೊಮ್ಮೆ ೧:೧ ರಂತೆ ಕಂಡೂಬರಲೂಬಹುದು! ಅದರೆ ವಿಪರೀತವಾಗಿ ಅಫೀಮನ್ನು ಸೇವಿಸಿ ಒಬ್ಬ ಎಚ್ಚರತಪ್ಪಿದಾಗ ಉಸಿರಾಟದ ಗತಿ ವೇಗ ಮಂದವಾಗಿ ಉಸಿರಾಟ ಮತ್ತು ನಾಡಿ ಬಡಿತದ ನಡುವಣ ನಿಷ್ಪತ್ತಿ ೧:೫ ಅಥವಾ ಇನ್ನೂ ಹೆಚ್ಚು ಆಗಬಹುದು.

ಉಚ್ಛ್ವಾಸ ಮತ್ತು ನಿಃಶ್ವಾಸ

ನಮ್ಮ ಉಸಿರಾಟದಲ್ಲಿ ಉಚ್ಛ್ವಾಸ ಹಾಗೂ ನಿಃಶ್ವಾಸವೆಂದು ಎರಡು ಹಂತಗಳಿವೆ. ಉಚ್ಛ್ವಾಸದ ಸಮಯದಲ್ಲಿ ಮೂಗಿನ ಮೂಲಕ ವಾತಾವರಣದ ವಾಯು ಶ್ವಾಸಕೋಶಗಳನ್ನು ತಲುಪುವಾಗ ಸ್ನಾಯುಗಳ ಪದರುಗಳನ್ನೊಳಗೊಂಡ ಪಕ್ಕೆಲುಬುಗಳನ್ನು ಪಡೆದ ಎದೆಗೂಡು ಹೊರಗಡೆಗೆ ಉಬ್ಬಿ ಅದಕ್ಕೆ ಬೇಕಾದಷ್ಟು ಸ್ಥಳಾವಕಾಶವನ್ನು ಕಲ್ಪಿಸಿಕೊಡುತ್ತದೆ. ನಿಃಶ್ವಾಸದ ಸಮಯದಲ್ಲಿ ಮಾಂಸಖಂಡ

ಸಂಕುಚಿತಗೊಂಡ ಪಕ್ಕೆಯ ಈ ಅಸ್ಥಿಪಂಜರವು ಒಳಮುಖವಾಗಿ ಒತ್ತಲ್ಪಟ್ಟು ಶ್ವಾಸಕೋಶ-ಗಳೊಳಗಿನ ಅಶುದ್ಧ ವಾಯು ಹೊರಗೆ ತಳ್ಳಲ್ಪಡುತ್ತದೆ. ಈ ಎರಡೂ ಹಂತಗಳಲ್ಲಿ ಉಸಿರಾಟದ ಮುಖ್ಯ ಸೂತ್ರಧಾರನಾಗಿರುವ ಒಂದು ಸ್ನಾಯುಮಯ ವಪೆ (Dihpiragm). ಎದೆಗೂಡು ಹಾಗೂ ಹೊಟ್ಟೆಯ ನಡುವೆ ವಿಸ್ತಾರವಾಗಿ ಹರಡಿರುವ ಈ ವಪೆ ಆಚೀಚೆಗಿನ ಪಕ್ಕೆಲುಬುಗಳನ್ನೆಲ್ಲಾ ಭದ್ರವಾಗಿ ಅಪ್ಪಿಕೊಂಡು ತನ್ಮೂಲಕ ಉಸಿರಾಟದ ಈ ಕ್ರಿಯೆಯಲ್ಲಿ 'ಹಿರಿ' ಯಣ್ಣನ ಕೆಲಸವನ್ನು ಅವಿರತವಾಗಿ ಮಾಡುತ್ತಿರುತ್ತದೆ. ಹೀಗೆ, ಉಚ್ಛ್ವಾಸದ ವೇಳೆ ಹೊಟ್ಟೆ ಊದಿಕೊಳ್ಳುವುದೂ ನಿಃಶ್ವಾಸದ ಸಮಯದಲ್ಲಿ ಹೊಟ್ಟೆ ಒಳಗೆ ಹೋದಂತೆ ತೋರಿ ಬರುವುದೂ ವಪೆಯ ಹಾಗೂ ಕಿಬ್ಬೊಟ್ಟೆಯ ಸ್ನಾಯುಗಳ ಸಂಕೋಚ–ವಿಕಸನಗಳಿಂದಲೇ.

ಉಚ್ಛ್ವಾಸಕ್ಕೆ ನಿಃಶ್ವಾಸಕ್ಕಿಂತ ತುಸು ಹೆಚ್ಚಿಗೆ ಸಮಯ ತಗಲುತ್ತದೆಂಬುದು ಸುಮಾರಾಗಿ ಎಷ್ಟೋ ಜನರಿಗೆ ಗೊತ್ತಿಲ್ಲ. ಶ್ವಾಸಕೋಶಕ್ಕೆ ಸಂಬಂಧಿಸಿದ ಬೇರೆ ಬೇರೆ ಕಾಯಿಲೆಗಳಾದಾಗ ಉಸಿರಾಟದ ಈ ಎರಡು ಹಂತಗಳೊಳಗೆ ತುಂಬಾ ಬದಲಾವಣೆ ಕಂಡುಬರುತ್ತದೆ. ಇದನ್ನು ವೈದ್ಯರು ಉಸಿರಾಟದ ಎರಡು ಹಂತಗಳ ಧ್ವನಿಯನ್ನು ಸ್ಟೆತಾಸ್ಕೋಪಿನ ಮೂಲಕ ಆಲಿಸಿ ಚಿತ್ರಪಡಿಸಿಕೊಳ್ಳುವರು.

ಉಸಿರಾಟ ಜೀವನಕ್ಕೆ ಅಷ್ಟೊಂದು ಮುಖ್ಯ-ವೆಂದಾದರೆ ಅದರಿಂದ ದೇಹಕ್ಕಾಗುವ ಲಾಭ-ವಾದರೂ ಏನು ? ಅವು ಮುಖ್ಯವಾಗಿ ಮೂರು:

೧. ನಮ್ಮ ಶರೀರದ ಜೀವಕೋಶಗಳಲ್ಲಿ ಹಗಲಿರುಳೂ ನಡೆಯುವ ಅನೇಕ ಚಟುವಟಿಕೆಗಳಿಗೆ ಅಗತ್ಯವಾದ ಆಮ್ಲಜನಕವನ್ನು ಪೂರೈಸಿ, ಅಲ್ಲಿ ಉಂಟಾದ ಇಂಗಾಲಾಮ್ಲವೇ ಮುಂತಾದ ಕಶ್ಮಲವನ್ನು ನಿಃಶ್ವಾಸದ ಮೂಲಕ ಹೊರಗೆ ಹಾಕುವುದು.

೨. ರಕ್ತದಲ್ಲಿ ಜಲಜನಕದ ಐಯಾನುಗಳನ್ನು (H +) ಒಂದೇ ಮಟ್ಟದಲ್ಲಿರಿಸಲು ರಕ್ತದ pH ನ್ನು ವ್ಯತ್ಯಾಸವಾಗದಂತೆ ನೋಡಿಕೊಳ್ಳುವುದು.

೩. ದೇಹದ ಉಷ್ಣತೆಯನ್ನು ಒಂದೇ ಮಟ್ಟ-ದಲ್ಲಿಡುವುದು.

ಈ ಮೇಲಿನ ಆವಶ್ಯಕತೆಗಳು ಹೆಚ್ಚಾದ ಸಂದರ್ಭಗಳಲ್ಲೆಲ್ಲ ಉಸಿರಾಟದ ತೀವ್ರತೆಯೂ, ಹೆಚ್ಚುವುದು. ಒಟ್ಟಿನಲ್ಲಿ, ನಾವು ಉಸಿರಾಡು ವಾಗ ನಿಮಿಷವೊಂದಕ್ಕೆ ಸುಮಾರು ೫ ರಿಂದ ೧೦ ಲೀಟರಿನಷ್ಟು ಗಾಳಿ ನಮ್ಮ ಶ್ವಾಸಕೋಶ-ವನ್ನು ಸೇರಿ ಹೊರಗೆ ಬರುತ್ತದೆ.

ಬದುಕಿಗೆ ಆಧಾರವಾದ ಈ ಉಸಿರಾಟವನ್ನು ಲಯಬದ್ಧವಾಗಿ ನಡೆಸುವ ಶಕ್ತಿ ಯಾವುದು ? ಇದು ವಿಜ್ಞಾನಯುಗದ ಆದಿಯಲ್ಲಿ ಉದ್ಭವಿ-ಸಿದ ಪ್ರಶ್ನೆ. ಈ ಬಗ್ಗೆ ಆಸಕ್ತಿ ತಳೆದ ವಿಜ್ಞಾನಿಗಳು ಹಲವಾರು ಪ್ರಯೋಗಗಳನ್ನು ಮಾಡಿ ತನ್ಮೂಲಕ ನಮ್ಮ ಮಿದುಳಿನಲ್ಲಿ ಉಸಿರಾಟದ ನಿಯಂತ್ರಣಕ್ಕಾಗಿಯೇ ಅಲ್ಲಲ್ಲಿ ಚದುರಿದ ನರಕೋಶಗಳ ಸಮುದಾಯವಿರುವುದನ್ನು ಪತ್ತೆ ಹಚ್ಚಿ ಅದನ್ನು ಉಸಿರಾಟದ ಕೇಂದ್ರವೆಂದು ಕರೆದರು.

ಇದಕ್ಕಿರುವ ಉಪಕೇಂದ್ರಗಳು ಹಲವಾರು :

೧೯೩೯ರಲ್ಲಿ ಪಿಟ್ಸ್, ರಾನ್‌ಸನ್ ಮತ್ತು ಮಾಗೌನ್ ಎಂಬ ವಿಜ್ಞಾನಿಗಳಿಂದ ಕಂಡು ಹಿಡಿಯಲ್ಪಟ್ಟ ಮಣಿಶಿರ. (Medulla oblongata) ದಲ್ಲಿ :

(i) ಉಚ್ಛ್ವಾಸದ ಕೇಂದ್ರ.

ಪ್ರಾಯೋಗಿಕವಾಗಿ ಇಲೆಕ್ಟ್ರೋಡುಗಳ ಮೂಲಕ ಈ ನರಕೋಶಗಳ ಸಮುದಾಯವನ್ನು ಪ್ರಚೋದಿಸಿದಾಗ ಉಚ್ಛ್ವಾಸಕ್ರಿಯೆ ಆರಂಭವಾಗುತ್ತದೆ.

(ii) ನಿಃಶ್ವಾಸದ ಕೇಂದ್ರ.

ಉಚ್ಛ್ವಾಸ ಕೇಂದ್ರದ ಆಚೀಚೆ ಹರಡಿರುವ ನರಕೋಶಗಳ ಈ ಸಮುದಾಯವು ಪ್ರಚೋ-ದನೆಗೊಳಗಾದಾಗ ನಿಃಶ್ವಾಸಕ್ರಿಯೆ ಜರುಗು-ತ್ತದೆ. ಆದರೆ ಒಮ್ಮೆಲೇ ಈ ಎರಡೂ ಕೇಂದ್ರ-ಗಳು ಪ್ರಚೋದಿಸಲ್ಪಟ್ಟರೆ ಉಚ್ಛ್ವಾಸಕ್ರಿಯೆ ಮಾತ್ರವೇ ಕಂಡುಬರುವುದರಿಂದ ಉಚ್ಛ್ವಾ-ಸದ ಕೇಂದ್ರಕ್ಕೆ ನಿಃಶ್ವಾಸದ ಕೇಂದ್ರದ ಮೇಲೆ ಹತೋಟಿ ಇದೆಯೆಂದಾಯಿತು. ಈ ಎರಡೂ ಕೇಂದ್ರಗಳ ನಡುವೆ ಸಂಬಂಧ ಕಲ್ಪಿಸುವ

ಅನೇಕ ನರತಂತುಗಳೂ ಇವೆ.

(೨) ಮಣಿಶಿರಕ್ಕಿಂತ ಮೇಲ್ಪಟ್ಟದ PONS ನಲ್ಲಿರುವ ನರಸಮುದಾಯ :

(೧೯೬೪ರಲ್ಲಿ ವಾಂಗ್ ಮತ್ತು ಸಂಗಡಿಗರು ಇದನ್ನು ಕಂಡುಹಿಡಿದರು.)

(i) ಕೆಳ ಪಾನ್ಸ್(Lower Pons)ನಲ್ಲಿರುವ ದೀರ್ಘೋಚ್ಛ್ವಾಸ ಕೇಂದ್ರ (Apnoeastic centre) ವು ಪ್ರಚೋದಿಸಲ್ಪಟ್ಟಾಗ ಮಣಿಶಿರದಲ್ಲಿರುವ ಉಚ್ಛ್ವಾಸದ ಕೇಂದ್ರವು ಉದ್ರೇಕಗೊಂಡು ನಿಃಶ್ವಾಸಕ್ರಿಯೆಗೆ ಎಡೆಯಿಲ್ಲದೆ ದೀರ್ಘವಾದ ಉಚ್ಛ್ವಾಸಕ್ರಿಯೆ ಜರುಗಲಾರಂಭಿಸುವುದು.

(ii) ಮಧ್ಯ ಮಿದುಳಿಗಿಂತ ಕೆಳಗೆ (Upper Pons) ಇರುವಶ್ವಾಸ ನಿಯಂತ್ರಣ ಕೇಂದ್ರ (Pneumotaxic centre) ಉಸಿರಾಟ ಕ್ರಿಯೆಯಲ್ಲಿ ರಿಂಗ್‌ಮಾಸ್ಟರನ ಪಾತ್ರ ವಹಿಸಿಕೊಳ್ಳುತ್ತದೆ.

ಈ ಕೇಂದ್ರವು ದೀರ್ಘೋಚ್ಛ್ವಾಸ ಕೇಂದ್ರವನ್ನು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿಟ್ಟುಕೊಂಡು ಉಸಿರಾಟವು ಸುಗಮವಾಗಿ ಜರುಗುವಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ.

ವೇಗಸ್ ಎಂಬ ಮಿದುಳಿನಿಂದ ಹೊರಡುವ ಎರಡು ಮುಖ್ಯ ನರಗಳು ಶ್ವಾಸನಿಯಂತ್ರಣ ಕೇಂದ್ರವನ್ನು ಹೊರತು ಬೇರೆಲ್ಲಾ ಕೇಂದ್ರಗಳಿಗೂ ಸಂಜ್ಞೆಯನ್ನು ತಲುಪಿಸಿ ತನ್ಮೂಲಕ ಉಸಿರಾಟ ಸುಲಭವಾಗಿಯೂ ಸುಲಲಿತವಾಗಿಯೂ ನಡೆಯಲು ಸಹಕಾರಿಯಾಗುತ್ತವೆ. ಶ್ವಾಸಕೋಶಗಳ ಗಾಳಿ ಚೀಲಗಳ ತೆಳು ಭಿತ್ತಿಯಲ್ಲೂ ಕವಲು ಕವಲಾಗಿ ಒಡೆದಿರುವ ಈ ನರತಂತುಗಳ ಜಾಲವೊಂದಿದೆ. ಪರಾವರ್ತಿತ ಪ್ರತಿಕ್ರಿಯೆಯಿಂದ ಉಸಿರಾಟ ಸುಲಭವಾಗಿ ನೆರವೇರಲು ಈ ನರತಂತುಗಳೇ ಮುಖ್ಯ ಕಾರಣ. ಈ ರೀತಿಯ ವ್ಯವಸ್ಥೆಗೆ ಹೆರಿಂಗ್ ಬ್ರೂಯರ್ ರಿಫ್ಲೆಕ್ಸ್ ಎಂದು ಹೆಸರು.

ಹೆರಿಂಗ್ ಮತ್ತು ಬ್ರೂಯರ್ ಎಂಬ ವಿಜ್ಞಾನಿಗಳು ತಮ್ಮ ಪ್ರಯೋಗದಲ್ಲಿ ಶ್ವಾಸಕೋಶಗಳೊಳಗೆ ಗಾಳಿಯನ್ನು ಒಂದೇ ಸಮನೆ ಸೇರಿಸುತ್ತಲೇ ಹೋದಾಗ, ಒಂದು ಹಂತದಲ್ಲಿ ಶ್ವಾಸಕೋಶಗಳ ಗಾಳಿ ಚೀಲಗಳು ವಿಕಸಿತಗೊಳ್ಳುವುದು ಸಂಪೂರ್ಣ ನಿಂತು ತಕ್ಷಣವೇ ನಿಃಶ್ವಾಸಕ್ರಿಯೆ ಜರಗುವುದನ್ನು ಕಂಡುಕೊಂಡರು. ಇದಕ್ಕೇನು ಕಾರಣವೆಂಬುದನ್ನು ತಿಳಿಯುವ ಕುತೂಹಲ ಅವರಲ್ಲುಂಟಾಯಿತು. ಎರಡೂ ಕಡೆಯ ವೇಗಸ್ ನರಗಳನ್ನು ಕತ್ತರಿಸಿ ಪರಿಣಾಮವನ್ನೀಕ್ಷಿಸಹೊರಟಾಗ ಅವರಿಗೆ ಉಸಿರಾಟವು ನಿಧಾನವಾಗಿ ನಡೆದು ದೀರ್ಘೋಚ್ಛ್ವಾಸಕ್ರಿಯೆ ತೋರಿಬಂತು. ಕತ್ತರಿಸಿದ ವೇಗಸ್ ನರತಂತುಗಳು ಪುನಃ ಇಲೆಕ್ಟ್ರೋಡುಗಳಿಂದ ಪ್ರಚೋದಿಸಲ್ಪಟ್ಟಾಗ ಉಸಿರಾಟ ಮತ್ತೊಮ್ಮೆ ಮಾಮೂಲಿನಂತೆ ಕ್ರಮಬದ್ಧವಾಗಿ ನಡೆಯಲಾರಂಭವಾಯಿತು. ಹೀಗೆ, ಉಚ್ಛ್ವಾಸದ ಸಮಯದಲ್ಲಿ ಶ್ವಾಸಕೋಶಗಳ ಗಾಳಿ ಚೀಲಗಳ ಭಿತ್ತಿಯಲ್ಲಿರುವ ನರತಂತುಗಳು ಪ್ರಚೋದನೆಗೊಂಡು ಆ ಸಂವೇದನೆ ವೇಗಸ್ ನರಗಳ ಮೂಲಕ ಸಂಚರಿಸಿ ಉಚ್ಛ್ವಾಸದ ಮತ್ತು ನಿಃಶ್ವಾಸದ ಕೇಂದ್ರಗಳನ್ನು ತಲುಪಿ, ಗಾಳಿಚೀಲಗಳೆಲ್ಲ ಸಾಧ್ಯವಿದ್ದಷ್ಟು ಉಬ್ಬಿಕೊಂಡಾಗ ನಿಃಶ್ವಾಸದ ಕೇಂದ್ರ ಉದ್ರೇಕಗೊಂಡು ತನ್ಮೂಲಕ ಉಚ್ಛ್ವಾಸ ಕ್ರಿಯೆಯೂ ನಿಂತು ಗಾಳಿಚೀಲಗಳು ವಾಯುವಿನ ಅತಿ ಒತ್ತಡದಿಂದಾಗಿ ಹರಿದುಹೋಗದಂತೆ ಕಾಪಾಡಲು ನಿಃಶ್ವಾಸಕ್ರಿಯೆ ಆರಂಭವಾಗುವ ಈ ಸೂಕ್ಷ್ಮ ವ್ಯವಸ್ಥೆಯೊಂದಿರುವ ಬಗ್ಗೆ ಅವರಿಗೆ ಪ್ರಥಮತಃ ತಿಳಿದುಬಂತು. ಆದ್ದರಿಂದಲೇ ಈ ಪರಾವರ್ತಿತ ಪ್ರತಿಕ್ರಿಯೆಗೆ ಹೆರಿಂಗ್ ಹಾಗೂ ಬ್ರೂಯರ್ ಎಂದು ಹೆಸರು.

ಉಸಿರಾಟದ ಈ ಸುವ್ಯವಸ್ಥಿತ ಕ್ರಿಯೆಯನ್ನೀಗ ಮತ್ತೊಮ್ಮೆ ಪರಾಮರ್ಶಿಸಹೊರಟರೆ ಈ ವಿಚಾರ ಸ್ಪಷ್ಟವಾಗುತ್ತದೆ—


ದೀರ್ಘೋಚ್ಛ್ವಾಸ ಕೇಂದ್ರವು ಪ್ರಚೋದಿಸಲ್ಪಟ್ಟು ತನ್ಮೂಲಕ ಉಚ್ಛ್ವಾಸದ ಕೇಂದ್ರ ಉದ್ರೇಕಗೊಂಡು ಉಚ್ಛ್ವಾಸ ಕ್ರಿಯೆ ನಡೆಯುತ್ತದೆ. ಉಚ್ಛ್ವಾಸ ನಡೆಯುತ್ತಿರುವಾಗ ಶ್ವಾಸ ನಿಯಂತ್ರಣ ಕೇಂದ್ರ ಹಾಗೂ ವೇಗಸ್ ನರಗಳ

ನ್ಯೂಮೊಟ್ಯಾಕ್ಸಿಕ್ ಪತ್ತೋಟಿಗೆ ದೀರ್ಘೋಚ್ಛ್ವಾಸ ಕೇಂದ್ರವು ಒಳಗಾಗಿ, ಉಚ್ಛ್ವಾಸದ ಹಂತ ಅಲ್ಲಿಗೇ ನಿಂತು ನಿಃಶ್ವಾಸದ ಕೇಂದ್ರಕ್ಕೆ ಪ್ರಚೋದನೆ ದೊರೆತು ನಿಃಶ್ವಾಸಕ್ರಿಯೆ ನಡೆಯಲಾರಂಭಿಸುತ್ತದೆ.

ನಿಃಶ್ವಾಸವು ನಡೆಯುತ್ತಿರುವಾಗ ದೀರ್ಘೋಚ್ಛ್ವಾಸ ಕೇಂದ್ರದ ಮೇಲೂ ಹತೋಟಿ ತಪ್ಪಿದ ತಾನಾಗಿಯೇ ಸಡಿಲಗೊಂಡು ಉಚ್ಛ್ವಾಸದ ಕೇಂದ್ರವು ಪುನಃ ಪ್ರಚೋದಿಸಲ್ಪಟ್ಟು ಉಚ್ಛ್ವಾಸಕ್ಕೆಡೆ ದೊರೆಯುತ್ತದೆ. ಈ ರೀತಿಯಲ್ಲಿ ಉಚ್ಛ್ವಾಸ—ನಿಃಶ್ವಾಸ ಕ್ರಿಯೆಗಳು ಕ್ರಮಬದ್ಧವಾಗಿ ಜರುಗುತ್ತಿರುತ್ತವೆ.

ಹೀಗೆ, ಉಚ್ಛ್ವಾಸ ಕೇಂದ್ರವು ದೀರ್ಘೋಚ್ಛ್ವಾಸ ಕೇಂದ್ರದ ನೇರ ಹತೋಟಿಯಲ್ಲಿದ್ದರೆ, ದೀರ್ಘೋಚ್ಛ್ವಾಸ ಕೇಂದ್ರವು ಶ್ವಾಸನಿಯಂತ್ರಣ ಕೇಂದ್ರದ ನೇರ ಹಿಡಿತದಲ್ಲಿರುವುದನ್ನು ಕಾಣಬಹುದು (ಚಿತ್ರನೋಡಿ).

ಉಸಿರಾಟದ ಮೇಲೆ ಪ್ರಭಾವ ಬೀರುವ



ಇನ್ನೆರಡು ನರಗಳಿವೆ. ಇವುಗಳಿಗೆ ಸೈನಸ್ ಮತ್ತು ಅಯೋರ್ಟಿಕ್ ನರಗಳೆಂದು ಹೆಸರು. ಮಹಾಪಧಮನಿಯ ಕವಲುಗಳಲ್ಲಿ ಶೇಖರಗೊಂಡಿರುವ ಕೆಲವು ನರಕೋಶಗಳು ರಕ್ತದ pH ನಲ್ಲಾದ ಬದಲಾವಣೆಯನ್ನೂ (Chae morcecptors), ರಕ್ತದ ಒತ್ತಡದಲ್ಲಾದ ಮಾರ್ಪಾಡುಗಳನ್ನೂ (Baroreceptor) ನೇರವಾಗಿ ಈ ನರಗಳಮೂಲಕ ಉಸಿರಾಟದ ಹಾಗೂ ಹೃದಯದ ಕೇಂದ್ರಗಳಿಗೆ ತಲುಪಿಸಿ, ತನ್ಮೂಲಕ ಉಸಿರಾಟದಲ್ಲೂ ಸೂಕ್ತ ಬದಲಾವಣೆಯನ್ನುಂಟು ಮಾಡುತ್ತವೆ.

ಉಸಿರಾಟವನ್ನು ನಡೆಸುವ ನರಗಳ ವಿಚಾರ ತಿಳಿದಂತಾಯಿತು. ಉಸಿರಾಟದಲ್ಲಿ ಮುಖ್ಯ ಪಾತ್ರ ವಹಿಸುವ ಇತರ ಅಂಶಗಳೂ ಇವೆ.

೧. ಉಚ್ಛ್ವಾಸದ ಗಾಳಿಯಲ್ಲಿರುವ ಇಂಗಾಲಾಮ್ಲದ ಪ್ರಮಾಣ

ರೇಲ್ವೆ ಸ್ಟೇಷನ್‌ನಲ್ಲಿ ಬಹಳ ಕಾಲ ಕುಳಿತಿರುವೆವೆನ್ನಿ. ರೈಲಿನ ಹೊಗೆಯೇ ಸರ್ವತ್ರ ತುಂಬಿರುವುದರಿಂದ ಅಲ್ಲಿನ ವಾಯುವಿನಲ್ಲಿ ಇಂಗಾಲಾಮ್ಲದಂಶ ಜಾಸ್ತಿಯಾಗಿದೆಯೆಂದಾಯಿತು. ಆಗ ಉಸಿರಾಟದ ತೀವ್ರತೆಯೂ ಹೆಚ್ಚು ಹೆಚ್ಚಾಗಿ ಅದಷ್ಟು ಹೆಚ್ಚು ಪ್ರಾಣವಾಯು ಶ್ವಾಸಕೋಶಗಳೊಳಗೆ ಸೇರುವ ಅವಕಾಶ ಒದಗಿ ಬರುವುದು.

೨ ರಕ್ತದಲ್ಲಿನ ಜಲಜನಕದ ಐಯಾನಿನ (H^+) ಪ್ರಮಾಣ

ಇಂಗಾಲಾಮ್ಲದಂಶ ;ರಕ್ತದಲ್ಲಿ ಜಾಸ್ತಿಯಾದಾಗ ಉಸಿರಾಟದ ವೇಗವೂ ಹೆಚ್ಚಾಗಿ ನಿಃಶ್ವಾಸ ಕ್ರಿಯೆ ತ್ವರಿತವಾಗಿ ಜರುಗಿ ಅದಷ್ಟು ಹೆಚ್ಚು ಪ್ರಮಾಣದಲ್ಲಿ ಇಂಗಾಲಾಮ್ಲವು ಹೊರತಳ್ಳಲ್ಪಡುತ್ತದೆ. ಇಂಗಾಲಾಮ್ಲದ ಪ್ರಮಾಣ ರಕ್ತದಲ್ಲಿ ಹೆಚ್ಚಾಗುವ ಈ ಸ್ಥಿತಿಗೆ ಎಸಿಡೋಸಿಸ್ ಎಂದು ಕರೆದರೆ ತದ್ವಿರುದ್ಧ ಸ್ಥಿತಿಗೆ ಅಲ್ಕಲೋಸಿಸ್ ಎಂಬ ಹೆಸರಿದೆ. ಅಲ್ಕಲೋಸಿಸ್ ಆದಾಗ ರಕ್ತದಲ್ಲಿ ಇಂಗಾಲಾಮ್ಲದಂಶ ಕಡಿಮೆಯಾದ್ದು, ಅದರ ಪೂರೈಕೆ ಚೆನ್ನಾಗಿ ಆಗುವಂತೆ ವಾಸಾಲು

ಉಸಿರಾಟ ನಿಧಾನಗೊಳ್ಳುತ್ತದೆ. ಆಗ ನಿಃಶ್ವಾಸದ ಮೂಲಕ ಹೊರಹೋಗುವ ಇಂಗಾಲಾಮ್ಲದ ದಂಶವೂ ಕಡಿಮೆಯಾಗುತ್ತದೆ. ಆಗ ಶ್ವಾಸ-ಕೋಶಗಳ ಗಾಳಿಚೀಲಗಳಲ್ಲಿರುವ ಇಂಗಾ-ಲಾಮ್ಲವು ರಕ್ತದೊಂದಿಗೆ ಪುನಃ ಬೆರೆತು ತನ್ಮೂಲಕ ಬಿಡುಗಡೆಗೊಳ್ಳುವ ಜಲಜನಕದ ಅಯಾನಿನಿಂದಾಗಿ ಅಲ್ಕಲೋಸಿಸ್ ನಿವಾರಣೆಗೊಳ್ಳುತ್ತದೆ.

೩. ಪ್ರಾಣವಾಯುವಿನ ಕೊರತೆ

ನಾವು ಸೇವಿಸುವ ವಾಯುವಿನಲ್ಲಿ ಇಂಗಾ-ಲಾಮ್ಲದ ಪ್ರಮಾಣ ಹೆಚ್ಚಿದಾಗ ಉಸಿರಾಟ ತೀವ್ರಗೊಳ್ಳುವ ಹಾಗೆಯೆ ಪ್ರಾಣವಾಯು-ವಿನ ಕೊರತೆಯುಂಟಾದಾಗಲೂ ಉಸಿರಾಟದಲ್ಲಿ ಬದಲಾವಣೆ ಆಗುವುದುಂಟು. ಸಾಮಾನ್ಯವಾಗಿ ನಾವು ಸೇವಿಸುವ ಹವೆಯಲ್ಲಿ ಶೇಕಡಾ ೩೦ ರಷ್ಟು ಪ್ರಾಣವಾಯುವಿರುತ್ತದೆ. ಒಂದೊಮ್ಮೆ ಶೇಕಡಾ ಹತ್ತರಷ್ಟು ಪ್ರಾಣವಾಯುವಿರುವ ಹವೆಯನ್ನು ನಾವು ಸೇವಿಸಿದಾಗಲೂ ಉಸಿ-ರಾಟದಲ್ಲಿ ಎಳ್ಳಷ್ಟೂ ಬದಲಾವಣೆ ನಮಗೆ ಕಂಡುಬರುವುದಿಲ್ಲ! ಅದಕ್ಕಿಂತಲೂ ಪ್ರಾಣ ವಾಯುವಿನ ಅಂಶ ಕಡಿಮೆಯಾದಾಗ ಮಾತ್ರ ಉಸಿರಾಟ ತ್ವರಿತಗೊಂಡು ಒಂದು ತೆರದ ಬಾಧೆ ಕಂಡುಬರುತ್ತದೆ. ವಿಮಾನದಲ್ಲಿ ಕುಳಿತು ಎತ್ತರದಲ್ಲಿ ಪಯಣಿಸುವಾಗ ಈ ರೀತಿಯಲ್ಲಿ ಪ್ರಾಣವಾಯುವಿನ ಕೊರತೆಯುಂಟಾಗಿ ತನ್ಮೂಲಕ ಉಸಿರಾಟ ತೀವ್ರಗೊಳ್ಳುವುದು ಸರ್ವೇಸಾಮಾನ್ಯ. ಮಗುವು ಹುಟ್ಟಿದೊಡ-ನೆಯೇ ಅಳದಿದ್ದರೆ ಅದರ ಮೂಗಿನ ಸೊಳ್ಳೆ-ಗಳನ್ನು ಭದ್ರವಾಗಿ ಕ್ಷಣಕಾಲ ಒತ್ತಿ ಹಿಡಿಯುವ ಅಭ್ಯಾಸ ನಮ್ಮಲ್ಲಿನ್ನೂ ಹಲವೆಡೆಗಳಲ್ಲಿದೆ. ಕಾರಣವಿಷ್ಟೆ: ಆಗ ಉಂಟಾಗುವ ಪ್ರಾಣ-ವಾಯುವಿನ ಕೊರತೆಯಿಂದಾಗಿ ರಕ್ತದಲ್ಲಿನ ಇಂಗಾಲಾಮ್ಲದ ಅಂಶ ಒಂದೇ ಸವನೆ ಹೆಚ್ಚಿ,



ಸ್ವಲ್ಪ ಮನೆ ಕಡೆಗೆ ಲಕ್ಷವಿರಲಿ ನಾನು ಹೊರಗೆ ಹೋಗ್ಬರ್ತೀನೆ.

ತನ್ಮೂಲಕ ನೇರವಾಗಿ ಉಸಿರಾಟದ ಕೇಂದ್ರ ಪ್ರಚೋದನೆಗೊಂಡು ಮಗುವು ಒಮ್ಮೆಲೇ ಅಳತೊಡಗಿ ದೀರ್ಘಶ್ವಾಸವನ್ನು ತೆಗೆದುಕೊಂಡು ಉಸಿರಾಟ ಮುಂದೆ ಕ್ರಮಬದ್ಧವಾಗಿ ನಡೆ-ಯಲಾರಂಭಿಸುತ್ತದೆ.

ಈ ರೀತಿಯಲ್ಲಿ ನಮ್ಮ ಉಸಿರಾಟ ಸಾಂಗ-ವಾಗಿ ನೆರವೇರಲು ಮಿದುಳಿನಲ್ಲಿರುವ ಉಸಿ-ರಾಟದ ಕೇಂದ್ರದಷ್ಟೇ ಶ್ವಾಸನಾಳ ಹಾಗೂ ಸಹಸ್ರಾವಧಿ ಕವಲುಗಳು ಮತ್ತು ಶ್ವಾಸಕೋಶಗಳಲ್ಲಿರುವ ಲಕ್ಷಾಂತರ ಗಾಳಿಚೀಲಗಳೂ ಮಹತ್ವದ ಪಾತ್ರ ವಹಿಸುತ್ತವೆ. ಇವುಗಳಲ್ಲಿ ಅಲ್ಪಸ್ವಲ್ಪ ಅಡೆತಡೆಯಾದರೂ ಅದರ ಪರಿಣಾಮ ಶರೀರದಾದ್ಯಂತ ಕಂಡುಬರುವುದು. ನಮ್ಮ ಆರೋಗ್ಯವನ್ನು ಪ್ರತಿಬಿಂಬಿಸುವ ಕೈಗನ್ನಡಿ ನಮ್ಮ ಉಸಿರಾಟವೆನ್ನುವುದರಲ್ಲಿ ಸಂಶಯವಿಲ್ಲ.



ರೊಚ್ಚಿಗೆದ್ದಾಗ ಈ ಮೃಗ
ಭಯಂಕರವಾಗಬಲ್ಲದು

ಕೆರಳಿದ ಚಿರತೆ

ಕೇಶಿ

ಪ್ರಾಣಿ ಪ್ರಪಂಚದಲ್ಲಿಯೇ ಚಿರತೆಯದು ಮಿಂಚಿನ ವೇಗ. ಅಪಾಯ ಸನ್ನಿಹಿತವಾದಾಗಲಂತೂ ಅದರ ಓಟದ ವೇಗ ಗಂಟೆಗೆ ಎಂಭತ್ತು ಮೈಲಿಗೂ ಮಿಕ್ಕಿರುತ್ತದೆ ಎಂದು [illegible] ಅಭ್ಯಸಿಸಿದವರು ಅಭಿಪ್ರಾಯಪಡುತ್ತಾರೆ. ಆದೇನೇ ಇರಲಿ, ಅದು ಕೇವಲ [illegible] ಮಾತ್ರವಲ್ಲ, ಇತರ ಚಟುವಟಿಕೆ [illegible] ಮರವೇರುವುದು, [illegible] ಅಡಗುವುದು, ಬೇಟೆಯಾಡುವುದು ಎಲ್ಲದರಲ್ಲೂ ಬೆಕ್ಕಿನ ಕುಲದಲ್ಲಿ ಚಿರತೆ ನಿಷ್ಣಾತ ಪ್ರಾಣಿ. ಹುಲಿಯ ಗಾತ್ರ [illegible] ಇದ್ದರೆ ಅದು ಪ್ರಾಣಿ ಪ್ರಪಂಚದ ಅಧಿಪತಿ ಸಮ್ರಾಟನಾಗಿ ಮೆರೆಯುತ್ತಿತ್ತು. ಅದರ ಕ್ರೌರ್ಯದಿಂದಾಗಿ ಎಷ್ಟೋ ಪ್ರಾಣಿ ಕುಲಗಳೇ ಇಷ್ಟರಲ್ಲಿ ನಿರ್ನಾಮವಾಗುತ್ತಿದ್ದುವು.


ಕೆರಳಿದ ಚಿರತೆಯಷ್ಟು ಕ್ರೂರವೂ ಭೀಷಣವೂ ಆದ ಪ್ರಾಣಿ ಜಗತ್ತಿನಲ್ಲಿ ಬೇರಾವುದೂ ಇಲ್ಲವೆನ್ನಬೇಕು. ಅದರ ಧೈರ್ಯ, ಅದರ ಸೆಣಸಾಟ ಅಪ್ರತಿಮ. ಕೆರಳಿದ ಚಿರತೆ ತನಗಿಂತ ಗಾತ್ರದಲ್ಲಿ, ಬಲದಲ್ಲಿ ಎಷ್ಟೋ ಪಾಲು ಮಿಗಿಲಾದ ಪ್ರಾಣಿಗಳನ್ನು ಎದುರಿಸಲು ಹಿಂದೆ ಮುಂದೆ ನೋಡಲಾರದೆಂಬುದರಲ್ಲಿ ತಥ್ಯವಿದೆ. ಈ ಕೆಚ್ಚು ಸಾಹಸಗಳೊಂದಿಗೆ ಜನ್ಮತಃ ಒಂದು ಕುಟಿಲೋಪಾಯಗಳಿಂದಾಗಿ ಪ್ರಾಣಿಜಗತ್ತಿನಲ್ಲಿ ಚಿರತೆಗೆ ಒಂದು ವಿಶಿಷ್ಟ ಸ್ಥಾನವಿದೆ.

ಗದ್ದಿಗೆ ಅರಣ್ಯ ವಿಭಾಗದಲ್ಲಿ ಕಳೆದ ಹಲವು ತಿಂಗಳುಗಳಿಂದ ಚಿರತೆಯ ಹಾವಳಿ ಹೆಚ್ಚಾಯಿತು. ಅರಣ್ಯ ಭಾಗಗಳಲ್ಲಿ ವರ್ಷದ ಎಲ್ಲ ಸಮಯಗಳಲ್ಲೂ ಹುಲಿ, ಚಿರತೆಗಳ ಕಾಟ ಸಾಮಾನ್ಯವಾದುದೇ. ಆಗಲೋ ಈಗಲೋ ಕಾಡಿನಲ್ಲಿ ಮೇಯಲು ಹೋದ ದನಕರುಗಳು ಈ ಮಾಂಸ ಭಕ್ಷಕ ಪ್ರಾಣಿಗಳಿಗೆ ಆಹುತಿಯಾಗುವುದು ಆ ವಿಭಾಗದ ಜನರಿಗೆ ಹೊಸತೇನಲ್ಲ. ಅದನ್ನವರು ಅಲ್ಲಿಗೇ ಮರೆತುಬಿಡುತ್ತಾರೆ. ಆದರೆ ಇತ್ತೀಚಿನ ಹಲವು ತಿಂಗಳುಗಳಿಂದ ಪ್ರಾರಂಭವಾದ ಚಿರತೆಯ ಕಾಟದಿಂದ ಗದ್ದಿಗೆ ವಿಭಾಗದ ಜನರು ನಿಜವಾಗಿಯೂ ಗಾಬರಿಗೊಳಗಾಗಿದ್ದಾರೆಂದೇ ಹೇಳಬೇಕು. ಪ್ರತಿದಿನವೆಂಬಂತೆ ಕಾಡಿನ

ಭಾಗಕ್ಕೆ ಮೇಯಲು ಹೋದ ಕರುಗಳಲ್ಲಿ ಎರಡು ಮೂರು ಚಿರತೆಗೆ ಬಲಿಯಾಗುತ್ತಿದ್ದವು. ಆಗೀದಾಗ್ಗೆ ದನಗಳಿಗೂ ಚಿರತೆಯಿಂದ ಮಾರಣಾಂತಿಕ ಗಾಯಗಳಾಗುತ್ತಿದ್ದುವು. ತಿನ್ನಲು ಸಾಧ್ಯವಾಗದಿದ್ದರೂ ಕೊಲೆಯ ಕ್ರೂರತನದಲ್ಲಿ ಆನಂದಪಡುವ ಚಿರತೆಯಿಂದಾಗಿ ದಿನದಿನವೂ ದನಕರುಗಳು ನಷ್ಟವಾಗುತ್ತಿದ್ದುದು ಜನರಲ್ಲಿ ಗಾಬರಿಯನ್ನುಂಟುಮಾಡಿತ್ತು. ಇದರೊಂದಿಗೆ ಅರಣ್ಯದ ಅಕ್ಕ ಪಕ್ಕಗಳಲ್ಲಿಯ ಮನೆಗಳಿಂದ ನಾಯಿಗಳೂ ಕಾಣೆಯಾಗತೊಡಗಿದ್ದವು. ನಾಯಿಯ ಮಾಂಸವೆಂದರೆ ಚಿರತೆಗಳಿಗೆ ಇನ್ನಿಲ್ಲದಷ್ಟು ಆಸೆ. ನಾಯಿಯನ್ನು ಒಮ್ಮೆ ಕಂಡ ಚಿರತೆ ಅದೆಷ್ಟೇ ಅಡೆತಡೆಗಳಿದ್ದರೂ ಕುಗ್ಗದೆ ಎಂತಾದರೂ ಅದನ್ನು ಹೊತ್ತೊಯ್ಯುತ್ತದೆ. ಅದಕ್ಕಾಗಿ ದಿನಗಟ್ಟಲೆ ಹೊಂಚು ಹಾಕಲು ಹಿಂಜರಿಯುವದಿಲ್ಲ. ಬೇರೆಲ್ಲ ಪ್ರಾಣಿಗಳನ್ನು ದೂರದಿಂದಲೇ ಗುರುತಿಸುವ ನಾಯಿಗಳಿಗೂ ಚಿರತೆ ತನ್ನ ಮೇಲೆ ಆಕ್ರಮಣ ನಡೆಸುವ ವರೆಗೆ ಅದರ ಅರಿವಾಗುವುದಿಲ್ಲ. ಅಂತೆಯೇ ಮನೆಯೊಳಗಿನ ಜನರು ಎಚ್ಚರವಿರುವಾಗಲೂ ಚಿರತೆ ನಾಯಿಯನ್ನು ಹೊತ್ತೊಯ್ದುದರ ಅರಿವಾಗದಷ್ಟು ನಿಶ್ಶಬ್ದವಾಗಿಯೇ ಈ ಆಕ್ರಮಣ ನಡೆಯುತ್ತದೆ. ಇದರಿಂದಲೇ ಎಂಥ ಚಾಣಾಕ್ಷ ನಾಯಿಯಾದರೂ ಒಂದಲ್ಲ ಒಂದು ದಿನ ಚಿರತೆಯ ಬಾಯಿಗೆ ತುತ್ತಾಗುತ್ತದೆ.

ದಿನದಿಂದ ದಿನಕ್ಕೆ ಚಿರತೆಯ ಹಾವಳಿ ಹೆಚ್ಚಿದಾಗ ಅದನ್ನು ಕೊನೆಗೊಳಿಸಲು ಹಲವು ಸಾಹಸಿಗಳು ಪ್ರಯತ್ನಪಟ್ಟರು. ಒಂದಿನಿತೂ ಸಂಶಯ ಬಂದೆಡೆಗೆ ಚಿರತೆ ಅಪ್ಪಿ ತಪ್ಪಿ ಕೂಡ ಸುಳಿಯಲಾರದೆಂಬ ಸಂಗತಿಯನ್ನು ಅರಿತವರಿಗೆ ಈ ಸಾಹಸಿಗಳ ಪ್ರಯತ್ನ ವಿಫಲಗೊಂಡವೆಂದು ತಿಳಿದಾಗ ಆಶ್ಚರ್ಯವೇನೂ ಆಗಲಿಲ್ಲ. ಎಷ್ಟೇ ಪ್ರಯತ್ನಿಸಿದರೂ ಚಿರತೆಯನ್ನು ಕೊಲ್ಲಲಾಗದಿದ್ದರೂ ಅದು ಮರಿಯೊಡನೆ ಇರುವ ಚಿರತೆ ಎಂಬುದು ಮಾತ್ರ ಗೊತ್ತಾಯಿತು. ತನ್ನ ಮರಿಗಳಿಗೆ ಆಹಾರ ಒದಗಿಸುವ ಸಂಭ್ರಮದಲ್ಲಿ ಚಿರತೆಗಳು ತಮ್ಮ ಅಳವಿಗೆ ದೊರೆಯುವ ಎಷ್ಟೇ ಪ್ರಾಣಿಗಳನ್ನು ಕೊಲ್ಲಲೂ ಹಿಂಜರಿಯುವದಿಲ್ಲ ಎಂಬುದು ಬೇಟೆಗಾರರಿಗೆಲ್ಲ ತಿಳಿದಿರುವ ವಿಚಾರ.

ಚಿರತೆಯ ಈ ಹಾವಳಿಯ ಸಂದರ್ಭದಲ್ಲಿಯೇ ನಾನು ಬೇಟೆಗೆಂದು ಗದ್ದಿಗೆಯಲ್ಲಿರುವ ನನ್ನೊಬ್ಬ ಬಂಧುಗಳಲ್ಲಿಗೆ ತೆರಳಿದೆ. ಮರುದಿನ ನಾವು ಹದಿನೈದು ಮಂದಿ 'ಕೂಡು ಬೇಟೆ'ಗೆಂದು ಏಳು ನಾಯಿಗಳೊಂದಿಗೆ ಗದ್ದಿಗೆ ಅರಣ್ಯಕ್ಕೆ ತೆರಳಿದೆವು. ಹಗಲು ಹತ್ತು ಗಂಟೆಯ ವೇಳೆಗೆ ಬೇಟೆಗೆ ಸಿದ್ಧರಾದೆವು. (ಅರಣ್ಯ ಕಾಯಿದೆಯ ಮೇರೆಗೆ ಬೇಟೆಯಾಡುವದು ಅಪರಾಧ. ಆದರೆ ಬೇಟೆಯ ಹುಚ್ಚಿನಿಂದ ಕದ್ದುಮುಚ್ಚಿ ಬೇಟೆಯಾಡುವುದೋ ಅರಣ್ಯಾಧಿಕಾರಿಗಳ ದಾಕ್ಷಿಣ್ಯದಿಂದ ಬೇಟೆಯಾಡುವುದೋ ಸಾಮಾನ್ಯವಾಗಿದೆ.) ನಾವು ಹತ್ತು



ಮಂದಿ ಕೋವಿ ಹಿಡಿದು ಮೃಗಗಳು ಪಾರಾಗಿ ಹೋಗುವ ಕಂಡಿಗಳಲ್ಲಿ 'ಬಿಲ್ಲು' ನಿಂತ ನಂತರ ಐದು ಮಂದಿ ಕಾಡಿನ ಒಂದು ಭಾಗದಿಂದ ನಾಯಿಗಳನ್ನು ಛೂ ಬಿಟ್ಟು ಗದ್ದಲವೆಬ್ಬಿಸುತ್ತಾ ಮುಂದುವರಿಯತೊಡಗಿದರು. ಈ ಬೇಟೆ ಮಧ್ಯಾಹ್ನದ ವರೆಗೆ ನಡೆದರೂ ನಮ್ಮ ಪಾಲಿಗೆ ಜಿಂಕೆಯೊಂದು ಮಾತ್ರ ದೊರೆತಿತ್ತು. ಅಂತೆಯೆ ನಾವು ಕಟ್ಟಿ ತಂದ ಬುತ್ತಿಯನ್ನು ಉಂಡು ಸ್ವಲ್ಪ ವಿಶ್ರಮಿಸಿದ ನಂತರ ಕಾಡಿನ ಇನ್ನೊಂದು ಭಾಗದಲ್ಲಿ ಬೇಟೆಗೆ ತೊಡಗಿದೆವು.

ಬೇಟೆ ಪ್ರಾರಂಭಿಸಿದ ಹತ್ತು ನಿಮಿಷಗಳೊಳಗಾಗಿ ಎರಡು ಚಿರತೆಗಳು ಮಿಂಚಿನ ವೇಗದಲ್ಲಿ ಕಾಡಿನ ಮಧ್ಯೆ ಪೊದರಿನಿಂದ ಪೊದರಿಗೆ ನುಸುಳುತ್ತ ಓಡುತ್ತಿದ್ದುವು. ಉಳಿದ ಪ್ರಾಣಿಗಳಾಗಿದ್ದರೆ ತಾವು ನಿತ್ಯವೂ ಉಪಯೋಗಿಸುವ ಕಂಡಿಯಲ್ಲಿ ನುಗ್ಗಿ ಓಡುತ್ತಿದ್ದುವಾದರೂ ಈ ಚಿರತೆಗಳು ಜನರ ಕೂಗಾಟ, ನಾಯಿಗಳ ಬೊಗಳುವಿಕೆ ಮೊದಲಾದ ಗಾಬರಿ ಹುಟ್ಟಿಸುವ ಗದ್ದಲಗಳಲ್ಲಿ ಕೂಡ ನೈಜ ಕಂಡಿಗಳನ್ನು ಬಿಟ್ಟು ಪೊದರುಗಳ ಮಧ್ಯೆ ನುಗ್ಗಿ ಶತ್ರುಗಳ ಕಣ್ಣಿಗೆ ಮಣ್ಣೆರಚುವುದರ ಮೂಲಕ ಆತ್ಮರಕ್ಷಣೆಯ ಜಾಣಾಕ್ಷತನವನ್ನು ತೋರುತ್ತಿದ್ದುವು.

ಆಪತ್ಕಾಲದಲ್ಲಿ ಚಿರತೆಗಳು ಬೆಕ್ಕುಗಳಿಗಿಂತಲೂ ವೇಗವಾಗಿ ಹಾಗೂ ಅನಿರ್ಬಂಧಿತವಾಗಿ ಮರ ಏರಬಲ್ಲವಾದರೂ ಮನುಷ್ಯರ ಸಾಮೀಪ್ಯದ ಅರಿವಾದಾಗಲಂತೂ ಓಡುವುದೇ ಸೂಕ್ತವೆಂದು ಭಾವಿಸಿ ಈ ಚಿರತೆಗಳು ಆ ಕಾಡನ್ನೇ ತೊರೆಯಲು ನಿರ್ಧರಿಸಿದ್ದುವೇನೋ. ದುರಾದೃಷ್ಟ! ಕಾಡಿನ ಮಧ್ಯೆ ಮಿಂಚಿನ ವೇಗದಲ್ಲಿ ಓಡುತ್ತಿದ್ದ ಚಿರತೆಗಳನ್ನು ಕಂಡ ಬಿಲ್ಲುಗಾರನೊಬ್ಬ ಕೋವಿಯನ್ನೆತ್ತಿ ಗುಂಡು ಹಾರಿಸಿದ. ಒಂದು ಚಿರತೆ ಮಾರಣಾಂತಿಕ ಪೆಟ್ಟು ತಿಂದು ವಿಲವಿಲನೆ ಒದ್ದಾಡುತ್ತಿತ್ತು. ಆದರೆ ಇನ್ನೊಂದು ಚಿರತೆಗೆ ಚರೆಗಳು ತಗುಲಿದುವಾದರೂ ಮರ್ಮಾಘಾತ ವಲ್ಲದ್ದರಿಂದ ಇಮ್ಮಡಿ ವೇಗದಲ್ಲಿ ನೆಗೆದು ಕಾಡಿನ ಮಧ್ಯೆ ಕಣ್ಮರೆಯಾಯಿತು. ಗುಂಡಿನೇಟಿನಿಂದ ಗುರುಗುಟ್ಟುತ್ತ ಒದ್ದಾಡುತ್ತಿದ್ದ ಚಿರತೆಗೆ ಜಾಣ ಬೇಟೆಗಾರ ಇನ್ನೊಂದು ಗುಂಡು ಹಾರಿಸುವುದರ ಮೂಲಕ ಅದನ್ನು ನಿಷ್ಪಂದಗೊಳಿಸಿದ. ಹತ್ತಿರ ಹೋಗಿ ವೀಕ್ಷಿಸಿದಾಗ ಇದು ಪೂರ್ಣ ಬೆಳೆಯದ ಮರಿ ಚಿರತೆಯಾಗಿದ್ದುದರಿಂದ ತಪ್ಪಿಸಿಕೊಂಡು ಹೋದದ್ದು ತಾಯಿ ಚಿರತೆಯಾಗಿರಬೇಕೆಂಬುದರಲ್ಲಿ ನಮಗೆ ಸಂಶಯವುಳಿಯಲಿಲ್ಲ.

ಈ ಬೇಟೆಯಲ್ಲಿ ನಮಗೆ ಚಿರತೆ ಮರಿಯೊಂದಿಗೆ ಕಾಡು ಹಂದಿಯೊಂದು ದೊರೆಯಿತು. ಸಂಜೆಯ ವೇಳೆಗೆ ಬೇಟೆಯನ್ನು ಮುಗಿಸಿ ಕೊಂದ ಪ್ರಾಣಿಗಳನ್ನು ಹೊತ್ತು ಕಾಡಿನ ಮಧ್ಯೆ ದಾರಿ ಮಾಡಿಕೊಳ್ಳುತ್ತ ಬರುತ್ತಿದ್ದೆವು.

ಕಾಡಿನ ಮಧ್ಯೆ ದಾರಿಯೇನೂ ಇರಲಿಲ್ಲ. ನಾವು ನಡೆದದ್ದೇ ದಾರಿ. ಪೊದೆಗಳ ಮಧ್ಯೆ ಅಡೆತಡೆಗಳನ್ನು ನಿವಾರಿಸಿಕೊಳ್ಳುತ್ತ, ದೊರಕಿದ ಬೇಟೆಯ ಕಳೇಬರಗಳನ್ನು ನಮ್ಮ ಹಿಂದೆ ಹೊತ್ತು ತರುತ್ತಿದ್ದ ಹತ್ತು ಮಂದಿಗೆ ಸರಾಗವಾಗಿ ನಡೆದುಬರುವಂತೆ ದಾರಿಮಾಡುತ್ತ ನಾವು ಮುಂದುವರೆಯುತ್ತಿದ್ದೆವು. ಆ ಹತ್ತು ಜನರ ಕೋವಿಗಳು, ಚೀಲ ಮೊದಲಾದವನ್ನು ನಾವು ಐವರು ಹೊತ್ತಿದ್ದೆವು. ದಿನದ ಬೇಟೆಯಿಂದ ಸಾಕಷ್ಟು ಬಳಲಿದ್ದರೂ ಬೇಟೆ ದೊರೆತ ಉತ್ಸಾಹದಲ್ಲಿ ಹರಟೆ ಕೊಚ್ಚುತ್ತಾ ನಾವೆಲ್ಲ ನಡೆಯುತ್ತಿದ್ದೆವು. ನಮ್ಮಿಂದ ಹತ್ತು ಮಾರುಗಳಷ್ಟು ಮುಂದೆ ಬಳಲಿದ ನಾಯಿಗಳು ಸ್ವಭಾವಕ್ಕನುಗುಣವಾಗಿ ನೆಲ ಮೂಸುತ್ತ, ಗಾಳಿ ಹಿಡಿಯುತ್ತ ನಡೆಯುತ್ತಿದ್ದುವಾದರೂ ಅವುಗಳಲ್ಲಿ ಕೊಂಚವೂ ಉತ್ಸಾಹವಿರಲಿಲ್ಲ.

ಹೀಗೆ ಅವು ಮುಂದೆ ಸಾಗುತ್ತಿದ್ದಾಗ ಒಮ್ಮಿಂದೊಮ್ಮೆ ಯಾವುದೋ ಅಪಾಯವನ್ನು ಮೂಸಿಹಿಡಿದಂತೆ ಬೆಚ್ಚಿದವು. ಮೈಯನ್ನು ಬಿಗಿಹಿಡಿದು ಸುತ್ತಲೂ ಸೂಕ್ಷ್ಮವಾಗಿ ನೋಡಿದವು. ನಾಯಿಗಳ ಈ ವರ್ತನೆಯಿಂದ ನಾವು ಮಾತು ನಿಲ್ಲಿಸಿ ಒದಗಿಬರುವ ಬೇಟೆಗಾಗಿ ಸನ್ನದ್ಧರಾದೆವು. ಆದರೆ ಅಷ್ಟರಲ್ಲಿಯೇ ನಮ್ಮಿಂದ ಕೆಲವೇ ಮಾರುಗಳ ಹಿಂದೆ ಪ್ರಾಣಿಗಳ ಕಳೇಬರಗಳನ್ನು ಹೊತ್ತು ತರುತ್ತಿದ್ದ ಗುಂಪಿನಲ್ಲಿ ಚೀರಾಟ, ಆರ್ತನಾದಗಳ ಗದ್ದಲವೇ ಎದ್ದಿತು. ಬೆಚ್ಚಿದ ನಾವು ಅತ್ತ ತಿರುಗಿದಾಗ ಒಮ್ಮೆಲೇ

ನಮ್ಮ ರಕ್ತ ಹೆಪ್ಪುಗಟ್ಟುವಂತಾಯಿತು. ಮುಂಗಾಣದಂತಾಗಿ ನಾವೂ ಅರಚುತ್ತ ಅಲ್ಲಿಗೆ ಧಾವಿಸಿದೆವು. ನಾಯಿಗಳೂ ಬೊಬ್ಬಿರಿಯುತ್ತ ನುಗ್ಗಿ ಬಂದವು.

ನಿಜ, ನಾವಾರೂ ಕನಸು ಮನಸಿನಲ್ಲಿಯೂ ಊಹಿಸದಿದ್ದ ಘಟನೆಯದು. ಬೇಟೆಯಿಂದ ಹಿಂದಿರುಗುತ್ತಿದ್ದ ಗುಂಪಿನ ಮೇಲೆ ಚಿರತೆ ಅನಿರೀಕ್ಷಿತವಾಗಿ ದಾಳಿ ಮಾಡಿತ್ತು. ತನ್ನ ಮರಿಯನ್ನು ಕೊಂದ ದ್ವೇಷದೊಂದಿಗೆ ತನ್ನನ್ನೂ ಗಾಸಿಗೊಳಿಸಿದ ರೋಷವನ್ನು ಮಾನವ ಜಾತಿಯ ಮೇಲೆಯೇ ತೀರಿಸುವಂತೆ ಭೀಕರವಾಗಿ ಆಕ್ರಮಣ ಮಾಡಿದ ಚಿರತೆ ಪುಟಿಯುವ ಚೆಂಡಿನಂತೆ ಗುಂಪಿನ ಪ್ರತಿಯೊಬ್ಬರ ಮೇಲೂ ನೆಗೆದಾಡಿತು. ಮಿಂಚಿನ ಬಳ್ಳಿಯಂತೆ ಬಳಕುತ್ತ, ಭೀಷಣವಾಗಿ ಗರ್ಜಿಸುತ್ತ, ಕೇವಲ ಒಂದರೆಗಳಿಗೆ ನಡೆಸಿದ ಹೋರಾಟ ಎಂಥ ಧೀರನನ್ನೂ ನಿಷ್ಪಂದಗೊಳಿಸುವಂತಿರುವಾಗ ನಮ್ಮನ್ನು ಧೃತಿಗೆಡಿಸಿದುದರಲ್ಲಿ ವಿಶೇಷವೇನೂ ಇರಲಿಲ್ಲ.

ಪ್ರಾಣಿಗಳ ಕಳೇವರವನ್ನು ಹೊತ್ತವರು ಅದನ್ನು ಅಲ್ಲಿಯೇ ಹಾಕಿ ಆತ್ಮ ರಕ್ಷಣೆಗೆ ಎನ್ನುವುದಕ್ಕಿಂತ ಭೀತಿ, ಗಾಬರಿಗಳಿಂದ ಬೊಬ್ಬಿರಿಯುತ್ತಾ ಚಿರತೆಯಿಂದ ತಪ್ಪಿಸಿಕೊಳ್ಳಲೆತ್ನಿಸಿದರು. ನಮ್ಮೆಲ್ಲರಲ್ಲೂ ಕೋವಿಗಳಿದ್ದವು ನಿಜ. ಆದರೆ ಯಾರೊಬ್ಬರೂ ಗಾಬರಿ, ಭೀತಿಗಳಿಂದ ಗುಂಡು ಹಾರಿಸದಿದ್ದುದು ಒಂದು ಭಾಗ್ಯವೆನ್ನಬೇಕು. ಆಕಸ್ಮಿಕವಾಗಿ ಯಾರಾದರೂ ವಿವೇಚನೆ ಇಲ್ಲದೆ ಗುಂಡು ಹಾರಿಸಿದ್ದರೆ ಆ ಗುಂಪಿನ ಮಧ್ಯೆ ಚಿರತೆ ಸುರಕ್ಷಿತವಾಗಿಯೇ ಉಳಿದು ಮನುಷ್ಯರನ್ನು ಮತ್ತು ನುಗ್ಗಿ ಬರುತ್ತಿದ್ದ ನಾಯಿಗಳನ್ನು ಸುತ್ತಿಗೊಳ್ಳುತ್ತಿತ್ತು.

ಜನರ ಗದ್ದಲ, ನಾಯಿಗಳ ನುಗ್ಗಾಟವನ್ನು ಕಂಡ ಚಿರತೆ ಪಕ್ಕದ ಪೊದರುಗಳ ಮಧ್ಯೆ ನುಗ್ಗಿ ಮಿಂಚಿನ ವೇಗದಲ್ಲಿ ಕಣ್ಮರೆಯಾಯಿತು. ಚಿರತೆ ನುಸುಳಿದೆಡೆಗೆ ನಾಯಿಗಳೂ ಉಗ್ರವಾಗಿ ನುಗ್ಗಿದವಾದರೂ ಅವುಗಳಿಗೆ ಚಿರತೆ ದೊರೆಯಲಾರದೆಂಬುದು ನಮಗೆ ತಿಳಿದೇ ಇತ್ತು. ಅಲ್ಲದೆ ಕೆರಳಿದ ಚಿರತೆಯೆಡೆಗೆ ನಾಯಿಗಳನ್ನು ಬಿಟ್ಟರೆ ಪರಿಣಾಮ ಏನಾಗಬಹುದೆಂಬುದರ ಕಲ್ಪನೆಯೂ ನಮಗಿತ್ತು. ಅಂತೆಯೇ ನಾವು ಚಿರತೆಯನ್ನು ಬೆದರಿಸಲೆಂದು ಆಕಾಶದತ್ತ ನಾಲ್ಕೈದು ಬೆದರು ಗುಂಡುಗಳನ್ನು ಹಾರಿಸಿದರೂ, ನಾಯಿಗಳನ್ನು ಹಿಂದಕ್ಕೆ ಕರೆಯತೊಡಗಿದೆವು. ಬೇಟೆಯಲ್ಲಿ ಪಳಗಿದ ನಾಯಿಗಳಾದುದರಿಂದ ಮನುಷ್ಯ ಸ್ವರ ಮಾತ್ರದಿಂದಲೇ ಉತ್ಸಾಹ, ನಿರುತ್ಸಾಹಗಳನ್ನು ಅರ್ಥಮಾಡಿಕೊಳ್ಳಬಲ್ಲ ಅವುಗಳು ಹಿಂದಕ್ಕೆ ಬಂದವು.

ಎವೆಯಿಕ್ಕುವುದರಲ್ಲಿ ನಡೆದ ಈ ಘಟನೆಯಿಂದಾದ ಅನಾಹುತ ಸಾಮಾನ್ಯವಾಗಿರಲಿಲ್ಲ. ಗುಂಪಿನಲ್ಲಿದ್ದ ಹತ್ತು ಮಂದಿಯಲ್ಲಿ ಏಳು ಜನರಿಗೆ ಚಿರತೆಯ ಹಲ್ಲು ಮತ್ತು ಉಗುರುಗಳ ಗಾಯಗಳಾಗಿದ್ದವು. ಪುಣ್ಯಕ್ಕೆ ಮಾರಣಾಂತಿಕ ಗಾಯ ಯಾರೊಬ್ಬರಿಗೂ ಆಗದಿದ್ದರೂ ಸಾಕಷ್ಟು ರಕ್ತಸ್ರಾವವಾಗಿ ಹಲವು ದಿನಗಳವರೆಗೆ ಬಾಧೆಪಡುವಷ್ಟರ ಮಟ್ಟಿಗೆ ಮೂವರಿಗೆ ಗಾಯಗಳಾಗಿದ್ದವು. ಉಳಿದವರಿಗೆ ಹಂಚಿದಂತೆ ಸಣ್ಣಪುಟ್ಟ ಗಾಯಗಳಾದರೂ ಚಿರತೆಯ ಕಡಿತದಿಂದ ನಂಜೇರುವ ಸಾಧ್ಯತೆ ಇದ್ದುದರಿಂದ ಆದಷ್ಟು ಬೇಗ ಔಷಧೋಪಚಾರ ನಡೆಯಬೇಕಿತ್ತು. ಸದ್ಯಕ್ಕೆ ರಕ್ತ ಸೋರದಂತೆ ಹಸಿರು ತೊಪ್ಪಲನ್ನು ಕಟ್ಟಿ ಅಂದಿನ ಮಟ್ಟಿಗೆ ಸುಧಾರಿಸಿದ್ದಾಯಿತು. ಈ ಘಟನೆ ನಡೆದು ಅರ್ಧ ಗಂಟೆಯಾದರೂ ಮೈ ನಡುಕ ನಿಂತಿರಲಿಲ್ಲ. ಗಾಳಿಯ ಸಣ್ಣಪುಟ್ಟ ಸದ್ದಿಗೂ ಬೆಚ್ಚಿ ಬೀಳುವಂತಾಗುತ್ತಿತ್ತು. ಹಾಗೂ ಹೀಗೂ ಇದ್ದ ಬಿದ್ದ ಧೈರ್ಯವನ್ನು ಒಟ್ಟುಗೂಡಿಸಿ ಕೊಂದ ಪ್ರಾಣಿಗಳ ಹೆಣಗಳನ್ನು ಹೊತ್ತು ಸುರಕ್ಷಿತವಾಗಿ ಗುರಿ ಮುಟ್ಟಿದೆವು.

ಈ ಘಟನೆಯಾದ ಎರಡು ದಿನಗಳ ನಂತರ ಆ ಚಿರತೆಯ ಹಾವಳಿ ಪ್ರಾರಂಭವಾಯಿತು. ತನ್ನ ಮರಿಯನ್ನು ಕೊಂದುದರೊಂದಿಗೆ ತನಗೂ ಗಾಯಮಾಡಿದುದರ ಪ್ರತೀಕಾರವನ್ನು ತೀರಿಸುವಲ್ಲಿ ಅದು ತೋರಲಾರಂಭಿಸಿದ ಕ್ರೌರ್ಯ ಯಾರ ಮೈಯಲ್ಲೂ ನವಿರೇಳಿಸುವಂತಹದು. ಅದರ ಈ ದ್ವೇಷ ಕ್ರಮೇಣ ಮನುಷ್ಯರ ಮೇಲೆ ಮಾತ್ರವಲ್ಲ, ಪ್ರಾಣಿಗಳ ಮೇಲೂ ಬೆಳೆಯತೊಡಗಿತು. ಅರಣ್ಯದ ಸುತ್ತಮುತ್ತಲಿರುವ ಮನೆಗಳಿಂದ ಹೆಚ್ಚು ಪಾಲು ನಾಯಿಗಳ

ಹಾಸ್ಪದೇ ಸದ್ದುಗದ್ದಲಗಳಿಲ್ಲದೆ ಕಾಣೆಯಾಗ ತೊಡಗಿದವು. ಮೇಯಲು ಹೋದ ಕರುಗಳಲ್ಲಿ ಹೆಚ್ಚಿನವು ಹಿಂದಕ್ಕೆ ಬರುತ್ತಿರಲಿಲ್ಲ. ದನ, ಎತ್ತುಗಳಿಗೂ ಮಾರಣಾಂತಿಕ ಗಾಯಗಳಾಗ ತೊಡಗಿದವು. ಇದ್ಕಂತಲೂ ಹೆಚ್ಚು! ಈ ಚಿರತೆ ಹಾಡುಹಗಲಲ್ಲೇ ಮನುಷ್ಯರ ಮೇಲೂ ಆಕ್ರಮಣಮಾಡುವ ಪ್ರವೃತ್ತಿಯನ್ನು ಬೆಳೆಸಿ ಕೊಂಡಿತು. ಚಿರತೆಯ ಆಕ್ರಮಣಕ್ಕೆ ತುತ್ತಾಗಿ ಇಬ್ಬರು ಮರಣ ಹೊಂದಿದ್ದರೂ ಸಾಕಷ್ಟು ಮಂದಿ ಗಾಯಗಳಾಗಿ ನರಳಿದ್ದಾರೆ. ಇದರಿಂದಾಗಿ ಜನರಿಗೆ ಸುತ್ತಾಡಲೂ ಧೈರ್ಯವಿಲ್ಲದಂತಾಗಿ ದೈನಂದಿನ ಕಾರ್ಯಗಳಲ್ಲೂ ಅವ್ಯವಸ್ಥೆ ಉಂಟಾಯಿತು.

ಜನ್ಮತಃ ಬಂದ ಚಾಣಾಕ್ಷತನದಿಂದಲೇ ಈ ಚಿರತೆ ಮನುಷ್ಯರ ಮೇಲೆ ಆಕ್ರಮಣ ನಡೆಸುತ್ತಿತ್ತು. ಅನಿರೀಕ್ಷಿತವಾಗಿ ಮೇಲೆ ಬಿದ್ದು ಅಷ್ಟಿಷ್ಟು ಗಾಯಮಾಡಿ ಆತ ಪ್ರತಿಭಟಿಸುವ ಮೊದಲೇ ತಲೆತಪ್ಪಿಸಿಕೊಳ್ಳುತ್ತಿತ್ತು. ಚಿರತೆಯೇನೂ ಮಹಾ ಬಲಶಾಲಿ ಪ್ರಾಣಿಯಲ್ಲ. ಸಾಕಷ್ಟು ಧೈರ್ಯ–ಶಕ್ತಿಗಳಿದ್ದರೆ ಯಾರೂ ಅದನ್ನು ತುತ್ತುಗೊಳ್ಳಬಹುದು. ಬರಿಗೈಯಲ್ಲಿ ಚಿರತೆಯನ್ನೆದುರಿಸಿ, ಕೊರಳನ್ನು ಹಿಸುಕಿ ಕೊಂದ ಎರಡು ಮೂರು ಘಟನೆಗಳು ಕೊಡಗಿನಲ್ಲಿಯೇ ನಡೆದಿವೆ. ಆದರೆ ನಮ್ಮ ಮಾನಸಿಕ ದೌರ್ಬಲ್ಯವೇ ನಮ್ಮನ್ನು ಪಾಶವೀ ಬಲದೆದುರು ಸಂಪೂರ್ಣವಾಗಿ ಸೋಲಿಸುತ್ತದೆ ಎನ್ನಬೇಕು. ಅದೇನೆ ಇರಲಿ, ಈ ಚಿರತೆಗೂ ಮನುಷ್ಯಭಯ ಇದ್ದೇ ಇತ್ತು. ಅಂತೆಯೇ ಜನರ ಮೇಲೆ ಅನಿರೀಕ್ಷಿತ ದಾಳಿ ನಡೆಸುತ್ತಿದ್ದ ಅದು ಅಷ್ಟೇ ಅನಿರೀಕ್ಷಿತವಾಗಿ ಓಡಿ ಹೋಗುತ್ತಿತ್ತು. ಆಕ್ರಮಣ ನಡೆಸುವಾಗ ಅದು ಅತ್ಯಂತ ಎಚ್ಚರಿಕೆ ವಹಿಸುತ್ತಿತ್ತೆಂದೇ ಹೇಳಬೇಕು. ಇಬ್ಬರು ಸಹಿತ ಬಂದರೆ ಚಿರತೆ ಸಿಗುತ್ತಿರಲಿಲ್ಲ. ಅಷ್ಟೇ ಅಲ್ಲ, ಕೈಯಲ್ಲಿ ಕೊಡಲಿ ಬಡಲು ... ಬಡಿಗೆಯಿದ್ದರೂ ಅಂಥವರ ಮೇಲೆ ಆ ಚಿರತೆ ಆಕ್ರಮಣ ನಡೆಸುತ್ತಿರಲಿಲ್ಲವೆಂದು ಹೇಳಲಾಗುತ್ತದೆ. ಅಂತೂ ಜನರ ಅದೃಷ್ಟವೋ ಚಿರತೆಯ ಚಾಣಾಕ್ಷತನವೋ ಯಾರಿಗೂ ಮಾರಣಾಂತಿಕ ಪೆಟ್ಟುಗಳಾಗಿರಲಿಲ್ಲ.

ಚಿರತೆಯ ಹಾವಳಿಯಿಂದ ಬೇಸತ್ತ ಜನ ಅದನ್ನು ಕೊನೆಗೊಳಿಸಲು ಎರಡು ಮೂರು 'ಕೂಡು ಬೇಟೆ'ಗಳನ್ನಾಡಿದರೂ ಕಾಡಿನಲ್ಲಿ ಅದರ ಸುಳಿವು ಮನುಷ್ಯರಿಗಿರಲಿ ನಾಯಿಗಳಿಗೆ ಕೂಡ ಹತ್ತಿರಲಿಲ್ಲ. ಆದರೆ ಅದಾವ ಮಾಯದಿಂದಲೋ ದಿನವೂ ದನಕರುಗಳ ಹಾಗೂ ನಾಯಿಗಳ ಬಲಿ ಮಾತ್ರ ಅವ್ಯಾಹತವಾಗಿ ನಡೆಯುತ್ತಲೇ ಇತ್ತು.

ಒಂದು ತಿಂಗಳ ನಂತರ ನಾನು ಮತ್ತೊಮ್ಮೆ ಗದ್ದಿಗೆಗೆ ತೆರಳಿದೆ. ಆಗಲೂ ಚಿರತೆಯ ಕಾಟ ಅವ್ಯಾಹತವಾಗಿ ನಡೆಯುತ್ತಿದೆಯೆಂಬ ವಿಚಾರವನ್ನು ತಿಳಿದು ನನಗೆ ಆಶ್ಚರ್ಯವಾಯಿತು. ಹುಲಿಯಲ್ಲ, ಆನೆಯಲ್ಲ ಕೇವಲ ಒಂದು ಚಿರತೆಯ ಹಾವಳಿಯನ್ನು ಇಷ್ಟೆಲ್ಲ ಜನ ಸಾಹಸಿಗಳಿದ್ದೂ ನಿವಾರಿಸಲು ಅಸಾಧ್ಯವಾಯಿತೇ? ಎಂದು ನಾನು ಆಶ್ಚರ್ಯ ವ್ಯಕ್ತಪಡಿಸಿದಾಗ ನನ್ನ ಬಂಧುವು ಮೇಲಿನ ವಿಚಾರ ತಿಳಿಸುವದರೊಂದಿಗೆ ಚಿರತೆಯನ್ನು ಕೊನೆಗಾಣಿಸಿ ತೋರಿಸುವಂತೆ ನನಗೆ ಸವಾಲು ನೀಡಿದ.

ಕತೆಯೆಲ್ಲ ಕೇಳಿದ ನನಗೆ ಇನ್ನು ಕೂಡು ಬೇಟೆಯಿಂದ ಪ್ರಯೋಜನವಿಲ್ಲವೆನಿಸಿತು. ಅಂತೆಯೇ 'ಉಳಿ' ಕುಳಿತು ಮರಸು ಬೇಟೆಯಾಡಬೇಕೆಂದು ನಿಶ್ಚಯಿಸಿದೆ. ಅಂದೇ ಚಿರತೆ ಬೇಟೆಯಾಡಿದ್ದ ಕರುವೊಂದನ್ನು ತಿನ್ನಲು ಬರುವಾಗ ಅದನ್ನು ಕೊನೆಗೊಳಿಸಲು ನಿರ್ಧರಿಸಿ ಆ ಸಂಜೆಯೇ ನಾವಿಬ್ಬರೂ ಕುಳಿಕೂಡಲು ತಯಾರಿ ನಡೆಸಿದೆವು. ಆದರೆ ಅದಾವ ಸಂಶಯದಿಂದಲೋ ಏನೋ ಮೂರು ರಾತ್ರಿ ನಾವು ಸರದಿಯ ಮೇಲೆ ಕಾದು ಕುಳಿತರೂ ಚಿರತೆ ಮಾತ್ರ ತಾನು ಕೊಂದ ಬೇಟೆಯೆಡೆಗೆ ಸುಳಿಯಲಿಲ್ಲ. ಈ ರೀತಿ ಎರಡು ಮೂರು ಬಾರಿ ಪ್ರಯತ್ನಿಸಿದರೂ ವಿಫಲರಾಗಿ ನಿರಾಶೆಯಿಂದ ಆ ಕಾರ್ಯವನ್ನು ಅಲ್ಲಿಗೇ ಕೈಬಿಟ್ಟೆವು. ಎರಡು ದಿನಗಳ ನಂತರ ಕೊನೆಯ ಪ್ರಯತ್ನವೆಂದು ನಾಯಿಯೊಂದನ್ನು ಗದ್ದಿಗೆಯ ಕಾಡಿನಂಚಿನಲ್ಲಿ ಕಟ್ಟಿ ಹಾಕಿ ರಾತ್ರಿ ಉಳಿ ಕುಳಿತೆವು. ಒಂಟಿಯಾದ ನಾಯಿ ಭೀತಿಯಿಂದ ಕುಂಯಿಗುಡುತ್ತ ಆಗಾಗ

ಆರ್ತಸ್ವರದಿಂದ ಊಳಿಡತೊಡಗಿತು. ನಾಯಿಯ ಮಾಂಸದಷ್ಟು ಮತ್ತಾವ ಪ್ರಾಣಿಯ ಮಾಂಸವನ್ನೂ ಚಿರತೆ ಇಚ್ಛಿಸುವುದಿಲ್ಲ. ಹೀಗಾಗಿ ಸ್ವಾಭಾವಿಕವಾಗಿಯೇ ಚಿರತೆ ನಾಯಿಯ ಕೂಗಿನಿಂದ ಆಕರ್ಷಿತವಾಗಿ ಬಂದೇ ಬರುವುದೆಂದು ನಂಬಿದ್ದ ನಾವು ಬೆಳಕು ಹರಿಯುವವರೆಗೂ ಕಾದಿದ್ದು ಅನಂತರ ಕಟ್ಟಿದ್ದ ನಾಯಿಯನ್ನು ಬಿಚ್ಚಿ ಮನೆಗೆ ಹಿಂದಿರುಗಿದೆವು. ಆದರೆ ಮನೆಗೆ ತಲುಪಿದಾಗ ಕಳೆದ ರಾತ್ರಿ ಮನೆಯಲ್ಲಿಯೇ ಇದ್ದ ನಾಯಿ ಬೆಳಕು ಹರಿಯುವಷ್ಟರಲ್ಲಿ ನಾಪತ್ತೆಯಾಗಿದ್ದು ತಿಳಿದು ಬೆರಗಾದೆವು. ಕೇಡಿಗ ಆನೆ, ಹುಲಿಗಳನ್ನು ನಮ್ಮ ಯೋಜನೆಯ ಮೇಲೆ ಒಂದಿನಿತೂ ತಪ್ಪದೆ ನಿರ್ನಾಮಗೊಳಿಸಿದ ನಮಗೆ ಈ ಚಿರತೆಯ ಕುಟಿಲತನ ಒಂದು ಸವಾಲಿನಂತಾಯಿತು. ಅದೆಷ್ಟೇ ಯೋಚಿಸಿದರೂ ಚಿರತೆಯನ್ನು ಕೊನೆಗೊಳಿಸುವ ದಾರಿಯೇ ನಮಗೆ ಹೊಳೆಯಲಿಲ್ಲ.

ಕೊನೆಗೂ ಚಿರತೆಯನ್ನು ಕೊನೆಗೊಳಿಸಲು ನಮಗೊಂದು ವ್ಯಕ್ತಿಯ ಮಾರ್ಗದರ್ಶನ ದೊರೆಯಿತು. ಚಿರತೆಯ ಹಾವಳಿಯಿಂದ ಜನರನ್ನು ಮುಕ್ತಗೊಳಿಸುವಲ್ಲಿ ಯಾವುದೇ ವಕ್ರ ಮಾರ್ಗವನ್ನು ಹಿಡಿಯಲೂ ನಾವು ಸಿದ್ಧರಾಗಿದ್ದೆವು. ಆದರೆ ಹಾದಿಯು ಅರಿವಾಗಲಿಲ್ಲ. ಇದೇ ಸಂದರ್ಭದಲ್ಲಿ ನಮಗೆ 'ಹಕ್ಕಬಿಕ್ಕಿ' ಜಾತಿಯ ಮಾರಯ್ಯನ ಪರಿಚಯ ಈ ದಿಶೆಯಲ್ಲಿ ವರವಾಗಿ ಪರಿಣಮಿಸಿತು.

ಆದಿನ ಬೆಳಿಗ್ಗೆ ಗದ್ದಿಗೆ ಕೆರೆಯ ಕಾಡಿನಂಚಿನಲ್ಲಿ ಹಕ್ಕಿಬಿಕ್ಕಿಗಳು ಹಲವರು ಬಲೆ ಮೊದಲಾದ ಸಾಧನಗಳೊಂದಿಗೆ ಹಕ್ಕಿ ಬೇಟೆಯನ್ನು ಪ್ರಾರಂಭಿಸಿದರು. ಕಾಡಿನಲ್ಲಿ ಗೌಜಲ ಹಕ್ಕಿ, ಬಟರ ಹಕ್ಕಿ, ನವಿಲು ಮೊದಲಾದವುಗಳೊಂದಿಗೆ ಸಣ್ಣ ಪುಟ್ಟ ಪ್ರಾಣಿಗಳನ್ನೂ ಜೀವ ಸಹಿತ ಹಿಡಿದು ಮಾರಾಟ ಮಾಡುವುದೇ ಈ ಅಲೆಮಾರಿ ಕಾಡು ಜನಾಂಗದ ಮುಖ್ಯ ಕಸಬು. ಕೆರೆಯ ಬಳಿ ಹಕ್ಕಿಗಳನ್ನು ಹಿಡಿಯುತ್ತಿದ್ದ ಇವರ ಕಾಯಕವನ್ನು ನೋಡುತ್ತಿದ್ದ ನಮಗೆ ಕಾಡಿನ ಮಕ್ಕಳಾದ ಇವರಿಂದ ಚಿರತೆಯನ್ನು ಕೊಲ್ಲಲು ಯಾವುದಾದರೂ ದಾರಿ ದೊರೆಯಬಹುದೇನೊ ಎಂಬ ಯೋಚನೆ ಮೂಡಿ ಅವರ ತಂಡದ ನಾಯಕ ಮಾರಯ್ಯನೊಂದಿಗೆ ಮಾತುಕತೆ ನಡೆಸಿದೆವು. ಚಿರತೆಯ ವಿಚಾರವಾಗಿ ಎಲ್ಲವನ್ನೂ ತಿಳಿದ ತಂಡದ ಆ ಹಿರಿಯ "ಮರಿ ಇದ್ದ ಚಿರತೆಯಾದುದರಿಂದ ಅದನ್ನು ಸುಲಭವಾಗಿ ಕೊಲ್ಲಬಹುದು" ಎಂದು ತಿಳಿಸಿದಾಗ ನನಗೇನೂ ಅಷ್ಟು ನಂಬಿಕೆ ಮೂಡಲಿಲ್ಲ. ಅಂತೆಯೇ ಆತನನ್ನು ಹಲವಾರು ರೀತಿಯಲ್ಲಿ ಪ್ರಶ್ನಿಸಿದೆ. ಆದರೆ ಮಾರಯ್ಯ ತನ್ನ ಗುಟ್ಟು, ಪಟ್ಟು ಎರಡನ್ನೂ ಬಿಡದೆ, "ನಿಮಗೆ ಚಿರತೆ ದೊರಕಿಸುವುದು ನನ್ನ ಕೆಲಸ" ಎಂದಷ್ಟೇ ಹೇಳುತ್ತಿದ್ದನಲ್ಲದೆ ಚಿರತೆ ದೊರೆತ ನಂತರ ನನಗಿಷ್ಟು ಹಣ ಕೊಡಬೇಕೆಂದೂ ಹೇಳಿದ. ಎಲ್ಲ ಒಪ್ಪಿಗೆಯಾದ ನಂತರ ಆತ ಹಲವು ಸೂಚನೆಗಳನ್ನು ನೀಡಿ ಸಂಜೆಯ ವೇಳೆಗೆ ತಾನು ಬರುವದಾಗಿ ತಿಳಿಸಿ ಹಿಡಿದ ಹಕ್ಕಿಗಳೊಂದಿಗೆ ತನ್ನ ಗುಂಪಿನಲ್ಲಿ ಬೆರೆತು ಪಿರಿಯಾಪಟ್ಟಣದತ್ತ ನಡೆದ.

ಮಾರಯ್ಯನ ಸಲಹೆಯಂತೆ ಕಾಡಿನ ಮಧ್ಯೆ ಹತ್ತಿರ ಹತ್ತಿರದ ಎರಡು ಮರಗಳಲ್ಲಿ ಆಳುಗಳ ನೆರವಿನಿಂದ ಎರಡು 'ಉಳಿ'ಗಳನ್ನು ನಿರ್ಮಿಸುತ್ತಿದ್ದಾಗಲೂ ನನಗೆ ಮಾರಯ್ಯನ ಮಾತಿನಲ್ಲಾಗಲಿ ಆತನ ಬರುವಿಕೆಯಲ್ಲಾಗಲಿ ಯಾವುದೇ ಭರವಸೆ ಇರಲಿಲ್ಲ. ಮಾರಯ್ಯನ ಸೂಚನೆಯಂತೆ ನಮ್ಮ ಕಾರ್ಯವನ್ನು ಪೂರೈಸಿ ಸಂಜೆಯ ವೇಳೆಗೆ ಮನೆಗೆ ಹಿಂದಿರುಗಿದಾಗ ಮಾರಯ್ಯ ತನ್ನೊಬ್ಬ ಸಂಗಡಿಗನೊಂದಿಗೆ ಮನೆಯ ಜಗಲಿಯಲ್ಲಿ ಕುಳಿತಿದ್ದುದನ್ನು ಕಂಡೆ. ಆಗ ನನಗೂ ನನ್ನ ಬಂಧುವಿಗೂ ಆಶ್ಚರ್ಯವಾಗಿ ಅವರೊಂದಿಗೆ ಸ್ವಲ್ಪ ಭರವಸೆಯೂ ಮೂಡಿತು.

ರಾತ್ರಿ ಪಟ್ಟಾಗಿ ಊಟ ಹೊಡೆದ ನಂತರ ನಾವು ನಾಲ್ವರೂ ಕೋವಿ, ಬೇಟೆಯ ಹೆಡ್ ಲೈಟ್ ಮೊದಲಾದ ಸಾಧನಗಳೊಂದಿಗೆ ಕಾಡಿಗೆ ತೆರಳಿ ಒಂದು 'ಉಳಿ'ಯಲ್ಲಿ ನನ್ನ ಬಂಧು ಮತ್ತು ಮಾರಯ್ಯನೂ, ಇನ್ನೊಂದರಲ್ಲಿ ನಾನು ಮತ್ತು ಮಾರಯ್ಯನ ಸಂಗಡಿಗನೂ ಕುಳಿತೆವು.

ತನ್ನ ಎರಡು ಅಂಗೈಗಳನ್ನು ಬೊಗಸೆಯಾಕಾರದಲ್ಲಿ ಸುತ್ತಿ ತುಟಿಯ ಮೇಲಿಟ್ಟು ಮಾರಯ್ಯ ಮೂರು ನಾಲ್ಕು ಬಾರಿ ಕೂಗಿದ.

ಆ ಕೂಗು ಎಷ್ಟು ಸಹಜವಾಗಿತ್ತೆಂದರೆ ಕಾಡಿನ-
[illegible] ನಾವಿದ್ದ ಪರಿಸರದಲ್ಲಿ ಒಂದು ವಿಧದ ಗಂಭೀರ ಮೌನ ಕವಿಯಿತು. ಆತ ನಾಲ್ಕೈದು ಬಾರಿ ಕೂಗಿದರೂ ಅದಕ್ಕೆ ಯಾವುದೇ ಮಾರುತ್ತರ ಬಾರದ್ದರಿಂದ ಸ್ವಲ್ಪ ಹೊತ್ತು ಸುಮ್ಮನಾದ. ಹೀಗೆ ನಾಲ್ಕೈದು ಬಾರಿ ಪ್ರಯತ್ನಿಸಿದಾಗ ದೂರದಲ್ಲೆಲ್ಲೋ ಕಾಡಿನಿಂದ ಚಿರತೆಯ ಗರ್ಜನೆ ಕೇಳಿ ಬಂದು ನಮ್ಮ ಮೈ ನವಿರೆದ್ದಿತು. ನರನಾಡಿಗಳಲ್ಲಿ ಉತ್ಸಾಹ ಹೆಚ್ಚಿ, ಇಂದು ಸಫಲರಾಗುವೆವೆಂಬ ನಂಬಿಕೆ ಮೂಡಿತು.

ನೈಜ ಚಿರತೆ ಮರಿಯಂತೆ ಆತ ಆಗಿಂದಾಗ್ಯೆ ತಡೆ ತಡೆದು ಗರ್ಜಿಸುತ್ತಿದ್ದ ಇಲ್ಲವೆ ಗುರುಗುಟ್ಟುತ್ತಿದ್ದ. ನಾವಿದ್ದ ಕಾಡಿನ ಇನ್ನೊಂದು ಭಾಗದಿಂದ ಚಿರತೆಯ ಧ್ವನಿಯೂ ಸ್ಪಷ್ಟವಾಗಿ ನಮಗೆ ಕೇಳಿಸುತ್ತಿತ್ತು. ನಿಮಿಷಗಳು ಕಳೆದಂತೆ ತಾಯಿ ಚಿರತೆಯ ಧ್ವನಿ ಹೆಚ್ಚೆಚ್ಚು ಸ್ಪಷ್ಟವಾಗುತ್ತಿದ್ದಂತೆಯೇ ಅದು ನಮ್ಮೆಡೆಗೆ ಬರುತ್ತಿದೆಯೆಂಬ ಅರಿವು ನಮಗಾಯಿತು. ಕೊನೆಗೊಮ್ಮೆ ತಾಯಿ ಚಿರತೆಯ ಧ್ವನಿ ನಾವು ಕುಳಿತಲ್ಲಿಂದ ಸುಮಾರು ಐವತ್ತು ಗಜ ದೂರದಲ್ಲಿ ಕೇಳಿಸಲಾರಂಭಿಸಿತು. ನಾವು ನಮ್ಮ ಕೋವಿಗಳನ್ನು ಎತ್ತಿ ಹಿಡಿದೆವು. ಆತುರ ತೋರುವದರಿಂದ ಅಥವಾ ಚಿರತೆಗೆ ಒಂದಿನಿತೂ ಸಂಶಯ ಬರುವಂತಾದರೆ ನಮ್ಮ ಕೋವಿಯ ಅಳವಿನಿಂದ ಅದು ದಾರಿಗಾಣದೆ ಓಡುವುದು ನಮಗೆ ತಿಳಿದಿದ್ದುದರಿಂದ ನಾವು ಸಾಕಷ್ಟು ಎಚ್ಚರಿಕೆಯಿಂದಲೇ ಇದ್ದೆವು.

ಈಗ ಮಾರಯ್ಯ ಗರ್ಜನೆಯನ್ನು ನಿಲ್ಲಿಸಿ ಒಂದು ವಿಧವಾಗಿ ಹುರುಗುಡತೊಡಗಿದ. ತಾನು 'ಸಮೀಪದಲ್ಲಿಯೇ ಇದ್ದೇನೆ ಬೇಗ ಬಾ' ಎಂದು ತಾಯಿಗೆ ಮರಿ ಸೂಚಿಸುವ ಸ್ವರ ಅದಾಗಿತ್ತು. ತನ್ನ ಮರಿ ಸತ್ತ ನೆನಪು ಆ ಚಿರತೆಗೆ ಇನ್ನೂ ಹಸಿರಾಗಿಯೇ ಇದ್ದಿದ್ದು ಮಾರಯ್ಯನ ಕೂಗು ಅದಕ್ಕೆ ಸಂಶಯವನ್ನುಂಟುಮಾಡಿತೇನೋ. ಅತ್ತಲಿಂದ ಚಿರತೆಯೂ ಇದೇ ವಿಧದ ಶಬ್ದ ಮಾಡಿ ಮರಿಯನ್ನು ತನ್ನೆಡೆಗೆ ಕರೆಯುತ್ತಿದ್ದರೂ ತಾನಿದ್ದ ಸ್ಥಳದಿಂದ ಎಷ್ಟೋ ಹೊತ್ತಾದರೂ ಮುಂದೆ ಬರಲಿಲ್ಲ.

ಸುಮಾರು ಅರ್ಧ ಗಂಟೆಯ ವರೆಗೂ ಚಿರತೆ ತನ್ನ ಮರಿಯನ್ನು ಪ್ರೀತಿ, ವಾತ್ಸಲ್ಯ, ಉದ್ವೇಗ, ಕೋಪ ಎಲ್ಲ ರೀತಿಯಿಂದ ಕರೆದರೂ ಮರಿ ಮಾತ್ರ ತಾನಿದ್ದೆಡೆಯಿಂದ ಒಂದಿಂಚೂ ಕದಲದೆ ಗುರುಗುಟ್ಟಿ ಆರ್ತವಾಗಿ ತಾಯಿಯನ್ನೇ ತನ್ನೆಡೆಗೆ ಕರೆಯುತ್ತಿತ್ತು. ಕೊನೆಗೂ ತಾಯಿಯ ಕರುಳು ತನ್ನ ಮುದ್ದು ಕಂದನ ಆರ್ತನಾದಕ್ಕೆ ಮಣಿಯಲೇಬೇಕಾಯಿತು. ಕ್ರೂರ ಚಿರತೆಯಾದರೇನು? ತಾಯಿ ತಾಯಿಯೇ. ತನ್ನೆಡೆಗೆ ಬಾರದೆ ಮೊಂಡು ಹಿಡಿದು ತನ್ನನ್ನೇ ಕರೆಯುತ್ತಿದ್ದ ಮರಿಯ ಕರೆಯನ್ನು ಸಹಿಸಲಾರದೆ ಚಿರತೆ ಸಾಕಷ್ಟು ವೇಗವಾಗಿಯೇ ಶಬ್ದ ಬಂದ ದಿಕ್ಕಿಗೆ ಧಾವಿಸಿ ಬರಲಾರಂಭಿಸಿತು.

ನಾವು ಕುಳಿತಿದ್ದ ಮರಗಳ ಸುತ್ತಲೂ ಐದಾರು ಗಜಗಳಷ್ಟು ಸುತ್ತಳತೆಯ ಪ್ರದೇಶ ಪೊದರುಗಳಿಲ್ಲದೆ ಬಯಲಿನಂತಿತ್ತು. (ಚಿರತೆಯ ಬೇಟೆಗೆಂದೇ ನಾವು ಕಾಡಿನ ಮಧ್ಯೆ ಈ ಸ್ಥಳವನ್ನು ಆರಿಸಿದ್ದೆವು) ಮರಿಯನ್ನು ಅರಸುತ್ತ ಬಂದ ಚಿರತೆ ಈ ಬಯಲಿಗೆ ನುಗ್ಗಿದಾಗ ನಕ್ಷತ್ರಗಳ ಮಂದ ಬೆಳಕಿನಲ್ಲಿ ಚಿರತೆಯ ಆಕೃತಿ ನಮಗೆ ಅಸ್ಪಷ್ಟವಾಗಿ ಗೋಚರಿಸಿತು. ತಕ್ಷಣವೇ ಎರಡು ಕಡೆಗಳಿಂದ ನಾನು ಮತ್ತು ನನ್ನ ಬಂಧು ತಲೆಗೆ ಕಟ್ಟಿಕೊಂಡಿದ್ದ ಹೆಡ್‌ಲೈಟ್‌ಗಳು ಫಕ್ಕನೆ ಹೊತ್ತಿಕೊಂಡು ಚಿರತೆ ನಿಂತಿದ್ದ ಜಾಗವನ್ನೆಲ್ಲಾ ಬೆಳಗಿಸಿತು. ಒಮ್ಮೆಗೇ ಮುಖಕ್ಕೆ ನೇರವಾಗಿ ಬಿದ್ದ ಕಣ್ಣು ಕುಕ್ಕುವ ಪ್ರಕಾಶದಿಂದಾಗಿ ಚಿರತೆ ಕಕ್ಕಾಬಿಕ್ಕಿಯಾದಂತಾಯಿತು. ಅದರೆ ಒಂದು ಕ್ಷಣ ಮಾತ್ರ. ಮರುಕ್ಷಣದಲ್ಲಿಯೇ ಸಾವರಿಸಿಕೊಂಡ ಚಿರತೆ ಮಾನವನ ಕೃತ್ರಿಮತೆಗೆ ರೋಷಗೊಂಡಂತೆ ಒಮ್ಮೆ ಗರ್ಜಿಸುತ್ತಲೇ ಪಕ್ಕದ ಪೊದರಿನತ್ತ ನೆಗೆಯಿತು. ಇದನ್ನು ನಿರೀಕ್ಷಿಸಿಯೇ ಇದ್ದ ನಮ್ಮಿಬ್ಬರ ಕೋವಿಗಳಿಂದಲೂ ಏಕಕಾಲಕ್ಕೆ ಗುಂಡುಗಳು ಸಿಡಿದವು. ಎರಡು ಗುಂಡುಗಳೂ ಚಿರತೆಯ ಮರ್ಮಸ್ಥಳಗಳಿಗೆ ತಗಲಿದುದರಿಂದ ಯಾವುದೇ ಒದ್ದಾಟವಿಲ್ಲದೆ ಚಿರತೆ ನಿಶ್ಚಲವಾಯಿತು. ✡


ಫಾಸ್ಫೋಮಿನ್

ಫಾಸ್ಫೋಮಿನ್ ಕುಟುಂಬದ ಎಲ್ಲರಿಗೂ ಆರೋಗ್ಯಕರ

ಜೀವನದಲ್ಲಿ ಇನ್ನಷ್ಟು ಮೋಜಿನ ಭಾಗ್ಯ
ದೊರೆಯುವುದು, ಶರೀರದಲ್ಲಿರೆ ಆರೋಗ್ಯ.



ಫಾಸ್ಫೋಮಿನ್. ಹಸುರು ಬಣ್ಣದ, ಹಣ್ಣಿನ ರುಚಿಯುರುವ ವಿಟಮಿನ್ ಟಾನಿಕ್. ಫಾಸ್ಫೋಮಿನ್. ಹಸಿವೆಯನ್ನು ಉದ್ದೀಪನಗೊಳಿಸುತ್ತದೆ. ಶಕ್ತಿ ನೀಡುತ್ತದೆ, ದೇಹದಾರ್ಢ್ಯವನ್ನು ಹೆಚ್ಚಿಸುತ್ತಡೆ. ದೇಹದ ರೋಗ ನಿರೋಧಕ ಶಕ್ತಿಯನ್ನು ಬಲಪಡಿಸುತ್ತದೆ. ಕುಟುಂಬದ ಎಲ್ಲರನ್ನೂ ಆರೋಗ್ಯವಾಗಿ ಮತ್ತು ಚಟುವಟಿಕೆಯಿಂದ ಇಡುತ್ತದೆ.



SARABHAI CHEMICALS LTD.

Shilpi SC-2A/76 kan



ಮೂಲ ಉರ್ದು : ಖ್ವಾಜಾ ಅಹಮ್ಮದ ಅಬ್ಬಾಸ್
ಕನ್ನಡಕ್ಕೆ : ಕೋಹಿ

ಭೀಕು ತನ್ನ ಕೈಗಾಡಿಯನ್ನು ತಳ್ಳುತ್ತ ಯೋಚಿಸತೊಡಗಿದ : 'ನನ್ನ ಜೀವನ ಕೂಡ ಈ ಖಟರಾ ಗಾಡಿಯ ತರಹ ಮುಂಬಯಿ ತುಂಬಾ ಸುತ್ತಾಡುತ್ತದೆ. ಜುಹೂನಿಂದ ಬಾಂದ್ರಾ, ದಾದರ್, ವರ್ಲಿ, ಗಿರಗಾಂವ್, ಫಾರಸ್‌ರೋಡ್, ಮುಹಮ್ಮದಅಲಿ ರೋಡ್, ಕಾಳಬಾದೇವಿ ಮಾರ್ಗವಾಗಿ ಮರೀನ್ ಡ್ರೈವ್ ವರೆಗೆ ಹಾದಿಯ ತುಂಬಾ ಭವ್ಯವಾದ ಹಲವು ಅಂತಸ್ತುಗಳ ಮಹಡಿ ಮನೆಗಳು. ಅಲ್ಲಿಯ ಗಾಳಿ ಆಹ್ಲಾದಕರ. ಆದರೂ ಅಲ್ಲೆಲ್ಲಾ ತಿರುಗಾಡಿ ಮತ್ತೆ ಸಂಜೆಗೆ ಆ ಕಸದ ತೊಟ್ಟಿಗಳಿಗೆ ಹತ್ತಿಕೊಂಡಿರುವ ಹೊಲಸು ವಾಸನೆಯುಳ್ಳ ಮುರುಕು ಗುಡಿಸಲಿಗೇನೇ ಮರಳಿ ಬರಬೇಕು. ಮುಂಜಾನೆಯಿಂದ ಸಂಜೆಯವರೆಗೆ ಜಮಾಯಿಸಿದ ಖಾಲಿ ಡಬ್ಬಿಗಳು, ರದ್ದಿ ಕಾಗದ, ಖಾಲಿ ಸೀಸೆ, ಮೋಟಾರಿನ ಹಳೆಯ ಮುರಿದ ಸಾಮಾನುಗಳನ್ನು ಕಚರಾವಾಲಾ ಸೇಠನಿಗೆ ಮಾರುತ್ತೇನೆ. ಆತ ತನ್ನ ದೊಡ್ಡ ಕಪ್ಪು ಕಾರಿನಲ್ಲಿ ಬಂದು ನಾವು ತರುವ ಕೆಲಸಕ್ಕೆ ಬಾರದ ಸಾಮಾನುಗಳಿಗೆ ಕಾಯ್ದುಕೊಂಡು ಕುಳಿತಿರುತ್ತಾನೆ. ತನಗೆ ಕೆಲಸಕ್ಕೆ ಬರುವ ಸಾಮಾನುಗಳಿಗೆ ಒಂದು ರೂಪಾಯಿಯೋ ಇಲ್ಲ, ಎಂಟಾಣೆಯೋ ಬೆಲೆ ನಿರ್ಧರಿಸಿ ಕೊಡುತ್ತಾನೆ. ಆದರೂ ಎಂದೂ ತಾನು ಸೇಠನಿಂದ ಐದು ರೂಪಾಯಿಗಿಂತ ಹೆಚ್ಚಿಗೆ ಪಡೆದಿಲ್ಲ.'

ಕಾಲಿನಾದಿಂದ ಕುರ್ಲಾದವರೆಗೆ ಇರುವ ಪ್ರದೇಶ ಸಂಪೂರ್ಣವಾಗಿ ಸೇಠನಿಗೆ ಸೇರಿತ್ತು. ಕಸದ ತೊಟ್ಟಿಗೆಯಲ್ಲೇ ಆಗಲಿ, ಹಾದಿಯ ಮೇಲೆ ಯಾವ ಸ್ಥಳದಲ್ಲಿಯೇ ಆಗಲಿ ಏನಾದರೂ ಕೆಲಸಕ್ಕೆ ಬಾರದ ಸಾಮಾನುಗಳು ಬಿದ್ದಲ್ಲಿ ಅವು ಸೇಠನ ಆಸ್ತಿ ಎನಿಸುತ್ತಿತ್ತು. ಹಳೆ ಜಂಗು ಹಿಡಿದ ತಗಡು ಕೂಡ ಸೇಠನದೆನಿಸುತ್ತಿತ್ತು. ಇಂಜಿನ್, ಗಾಲಿಗಳಿಲ್ಲದ ಹಳೆಯ ಮುರುಕು ಮೋಟಾರಿನ ಬಾಡಿ ಕೂಡ ಸೇಠನ ಕಜ್ಜೆಗೇನೇ ಸೇರುತ್ತಿತ್ತು.

ಈ ಎಲ್ಲ ಹಳೆಯ ಕೆಲಸಕ್ಕೆ ಬಾರದ ಸಾಮಾನುಗಳನ್ನು ಕಚರಾವಾಲಾ ಸೇಠ ತೆಗೆದುಕೊಳ್ಳುತ್ತಿದ್ದ. ಸೇಠ ಈ ಎಲ್ಲ ಸಾಮಾನುಗಳನ್ನು ತೆಗೆದುಕೊಂಡು ಏನು ಮಾಡುತ್ತಾನೆ ಎನ್ನುವುದು ಭೀಕೂಗೆ ಗೊತ್ತಿರಲಿಲ್ಲವಾದರೂ ಏನೋ ವ್ಯಾಪಾರ ಇದೆ ಎಂದೆನಿಸುತ್ತಿತ್ತು. ಪ್ರತಿ ಎರಡು ಅಥವಾ ಮೂರು ದಿನಗಳಿಗೊಮ್ಮೆ ಸೇಠನ ಟ್ರಕ್ಕುಗಳು ಬಂದು, ಖಟರಾವಾಲಾಗಳು ಮಾರಿದ ಮುರುಕು ಸಾಮಾನುಗಳೆಲ್ಲವನ್ನೂ ಬಳಿದುಕೊಂಡು ಹೋಗುತ್ತಿದ್ದುವು. ಭೀಕೂನ ಹಾಗೆಯೆ ಇತರ ನೂರಾರು ಜನ ಖಟರಾವಾಲಾಗಳು ತಾವು ತಂದ ಮುರುಕು ಸಾಮಾನುಗಳನ್ನು



ಎರಡೋ ಮೂರೋ ರೂಪಾಯಿಗಳಿಗೆ ಮಾರಿಕೊಂಡು ಸಮೀಪಲ್ಲಿದ್ದ ಹೆಂಡದಂಗಡಿಗೆ ಹೋಗುತ್ತಿದ್ದರು. ಆ ಹೆಂಡದಂಗಡಿಗಳು ಯಾರವು ಗೊತ್ತೆ? ಅವು ಸಹ ಸೇಠನಿಗೇ ಸೇರಿದವು. ಅಲ್ಲಿ ತಮಗೆ ದೊರೆತ ಹಣದಿಂದ ಸಾಕಷ್ಟು ಹೆಂಡ ಕುಡಿದು ಗುಡಿಸಲಿಗೆ ನುಗ್ಗಿ ತಮ್ಮ ಹೆಂಡಂದಿರ ಬಳಿ ಬಿದ್ದುಕೊಳ್ಳುತ್ತಿದ್ದರು. ಒಮ್ಮೊಮ್ಮೆ ಮರೆವಿನಿಂದ, ಒಮ್ಮೊಮ್ಮೆ ಬೇಕೆಂದೇ ಹೆಂಡಂದಿರ ಅದಲುಬದಲೂ ಆಗುತಿತ್ತು, ಹೆಂಡದ ಅಮಲಿನಲ್ಲಿ–ಜೊತೆಗೆ ಬೆಳಕಿಲ್ಲದ ಆ ಗುಡಿಸಲುಗಳಲ್ಲಿ. ಆದರೆ ಅದಕ್ಕೆ ರಾತ್ರಿಯ ತೆರೆ ಬೀಳುತ್ತಿದ್ದುದರಿಂದ ಯಾರೂ ಈ ಬಗ್ಗೆ ಮಾತೆತ್ತುತ್ತಿರಲಿಲ್ಲ. ಆ ಬಗ್ಗೆ ಯಾರೂ ದೂರುತ್ತಲೂ ಇರಲಿಲ್ಲ.

ಆ ಗುಡಿಸಲುಗಳೆಲ್ಲ ಖಟರಾವಾಲಾಗಳು ತಂದು ಹಾಕುತ್ತಿದ್ದ ಕಸಕಡ್ಡಿ ಮತ್ತು ಇನ್ನಿತರ ಸಾಮಾನುಗಳಿಂದ ಉಂಟಾದ ದಿಬ್ಬದ ಬದಿಯಲ್ಲೇ ಇರುವುದರಿಂದ ಆ ಪರಿಸರವೆಲ್ಲ ಎಷ್ಟು ಹೊಲಸಾಗಿತ್ತೆಂದರೆ ಯಾವನೇ ಗುಡಿಸಲುವಾಸಿ ಹೆಂಡ ಇಲ್ಲವೆ ಭಟ್ಟಿ ಸಾರಾಯಿ ಕುಡಿಯದೇ ಅಲ್ಲಿ ವಾಸಿಸುವಂತೆಯೆ ಇರಲಿಲ್ಲ. ವಾಸಿಸಿದರೂ ಅಲ್ಲಿನ ಹೊಲಸು ವಾಸನೆ ಭಟ್ಟಿ ಸೆರೆಯ ನಿಶೆಯಲ್ಲಿ ಕರಗಿ ಹೋಗುತ್ತಿದ್ದುದರಿಂದ ಎಲ್ಲರೂ ಭಟ್ಟಿ ಸೆರೆಗೆ ಶರಣಾಗಿದ್ದರು. ಆದ್ದರಿಂದಲೇ ಮುಂಜಾವಿನಿಂದ ಸಂಜೆಯವರೆಗೆ ಜಮಾಯಿಸಿದ ಸಾಮಾನುಗಳನ್ನು ಸೇಠನಿಗೆ ಮಾರಿ ಬಂದ ಹಣದಲ್ಲಿ ಅರ್ಧಕ್ಕಿಂತ ಹೆಚ್ಚು ಸೆರೆ ಕುಡಿತಕ್ಕೆ ಖರ್ಚು ಮಾಡಿದ ಹಣ ಮತ್ತೆ ಸೇಠನಿಗೇನೇ ಸೇರುತ್ತಿತ್ತು. ಉಳಿದದ್ದರಲ್ಲಿ ಗುಡಿಸಲಿನ ಬಾಡಿಗೆ ಎಂದು ಸೇಠನ ಆಳುಗಳು ಪ್ರತಿ ಮೊದಲನೇ ತೇದಿಯಂದು ಹಣ ವಸೂಲು ಮಾಡುತ್ತಿದ್ದರು.

ಈ ಮೂರು ಸಣ್ಣ ದೊಡ್ಡ ಗಾಲಿಗಳುಳ್ಳ ಖಟರಾಗಾಡಿ ಕೂಡ ಸೇಠನದೇ ಆಗಿತ್ತು. ಪ್ರತಿಯೊಬ್ಬ ಖಟರಾವಾಲಾನೂ ಈ ಕೈಗಾಡಿಗಳ ಬಾಡಿಗೆಯೆಂದು ತಿಂಗಳಿಗೆ ೫ ರೂಪಾಯಿಗಳನ್ನು ಸೇಠನಿಗೆ ಕೊಡುತ್ತಿದ್ದ. ಅಂತೆಯೇ ಭೀಕೂ ತನ್ನ ಜೀವನ ಕೂಡ, ಈ ಖಟಾರಾ ಕೈಗಾಡಿಯ ತರಹವೇ, ಅದರ ಮಾಲಿಕ ಮತ್ತು ಅದರ ಹಣೆಬರಹ ಎಲ್ಲ ಕಟರಾವಾಲಾ ಸೇಠನಿಗೆ ಸೇರಿದ್ದು ಎಂದು ಯೋಚಿಸುತ್ತಿದ್ದ.

ಆ ಖಟರಾ ಗಾಡಿಗೆ ಮೂರು ಗಾಲಿಗಳಿವೆ.



ಮೂರೂ ಬೇರೆ ಬೇರೆ ಸೈಜಿನ ಗಾಲಿಗಳು. ಬಲಗಡೆಯದು ಸ್ವಲ್ಪ ದೊಡ್ಡ ಗಾಲಿ. ಯಾವುದೋ ಮೋಟಾರಿನ ಟೈರಿಲ್ಲದ ಜಂಗು ಹಿಡಿದ ಡಿಸ್ಕ್ ಅದು: ಎರಡು ಮೂರು ಕಡೆ ಮುರಿದಿದೆ. ಎಡಗಡೆಯದು ಸ್ಕೂಟರಿನ ಸಣ್ಣ ಗಾಲಿ; ಯಾರದೋ ತಪ್ಪಿಹೋದ ಅದರ ಟೈರ್ ಹಾಗೆಯೇ ಇದೆ. ತುಂಬ ಸವಕಳಿಯಾದರೂ ಪರವಾಗಿಲ್ಲ. ಮುಂದಿನ ಗಾಲಿ ಬಹಳೇ ಸಣ್ಣದಾಗಿದೆ. ಯಾರೋ ಹುಡುಗರು ನಡೆಸುವ ಟ್ರೈಸಿಕಲ್ ನಿಂದ ಕಳವು ಮಾಡಿ ಸೇಠನಿಗೆ ಮಾರಿರಬೇಕು.

'ಈ ತರಹ ನನ್ನ ಜೀವನವು ಮೂರು ಗಾಲಿಯುಳ್ಳದ್ದಾಗಿದೆ.' ಭೀಕೂ ಯೋಚಿಸಿದ: 'ಬಲಗಡೆಯ ಸ್ವಲ್ಪ ದೊಡ್ಡದಾದ ಜಂಗು-ತಿಂದ ಗಾಲಿ ನನ್ನ ತರಹ: ಒಂದಾನೊಂದು ಕಾಲದಲ್ಲಿ ನನ್ನಲ್ಲಿ ಸ್ವಾಭಿಮಾನ ತುಂಬಿಕೊಂಡಿರುತ್ತಿತ್ತು. ಯೌವನವಿತ್ತು. ನನ್ನನ್ನು ನಾನೇ ಸುಂದರನೆಂದುಕೊಂಡಿದ್ದೆ. ಸಿನೆಮಾದಲ್ಲಿ ನಾಯಕನಾಗಬೇಕೆಂಬ ಕನಸು ಕಾಣುತ್ತಿದ್ದೆ. ಅದಕ್ಕಾಗಿಯೇ ಮನೆ ಬಿಟ್ಟು ಸಿನೆಮಾ ಸೇರಲು ಮುಂಬಯಿಗೆ ಬಂದೆ. ಸ್ಟುಡಿಯೋಗಳಲ್ಲಿನ ಸಲಾಕೆಯೊಳಗೆ ಸಿಕ್ಕುಬಿದ್ದು ಫುಟ್‌ಪಾತಿನ ಬಿರುಸು ಕಲ್ಲುಗಳ ಮೇಲೆ ಬಿದ್ದು, ದೊಡ್ಡ ದೊಡ್ಡ ಕಾರಖಾನೆಗಳ ಬಾಗಿಲಿಗೆ ನೇತುಬಿದ್ದ "ಕೆಲಸ ಖಾಲಿ ಇಲ್ಲ" ಎನ್ನುವ ಬೋರ್ಡಿಗೆ ಬಡಿದು ನನ್ನ ಸುಂದರ ಕನಸುಗಳೆಲ್ಲ ನುಚ್ಚುನೂರಾಗಿ ಹೋಗಿದ್ದವು.

'ಕೆಲಸವಿಲ್ಲದೆ ತಿರುಗುವುದಕ್ಕಿಂತ ಯಾವುದಾದರೂ ಕೆಲಸ ಮಾಡುವುದು ಉತ್ತಮ. ಆದರೆ ಕೆಲಸ ಕೊಡುವವರಾದರೂ ಯಾರು ? ಈ ನಗರದಲ್ಲಿ ನಿರುದ್ಯೋಗಿಯಾಗಿ ಅಲೆದಾಡುವುದಕ್ಕಿಂತ ಕಳ್ಳತನ ಮಾಡಿ ಹೊಟ್ಟೆ ಹೊರೆಯುವುದೇ ಮೇಲು. ಆದರೆ ಜೇಬು ಕತ್ತರಿಸುವುದು ಸಣ್ಣ ಕೆಲಸ. ಕಣ್ಣಿಗೆ ಖಾರ ಉಗ್ಗಿ ಇಲ್ಲವೇ ಚೂರಿ ತೋರಿಸಿ ಹಾಡು ಹಗಲೇ ತುಡುಗು ಮಾಡುವುದು ಬಹಳ ಒಳ್ಳೆಯದು. ಆದರಿಂದಾಗಿ ಜೇಲಿಗೆ ಹೋಗುವುದು ಇದಕ್ಕಿಂತ ಒಳ್ಳೆಯದು. ಏಕೆಂದರೆ ಅಲ್ಲಿ ಪುಕ್ಕಟೆಯಾಗಿ ಅನ್ನ, ನೀರು ದೊರಕುತ್ತದೆ. ಅಲ್ಲದೆ ಶಾಲೆಯ ಫೀಸ್ ಕಟ್ಟದೇನೇ ಪ್ರೌಢ ಶಿಕ್ಷಣ ಸಿಗುತ್ತದೆ.'

ಮೊದಲನೆಯ ಸಲ ಜೈಲಿಗೆ ಹೋದಾಗ ಲಾಲಕರಾಮನು ಎರಡನೆಯ ಸಲ ಹೋದಾಗ ರಾಮಾ ಆಗಿದ್ದ. ಆದರೆ ಮೂರನೆಯ ಸಲ ಜೈಲಿಗೆ ಹೋದಾಗ ಭೀಕೂವಾಗಿಬಿಟ್ಟಿದ್ದ.

ಇನ್ನು ಮೇಲೆ ಕಳ್ಳತನ ಮಾಡಬಾರದೆನಿಸಿದ್ದರಿಂದ ಭೀಕೂ ಈಗ ಮುಂಜಾವಿನಿಂದ ಸಂಜೆಯವರೆಗೆ ಬಿಟರಾಗಾಡಿ ದೂಡುತ್ತ ಗುಡಿಸಲಿನಲ್ಲಿ ತನಗಾಗಿ ದೀಪ ಹಚ್ಚಿಕೊಂಡು ಹಾದಿ ಕಾಯುತ್ತ ಕುಳಿತಿದ್ದ ಬಾಲೋಳನ್ನು ಸೇರುವ ಘಳಿಗೆಗಾಗಿ ಪರಿತಪಿಸುತ್ತಿದ್ದ.

*

ಬಾಲೋ ಅವನ ಜೀವನದ ಎರಡನೆಯ ಗಾಲಿ. ಆಕೆ ಭೀಕೂನ ಹೆಂಡತಿಯಾದರೂ ಅಗ್ನಿಸಾಕ್ಷಿಯಾಗಿ ಸಪ್ತಪದಿ ತುಳಿದಿಲ್ಲ; ಯಾವನೇ ಕಾಜಿ ಅವರಿಬ್ಬರ ನಿಕಾಹ್ ಓದಿಲ್ಲ. ಅವರು ಯಾವುದೇ ಚರ್ಚಿಗಾಗಲಿ ರಜಿಸ್ಟ್ರಿ ಆಫೀಸಿಗಾಗಲಿ ಹೋಗಿಲ್ಲ. ಆದರೂ ಬಾಲೋ ಭೀಕೂನ ಹೆಂಡತಿ. ಆಕೆ ಒಂದು ಮಗುವಿನ ತಾಯಿಯೂ ಹೌದು. ಆದರೆ ಆ ಮಗು ಭೀಕೂನ ಮಗ ಅಲ್ಲ ಎನ್ನುವುದು ಕೇವಲ ಭೀಕೂ ಮತ್ತು ಬಾಲೋರಿಗೆ ಮಾತ್ರ ಗೊತ್ತು. ಫುಟ್‌ಪಾತಿನ ಮೇಲೆ ಅವರಿಬ್ಬರ ಮೊದಲ ಭೇಟಿ. ಆಕೆಯ ಯೌವನಭರಿತ ಮಾಂಸ ಖಂಡಗಳು ಆಕೆ ಧರಿಸಿದ ಹರಕು ಕುಪ್ಪಸ ಹೊಲಸು ಸೀರೆಯೊಳಗಿನಿಂದ ಇಣಿಕಿ ಹಾಕುತ್ತಿದ್ದವು. ಆಕೆಯ ಕಣ್ಣಿನಲ್ಲಿ ಕಾಂತಿ ತುಂಬಿತ್ತು. ಮರುಭೂಮಿಯಲ್ಲಿ ಅಕಸ್ಮಾತ್ತಾಗಿ ಹೂ ಅರಳಿದ ಹಾಗೆ ಭೀಕೂನ ಜೀವನದಲ್ಲಿ ವಸಂತ ಚಿಗುರಿತು.

ಆಗ ಭೀಕು ಅಪರಾಧಿ ಜೀವನ ಸಾಗಿಸುತ್ತಿದ್ದ. ಯಾವಾಗಲೂ ಸಾಕಷ್ಟು ದುಡ್ಡು ಅವನ ಜೇಬಿನಲ್ಲಿರುತ್ತಿತ್ತು. ಮೊದಲ ದಿನವೇ ಕೇಳಿದ್ದ, "ಸಿನಿಮಾಕ್ಕೆ ಬರ್ತೀ ಏನು?"

"ಬರ್ತೀನಿ," ಏನೊಂದೂ ತಿಳಿಯದೆ ಬಾಲೋ ಹೇಳಿದ್ದಳು.

ಈ ಹೆಣ್ಣು ಚಾಲಾಕಿದೆ ಎನಿಸಿತ್ತು ಭೀಕೂಗೆ. ಸಿನಿಮಾ ಪ್ರಾರಂಭವಾದಾಗ ಭೀಕೂ ಬೇಕೆಂದೇ ಆಕೆಯ ತೊಡೆಯ ಮೇಲೆ ತನ್ನ ಕೈಯಿಟ್ಟಿದ್ದ. ಬಾಲೋ ಭೀಕೂನ ಕೈಯನ್ನು ಮಾತಾಡದೆ ಅಲ್ಲಿಂದ ಸರಿಸಿದ್ದಳು.

ಸ್ವಲ್ಪ ಹೊತ್ತು ಭೀಕೂ ಸುಮ್ಮನೆ ಸಿನಿಮಾ ನೋಡುತ್ತಾ ಕುಳಿತ. ನಾಯಕ ನಾಯಕಿಯರ ಜೊತೆ ಚೆಲ್ಲಾಟವಾಡುತ್ತಾ ಆಲಾಪಿಸತೊಡಗಿದಾಗ ಭೀಕೂನ ಮೊಣಕೈ ಬಾಲೋಳ ಎದೆಯನ್ನು ತಟ್ಟಿತ್ತು ಒಂದು ಕ್ಷಣ. ಆಕೆ ಏನೂ ಆಕ್ಷೇಪವೆತ್ತದೇ ಇರಲು ಭೀಕೂನ ಧೈರ್ಯ ಹೆಚ್ಚಿ ಮೊಣಕೈ ತಟ್ಟಿಸಿದ ಸ್ಥಳಕ್ಕೆ ಅಂಗೈನಿಂದ ಮುಟ್ಟಿದಾಗ, ಆಕೆ ಕೈ ಕೊಡವಿ ಸಿನಿಮಾ ಹಾಲಿನ ಕತ್ತಲೆಯಲ್ಲಿ ಕುಳಿತವರ ಕಾಲು ತುಳಿಯುತ್ತಾ ಸಿಟ್ಟಿನಿಂದ, ಹೊರಗೆ ಹೋಗಿದ್ದಳು.

ರಾತ್ರಿ ಫುಟ್‌ಪಾತ್ ಮೇಲೆ ಅವಳನ್ನು ಭೆಟ್ಟಿಯಾದ ಭೀಕು ಕೇಳಿದ: "ಒಳ್ಳೆ ಗರತಿ ಗಂಗಮ್ಮನ ಹಾಗೆ ಒನಪು ಮಾಡ್ತಾ ಇದೀಯಲ್ಲ, ಧಾರಣೆ ಹೆಚ್ಚಿಗೆ ಬರಲಿ ಅಂತ ಏನು!"

"ನಾ ಏನಾರೆ ಮಾಡ್ಲಿ; ಅದರಿಂದ ನಿನಗೇನು ?" ಗದರಿಸಿದ್ದಳು ಬಾಲೋ.

ಅಂಜದೆ ಭೀಕೂ ಕೇಳಿದ, "ನಾನು ಅಂದ್ರೆ ಯಾರೂಂತ ಅಂದ್ಕೊಂಡೆ?"

ಬಾಲೋ ಕೈಕುಣಿಸಿ, "ಗೊತ್ತಿಲ್ಲದೇನು ಮಹಾ, ಕಳ್ಳ, ಕೊರಮ, ಚಾರಸೌಬೀಸ್, ಮೂರು ಸಲ ಜೇಲಿಗೆ ಹೋಗಿ ಬಂದರೂ ಬುದ್ದಿ ಬಂದಿಲ್ಲ!" ಎಂದಳು.

"ನಾನು ಏನು ಮಾಡ್ತೀನಿ ಗೊತ್ತಾ!" ಸಿಟ್ಟಿನಿಂದ ಕೇಳಿದ್ದ ಭೀಕೂ.

"ನನಗ ನೀ ಏನು ಮಾಡ್ತಿಯೋ ಭಡವಾ, ಮೊದಲು ಇಲ್ಲಿಂದ ಹಾದಿ ಹಿಡಿ. ಇನ್ನೊಮ್ಮೆ ಸಿನಿಮಾ ನೋಡಬೇಕು ಎನಿಸಿದರೆ ಫಾರಸ್ ರೋಡಿನಿಂದ ಯಾವುದಾದರೂ ಹೆಣ್ಣನ್ನು ಜೊತೆಗೆ ಕರ್ಕೊಂಡು ಹೋಗು," ಕೆನ್ನೆ ಬಾಯುವ ಹಾಗೆ ಕಪಾಳ ಮೋಕ್ಷ ಮಾಡುವ ಸಿಟ್ಟು ಬಂದಿದ್ದರೂ ಭೀಕೂ ಸಿಟ್ಟನ್ನು ನುಂಗಿಕೊಂಡು ಅಲ್ಲಿಂದ ಬೇರೆ ದಾರಿ ಹಿಡಿದ. ಕೆಲವು ದಿನಗಳ ವರೆಗೆ ಈ ಕಡೆ ಸುಳಿದಿರಲಿಲ್ಲ. ಈ ಅವನ ಹಳೆಯ ಕಾರುಬಾರಗಳಲ್ಲಿ ಆದಾಯವಿಲ್ಲದೆ ದಿನದ ಖರ್ಚಿಗೆ ಗತಿಯಿಲ್ಲದ ಹಾಗೆ ಆಗಿತ್ತು. ವಿಧಿಯೂ ಅವನಿಗೆ ಪ್ರತಿಕೂಲವಾಗಿತ್ತು. ಅವನು ಕತ್ತರಿಸಿದ ಜೇಬುಗಳೆಲ್ಲ ಬಹುಶಃ ಖಾಲಿಯಾಗಿರುತ್ತಿದ್ದವು. ತುಂಬಿದ್ದರೂ ಕೂಡ ಅವು

ರೈಲ್ವೆ ಪಾಸ್ ಅಥವಾ ಇನ್ನಾವುದೋ ಕೆಲಸಕ್ಕೆ ಬಾರದ ಹಾಳೆಯ ತುಂಡುಗಳಾಗಿರುತ್ತಿದ್ದವು. ಅವು ತನ್ನ ಅಸಲಿ ಸ್ಥಳಕ್ಕಾದರೂ ಹೋದಿರಲಿ ಅಂತ ಭೀಕೂ ಸಮೀಪದ ಟಪಾಲು ಪೆಟ್ಟಿಗೆಗೆ ಹಾಕಿಬಿಡುತ್ತಿದ್ದ.

ಫಾರಸ್‌ರೋಡಿನ ಒಬ್ಬ ಸೂಳೆಯ ಪರಿಚಯ ಭೀಕೂಗೆ ಮೊದಲಿನಿಂದಲೂ ಇತ್ತು. ಫಾರಸ್‌ರೋಡಿನಲ್ಲಿ ಪಶು ಪಕ್ಷಿಗಳಂತೆ ಪಂಜರದಲ್ಲಿ ಬಂಧಿಸಲ್ಪಟ್ಟ ಸಾವಿರಾರು ನತದೃಷ್ಟ ನಾರಿಯರಲ್ಲಿ ಈಕೆ ಒಬ್ಬಳಾಗಿದ್ದಳು. ಅವರೆಲ್ಲ ಆ ಜೀವನಕ್ಕೆ ಒಗ್ಗಿಕೊಂಡಿದ್ದರು. ಇಲ್ಲವೇ ಹೊಂದಿಕೊಳ್ಳಲೇಬೇಕಾಗಿತ್ತು ಅವರಿಗೆ.

ಒಂದು ದಿನ ಭೀಕೂ ಗುಪ್ತ ಸರಾಯಿ (ಬಹಳ ಗುಪ್ತವೂ ಅಲ್ಲ) ಯಲ್ಲಿ ಸರಾಯಿ ಅಂಗಡಿ ಕುಡಿಯುವಾಗ ಬಾಜೋ ಅಂದದ್ದು ನೆನಪಿಗೆ ಬಂತು: "ಸಿನಿಮಾ ನೋಡಲು ಮನಸ್ಸು ಆದರೆ ಫಾರಸ್ ರೋಡಿನಿಂದ ಸೂಳೆಯನ್ನು ಕರೆದು ಕೊಂಡು ಹೋಗು" ನಿಶೆಯ ಅಮಲಿನಲ್ಲಿಯೂ ಅವನ ಮಿದುಳು ಓಡಿತ್ತು. ತನಗೆ ತಾನು ಏನೆಂತ ತಿಳ್ಕೊಂಡಿದ್ದಾಳೆಯೋ ಏನೋ; ನನಗೆ ಏನೇನೋ ಅಂದುಬಿಟ್ಟಳಲ್ಲಾ ಎಂದು ಕುದಿಯಿತು ಭೀಕೂನ ಅಂತರಾತ್ಮ. ನೋಡಲು ನೀಲಾ ಕೂಡ ಏನು ಕೆಟ್ಟವಳಿದ್ದಾಳೆ? ಸ್ವಲ್ಪ ಕಪ್ಪು ಅಲ್ಲಲ್ಲ, ನೀಲ ವರ್ಣ ಎಂದುಕೊಂಡರೂ ಆಕೆಯ ಆ ಅಂಗಸೌಷ್ಟವ! ಆಕೆಯ ನಾಲಿಗೆ ಹರಿತ; ಹೊಲಸು ಭಾಷೆ ಆಡಿದರೇನು? ಆಕೆ ನೀಡುವ ರತಿ ಸುಖ! ಅಲ್ಲಿಗೆ ಹೋದರಾಯಿತು ಏಂದು ಅಲ್ಲಿಂದ ಎದ್ದ ಅವನ ಹೆಜ್ಜೆ ತಪ್ಪಿದ ಕಾಲುಗಳು ಅವನನ್ನು ಫಾರಸ್ ರೋಡಿಗೆ ಕರೆದೊಯ್ದವು. ಆದರೆ ಇದೇ ನೀಲಾಗೂ ತನಗೂ ಕೊನೆಯ ಸಂಪರ್ಕ ಎಂದೆನಿಸಿರಲಿಲ್ಲ ಭೀಕೂವಿಗೆ. ರೂಮಿನೊಳಗೆ ಹೋಗುವ ಮೊದಲು ಮನೆ ಮುಂದಿನ ಆ ಹೊಲಸು ಚರಂಡಿಯೊಳಗೆ ಮೂತ್ರ ವಿಸರ್ಜನೆ ಮಾಡಿದ. ಬಹಳೇ ಹೊಲಸು, ಅಸಹ್ಯ ದುರ್ಗಂಧ ಬರುತ್ತಿತ್ತು. ಆ ವಾಸನೆ ಚರಂಡಿಯದೋ ಇಲ್ಲ ಮನೆಯೊಳಗಿನದೋ ಅಥವಾ ತಾನು ಕುಡಿದ ಕಳ್ಳಭಟ್ಟಿ ಸರಾಯಿಯದೋ ಭೀಕೂಗೆ ತಿಳಿಯಲಿಲ್ಲ. ಚಳಿಯಲ್ಲಿಯೇ ಕಟ್ಟೆ ಹತ್ತಿದ ನಾಯಿಯೊಂದು ಚರಂಡಿಯ ನೀರು ಕುಡಿಯುತ್ತಿತ್ತು. ಭೀಕೂಗೆ ವಾಕರಿಕೆ ಬಂತು. ಆದರೆ ಅವನು ಶರಾಯಿಯ ಗುಂಡಿಗಳನ್ನು ಹಾಕಿಕೊಳ್ಳುತ್ತ (ಕಳ್ಳಭಟ್ಟಿ ಸರಾಯಿ) ಕುಡಿಯುವಾಗ ಮೀನು ತಿಂದೆನಲ್ಲ, ಬಹುಶಃ ಅದು ಕೊಳೆತ ಮೀನಾಗಿರಬೇಕು. ಎಂದುಕೊಳ್ಳುತ್ತಾ ನೀಲಾಳ ಮನೆಯೊಳಗೆ ಹೋದ.

ನೀಲಾ, ಕೊಬ್ಬರಿ ಎಣ್ಣೆ ತೊಟ್ಟಿಕ್ಕುತ್ತಿದ್ದ ತನ್ನ ಕೂದಲಿನಲ್ಲಿ ಹೂ ಮುಡಿದುಕೊಳ್ಳುತ್ತಿದ್ದಳು. ಆಕೆ ಉಟ್ಟಿದ್ದ ಬಿಗಿಯಾದ ಫ್ರಾಕಿನೊಳಗಿನಿಂದ ಅಂಗಪ್ರತ್ಯಂಗಗಳು ಎದ್ದು ಕಾಣುತ್ತಿದ್ದವು. ಭೀಕೂನನ್ನು ಕಂಡ ಕೂಡಲೇ ಆಕೆ ಕೃತಕ ಮಂದಹಾಸ ಬೀರುತ್ತಾ, "ಬಹಳ ದಿನಕ್ಕೆ ಮುಖ ತೋರಿಸಿದೆಯಲ್ಲಾ. ಬೇರೆ ಹುಡುಗಿಯ ಸಹವಾಸ ಸಿಕ್ಕಿತೋ ಇಲ್ಲ ದೊಡ್ಡ ಮನೆಗೆ ದಯಮಾಡಿಸಿದ್ದಿರೊ?" ಎಂದು ಕೇಳಿದಳು.

"ಪುರುಸೊತ್ತೇ ಆಗಲಿಲ್ಲ ನೀಲಾ, ಇವತ್ತು ಸ್ವಲ್ಪ ಟೈಮ್ ಸಿಕ್ಕಿತು. ನೀಲಾ ಹೇಗಿದ್ದಾಳೆ ನೋಡಿ ಹೋದರಾಯಿತು ಎಂದುಕೊಂಡು ಇಲ್ಲಿಗೆ ಬಂದೆ," ಎಂದ ಭೀಕೂ.

"ಅಂದರೆ ಒಳಗೆ ಬಾ," ನೀಲಾ ರೂಮಿನ ಒಳಭಾಗದ ಕಡೆ ಕೈ ತೋರಿಸಿದಳು.

"ಅಡ್ವಾನ್ಸ್ ಕೊಡ್ತಿ ಏನು?" ಎನ್ನುತ್ತಾ ನೀಲಾಳ ಬಳಿ ಬಂದು ಆಕೆಯ ನೀಲಿ ತುಟಿಗಳ ಮೇಲೆ ಬೆರಳಿಟ್ಟು ಕೇಳಿದ ಭೀಕೂ.

"ಸಿಗ್ತಾದ! ಸಿಗ್ತಾದ! ಎಲ್ಲಾ ಸಿಗ್ತಾದ." ನೀಲಾಗೆ ಭೀಕೂ ಬಹಳೇ ಪಸಂದ್ ಆಗಿದ್ದ. ಈ ತರುಣ ಹುಡುಗ ಕೆಲಸ ಹೆಚ್ಚು ಮಾಡ್ತಾನೆ; ಆದರೆ ಬೆಲೆ ಮಾತ್ರ ನಿರ್ಧಾರಿತ.

ಭೀಕೂ ಆ ನೀಲಿ ತುಟಿಗಳನ್ನು ಮುದ್ದಿಸಲು ಮುಂದೆ ಬಾಗಿದ. ಆಕೆ ಕೃತಕ ನಾಚಿಕೆ ಸೂಸುತ್ತ ಅವನ ಹೆಗಲಿಗೆ ಕೈ ಹಾಕಿ ಕಣ್ಣು ಮುಚ್ಚಿದಳು.

ಕೊಬ್ಬರಿ ಎಣ್ಣೆ, ಹೂವಿನ ವಾಸನೆ ಜೊತೆಗೆ ನೀಲಾಳ ಬೆವರು ಬಾಯಿಯ ದುರ್ಗಂಧದ ಅಲೆಯೊಡನೆ ಹೊರಗಿನ ಚರಂಡಿಯ ವಾಸನೆಯೂ ಸೇರಿದ ಗಾಳಿಯಲ್ಲಿ ನೀಲಿ ತುಟಿಗಳಿಗೆ

ಹಚ್ಚಿದ ಕೀಳ್ಮಟ್ಟದ ಲಿಪಸ್ಟಿಕ್‌ನ ರುಚಿ. ಸವಿಯುವ ಮೊದಲೇ ಭೀಕೂಗೆ ಮತ್ತೊಮ್ಮೆ ವಾಕರಿಕೆ ಬಂದಂತೆನಿಸಿ ತಲೆ ಸುತ್ತತೊಡಗಿತು.

"ತಯಾರಾಗು ಬೇಗ," ಎನ್ನುತ್ತಾ ಭೀಕು ತನ್ನನ್ನು ತಾನು ಸಂಭಾಳಿಸಿಕೊಂಡ.

"ನಾನು ನನ್ನ ಅಡ್ವಾನ್ಸ್ ಕೊಟ್ಟಾಯಿತು. ಇನ್ನು ನಿನ್ನ ಅಡ್ವಾನ್ಸ್ ಕೊಡು," ಎನ್ನುತ್ತಾ ನೀಲಾ ತನ್ನ ಬಲಗೈ ಚಾಚಿದಳು.

ಭೀಕು ಎರಡು ರೂಪಾಯಿಗಳನ್ನು ತೆಗೆದು ನೀಲಾಳ ಕೈಯಲ್ಲಿಟ್ಟ.

"ಇನ್ನೊಂದು ರೂಪಾಯಿ ಕೊಡು," ಎನ್ನುತ್ತಾ ನೀಲಾ ತಲೆ ಅಲ್ಲಾಡಿಸಿದಳು.

"ಯಾಕೆ?" ಭೀಕು ಕೇಳಿದ.

"ತುಟ್ಟಿಭತ್ಯ; ಎಲ್ಲಾ ಸಾಮಾನುಗಳ ಬೆಲೆ ಏರ್‍ತಾ ಇದೆ. ನಾನೂ ನನ್ನ ಬೆಲೆ ಹೆಚ್ಚಿಗೆ ಮಾಡಿದ್ದೇನೆ."

"ಸೂಳೆಮಗಳೇ," ಎನ್ನುತ್ತಾ ಭೀಕು ಇನ್ನೊಂದು ರೂಪಾಯಿಯನ್ನು ತೆಗೆದು ಆಕೆಯ ಅಂಗೈಯಲ್ಲಿಟ್ಟ.

"ಈಗ ಒಳಗ ನಡಿ," ಎನ್ನುತ್ತಾ ನೀಲಾ ತನ್ನ ಕೈಯಿಂದ ಭೀಕೂನನ್ನು ಬಳಸಿ ಪರದೆಯ ಕಡೆ ಆತನನ್ನು ಎಳೆದುಕೊಂಡು ನಡೆದಳು.

ಅವರಿಬ್ಬರೂ ಇನ್ನೂ ಪರದೆಯೊಳಗೆ ಹೋಗಿದ್ದರೋ ಇಲ್ಲವೋ ಹೊರಗಿನಿಂದ ಯಾರೋ ಕ್ಯಾಕರಿಸಿದರು. ನೀಲಾ ಹಿಂದಿರುಗಿ ನೋಡಿದಳು.

ಆಕೆಯ ದಲಾಲ ಮಂಗೂ ದೃಷ್ಟಿಗೆ ಬಿದ್ದ.

ಆತ ಸನ್ನೆಯಿಂದಲೇ ಎಷ್ಟು ಸಿಕ್ಕಿತು? ಎಂದ. ನೀಲಾ ಎರಡು ರೂಪಾಯಿ ತೋರಿಸಿದಳು.

"ನಾನು ರೇಟ್ ಹೆಚ್ಚು ಮಾಡು ಅಂತ ತಿಳಿಸಿರಲಿಲ್ಲವೇನು ? ಎರಡು ರೂಪಾಯಿ ಅಂದರೆ ಬೇಡ," ಎಂದ ಮಂಗು. ತನ್ನ ಕುಪ್ಪುಸದೊಳಗಿನಿಂದ ಮೂರನೇ ರೂಪಾಯಿಯನ್ನು ಹೊರತೆಗೆದು ತೋರಿಸಿದಳು ನೀಲಾ. ಅದನ್ನೂ ಕಸಿದುಕೊಳ್ಳುತ್ತಾ, "ಬೇಗ ಮಾಡು, ಧಂಧೆಯ ಹೊತ್ತಾಗಿದೆ," ಎಂದು ಎಚ್ಚರಿಸಿದ ಮಂಗು.

ಒಳಬಂದು ನೀಲಾ, ಬಟ್ಟೆ ಬಿಚ್ಚದೆ ತಲೆ ಒಡಿಮುಕೊಂಡು ಕುಳಿತ ಭೀಕೂನನ್ನು ನೋಡಿದಳು.

"ಯಾರು?" ತಲೆಯೆತ್ತದೆ ಕೇಳಿದ ಭೀಕು.

"ನನ್ನ ದಲಾಲ ಮಂಗು. ಏಕೆ ಹೀಗೆ ಕುಳಿತಿರುವಿ?

"ತಲೆ ನೋವು."

"ಇಷ್ಟು ದಿವಸಗಳ ಮೇಲೆ ನನ್ನ ಹತ್ತಿರ ಬಂದಿರುವಿ ಎಂದಮೇಲೆ ತಲೆನೋವಾಗದೆ ಏನು ?" ಎನ್ನುತ್ತಾ ಫ್ರಾಕ್‌ನ ಹಿಂದೆ ಹಚ್ಚಿದ್ದ ಜಿಪ್ ಎಳೆದಳು ನೀಲಾ.

ಈಗ ಭೀಕೂ ತಲೆ ಎತ್ತಿದ.

ಎದುರಿಗೆ ನೀಲಾ ಬೆತ್ತಲೆ ನಿಂತಿದ್ದಳು. ನೀಲಾ ಅಲ್ಲ, ಬಾಲೋ. ಅಲ್ಲಲ್ಲ, ಬಾಲೋ ಅಲ್ಲ ನೀಲಾ.

ನೀಲಾ! ಬಾಲೋ! ಬಾಲೋ! ನೀಲಾ!

ಪಲ್ಲಂಗದ ಸಮೀಪದ ಟೀಪಾಯ್ ಮೇಲಿನ ಮಣ್ಣಿನ ಹಣತೆಯಲ್ಲಿ ಅರ್ಧ ಸುಟ್ಟ ಚಾರ್ ಮೀನಾರ್ ಸಿಗರೇಟ್ ಒಂದು ಇನ್ನೂ ಹೊಗೆಯುಗುಳುತ್ತಿತ್ತು.

"ಸಿಗರೇಟ್ ಸೇದ್ತಿಯಾ?" ನೀಲಾ ಅರ್ಧ ಸುಟ್ಟಿದ್ದ ಸಿಗರೇಟನ್ನೆತ್ತಿ ಭೀಕೂಗೆ ಕೊಡಲನುವಾದಳು.

"ಅದು ಯಾರ ಸಿಗರೇಟು? ನೀನೀಗ ಸಿಗರೇಟು ಸೇದಲು ಕಲಿತಿರುವೆಯಾ?"

"ಊಂಹೂ. ಒಮ್ಮೊಮ್ಮೆ ಒಂದೆರಡು ಜುರಕಿ ಅಷ್ಟೆ," ಎನ್ನುತ್ತಾ ನೀಲಾ ಸಿಗರೇಟನ್ನು ತನ್ನ ತುಟಿಗೆ ಹಚ್ಚಿ ಹೇಳಿದಳು. "ಆದರೆ ಈ ಸಿಗರೇಟು ಮಾತ್ರ ನಿನಗಿಂತ ಮೊದಲು ಬಂದ ಗಿರಾಕಿಯದು. ಅವನು ಅವಸರದಲ್ಲಿ ಬಿಟ್ಟು ಹೋಗಿರಬೇಕು. ಆತ ಪ್ಯಾರ್ ಮಾಡಿದ ನಂತರ ಸಿಗರೇಟು ಸೇದುತ್ತಾನೆ."

"ಪ್ಯಾರ್!" ಭೀಕು ಆಶ್ಚರ್ಯದಿಂದ ಪಡಿನುಡಿದ.

ನೀಲಾ ಸಿಗರೇಟನ್ನು ಭೀಕೂಗೆ ಕೊಡುತ್ತಾ "ತಗೋ, ನೀ ಪ್ಯಾರ್ ಮಾಡೋಕ್ ಮುಂಚೇನೇ ಸಿಗರೇಟ್ ಸೇದು," ಎಂದಳು.

"ಭೀಕು ಸಿಗರೇಟನ್ನು ತೆಗೆದುಕೊಂಡ. ಈಗ ಆತನ ತಲೆ ಸುತ್ತತೊಡಗಿತ್ತು. ತುಟಿ ಮುಷ್ಟೆ ಸೇರುವ ಮುಂಚೆ ನೋಡಿದ. ಈಗಂತೂ

ಸಿಗರೇಟ್ ಮೇಲೆ ನೀಲಾಳ ಲಿಪ್‌ಸ್ಟಿಕ್‌ನ ಮುದ್ರೆಯು ಬಿದ್ದಿತ್ತು. ಆದರ ಮೇಲೆ ಆತನ ತಲೆಯುಲ್ಲೀಗ ಅನಂತ ಚಿತ್ರಗಳು ಕೋಲಾಹಲ ವೆಬ್ಬಿಸಿದ್ದವು.

ನೀಲಾ !

ಬಾಲೋ !

ನೀಲಾ !

ನೀಲಾಳ ಮೊದಲ ಗಿರಾಕಿ ಈಗ ಸಿಗರೇಟ್ ಸೇದುತ್ತಾ ಇದ್ದ.

ಮಂಗೂ, ದಲಾಲ್ !...

ಮತ್ತೆ ಲಿಪ್‌ಸ್ಟಿಕ್ ಅಂಟಿದ ಸಿಗರೇಟು !...

ಹೊಲಸು ಚರಂಡಿ !...

ಕಜ್ಜಿಬುರಕ ನಾಯಿ ಹೊಲಸು ನೀರನ್ನು ಚಪ್ಪರಿಸಿಕೊಂಡು ಕುಡೀತಾ ಇದೆ.

ತನ್ನ ತುಟಿಗಳ ಮಧ್ಯೆ ಇರುವ ಸಿಗರೇಟಿನ ಹೊಗೆ ಕುಡೀತಾ ಇಲ್ಲ; ಹೊಲಸು ಚರಂಡಿಯ ಕೊಳಕು ನೀರು ಕುಡಿಯುತ್ತಿದ್ದೇನೆ ಎನಿಸಿತು ಭೀಕೂಗೆ.

ಒಮ್ಮೆಲೇ ವಾಕರಿಕೆ ಉಮ್ಮಳಿಸಿ ಬಂದಂತಾಗಿ ಅಪಾದ್ಲಿ ಕಳ್ಳಭಟ್ಟಿ ಸರಾಯಿ, ಕೊಳೆತ ಮೀನಿನ ವಾಸನೆ ಬಂತು. ಹೊಟ್ಟೆಯೊಳಗಿನ ಕರುಳು ಕಿವಿಚಿದಂತಾಗಿ ಕರುಳೇ ಹೊರಗೆ ಬರ್ತಾ ಇದೆ ಎನ್ನಿಸಿತು. ನೀಲಾಳ ಬತ್ತಲೆ ದೇಹ ಕೋಣೆಯ ತುಂಬಾ ತಿರುಗುತ್ತಿದೆ ಎನಿಸಿತು. ಮತ್ತೊಮ್ಮೆ ವಾಂತಿ ಉಮ್ಮಳಿಸಿ ಹೊಟ್ಟೆಯೊಳಗಿದ್ದ ಕೊಳೆತ ಮೀನು, ಸರಾಯಿ, ಚರಂಡಿಯ ಕೊಳಕು ನೀರು ಎಲ್ಲಾ ಆತನ ಬಾಯಿಂದ ಹೊರಚಿಮ್ಮಿ ರೂಮಿನ ತುಂಬಾ ಹರಡಿ-ಕೊಂಡಿತು.

"ಅರೆರೆ !" ನೀಲಾ ಒದರಿದಳು, "ನೀನು ರೂಮನ್ನೆಲ್ಲಾ ಹೊಲಸು ಮಾಡಿಬಿಟ್ಟೆ. ನಡಿ, ಇಲ್ಲಿಂದ ಹೊರಗೆ ಸಾಗು."

ಭೀಕೂಗೆ ಈ ದಿನ ತನ್ನ ಹೊಟ್ಟೆಯೊಳಗಿನ ಹೊಲಸಿನೊಡನೆ ಮನಸ್ಸಿನ ಕಶ್ಮಲವೆಲ್ಲಾ ಹೊರಹೋಗಿದೆ ಎನಿಸಿತು. ಈಗ ಆತನ ತಲೆ ಸುತ್ತುತ್ತಿರಲಿಲ್ಲ. ಆತ ಎದ್ದು ಸಮಾಧಾನ-ದಿಂದಲೇ ಆ ಹೊಲಸಿನ ಮಧ್ಯೆ ದಾರಿ ಮಾಡಿ-ಕೊಂಡು ಹೊರಗೆ ಹೋದ.

ಆ ರಾತ್ರಿ ಭೀಕೂ ನಳದ ಬಳಿ ಹೋಗಿ ಸಾಬೂನಿನಿಂದ ಮೈ ಉಜ್ಜಿಕೊಂಡು ಸ್ವಚ್ಛವಾಗಿ ಸ್ನಾನ ಮಾಡಿ, ಶುಭ್ರ ವಸನಧಾರಿಯಾಗಿ, ಬಾಲೋ ಇರುತ್ತಿದ್ದ ಫುಟ್‌ಪಾತಿನೆಡೆ ಸಾಗಿದ.

"ಬಾಲೋ, ಸಿನಿಮಾ ನೋಡಲು ಬರ್ತೀಯಾ ?"

ಬಾಲೋ, ತಲೆಯೆತ್ತಿ ಭೀಕೂನನ್ನೊಮ್ಮೆ ನೋಡಿ, "ಒಂದು ಶರತ್ತಿನ ಮೇಲೆ," ಅಂದಳು.

"ನಿನ್ನ ಶರತ್ತಿಗೆ ಒಪ್ಪಿದ್ದೇನೆ; ಮೊದಲಿನಂತೆ ಮಾಡೋಲ್ಲ."

ಆ ದಿನ ಭೀಕೂ, ಮೊಟ್ಟ ಮೊದಲ ಬಾರಿಗೆ ಆನಂದತುಂದಿಲನಾದ.

ಹಿಂದಿರುಗುವಾಗ ರಾತ್ರಿ ಒಂದು ಗಂಟೆ-ಯಾಗಿತ್ತು. ಇಡೀ ನಗರವೇ ನಿಶ್ಶಬ್ದ-ವಾಗಿತ್ತು. ಆದರೂ ಒಂದೋ ಎರಡೋ ವಾಹನಗಳು ರಸ್ತೆಯಲ್ಲಿ ಮೇಲೆ ಓಡಾಡುತ್ತಿ-ದ್ದವು. ನಿಯೋನ್‌ಸೈನ್ ತನ್ನ ಕಣ್ಣು ಮಿಟುಕಿಸುತ್ತಿತ್ತು. ಕಾಜಿನ ತೆರೆಯ ಹಿಂದಿನ ಅಂಗಡಿಗಳು ಝಗಝಗಿಸುತ್ತಿದ್ದುವು. ತಮ್ಮಿ-ಬ್ಬರಿಗಾಗಿಯೇ ನಗರ ಶೃಂಗಾರವಾಗಿದ್ದಂತೆ ತೋರಿತು. ಹಾದಿ ಸವೆಸುತ್ತ ಭೀಕೂ ಕೇಳಿದ: "ಬಾಲೋ, ನನ್ನನ್ನ ಲಗ್ನವಾಗುತ್ತೀಯಾ?"

"ನಾನೀಗ ವಿವಾಹಕ್ಕೆ ಯೋಗ್ಯಳಾಗಿಲ್ಲ."

"ಏಕೆ ?"

"ಮೂರು ತಿಂಗಳಾಯ್ತು. ನಾನು ಫುಟ್-ಪಾತ್ ಮೇಲೆ ವಾಸಿಸ್ತೇನೆ. ಅಲ್ಲಿಯೇ ಮಲಗಿ-ಕೊಳ್ತೇನೆ. ಅಲ್ಲಿ ಪಾಪದ ಬಾಗಿಲು ಮುಚ್ಚಿರು-ವುದಿಲ್ಲ."

"ಬಾಲೋ, ನನಗೆ ಕೂಡ ಬಹಳ ದಿನಗಳಿಂದ ಚರಂಡಿ ನೀರು ಕುಡಿದು ಅಭ್ಯಾಸವಾಗಿದೆ, ಇದಕ್ಕೇನಂತಿಯಾ ?" ಭೀಕು ಬಡಾಯಿ ಕೊಚ್ಚಿ-ಕೊಳ್ಳದೆ ವಸ್ತುಸ್ಥಿತಿ ಹೇಳಿದ್ದ.

"ನಾಳೆ ಹೇಳ್ತೀನಿ. ಈಗ ನನ್ನ ಫುಟ್‌ಪಾತ್ ಬಂತು. ನಿನ್ನ ಹಾದಿ ಹಿಡಿ. ಭೀಕೂ, ರಾತ್ರಿ ನೀನೂ ಈ ಬಗ್ಗೆ ಮತ್ತೊಮ್ಮೆ ವಿಚಾರ ಮಾಡು."

ಮರುದಿನ ಮತ್ತೆ ಭೇಟಿಯಾಗಲು ನಿರ್ಧರಿಸಿ

ಹಿಂದಿರುಗುವಾಗ ಭೀಕೂನ ಕಾಲುಗಳು ಬಹಳ ಹಗುರಾಗಿ ಆಕಾಶದಲ್ಲಿ ಓಲಾಡುತ್ತಿರುವ ಹಾಗೆ ನಡಿಯುತ್ತಿದ್ದ. ತಣ್ಣನೆ ಗಾಳಿ ಮನಸ್ಸನ್ನು ಮತ್ತಷ್ಟು ಸಂತೋಷಚಿತ್ತನಾಗಿರಲು ಸಹಾಯ ಮಾಡಿತು. ಜಗತ್ತಿನ ತುಂಬೆಲ್ಲ ಈ ದಿನ ಹೂಗಳೇ ಹೂಗಳು ಕಾಣಿಸುತ್ತಿದ್ದವು ಭೀಕೂಗೆ.

ಮರುದಿನ ಭೇಟಿಯಾದಾಗ ಭೀಕೂ ಹಿಂದಿನ ದಿನದ ಪ್ರಶ್ನೆಯನ್ನೇ ಹಾಕಿದ.

"ಬಾಲೋ ನನ್ನೊಡನೆ ವಿವಾಹವಾಗ್ತಿಯಾ?"

"ನಾನು ಕೂಡ ಒಂದು ಕರಾರು ಹಾಕ್ತೇನೆ."

"ಹಾಕು ಹಾಕು, ಏನು ಕರಾರು ನಿನ್ನದು?"

"ಕಳವು, ಮೋಸ ಮುಂತಾದ ಕೆಟ್ಟ ಚಟ ಬಿಡಬೇಕು."

"ಬಾಲೋ, ಈ ಎಲ್ಲ ಬಿಟ್ಟರೆ ನಾನು ನೀನೂ ಹೊಟ್ಟೆಗೇನು ತಿನ್ನಬೇಕು? ಮನೆ ಬಾಡಿಗೆ ಹೇಗೆ ಕೊಡಬೇಕು.? ನೌಕರಿಯಂತೂ ಇದಕ್ಕೂ ಮೊದಲೇ ಸಿಕ್ಕಿಲ್ಲ. ಈಗಂತೂ ಎರಡು ಸಲ ಜೈಲು ಕಂಡುಬಂದಿರುವಾಗ ನನಗೆ ನೌಕರಿ ಕೊಡುವವರಾದರೂ ಯಾರು?"

"ಮನಸ್ಸಿದ್ದಲ್ಲಿ ಮಹಾದೇವ. ಮನಸ್ಸು ಮಾಡಿದರೆ ಬೇರೆ ಏನಾದರೂ ಮಾಡಿ ಬದುಕಬಹುದು."

"ನೀನೇ ಹೇಳು ಬಾಲೋ, ನನಗೆ ಏನು ಮಾಡು ಅಂತೀಯಾ?"

ರಸ್ತೆ ಮೇಲೆ ಖಟರಾ ಗಾಡಿಯನ್ನು ದಬ್ಬಿಕೊಂಡು ಸಾಗುತ್ತಿದ್ದ ವ್ಯಕ್ತಿಯೊಬ್ಬ ತನ್ನ ಖಟರಾ ಗಾಡಿ ನಿಲ್ಲಿಸಿ ಸಮೀಪದ ಕಸದ ತೊಟ್ಟಿಯ ಬಳಿ ಬಂದು ಅವರ ಮಧ್ಯೆ ಕೈ ಹಾಕಿ, ಅದರಿಂದ ಖಾಲಿ ತಗಡಿನ ಡಬ್ಬಿ ಇನ್ನಿತರ ವಸ್ತುಗಳನ್ನು ತೆಗೆದುಕೊಂಡು ತನ್ನ ಕೈಗಾಡಿಗೆ ತುಂಬಿಸುತ್ತಿದ್ದ. ಒಂದು ಕ್ಷಣ ಕಣ್ಣು ಮಿಟುಕಿಸದೆ ನೋಡುತ್ತಿದ್ದ ಬಾಲೋ ಮನದಲ್ಲೇನೋ ನಿರ್ಧರಿಸಿದಳು. ಅವನನ್ನು ಭೀಕೂಗೆ ತೋರಿಸುತ್ತಾ ಹೇಳಿದಳು: "ಆ ಮನುಷ್ಯ ಮಾಡುತ್ತಿರೋ ಕೆಲಸ ನೀನೂ ಮಾಡಬಹುದಲ್ಲ."

"ನೀ ಹೇಳಿದ ಮೇಲೆ ಅದನ್ನೂ ಮಾಡ್ತೇನೆ. ಆದರೆ ನೀನು ನನ್ನ ಜೊತೆಗಿರಬೇಕು."

ಬಾಲೋ ನಾಚಿಕೆಯಿಂದ ತಲೆ ತಗ್ಗಿಸಿದಳು.

ಖಟರಾ ಗಾಡಿಯ ಪೂರನೆಯ ಸಣ್ಣ ಗಾಲಿ, ಮನ್ನು; ಭೀಕೂ ಯೋಚಿಸಿದ.

'ಮನ್ನು ನಮ್ಮ ಮಗುವೋ? ಇಲ್ಲ-ಕೇವಲ ಬಾಲೋಳ ಮಗುವೊ?'

ಭೀಕು ತನ್ನ ಮನಸ್ಸಿನಲ್ಲಿಯೇ ಮಾಡಿಕೊಂಡ ಪ್ರಶ್ನೆಗೆ ಹೃದಯ ಉತ್ತರ ಕೊಟ್ಟಿತು.

'ಪಂಡಿತ ಮಂತ್ರ ಪಠಿಸಿ ವಿವಾಹ ಮಾಡದಿದ್ದರೇನಾಯಿತು? ಬಾಲೋ ನನ್ನಾಕೆ. ಪವಿತ್ರ ಅಗ್ನಿಸಾಕ್ಷಿಯಾಗಿ ಸಪ್ತಪದಿ ತುಳಿಯದಿದ್ದರೇನಾಯಿತು? ಜೀವನದ ಈ ಜ್ವಾಲೆಯಲ್ಲಿ ಜೋಡಿಯಾಗಿ ಹಾರಿದ್ದೇವೆ. ಮನ್ನು ನನ್ನ ಪ್ರೀತಿಯ ಬಾಲೋಳ ಗರ್ಭದಲ್ಲಿ ಜನಿಸಿದ ಮೇಲೆ ನನ್ನ ಮಗುವೇ ಅಲ್ಲವೆ? ಮನ್ನು ನನ್ನ ಮಗು ಅಲ್ಲವೆಂದು ಬಾಲೋಳಿಗೂ ಗೊತ್ತಿದೆ, ನನಗೂ ಗೊತ್ತಿದೆ. ಆದರೆ ಜಗತ್ತಿನ ಯಾವ ಶಕ್ತಿಯೂ ನನ್ನನ್ನು ಮನ್ನೂನಿಂದ ವಿಮುಖನಾಗಿಸಲಾರದು. ಹೇಗೂ ಈ ದಿನ ಮನ್ನುವಿನ ಹುಟ್ಟಿದ ದಿನ.'

ಆದ್ದರಿಂದಲೆ ಭೀಕು ಈ ದಿನ ಆದಷ್ಟು ಹೆಚ್ಚು ಕಸದ ತೊಟ್ಟಿಯಿಂದ ಹೆಚ್ಚು ಸಾಮಾನುಗಳನ್ನು ಹುಡುಕಿ ಹುಡುಕಿ ತನ್ನ ಗಾಡಿ ತುಂಬಿಸುತ್ತಿದ್ದ. ಇಂದು ಏನಿಲ್ಲೆಂದರೂ ಸೇಠನಿಂದ ಹತ್ತು ರೂಪಾಯಿಯಾದರೂ ಗಿಟ್ಟಿಸಬೇಕು ಎಂದು ಕೊಂಡು ಐದು ರೂಪಾಯಿ ತನ್ನ ಬಳಿ ಮೊದಲೆ ಕಾಯ್ದಿಟ್ಟುಕೊಂಡಿದ್ದ. ಹದಿನೈದರಲ್ಲಿ ಐದು ರೂಪಾಯಿಯ ಮಿಠಾಯಿ ಕೊಂಡುಕೊಳ್ಳಬೇಕು; ನೆರೆಹೊರೆಯವರಿಗೆಲ್ಲ ಹಂಚಬೇಕು. ಮನ್ನುವಿನ ಬಟ್ಟೆ, ಆಟಿಗೆ ಸಾಮಾನಿಗಾಗಿ ಐದು ರೂಪಾಯಿ. ಮನ್ನುವಿನ ಹುಟ್ಟಿದ ಹಬ್ಬದ ಕಾರಣ ಈ ದಿನ ಉಳಿದ ರೂಪಾಯಿಗಳಲ್ಲಿ ಬಾಲೋಳೊಡನೆ ಸಿನೇಮಾಕ್ಕೆ ಹೋಗಿ ಮಜಾ ಮಾಡಬೇಕು ಎಂದುಕೊಂಡ.

ಆದರೆ ಒಂದೂವರೆ ವರ್ಷದ ಹಿಂದೆ ಬಾಲೋ ತಾಯಿಯಾಗಲಿರುವಳೆಂದು ತಿಳಿದಾಗ ಸಂತೋಷವಾಗಿರಲಿಲ್ಲ. ಆ ದಿನ ನೆನೆಸಿಕೊಂಡರೆ ಈಗಲೂ ಮೈಮೇಲೆ ಮುಳ್ಳು ಏಳುತ್ತವೆ.

ಬಾಲೋ ಮತ್ತು ಭೀಕೂ ಜೊತೆಯಾಗಿ ಇನ್ನೂ ಮೂರೇ ದಿನಗಳಾಗಿದ್ದವು. ಇಬ್ಬರೂ

ಕೂದಲು ಗುಡಿಸಲು ಹಾಕಿಕೊಳ್ಳುತ್ತಿರುವಾಗ ಬಾಲೋ ಒಮ್ಮಿಂದೊಮ್ಮೆಲೆ ಕೆಳಗೆ ಬಿದ್ದು ಮೂರ್ಛಿತಳಾಗಿದ್ದಳು. ಭೀಕೂ ಹುಚ್ಚನಂತೆ ಓಡುತ್ತಾಹೋಗಿ ಕುರ್ಲಾದಿಂದ ಡಾಕ್ಟರನನ್ನು ಕರೆದುಕೊಂಡು ಬಂದಿದ್ದ. ಬಾಲೋಳನ್ನು ನೋಡಿದ ಡಾಕ್ಟರ್ ಭೀಕೂನಿಗೆ ಉತ್ಸಾಹದಿಂದ ಹೇಳಿದ್ದ: "ಭಯಪಡುವ ಕಾರಣವಿಲ್ಲ. ಸ್ವಲ್ಪ ಹೊತ್ತಿನಲ್ಲೇ ಹುಷಾರಾಗ್ತಾಳೆ. ನಿನ್ನ ಹೆಂಡತಿ ತಾಯಿಯಾಗಲಿದ್ದಾಳೆ.."

ಡಾಕ್ಟರ್ ತನ್ನ ಫೀಸ್ ತೆಗೆದುಕೊಂಡು ಹೋಗಿದ್ದ. ಭೀಕೂನ ಮನಸ್ಸು ಸ್ಥಿಮಿತದಲ್ಲಿರಲಿಲ್ಲ. 'ಹೀಗೆ ಆಗಲು ಸಾಧ್ಯವಿಲ್ಲ.' 'ಅದ್ಹೇಗೆ ಸಾಧ್ಯ?' ಸುತ್ತಿಗೆಯ ಪೆಟ್ಟಿನಂತೆ ಬೀಳುತ್ತಿತ್ತು ಈ ಆಘಾತ. 'ನಾವು ಜೊತೆಯಾಗಿರಲು ಮೊದಲು ಮಾಡಿ ಇನ್ನೂ ಮೂರು ದಿವಸಗಳೂ ಆಗಿಲ್ಲ!'

'ಏನಾಯಿತು? ಹೇಗೆ ಆಯಿತು? ಹೀಗೆ ಆಗಲು ಅದ್ಹೇಗೆ ಸಾಧ್ಯ?'

ಬಾಲೋ ಎಚ್ಚತ್ತ ಮೇಲೆ ಕೇಳಿದಳು, "ನನಗೆ ಏನಾಗಿತ್ತು ಭೀಕೂ?"

ಬಾಲೋ ತಾಯಿಯಾಗಲಿರುವ ಸುದ್ದಿ ತಿಳಿಸಿದ ಭೀಕು.

ಬಾಲೋಳ ಮುಖ ಕಪ್ಪಿಟ್ಟಿತು. "ಹೇ, ದೇವರೇ ಇದೇನು ಮಾಡಿದೆ?" ಎಂದು ನರಳಿದಳು.

"ದೇವರಿಗೇಕೆ ತಪ್ಪು ಹೊರಿಸ್ತೀಯಾ? ಆ ನೀಚನ್ನ ನೆನಪಿಸು. ಯಾವ ನೀಚನ ಬೀಜ ನಿನ್ನ ಹೊಟ್ಟೆಯೊಳಗೆ ಬೆಳೀತಾ ಇದೆ? ಹೇಳು ಆ ನೀಚ ಯಾರು?" ಹಲ್ಲು ಕಡಿಯುತ್ತ ಭೀಕು ಘುಡುಘುಡಿಸಿದ.

"............"

ಫಳೀರನೆ ಒಂದೇಟು ಬಿಗಿದ ಬಾಲೋಳ ಕೆನ್ನೆಗೆ. "ಹೇಳು ಅವನಾರು?" ಮತ್ತೆ ಹೊಡೆತ ಬಿತ್ತು. ಒಂದು, ಎರಡು, ಮೂರು ನಾಲ್ಕು, ಐದು. ನಂತರ ಹೊಡೆತಗಳ ಸುರಿಮಳೆ.

"ಹೊಡಿ! ಹೊಡಿ! ಚೆನ್ನಾಗಿ ಹೊಡಿ! ಬಾಲೋ ಅಳುತ್ತಲೇ ಹೇಳಿದಳು, "ನನ್ನನ್ನು ಕೊಂದು ಹಾಕು ಭೀಕು. ನಾನು ಪಾಪ ಮಾಡಿದ್ದೀನಿ. ನನಗೆ ಇದರ ಶಿಕ್ಷೆ ಸಿಗಬೇಕು. ಅವರೆ ನಾನಂತೂ ಈ ಮೊದಲೇ ಹೇಳಿದ್ದೆ ನಾನು ವಿವಾಹಕ್ಕೆ ಲಾಯಕ್ಕಿಲ್ಲ; ಫುಟ್‌ಪಾತಿನ ಮೇಲೆ ಪಾಪದ ಬಾಗಿಲು ಯಾವಾಗಲೂ ಮುಚ್ಚಿರುವುದಿಲ್ಲ ಅಂತ. ನೆನಪಿಗೆ ಬಾರದಿದ್ರೆ ನನ್ನ ಕೊಂದು ಹಾಕಿಬಿಡು ಭೀಕು, ಸಂತೋಷದಿಂದ ಸಾಯ್ತೇನೆ."

ಭೀಕು. ಹೊಡೆಯುವುದನ್ನು ಬಿಟ್ಟು ಹೊರಗೆ ಹೋದ. ಬಹಳ ದಿನಗಳ ನಂತರ ಆ ದಿನ ಸರಾಯಿ ಕುಡಿದ. ಸಾರಾಯಿಯಂಗಡಿಯಲ್ಲೂ ನೆಮ್ಮದಿ ಸಿಗದಾಗ ಅಲ್ಲಿಂದ ಕಾಲು ಕಿತ್ತ. ಎಷ್ಟೋ ಹೊತ್ತಿನ ವರೆಗೆ ರಸ್ತೆಯ ಮೇಲೆ ಸಾಗುತ್ತಲೇ ಇದ್ದ. ಚಳಿಗಾಲದ ರಾತ್ರಿಯ ಪರಿವೆಯೇ ಇರಲಿಲ್ಲ. ಮಾಹಿಮ್‌ನ ಕೂಡು ರಸ್ತೆಯ ಬಳಿ ಒಂದು ಕಡೆ ಹೆಚ್ಚು ವಿದ್ಯುದ್ದೀಪಗಳು ಬೆಳಗುತ್ತಿದ್ದುವು. ಅಲ್ಲಿ ಜನರ ಗದ್ದಲವೂ ಹೆಚ್ಚಾಗಿತ್ತು. ಅದೊಂದು ಚರ್ಚ್. ಭೀಕು ಚರ್ಚಿನೊಳಗೆ ಪ್ರವೇಶಿಸಿದ. ಒಳಗೆ ಬೆಚ್ಚಗೆನಿಸಿ ನಿಂತುಕೊಂಡ. ಚರ್ಚಿನ ಒಳಗೆ ಬಹಳಷ್ಟು ಜನ ಕ್ರಿಶ್ಚಿಯನ್ನರು ಮಂಡಿಯೂರಿ ಕುಳಿತುಕೊಂಡು ಕೈ ಜೋಡಿಸಿದ್ದರು. ಭೀಕುವೂ ಅವರ ಹಾಗೆಯೇ ಮಂಡಿಯೂರಿ ಕೈ ಜೋಡಿಸಿದ. ಸುತ್ತ ಮುತ್ತ ಕೆಲವಾರು ಮೂರ್ತಿಗಳು; ಒಬ್ಬ ತರುಣ; ಸುಂದರ ಮುಖದ ಮೇಲೆ ಕೋಮಲವಾದ ಗಡ್ಡ. ಆತನನ್ನು ಯಾರೋ ನೀಚರು ಶಿಲುಬೆಗೆ ಏರಿಸಿದ್ದರು. ಒಂದು ಹೆಣ್ಣಿನ ಎಷ್ಟೋ ಮೂರ್ತಿಗಳಿದ್ದವು. ಆಕೆಯ ಮುಖದ ಮೇಲೆ ಅಮಾಯಕತೆ. ಮಮತೆಯೇ ಮೈವೆತ್ತಿ ಕೊಂಡಂತೆ ಆಕೆಯ ಭಾವ. ಮಡಿಲಲ್ಲಿ ಒಂದು ಮಗು. ಆ ಮೂರ್ತಿಯನ್ನು ನೋಡಿದ ಭೀಕೂಗೆ ತಾಯಿಯ ನೆನಪಾಯಿತು.

"ಈ ಹೆಣ್ಣು ಮಗಳು ಯಾರು?" ಆ ಮೂರ್ತಿಯೆಡೆ ಕೈತೋರಿಸಿ ಒಬ್ಬಾತನನ್ನು ಕೇಳಿದ. ಅವ, ಈಕೆ ಮಾತೆ ಮೇರಿಯಮ್ಮಾ. ಆಕೆಯ ಮಡಿಲಲ್ಲಿರುವ ಮಗು ಏಸು ಕ್ರಿಸ್ತನೆಂದೂ ಹೇಳಿದ ಮೆಲುದನಿಯಲ್ಲಿ.

"ಈ ಮಗುವಿನ ತಂದೆ?"

"ಈತನಿಗೆ ತಂದೆಯಿಲ್ಲ, ದೇವರೇ ಇವನ ತಂದೆ."

"ತಂದೆಯಿಲ್ಲದ ಮಗುವಿಗೆ ದೇವರೇ ತಂದೆಯಾಗುತ್ತಾನೆ." ಭೀಕೂನ ಕಿವಿಯಲ್ಲಿ ಯಾರೋ ಹೇಳಿದ ಹಾಗೆ ಆಯಿತು. ಬಾಲೋಳಿಗೆ ಹುಟ್ಟಿರುವ ಮಗುವಿಗೂ ತಂದೆಯಿಲ್ಲ. ಅಂದರೆ... ಭೀಕುವಿನ ಮನದಲ್ಲಿಯ ಬಿರುಗಾಳಿ ಅಡಗಿ ಮಂದಮಾರುತ ಬೀಸತೊಡಗಿತು. ಮನ ಹಗುರಾಯಿತು. ನಿಶೆಯಿಳಿದು, 'ನಾನು ಬಾಲೋಳನ್ನು ನಿಂದಿಸಿದೆನೆ ? ಹೊಡೆದೆನೆ ? ನನ್ನ ಜೀವಕ್ಕಿಂತ ಹೆಚ್ಚು ಪ್ರೀತಿಸುತ್ತಿರುವ ಬಾಲೋಳನ್ನು ನಾನು ನೋಯಿಸಿದೆನೆ ? ಇಲ್ಲ; ಆ ಭೀಕು ಬೇರೆಯೇ...' ಬಾಲೋಳನ್ನು ಸಂತೈಸುವುದಕ್ಕಾಗಿ ಭೀಕು ಒಂದೇ ಸವನೆ ಓಡತೊಡಗಿದ.

ಭೀಕು ಹಿಂದಿರುಗಿದಾಗ ಗುಡಿಸಲಲ್ಲಿ ಕಂದೀಲು ಉರಿಯುತ್ತಿತ್ತು. ಬಾಲೋ ಅಡಿಗೆ ಮಾಡಿ ಇಟ್ಟಿದ್ದಳು. ಬಾಗಿಲಲ್ಲಿ ಕಾಲು ತೊಳೆದು ಕೊಳ್ಳಲು ನೀರನ್ನು ಇಟ್ಟಿದ್ದಳು.

ಅವನನ್ನು ನೋಡಿ ಬಾಲೋ, "ಕಾಲ್ತೊಳೆದುಕೋ. ಊಟಕ್ಕೆ ಹಾಕ್ತೀನೆ," ಎಂದಳು.

"ನೀನು ಊಟ ಮಾಡಿದೆಯಾ?"

"ಮನೆ ಯಜಮಾನನನ್ನು ಬಿಟ್ಟು ನಾನು ಮೊದಲು ಊಟ ಮಾಡೋದೆ ?"

ಭೀಕೂನ ಕಣ್ಣಿನಿಂದ ಎರಡು ಹನಿ ನೀರು ಉದುರಿತು. ಹೃದಯ ಬಾಯಿಗೆ ಬಂತು. 'ನನ್ನ ಬಾಲೋ. ಅದೆಷ್ಟು ಒಳ್ಳೆಯವಳು ! ನಾನೆಷ್ಟು ಭಾಗ್ಯಶಾಲಿ !' ಕೈ ತೊಳೆದುಕೊಳ್ಳುತ್ತಾ ಹುಸಿ ಕೋಪದಿಂದ, "ನೀನೂ ಕೈ ತೊಳೆದುಕೊ. ಇವತ್ತು ಇಬ್ಬರೂ ಒಟ್ಟಿಗೇನೇ ಊಟ ಮಾಡುವಾ."

ಈಗ ಇಬ್ಬರೂ ಒಟ್ಟಿಗೆ ಊಟಕ್ಕೆ ಕುಳಿತರು. ಊಟದ ಮಧ್ಯೆ ಭೀಕು ಒಂದು ತುತ್ತನ್ನು ಬಾಲೋಳ ಬಾಯಿಗಿಡುತ್ತಾ, "ನೀ ತಾಯಿಯಾಗಲಿದ್ದೀಯಾ, ನಾನು ಕಾಳಜಿಯಿಂದ ನಿನ್ನನ್ನು ನೋಡಿಕೊಳ್ಳಬೇಕು ಅಲ್ಲವೇ?" ಎಂದ.


ಬಾಲೋ ನಾಚುತ್ತಾ ದೃಷ್ಟಿ ಕೆಳಗೆ ಮಾಡಿದಳು.

ಮತ್ತೊಂದು ತುತ್ತು ಬಾಲೋಳ ಬಾಯಲ್ಲಿ ತುರುಕುತ್ತ ಹೇಳಿದ, "ಏಕೆ ನಾಚ್ತೀಯೇ ಕಳ್ಳಿ, ನೀ ತಾಯಿಯಾಗುವಾಕೆಯಾದರೆ ನಾನು ತಂದೆಯಾಗುವಾತ. ನಾನೇನೂ ನಿನಗಿಂತ ಕಡಿಮೆಯಿಲ್ಲ ತಿಳಿಯಿತೆ !"

ಭೀಕುವಿನ ಔದಾರ್ಯ ಕಂಡು ಅವಳ ಹೃದಯ ತುಂಬಿ ಬಂತು. ಆಕೆಯ ಕಣ್ಣಿಂದ ಎರಡು ಹನಿ ಮುತ್ತುಗಳು ಉದುರಿದವು.

*

ಮುಂದೆ ಏಳು ತಿಂಗಳುಗಳ ನಂತರ ನಂತರ ಬಾಲೋ ಗಂಡು ಮಗುವಿನ ತಾಯಿಯಾದಳು. ಆದರೆ ಆಕೆಗೇನೋ ಗಂಡನನ್ನು ನೆನೆದಾಗ ಮನಸ್ಸಿನ ಮೂಲೆಯಲ್ಲಿ ಒಂದು ಬಗೆಯ ಆತಂಕ ಚುಚ್ಚುತ್ತಿತ್ತು. ಉತ್ಸಾಹದಿಂದ ಒಳಬಂದ ಭೀಕು ಹೆಂಡತಿಯ ಬದಿಗೆ ಮಲಗಿದ್ದ ಮಗುವಿಗೆ ಮೆಲ್ಲನೆ ಮೆತ್ತಗೆ ಮುತ್ತನಿತ್ತು, "ನಮ್ಮ ಗಾಡಿಗಿದು ಮೂರನೇ ಗಾಲಿ, ಮುಂದಿನ ಗಾಲಿ !" ಎಂದ. ✡



ಹಣ ಗಳಿಸಲು ಯತ್ನಿಸು, ಅದನ್ನು ಹೇಗಾದರೂ ಮಾಡಿಕೊಳ್ಳಲು ಮಾತ್ರ ಪ್ರಯತ್ನಪಡಬೇಡ.

-ಲೇವಿ ವಿತ ನಿತ್ಜ

ಪುರುಷನು ದುರ್ಬಲನಾಗತೊಡಗಿದಂತೆ ಅಬಲೆಯೂ ಸಬಲೆಯಾಗುತ್ತಾಳೆ.

-ಮರಿಲಿನ್ ರೋಸ್ಕಿನ್

ಇದು ಜಗತ್ತಿನ ಅತಿ ಭಯಂಕರ
ಮಾದಕ ವಸ್ತುವಿನ ಮೂಲ. ಆದರೆ...

ಗಸಗಸೆ ಮೃತ್ಯುಪುಷ್ಪವೆ?

ಮೂಲ : ಸೋಹೆಲ್ ಚಾವ್ಲಾ
ಕನ್ನಡಕ್ಕೆ : ರಾಖಿ

ಏಷ್ಯ ಪ್ರದೇಶದಲ್ಲಿ ವಸಂತಕಾಲ. ಪೇಶಾವರ್‌ಗೆ ನಿಮ್ಮನ್ನು ಕರೆದೊಯ್ಯುವ ರಸ್ತೆಯು ಬಿಳಿ ಮತ್ತು ಗುಲಾಬಿ ಬಣ್ಣದ ಗಸಗಸೆ ಹೂಗಳಿಂದ ತುಂಬಿದ ಹೊಲಗಳ ನಡುವೆ ಹಾದು ಹೋಗುತ್ತದೆ. ಎಲ್ಲೆಲ್ಲೂ ಶಾಂತಿ, ಸೌಂದರ್ಯ ಮನಸೆಳೆಯುವ ಈ ದೃಶ್ಯ ಬಲು ಚೇತೋಹಾರಿ. ಆದರೆ ಅದೇ ಹೊತ್ತಿಗೆ, ಈ ಶಾಂತ ಸೌಂದರ್ಯದ ತಳದಲ್ಲಿ ಅಡಗಿರುವ ವಿಕಾರವಾದ ವಾಸ್ತವಿಕತೆ ನಿಮ್ಮನ್ನು ಎಚ್ಚರಿಸುತ್ತದೆ, ದಿಙ್ಮೂಢ-ರನ್ನಾಗಿಸುತ್ತದೆ. ಇವೇ ಹೂಗಳೇ ಅಫೀಮನ್ನು ಉತ್ಪಾದಿಸಲಿವೆ. ಸಾವಿರಾರು ಎಳೆಯ ದೇಹಗಳು ಅದರಿಂದಾಗಿ ವ್ಯರ್ಥವಾಗಿ ನಶಿಸಿಹೋಗಲಿವೆ. ಸಾವಿರಾರು ಪ್ರತಿಭಾನ್ವಿತ ವ್ಯಕ್ತಿತ್ವಗಳು ಮಂದವಾಗಿ, ಮರಗಟ್ಟಿ ಹೋಗಲಿದ್ದಾರೆ. ಈ ವಿಷವನ್ನು ಜಗತ್ತಿನಾದ್ಯಂತ ಗುಟ್ಟಾಗಿ ಮಾರುವ ಪಾತಕಿಗಳು ಕೋಟ್ಯಾಧೀಶ-ರಾಗಲಿದ್ದಾರೆ!

ಇದಕ್ಕೆ ನಿಮ್ಮ ಪ್ರತಿಕ್ರಿಯೆ ಏನು? ಸುಂದರವಾಗಿ ಅರಳಿ ನಗು ಸೂಸುತ್ತಿರುವ ಹೂಗಳ ಸೌಂದರ್ಯಕ್ಕೆ ಮಾರುಹೋಗುತ್ತೀರಾ? ಅಥವಾ ಅವುಗಳ ಬುಡದ ಕಾಂಡಗಳಲ್ಲಿರುವ ವಿಷದ ನಂಜಿಗೆ ಭಯಪಟ್ಟು ಹೆದರುತ್ತೀರಾ? ಅದೇನಿದ್ದರೂ, ಒಂದು ವಿಷಯ ಮರೆಯಬೇಡಿ. ಇವುಗಳಿಂದ ಉತ್ಪತ್ತಿಯಾಗುವ

ಅಫೀಮು ನೋವು ನಿವಾರಿಸುವ ಔಷಧಿಗಳನ್ನು ತಯಾರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಮಾತ್ರವಲ್ಲ, ಅವರ ರಫ್ತಿನಿಂದಾಗಿ ಭಾರತಕ್ಕೆ ೫೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ವಾರ್ಷಿಕ ವಿದೇಶಿ ವಿನಿಮಯ ದೊರಕುತ್ತದೆ.

ಇದುವರೆಗೆ ಸಿಕ್ಕಿರುವ ಅತಿ ಹಳೆಯ ಪುರಾವೆಯ ಪ್ರಕಾರ, ಹನ್ನೊಂದನೆ ಶತಮಾನದಲ್ಲೇ ಭಾರತದಲ್ಲಿ ಗಸಗಸೆಯನ್ನು ಬೆಳೆಯುತಿದ್ದರು. ಆದರೂ ಗಣನೀಯ ಮಟ್ಟದಲ್ಲಿ ಅಫೀಮಿನ ಉತ್ಪಾದನೆ ಹಾಗೂ ಬಳಕೆ ಪ್ರಾರಂಭವಾದದ್ದು ೧೬ ನೇ ಶತಮಾನದ ಮೊಗಲ್ ಆಳ್ವಿಕೆಯ ಕಾಲದಲ್ಲಿ. ಈ ಏಕಸ್ವಾಮ್ಯವನ್ನು ಈಸ್ಟ್ ಇಂಡಿಯಾ ಕಂಪೆನಿಯು ಚೆನ್ನಾಗಿ ಉಪಯೋಗಿಸಿಕೊಂಡಿತು. ಅತ್ಯಧಿಕ ಲಾಭ ತರುತ್ತಿದ್ದ ನೀಲಿಯೊಂದಿಗೆ ಅಫೀಮೂ ಕಂಪೆನಿಯ ಭಂಡಾರಕ್ಕೆ ಹೇರಳ ಹಣ ತಂದಿತು. ಚೀನ ಅದರ ಪ್ರಮುಖ ಗಿರಾಕಿಯಾಗಿತ್ತು. ಆ ಕಾಲದಲ್ಲಿ ಗಸಗಸೆಯನ್ನು ಸಂಯುಕ್ತ ಪ್ರಾಂತಗಳು (ಉತ್ತರ ಪ್ರದೇಶ), ಮಧ್ಯ ಪ್ರಾಂತ (ಮಧ್ಯ ಪ್ರದೇಶ) ಮತ್ತು ಬಿಹಾರದಲ್ಲಿ ಬೆಳೆಯಲಾಗುತ್ತಿತ್ತು. ಇಂದು ಬಿಹಾರದ ಸ್ಥಾನವನ್ನು ರಾಜಸ್ಥಾನ ಆಕ್ರಮಿಸಿಕೊಂಡಿದೆ. ಅದರೊಂದಿಗೆ, ಮಧ್ಯ ಪ್ರದೇಶವೂ ಪ್ರಮುಖ ಅಫೀಮು ಉತ್ಪಾದಕ ರಾಜ್ಯವೆನಿಸಿಕೊಂಡಿದೆ. ಉತ್ತರ ಪ್ರದೇಶವೂ ಅಲ್ಪ ಪ್ರಮಾಣದಲ್ಲಿ ಬೆಳೆಯುತ್ತದೆ. ಅಫೀಮು ಬೆಳೆಯುವ ಪ್ರದೇಶಗಳು ಕೇಂದ್ರ ಅರ್ಥಖಾತೆಯಿಂದ ಲೈಸೆನ್ಸ್ ಪಡೆಯಬೇಕಾಗಿದ್ದರೂ, ಸಂಬಂಧಿಸಿದ ರಾಜ್ಯ ಸರಕಾರಗಳು ಕೇಂದ್ರ ಸರಕಾರದಿಂದ ಖರೀದಿ ತೆರಿಗೆಯ ಶೇಕಡಾ ೫೦ರಷ್ಟನ್ನು ಪಡೆಯುತ್ತವೆ. (ಇವುಗಳಲ್ಲೊಂದು ರಾಜ್ಯವು ಈ ಪಾಲನ್ನು ೧೦೦%ಕ್ಕೆ ಏರಿಸಬೇಕೆಂದೂ ಸಲಹೆ ಮಾಡಿದೆ.) ಇದಕ್ಕೆ ಬದಲಾಗಿ, ರಾಜ್ಯ ಸರಕಾರಗಳು ಅಫೀಮು ಬೆಳೆಗೆ ತಮ್ಮ ವ್ಯವಸಾಯ ವಿಭಾಗದ ತಾಂತ್ರಿಕ ಸೇವೆಯನ್ನೂ ರಕ್ಷಣಾ ಸಿಬ್ಬಂದಿಯನ್ನೂ ಒದಗಿಸುತ್ತವೆ.

೧೯೭೫–೭೬ ರಲ್ಲಿ ಈ ಮೂರು ರಾಜ್ಯಗಳು ಉತ್ಪಾದಿಸಿದ ಅಫೀಮಿನ ಪ್ರಮಾಣ (ಬೆಳೆಯ ಕಟಾವು ಮಾರ್ಚ್–ಏಪ್ರಿಲ್‌ನಲ್ಲಾಗುತ್ತದೆ) ೧,೧೦೦ ಟನ್ನು (೯೦° ಸಾಂದ್ರತೆ)ಗಳೆಂದು ಅಂದಾಜು. ಇದು ೧೯೭೪–೭೫ ರಲ್ಲಿ ೧,೦೦೦ ಟನ್ ಆಗಿತ್ತು. ಭಾರತದಲ್ಲಿ ಪ್ರತಿ ಹೆಕ್ಟೇರಿಗೆ ಸರಾಸರಿ ೩೦ ಕಿಲೋಗ್ರಾಂ (೭೦° ಸಾಂದ್ರತೆ) ಅಫೀಮು ಸಿಗುತ್ತದೆ. ಸಾಮಾನ್ಯವಾಗಿ ಭಾರತೀಯ ಅಫೀಮಿನಲ್ಲಿ ೧೦%ರಷ್ಟು ಮಾರ್ಫಿನ್ ಅಂಶ ಇರುತ್ತದೆ. ತುಲನಾತ್ಮಕವಾಗಿ ನೋಡಿದರೆ ಹೆಕ್ಟೇರಿನ ಸರಾಸರಿ ಉತ್ಪತ್ತಿಯು ಬೇರೆಲ್ಲ ದೇಶಗಳಿಗಿಂತ ಭಾರತದಲ್ಲೇ ಅತಿ ಹೆಚ್ಚು. ಆದರೆ ಅದರಲ್ಲಿನ ಮಾರ್ಫಿನ್ ಅಂಶ ಮಾತ್ರ ತುಂಬ ಕಡಿಮೆ.

ಭಾರತದಲ್ಲಿ ಅಫೀಮು ವ್ಯವಸಾಯದ ರೀತಿ ನೀತಿಗಳು ಇನ್ನೂ ಪುರಾತನ ಕಾಲದವು. ಗಸಗಸೆ ಕಾಯಿಯ ಸುತ್ತ ಇರುವ ತೆಳು ಹೊದಿಕೆಯೊಳಗೆ ಅಫೀಮು ಇರುತ್ತದೆ. ಕಾಯಿಗಳನ್ನು ಬಿಸಿಲಿನಲ್ಲಿ ಚೆನ್ನಾಗಿ ಕಳಿತು ರಾತ್ರಿಯ ಇಬ್ಬನಿಯಲ್ಲಿ ನೆನೆಯುವಂತೆ ಬಿಡುತ್ತಾರೆ. ಈ ಹಂತದಲ್ಲಿ ಹವಾಮಾನದ ವ್ಯತ್ಯಾಸಗಳಿಗೆ ಬೆಳೆ ತುಂಬ ಸೂಕ್ಷ್ಮವಾಗಿರುತ್ತದೆ. ಒಂದು ಆಲಿಕಲ್ಲಿನ ಮಳೆ ಬಂದರೆ, ತುಂತುರು ಹನಿಯ ಮಳೆಯಾದರೆ, ಮೋಡ ಕವಿದರೆ ಇಲ್ಲವೆ ಸ್ವಲ್ಪ ಜೋರಾಗಿ ಗಾಳಿ ಬೀಸಿದರೂ ಇಡೀ ಬೆಳೆಯೇ ಚೇತರಿಸಿಕೊಳ್ಳಲಾರದಷ್ಟು ಘಾಸಿಗೊಂಡು ಬಿಡುತ್ತದೆ.

ಕಾಯಿಗಳು ಹಣ್ಣಾದೊಡನೆ, ಬುಡದಿಂದ ಮೇಲ್ಮುಖವಾಗಿ ಕಾಯಿಯ ಎರಡು ಮೂರು ಕಡೆ, ಕುಡಗೋಲಿನ ಆಕಾರದ ಪುಟಾಣಿ ಹರಿತ ಆಯುಧದಿಂದ ಗೀರು ಎಳೆಯುತ್ತಾರೆ. ಇವುಗಳಿಂದ ಒಂದು ರೀತಿಯ ಜಿಗುಟಾದ, ಕದು ಕಂದು ಬಣ್ಣದ ದ್ರವ (ಲೇಟೆಕ್ಸ್) ಹೊರಗೆ ಜಿನುಗುತ್ತದೆ. ಕೆಲವೇ ಗಂಟೆಗಳಲ್ಲಿ ಈ ದ್ರವ ದಪ್ಪವಾಗಿ ಅಂಟಿನಂತಾಗುತ್ತದೆ. ಇದು ಅಸ್ವಚ್ಛ ಅಫೀಮು ಅಂಟು. ಸುಮಾರು ಶೇಕಡಾ ೩೦ ರಷ್ಟು ನೀರಿನಂಶ ಇದರಲ್ಲಿ ಅಡಕವಾಗಿರುತ್ತದೆ. ಪ್ರತಿ ಕಾಯಿಯಿಂದ ಒಸರುವ ಅಫೀಮುದ್ರವವನ್ನು ಚಿಕ್ಕ ಕುದಿಕೆಗಳಲ್ಲಿ ಸಂಗ್ರಹಿಸುತ್ತಾರೆ. ಒಂದು ಕಾಯಿಯನ್ನು ಹೀಗೆ ಮೂರರಿಂದ ನಾಲ್ಕು ಸಾರಿ ಗಾಯ ಮಾಡಿ ರಸ ತೆಗೆಯಬಹುದು. ಆದರೆ ಪ್ರತಿಸಾರಿ ಐದಾರು ದಿವಸಗಳ

ಮತ್ತೆ ಕೆರೆಯಬೇಕು. ಈ ಅವಧಿಯಲ್ಲಿ ಗಿಡವು ಪುನಃ ಹೊಸ ಲೇಟೆಕ್ಸನ್ನು ತುಂಬಿಕೊಳ್ಳುತ್ತದೆ. ಒಂದೊಂದು ಬಾರಿ ಕೆರೆದಂತೆಯೂ ಮಾರ್ಫಿನಿನ ಅಂಶ ಕಡಿಮೆಯಾಗುತ್ತಾ ಹೋಗುತ್ತದೆ.

ಗಸಗಸೆ ಕಾಯಿಗಳನ್ನು ಆಯುಧದಿಂದ ಗಾಯ ಮಾಡಲೂ ಅಂಟು ಸಂಗ್ರಹಿಸಲೂ ಬಹಳ ನೈಪುಣ್ಯ ಬೇಕು. ಕಾಯಿ ಗೀರುವುದಕ್ಕಾಗಿ ಇರುವ ಹರಿತವಾದ, ಮೊನಚಾದ ತುದಿಯುಳ್ಳ ಲೋಹದ ಸಾಧನವನ್ನು ಚಿಕ್ಕ ಮರದ ಕೋಲೊಂದಕ್ಕೆ ಸರಿಗೆಯಿಂದ ಸುತ್ತಿರುತ್ತಾರೆ. ಪ್ರತಿ ಕಾಯಿಯ ಮೇಲೂ ಕತ್ತಿಯಿಡುವಾಗ ಜಾಗ್ರತೆ ವಹಿಸದಿದ್ದರೆ ಗಾಯ ತೀರ ಆಳವಾಗಿ ಬಿಡುತ್ತದೆ; ಇಲ್ಲವೇ ಮೇಲ್ಮೈ ಮಾತ್ರ ಸವರಿದಂತಾಗುತ್ತವೆ. ಹೀಗಾದರೆ ಸ್ವಲ್ಪ ಮಟ್ಟಿಗೆ ಅಫೀಮು ಸೋರಿ ಹೋಗುತ್ತದೆ. ಇತ್ತೀಚಿನ ವರೆಗೂ ಕಾಯಿಗಳಿಂದ ಸಂಗ್ರಹಿಸಲಾಗುವ ಅಂಟನ್ನು ಮಣ್ಣಿನ ಪಾತ್ರೆಗಳಲ್ಲಿ ಕೂಡಿಡಲಾಗುತ್ತಿತ್ತು. ಈ ಕುಡಿಕೆಗಳ ಹೀರುವ ಗುಣದಿಂದಾಗಿ ಅಂಟಿನಲ್ಲಿದ್ದ ಮಾರ್ಫಿನ್ ಹೆಚ್ಚಿನ ಪ್ರಮಾಣದಲ್ಲಿ ನಷ್ಟವಾಗುತ್ತಿತ್ತು. ಈಗ ಪ್ಲಾಸ್ಟಿಕ್ ಪಾತ್ರೆಗಳನ್ನು ಬಳಕೆಗೆ ತಂದುದರಿಂದ ಈ ಸಮಸ್ಯೆ ನಿವಾರಣೆಯಾಗಿದೆ.

ಅನೇಕ ವರ್ಷಗಳ ವರೆಗೆ ಈ ಆರ್ಥಿಕ ಬೆಳೆಯ ಅಭಿವೃದ್ಧಿಯನ್ನು ಕಡೆಗಣಿಸಲಾಗಿತ್ತು. ೧೯೭೦ರಲ್ಲಿಯೇ ಈ ವಿಷಯದ ಸಂಶೋಧನೆಗಾಗಿ ಭಾರತೀಯ ಕೃಷಿ ಸಂಶೋಧನಾ ಸಂಸ್ಥೆಗೆ ಸರಕಾರವು ಹಣಸಹಾಯ ನೀಡಿತು. ಇನ್ನೂ ಹೆಚ್ಚಿನ ಇಳುವರಿ, ವಾತಾವರಣದ ವೈಪರೀತ್ಯವನ್ನು ತಡೆದುಕೊಳ್ಳುವ ಗುಣವುಳ್ಳ ತಳಿಯನ್ನು ಬೆಳೆಸಲು ಈ ಸಂಸ್ಥೆಯ ವಿಜ್ಞಾನಿಗಳು ಯತ್ನಿಸುತ್ತಿದ್ದಾರೆ. ಗಸಗಸೆ ಕಾಯಿಗಳನ್ನು ಗಾಯ ಮಾಡಿದ ನಂತರ ಮಾರ್ಫಿನ್ ಅಂಶ ನಷ್ಟವಾಗುವುದನ್ನು ಕಡಿಮೆಗೊಳಿಸುವತ್ತ ಕೂಡ ಸಂಶೋಧನೆ ನಡೆದಿದೆ. ಈ ಸಂಶೋಧನೆಗಳ ಫಲಿತಾಂಶವನ್ನು ಇದುವರೆಗೆ ಇನ್ನೂ ಉಪಯೋಗಿಸಿಲ್ಲ.

ಅಫೀಮು ಅಂಟಿನಿಂದ ಕೊಡೀನ್ ಫಾಸ್ಫೇಟ್‌ನಂತಹ ನಿದ್ರಾಜನಕ ವಿಷವಸ್ತು (ಅಲ್ಕಲಾಯ್ಡ್ಸ್)ಗಳನ್ನು ಹೊರತೆಗೆದು ಔಷಧಿಗಾಗಿ ಸಂಸ್ಕರಿಸುವ ವಿಧಾನಗಳಲ್ಲೂ ಭಾರತ ಹಿಂದುಳಿದಿದೆ. ಜಗತ್ಪ್ರಸಿದ್ಧ ಔಷಧಿ ಸಂಸ್ಥೆಗಳಿಂದ ಈ ಅಲ್ಕಲಾಯ್ಡ್‌ಗಳಿಗೆ ಭಾರೀ ಬೇಡಿಕೆಯಿದೆ. ಮಾರ್ಫಿನ್‌ಗಾಗಿ ಜಗತ್ತಿನಲ್ಲಿ ಈಗ ಇರುವ ಬೇಡಿಕೆ (ಇದರಿಂದಲೇ ಅಲ್ಕಲಾಯ್ಡ್‌ಗಳು ತಯಾರಿಸಲ್ಪಡುವುದು) ವರ್ಷವೊಂದಕ್ಕೆ ೨,೮೦,೦೦೦ ಕಿಲೋಗ್ರಾಂಗಳೆಂದು ಅಂದಾಜು ಮಾಡಲಾಗಿದೆ. ಭಾರತದ ಸ್ವಂತ ಅಗತ್ಯಕ್ಕೆ ಬೇಕಾಗುವ ಅಲ್ಕಲಾಯ್ಡ್‌ಗಳು ವರ್ಷಕ್ಕೆ ೧೦,೦೦೦ ದಿಂದ ೧೧,೦೦೦ ಕಿಲೋಗ್ರಾಂಗಳು. ಉತ್ತರ ಪ್ರದೇಶದ ಗಾಜಿಪುರದಲ್ಲಿರುವ ಶುದ್ಧೀಕರಣ ಕೇಂದ್ರವು ೬,೦೦೦ ಕಿ. ಗ್ರಾಂ. ಅಲ್ಕಲಾಯ್ಡ್‌ಗಳನ್ನು ತಯಾರಿಸಿದರೆ, ಇನ್ನೊಂದು ಇಂತಹ ಕೇಂದ್ರವಾದ ಮಧ್ಯ ಪ್ರದೇಶದ ನೀಮುಚ್‌ನಲ್ಲಿ ೧೫,೦೦೦ ಕಿ. ಗ್ರಾಂ. ಕೊಡೀನ್ ಫಾಸ್ಫೇಟ್ ಮತ್ತಿತರ ಅಲ್ಕಲಾಯ್ಡ್‌ಗಳನ್ನು ಉತ್ಪಾದಿಸಬಹುದೆಂದು ನಿರೀಕ್ಷಿಸಲಾಗಿದೆ. ಆದರೂ, ೧೯೭೫–೭೬ ರ ಅವಧಿಗೆ ಹಿಂದಿನೆಲ್ಲ ವರ್ಷಗಳಂತೆಯೇ ತನ್ನ ಸ್ವಂತ ಅಗತ್ಯಗಳನ್ನು ಪೂರೈಸಲು ಭಾರತ ೪,೦೦೦ ಕಿ. ಗ್ರಾಂ. ಗಳಷ್ಟು ಅಲ್ಕಲಾಯ್ಡ್‌ಗಳನ್ನು ಆಮದು ಮಾಡಿಕೊಂಡಿತು.

ನೀಮುಚ್‌ನಲ್ಲಿ ಬೃಹತ್ ಅಲ್ಕಲಾಯ್ಡ್ ತಯಾರಿಕಾ ಕೇಂದ್ರವಿದ್ದರೂ ಭಾರತಕ್ಕೆ ಕೇವಲ ಅಲ್ಪ ಪ್ರಮಾಣದ ಅಫೀಮು ರಫ್ತಿಗಾಗಿ ಸಿಗುತ್ತಿದೆಯೆಂಬುದಂತೂ ಸ್ಪಷ್ಟ. ಇದರಲ್ಲಿಯೂ ಸಿಂಹ ಪಾಲು ದಿನದಿಂದ ದಿನಕ್ಕೆ ಬೆಳೆಯುತ್ತಿರುವ ರಾಷ್ಟ್ರದ ಅಗತ್ಯಗಳಿಗೇ ಹೋಗುವ ಸಾಧ್ಯತೆ ಹೆಚ್ಚು. ಸದ್ಯಕ್ಕೆ, ಶುದ್ಧೀಕರಿಸಿದ ಅಲ್ಕಲಾಯ್ಡ್‌ಗಳನ್ನು ಒದಗಿಸಲು ಭಾರತಕ್ಕೆ ಸಾಧ್ಯವಿಲ್ಲದ್ದರಿಂದ ಕಚ್ಚಾ ಅಫೀಮು ಅಂಟನ್ನೇ ಅನೇಕ ದೇಶಗಳು ಕೊಳ್ಳಬೇಕಾಗಿದೆ. ನಮ್ಮ ವಿದೇಶಿ ಹಣ ಗಳಿಕೆಯನ್ನು ಶೇಕಡ ೧೫ ರಷ್ಟು ಹೆಚ್ಚಿಸಬಲ್ಲ ಅಲ್ಕಲಾಯ್ಡ್ ಉತ್ಪಾದನೆಯ ಅಭಿವೃದ್ಧಿಗೆ ತೀವ್ರವಾಗಿ ಪ್ರಯತ್ನಿಸಬೇಕಾಗಿದೆ.

ಅಫೀಮಿನಿಂದ ಅಲ್ಕಲಾಯ್ಡ್‌ಗಳನ್ನು ಸಂಸ್ಕರಿಸುವ ಕ್ರಮ ವಿಧಾನಗಳನ್ನು ರೂಪಿಸುವುದಕ್ಕೆ ನಮ್ಮ ವೈಜ್ಞಾನಿಕ ಔದ್ಯಮಿಕ ಸಂಶೋಧನ

ಮಂಡಳಿಯು ಹತ್ತು ವರ್ಷಗಳನ್ನು ತೆಗೆದು-ಕೊಂಡಿತು. ಅಫೀಮಿನ ಉತ್ಪಾದಕರಾಗಿ ನಾವು ಗಳಿಸಿರುವ ಏಕಸ್ವಾಮ್ಯಕ್ಕೂ ನಮ್ಮ ಆಲ್ಕ-ಲೈಡ್‌ಗಳ ಆಮದಿಗೂ ಪರಸ್ಪರ ಹೊಂದಾ-ಣಿಕೆಯಿದೆ. ಕಳೆದ ವರ್ಷ ಅಮೇರಿಕನ್ ಔಷಧಿ ಕಂಪೆನಿಯೊಂದು ೧೩ ಟನ್ ಅಫೀಮು ಅಂಟಿನ ಬದಲಾಗಿ ಭಾರತಕ್ಕೆ ಒಂದು ಟನ್ ಕೊಡೀನ್ ಫಾಸ್ಫೇಟ್ ನೀಡಿತು. ನಮ್ಮ ಅವಶ್ಯಕತೆ ೪ ಟನ್ ಆಲ್ಕಲಾಯ್ಡ್‌ಗಳಾಗಿರುವುದರಿಂದ ಒಟ್ಟು ೫೨ ಟನ್ ಅಫೀಮನ್ನು, ಟನ್ನೊಂದಕ್ಕೆ ೪೯,೦೯೦ ಡಾಲರ್ ಬೆಲೆಯಲ್ಲಿ ಆ ಕಂಪನಿಗೆ ಮಾರಲಾ-ಯಿತು. ವಾಸ್ತವವಾಗಿ ಪ್ರತಿ ೧೩ ಟನ್ ಅಫೀಮಿಗೆ ೨ ಟನ್‌ಗಳಷ್ಟು ಆಲ್ಕಲೈಡ್ ದೊರಕುವುದರಿಂದ, ಒಂದು ಟನ್ ಯಾವುದೇ ಪ್ರಯಾಸವಿಲ್ಲದೆ ಆ ಅಮೇರಿಕನ್ ಕಂಪೆನಿಗೆ ದಕ್ಕಿತು. ಕ್ರಮೇಣ ಹೆಚ್ಚುತ್ತಿರುವ (ವರ್ಷಕ್ಕೆ ಶೇಕಡಾ ೫ ರಂತೆ) ಜಗತ್ತಿನ ಆಲ್ಕಲಾಯ್ಡ್ ಬೇಡಿಕೆಯಲ್ಲಿ ಕೇವಲ ಶೇಕಡಾ ೬೦ ರಷ್ಟನ್ನು ಮಾತ್ರ ಪೂರೈಸಲಾಗುತ್ತಿದೆಯೆಂಬುದನ್ನು ಗಮನಿಸಿದರೆ, ಇಂತಹ ವಾಣಿಜ್ಯ ಒಪ್ಪಂದಗಳಿಂದ ನಮ್ಮ ಅರ್ಥವ್ಯವಸ್ಥೆಗೆ ತಗಲುವ ಧಕ್ಕೆ ಎಷ್ಟೆಂಬುದನ್ನು ಮನಗಾಣಬಹುದು.

ಹಾಲೆಂಡ್, ಯುಗೋಸ್ಲಾವಿಯಾ, ಪಶ್ಚಿಮ ಜರ್ಮನಿ, ಟಾಸ್ಮಾನಿಯಾ, ರಶಿಯ, ಮತ್ತನೇಕ ರಾಷ್ಟ್ರಗಳಲ್ಲಿ ಗಸಗಸೆ ಕಾಯಿಯನ್ನು ಗಾಯ ಮಾಡಿ ಅಫೀಮು ಅಂಟು ತೆಗೆಯದೇನೇ ನೇರ-ವಾಗಿ ಮಾರ್ಫಿನನ್ನು ಪಡೆಯುವಂತೆ ನೂತನ ಪದ್ಧತಿಯನ್ನು ಕಂಡುಹಿಡಿಯಲಾಗಿದೆ ಈ ಹೊಸ ವಿಧಾನದಿಂದಾಗಿ ಗಸಗಸೆ-ಹುಲ್ಲಿನ (ಕಾಯಿ ಮತ್ತು ೪ ಸೆ. ಮೀ. ನಷ್ಟು ಉದ್ದದ ದಂಟು) ವಿಶ್ವವ್ಯಾಪಾರ ಗಣನೀಯವಾಗಿ ಅಭಿ-ವೃದ್ಧಿ ಹೊಂದಿದೆ. ತುರ್ಕಸ್ತಾನ ಮತ್ತು ಇರಾಣಗಳು ಹತ್ತಿರ ಹತ್ತಿರ ೧೨೦೦೦ ಮತ್ತು ೧೦,೦೦೦ ಟನ್ ಗಸಗಸೆ ಹುಲ್ಲನ್ನು ವಿಕ್ರಯಿ-ಸುತ್ತಿವೆ. ದಂಟಿನಲ್ಲಿರುವ ಮಾರ್ಫಿನ್ ಪಡೆಯು-ಲಿಕ್ಕಾಗಿ ಟಾಸ್ಮಾನಿಯಾ, ಫ್ರಾನ್ಸ್ ಮತ್ತು ಕೆಲವು ಪೂರ್ವ ಯುರೋಪಿಯನ್ ದೇಶಗಳೂ ಗಸಗಸೆಯನ್ನು ಬೆಳೆಸುತ್ತಿವೆ. ಮಾರ್ಫಿನನ್ನು ಹೊರಬೆಗೆಯುವ ಈ ಹೊಸ ಕ್ರಮದ ಮುಖ್ಯ ಪ್ರಯೋಜನವೆಂದರೆ ಇದಕ್ಕೆ ಹೆಚ್ಚು ಕೈಗಳ ಕೆಲಸ ಅಗತ್ಯವಿಲ್ಲ.

ಭಾರತದಲ್ಲಿ ಕೆಲಸಗಾರರಿಗೇನೂ ಕೊರತೆಯಿಲ್ಲ. ಸುಮಾರು ೨,೫೦, ೦೦೦ ಕೃಷಿಕರು ೫೨,೦೦೦ ಹೆಕ್ಟೇರ್ ನೆಲದಲ್ಲಿ ಗಸಗಸೆಯನ್ನು ಬೆಳೆಸುತ್ತಿ-ದ್ದಾರೆ. ಮಾರ್ಫಿನನ್ನು ನೇರವಾಗಿ ಪಡೆಯುವ ಕ್ರಮ (ಗಸಗಸೆ ಹುಲ್ಲಿನಿಂದ) ಹೆಚ್ಚು ಸಮರ್ಥ ವೇನೋ ಹೌದು. ಇದರಿಂದಾಗಿ ಗಿಡದ ಶೇಕಡ ೭೦ರಷ್ಟು ಮಾರ್ಫಿನನ್ನು ಪಡೆಯಲು ಸಾಧ್ಯ. ಆದೇ ರೀತಿಯಲ್ಲಿ ಗಸಗಸೆ ಗಿಡದಿಂದ ಮೊದಲು ಅಫೀಮು ಸಂಗ್ರಹಿಸಿ ನಂತರ ಅದರಿಂದ ಮಾರ್ಫಿನ್ ತಯಾರಿಸುವ ನಮ್ಮ ವಿಧಾನಕ್ಕೂ ಅದರದೇ ಆದ ಪ್ರಯೋಜನವಿದೆ. ಪ್ರತಿ ಕಾಯಿಯಿಂದಲೂ ಮೂರು-ನಾಲ್ಕು ಸಾರಿ ಅಫೀಮು ಸಂಗ್ರಹಿಸಬಹುದು. ಅಷ್ಟೇ ಅಲ್ಲ, ಕಾಯಿ ಗಾಯ ಮಾಡುವ ಸಮಯದ ಮಧ್ಯಂತರದಲ್ಲಿ ಗಿಡ ಪುನಃ ಅಫೀಮನ್ನು ಉತ್ಪಾದಿಸಬಲ್ಲುದು. ಭಾರತದಂತಹ ದೇಶದಲ್ಲಿ, ಅಫೀಮು ದ್ರವ ಸಂಗ್ರಹಣೆಯ ಕಾರ್ಯ ಸಾವಿರಾರು ಜನರಿಗೆ ಉದ್ಯೋಗ ಒದಗಿಸುತ್ತದೆ. ಅಫೀಮು ತೆಗೆದ ನಂತರ ಉಳಿಯುವ ಗಸಗಸೆ-ಹುಲ್ಲು ಇನ್ನೂ ಶೇಕಡ ೦.೨ ಮಾರ್ಫಿನ್ ಒಳ-ಗೊಂಡಿರುತ್ತದೆ, ಇದರ ಶೇಕಡ ೭೦ ಅಂಶವನ್ನು ನೇರ ವಿಧಾನದಿಂದ ಪಡೆಯಬಹುದು.

ಈಗ ಭಾರತದಲ್ಲಿ ಸಿಗಬಹುದಾದ ಒಟ್ಟು ಗಸಗಸೆ ಹುಲ್ಲಿನ ಪ್ರಮಾಣ ೨೫,೦೦೦ ಟನ್-ಗಳಷ್ಟಾಗಬಹುದು. ಮಾರ್ಫಿನನ್ನು ನೇರವಾಗಿ ಪಡೆಯುವ ವಿಧಾನ ಇನ್ನೂ ಇಲ್ಲಿ ಬಳಕೆಯಲ್ಲಿ ಬಂದಿಲ್ಲ. ಆದ್ದರಿಂದ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬಿಕರಿಯಾಗಿ ಉಳಿದ ಗಸಗಸೆ-ಹುಲ್ಲು ವ್ಯರ್ಥವಾಗಿ ಹಾಳಾಗುತ್ತಿದೆ. ಹೊರ ದೇಶದ ಈ 'ನೇರ ವಿಧಾನ' ಕುರಿತ ತಾಂತ್ರಿಕ ಜ್ಞಾನವನ್ನು ಆಮದು ಮಾಡಿಕೊಳ್ಳಲು ಭಾರತ ಸರಕಾರ ಇತ್ತೀಚೆಗೆ ನಿರ್ಧರಿಸಿದೆ.

ನಾರ್ಕೋಟಿಕ್ಸ್ (ಅಫೀಮಿನಿಂದ ತಯಾರಾ-ಗುವ ನಿದ್ರಾಜನಕ ಔಷಧಿಗಳು)ನ ಜಾಗತಿಕ ವ್ಯಾಪಾರವು ಜಿನೀವಾದ ಅಂತಾರಾಷ್ಟ್ರೀಯ

ನಾರ್ಕೋಟಿಕ್ಸ್ ನಿಯಂತ್ರಣ ಮಂಡಲಿಯಿಂದ ವ್ಯವಸ್ಥೆಗೊಳಪಟ್ಟಿದೆ. ನಾರ್ಕೋಟಿಕ್ಸನ್ನು ಆಮದು ಮಾಡಿಕೊಳ್ಳಲಿಚ್ಛಿಸುವ ರಾಷ್ಟ್ರಗಳ ಮನವಿಗಳನ್ನು ಈ ಮಂಡಲಿಯು ಸ್ವೀಕರಿಸಿ, ವಿಮರ್ಶಿಸಿ, ಸಮ್ಮತಿ ನೀಡುವುದು. ಇದರಿಂದ ನಿಗದಿ ಮಾಡಲ್ಪಟ್ಟ ಪ್ರಮಾಣದ ನಾರ್ಕೋಟಿಕ್ಸನ್ನು ಗ್ರಾಹಕ ರಾಷ್ಟ್ರಗಳು ಭಾರತದಂತಹ ದೇಶಗಳಿಂದ ಕೊಳ್ಳುತ್ತವೆ. ಆದರೆ ನಾರ್ಕೋಟಿಕ್ಸ್‌ನ ವ್ಯಾಪಾರದ ಬೆಲೆಯನ್ನು ಮಂಡಲಿಯು ಗೊತ್ತುಪಡಿಸುವುದಿಲ್ಲ. ಮಾರ್ಫಿನ್‌ನ ಪ್ರಕೃತದ ಅಧಿಕೃತ ಬೆಲೆ ಕಿಲೋಗ್ರಾಂಗೆ ೧,೦೦೦ ಡಾಲರ್‌ಗಳು. ಕಳ್ಳ ಪೇಟೆಯಲ್ಲಿ ಅದರ ಬೆಲೆಯಾದರೋ ೮,೦೦೦ ದಿಂದ ೧೦,೦೦೦ ಡಾಲರ್‌ಗಳ ವರೆಗೆ ವಿಸ್ತರಿಸುತ್ತದೆ.

ಸರಕಾರಗಳ ಕಟ್ಟುನಿಟ್ಟಿನ ಕಾವಲಿದ್ದು ಕೂಡ ನಾರ್ಕೋಟಿಕ್ಸ್‌ನ ಕಳ್ಳ ಸಾಗಾಣಿಕೆಯು ಜಗತ್ತಿನ ಮೂಲೆ ಮೂಲೆಗಳಿಗೆ ಅಬಾಧಿತವಾಗಿ ನಡೆಯುತ್ತಿದೆ. ಲಕ್ಷಾಂತರ ಜನ ಅಫೀಮಿನ ಭಕ್ತರಿಗೆ ಅದನ್ನು ಗುಳಿಗೆಯ ರೂಪದಲ್ಲೋ, ಚುಚ್ಚು ಮದ್ದುಗಳ ಮೂಲಕವೋ ಸೇವಿಸದೆ ದಿನವೇ ಸಾಗುವುದಿಲ್ಲ ಎಂದೆನಿಸುವುದರಿಂದ ಒಂದಕ್ಕೆ ಹತ್ತರಷ್ಟು ಬೆಲೆ ತೆತ್ತಾದರೂ ಕೊಂಡುಕೊಳ್ಳುತ್ತಾರೆ. ಅಫೀಮಿನ ಕಾಳಸಂತೆಯು ಹೆಚ್ಚು ಕಡಿಮೆ ಅದರ ಕಾನೂನುಬದ್ಧ ಮಾರುಕಟ್ಟೆಯಷ್ಟೇ ವಿಸ್ತೃತವಾಗಿ ಇದೆ ಎಂದು ನಂಬಲಾಗಿದೆ. ಈ ರೀತಿ ಅಫೀಮಿನ ಕಳ್ಳ ಸಾಗಾಟವನ್ನು ತಾವು ಅಡಗಿಸಿರುವುದಾಗಿ ಕಮ್ಯುನಿಸ್ಟ್ ದೇಶಗಳು ಹೇಳಿಕೊಂಡಿವೆ. ಭಾರತದಲ್ಲೇ ಪ್ರತಿ ವರ್ಷ ೭ ಟನ್‌ಗಳ ವರೆಗೆ ಅಫೀಮನ್ನು ಕಳ್ಳ ಸಾಗಾಣಿಕೆದಾರರಿಂದ ವಶಪಡಿಸಿಕೊಳ್ಳಲಾಗುತ್ತಿದೆ. ಇದು ಅಧಿಕೃತ ಲೆಕ್ಕದ ಪ್ರಕಾರ ವಾಸ್ತವ ಕಳ್ಳ ಸಾಗಾಟ ಕೇವಲ ಶೇಕಡಾ ೧೦ ರಿಂದ ೧೫ ಮಾತ್ರ.

ಅಫೀಮು ಉತ್ಪಾದಿಸುವ ರಾಷ್ಟ್ರಗಳಲ್ಲಿ ವ್ಯಾಪಕವಾಗಿ ಅಧ್ಯಯನ ಪ್ರವಾಸ ನಡೆಸಿದ ನಾರ್ಕೋಟಿಕ್ಸ್ ಮತ್ತು ಅಪಾಯಕಾರಿ ಔಷಧಿಗಳ ಕುರಿತಾದ ಅಮೇರಿಕನ್ ಸಂಸ್ಥೆಯು ವರದಿಯಂತೆ ಭಾರತದಿಂದ ಕಳ್ಳತನದಿಂದ ಸಾಗಣೆವಾಗುವ ಅಫೀಮು ಜಗತ್ತಿನ ಒಟ್ಟು ಅಫೀಮು ವ್ಯಾಪಾರದ ಶೇಕಡ ೨೦ರಷ್ಟು ಗರಿಷ್ಠ ಮಟ್ಟದಲ್ಲಿದೆ. ಇದೇ ವರದಿಯ ಪ್ರಕಾರ ಈ ಕಾನೂನು ಬಾಹಿರ ವ್ಯಾಪಾರದಲ್ಲಿ ಅಫೀಮನ್ನು ಗದ್ದೆಗಳಿಂದ ನೇರವಾಗಿ ಮಧ್ಯ ಪ್ರದೇಶದ ಪಟ್ಟಣಗಳಾದ ಉಜ್ಜಯಿನಿ, ನೀಮುಚ್, ಮಾಂಡ್ಸರ್ ಮತ್ತು ರತ್ಲಾಮ್‌ಗಳಿಗೆ ತಂದು ಅಲ್ಲಿಂದ ಲಾರಿ, ಕಾರು ಮತ್ತು ರೈಲುಗಳಲ್ಲಿ ಮುಂಬಯಿಗೆ ಸಾಗಿಸಲಾಗುತ್ತದೆ. ಪಶ್ಚಿಮ ಕರಾವಳಿಯ ಉದ್ದಕ್ಕೂ ಮೀನುಗಾರಿಕೆ ದೋಣಿಗಳು ಅದನ್ನು ಅರಬ್ ನೌಕೆಗಳಿಗೆ ಸರಬರಾಜು ಮಾಡುತ್ತವೆ. ಇವು ಈ ಅಮೂಲ್ಯ



"ಅಷ್ಟೊಂದು ತರಕಾರಿ ತೊಗೋಬೇಕು ಅಂದ್ರೆ ದುಡ್ಡು ಕಳ್ಳತನ ಮಾಡ್ಬೇಕು ಅಷ್ಟೆ ಅಂದೆಲ್ಲ; ಅವನು ಹೇಗೆ ಕಳ್ಳತನ ಮಾಡಿದ್ನಪ್ಪ?"

ಸರಕನ್ನು ಪರ್ಷಿಯನ್ ಕೊಲ್ಲಿಯ ಬಂದರುಗಳಿಗೆ ಒಯ್ಯುತ್ತವೆ. ಅಲ್ಲಿಂದ ಬೇರೆ ಬೇರೆ ಸಾಗಾಟ ಮಾಧ್ಯಮಗಳ ಮೂಲಕ ಯುರೋಪ್ ಮತ್ತು ಅಮೇರಿಕಗಳಿಗೆ ರವಾನೆಯಾಗುತ್ತದೆ.

ಒಂದು ಸ್ವಾರಸ್ಯಕರ ಅಂಶವೆಂದರೆ, ನಾರ್ಕೋಟಿಕ್ಸ್‌ನ ಕಳ್ಳ ವ್ಯಾಪಾರದಲ್ಲಿ ನಿರತರಾದ ಜನರಲ್ಲಿ ಒಬ್ಬ ಕೂಡ ಈ ಮಾದಕ ವಸ್ತುವನ್ನು ಸೇವಿಸುವುದಿಲ್ಲ. ಗಸಗಸೆ ಬೆಳೆಯುವ ಪ್ರದೇಶದಲ್ಲಿ ಕೂಡ ಅಫೀಮಿನ ಚಟ ಇರುವ ಒಬ್ಬನೇ ಒಬ್ಬ ಮನುಷ್ಯ ಕಾಣಸಿಗುವುದಿಲ್ಲ. ವ್ಯವಸಾಯಗಾರರು ಇದನ್ನ ಒಂದು ಆರ್ಥಿಕ ಬೆಳೆಯಾಗಿ ಮಾತ್ರ ಪರಿಗಣಿಸಿ ಲಾಭಕ್ಕಾಗಿ ನಿಷ್ಠೆಯಿಂದ ದುಡಿಯುತ್ತಾರೆ. ಒಮ್ಮೊಮ್ಮೆ ಕೂಲಿಯಾಳುಗಳು ಅಫೀಮು ಅಂಟನ್ನು ತಮ್ಮ ಉಗುರುಗಳಲ್ಲಿ ತುಂಬಿಸಿಕೊಂಡು ಕದ್ದೊಯ್ಯುವ ಪ್ರಸಂಗಗಳೂ ಇಲ್ಲದಿಲ್ಲ; ಇದು ಅವ್ಯಾಹತವಾಗಿ ಸಾಗಿದರೆ, ಈ ಕ್ಷುಲ್ಲಕ ಪ್ರಮಾಣವೇ ಮುಂದೆ ಅಫೀಮಿನ ಶ್ರಾಯ ಮುಗಿಯುವುದರೊಳಗೆ ಒಂದು ಕಿಲೋಗ್ರಾಂ ಮೊತ್ತವನ್ನು ತಲುಪಬಹುದು. ಕಳ್ಳ ಪೇಟೆಯಲ್ಲಿ ಇದಕ್ಕೆ ಖಂಡಿತ ಅದ್ಭುತ ಬೆಲೆ ಸಿಗುತ್ತದೆ.

ಅಫೀಮಿನ ಕೃಷಿಕ ತನಗೆ ಪ್ರತಿ ಹೆಕ್ಟೇರಿನಲ್ಲಿ ಹಿಂದಿಗಿಂತ ಹೆಚ್ಚಿಗೆ ಬೆಳೆ ಬಂದಿರುವುದಾಗಿ ಘೋಷಿಸಿದರೆ, ಅವನಿಗೆ ನೀಡುವ ಬೆಲೆಯಲ್ಲಿ ಹೆಚ್ಚಳ ತೋರಲಾಗುತ್ತದೆ. ಸರಕಾರದ ಖರೀದಿ ಬೆಲೆಯು ಕಿ. ಗ್ರಾಂ. ಒಂದಕ್ಕೆ ರೂ. ೧೨೦ ರಿಂದ ರೂ. ೧೮೦ ರಷ್ಟಿದೆ. ಬೆಳೆಯು ಪ್ರತಿ ಹೆಕ್ಟೇರಿಗೆ ೩೦ ಕಿ. ಗ್ರಾಂ. ಗಿಂತ ಹೆಚ್ಚಿದ್ದರೆ ರೈತನಿಗೆ ಹೆಚ್ಚುವರಿ ಬೆಲೆ ಸಿಗುತ್ತದೆ. ಆದರೆ ಇದೊಂದೇ ಆಕರ್ಷಣೆಯು ರೈತ ತನ್ನ ಬೆಳೆಯನ್ನು ಘೋಷಿಸಲು ಪ್ರಚೋದಿಸುವಲ್ಲಿ ಪೂರ್ತಿ ಸಮರ್ಥವಾಗಿಲ್ಲ. ಆದ್ದರಿಂದ ಹೊಲಗಳಲ್ಲಿ ಬೆಳೆದು ನಿಂತ ಪೈರನ್ನು ನೋಡಿ ಬೆಳೆಯ ಅಂದಾಜು ಮಾಡಲು ಸರಕಾರ ಪರಿಶೀಲಕರನ್ನು ಕಳಿಸುತ್ತಿದೆ. ಆದರೆ ಈ ಉಪಾಯದಿಂದಲೂ ಕೂಡ ಬೆಳೆ ಸಂಗ್ರಹಣಾ ಕ್ರಮವು ಸಂಪೂರ್ಣ ದೋಷರಹಿತವಾಗಿಲ್ಲ.

ಏನಿದ್ದರೂ, ಸದ್ಯದ ಮಟ್ಟಿಗೆ ಜಗತ್ತಿನ ಔಷಧಿ ಕೈಗಾರಿಕೆಗೆ ಅಫೀಮು (ಅಂಟು) ಒದಗಿಸುವ ಏಕೈಕ ರಾಷ್ಟ್ರವೆಂದರೆ ಭಾರತ. ಆಸ್ಪತ್ರೆಗಳಲ್ಲಿ ನರಳುವ ಕೋಟ್ಯಂತರ ರೋಗಿಗಳಿಗೆ ನೋವು ಶಮನ ಮಾಡಲು ಮಾರ್ಫಿನ್-ನಂತಹ ಮತ್ತು ಬರಿಸುವ ಔಷಧಿಗಳು ಅತ್ಯಗತ್ಯವಾಗಿ ಬೇಕು. ಕೆಲವು ಅಪರಾಧಿ ಕೂಟಗಳು ಗಸಗಸೆಯಿಂದ ಸಂಗ್ರಹಿಸಿದ ಅಫೀಮನ್ನು ಹೆರಾಯಿನ್ ಮುಂತಾದ ಮಾದಕ ವಿಷವಸ್ತುಗಳನ್ನು ತಯಾರಿಸಲು ಉಪಯೋಗಿಸುತ್ತವೇನೋ ನಿಜ. ಆದರೆ ಅಫೀಮಿನ ಹೆಚ್ಚಿನ ಪಾಲು ಅಸಂಖ್ಯಾತ ಹತಾಶ ಜೀವಿಗಳ ವೇದನೆಯ ಸಾಂತ್ವನಕ್ಕೆ ವಿನಿಯೋಗವಾಗುತ್ತಿದೆ ಎಂಬುದನ್ನು ಮರೆಯಲಾಗದು. ಆದರೆ ದೌರ್ಭಾಗ್ಯವಶಾತ್, ಅಫೀಮಿನ ಕೆಡುಕಿನ ಅಂಶವನ್ನೇ ಉತ್ಪ್ರೇಕ್ಷಿಸಲಾಗುತ್ತಿದೆ. ಇದರಿಂದಾಗಿಯೇ ಗಸಗಸೆ ಬೆಳೆಗೆ ಇಂದು ಕೆಟ್ಟ ಹೆಸರು ಬಂದಿದೆ.

✡

ಕೃಪೆ: ‘ಸೂರ್ಯ’



ನೈಜ ಅನುಭಾವಿಯಿರುವುದು ಎರಡು ಜಗತ್ತುಗಳಲ್ಲಿ ಅವನಿಗೆ ಆಧ್ಯಾತ್ಮ ಜಗತ್ತು ಕೂಡ ಭೌತಿಕ ವ್ಯಾಪಾರಗಳ ಈ ಜಗತ್ತಿನಷ್ಟೇ ಸತ್ಯ. ತನ್ನ ಜೀವನ ಮತ್ತು ಕೃತಿಗಳ ಮೂಲಕ ಈ ಎರಡನ್ನೂ ಬೆಸುಗೆಗೊಳಿಸುವುದು ಅವನ ಕರ್ತವ್ಯವಾಗಿರುತ್ತದೆ.

—ವಿ. ಈ.

ಹೊತ್ತೇರತೊಡಗುತ್ತದೆ

ಸಂಜೆಯ ನೆರಳು
ಉದ್ದವಾಗಿ ಬೆಳೆದು
ಪೂರ್ವ ಪಶ್ಚಿಮಗಳ
ನಡುವಿನಂತರ
ಮಾಯವಾದಾಗ,
ಚಿತ್ತಭಿತ್ತಿಯ ಮೇಲೆ
ಮೃತ್ಯುವಿನ ಚಿತ್ರ
ಮೂಡಿದನುಭವವಾಗಿ
ಮೈ ಮನ ನಡುಗಿದಂತಾದಾಗ
ನನಗೆ ನಾನೇ ಕೇಳಿಕೊಳ್ಳುತ್ತೇನೆ-
ಅಚಾನಕವಾಗಿ
ಈಗ
ನಾನೂ ಸತ್ತರೆ?
ಸತ್ತರೆ-
ಹೌದು, ಸತ್ತರೆ?

ನಾಕು ಮಂದಿ ಹೊತ್ತಾರು,
ನಾಕು ದಿನ ಅತ್ತಾರು,
ಅಕಾಲ ಮೃತ್ಯುವೆಂದಾರು.

ಸಾವು, ನೋವು, ಕಣ್ಣೀರು.
ಸರಪಳಿಯ ಕೊಂಡಿ......
ಕಳಚಿದರೆ ವಿಶ್ವನಿಯಮಕೆ, ಭಂಗ.
ತತ್ತ್ವಜ್ಞಾನ.

ಈ ವಿಶ್ವವಿಡೀ ಒಂದು ಗೋರಿ;
ಒಂದು ಗರ್ಭ.
ಸಾವಿನ ವಿಷ,
ಹುಟ್ಟಿನಮೃತ
ಎಲ್ಲ ಒಂದೇ ಬಟ್ಟಲಿನಲಿ ಭರಿತ,
ಎಂದುಕೊಳ್ಳುವ ಹೊತ್ತಿಗೇ
ಮೂಡಲ ಮುಸುಕು ಹರಿದು
ಬಂಗಾರದ ನೀರು ಬಂದಾಗ,
ನಾ ಸಾಯದಿದ್ದರೂ
ಎಲ್ಲೋ ಯಾವುದೋ
ಮೂಲೆಯಲ್ಲಿ
ನಾಕು ಗೋರಿಗಳ ಮಣ್ಣಿನಲಿ
ಹಳತು ಹೊಸತಿನ ಬೆರಕೆಯಾಗಿದೆ.

ಮತ್ತೆ ಸಂಜೆವರೆಗೆ
ನನ್ನ ಸಾವಿನ ನೆನಪೇ
ನನಗಿರುವದಿಲ್ಲವಲ್ಲ!
ಎನಿಸಿ
ನಗುತ್ತೇನೆ.
ಹೊತ್ತು
ತಂತಾನೇ ಏರತೊಡಗುತ್ತದೆ.

-ಜ್ಯೋತಿರ್ಲಿಂಗ

ದ್ವೀಪ

ಆಲ್ಡಸ್ ಹಕ್ಸ್ಲೆ



ದ್ವೀಪ

ವೈಚಾರಿಕ ರಂಗದಲ್ಲಿ ಆದರ್ಶ ರಾಜ್ಯದ ಕಲ್ಪನೆಗಳನ್ನು ಬಿಂಬಿಸಿದವರಲ್ಲಿ ಗ್ರೀಕ್ ತತ್ತ್ವಜ್ಞಾನಿ ಪ್ಲೇಟೋ ಪ್ರಮುಖನೆನ್ನಬೇಕು. ಆದರೆ ಈ ಕಲ್ಪನೆಯನ್ನು ಕಥಾ ಮಾಧ್ಯಮದ ಮೂಲಕ ಬೆಳಗಿಸಿ ಪ್ರಸಿದ್ಧಿಗೆ ಬಂದವರಲ್ಲಿ ಬ್ರಿಟನ್ನಿನ ಥಾಮಸ್ ಮೂರ್ ಮೊದಲಿಗ. ಆತ ಬರೆದ 'ಯುಟೋಪಿಯ' ಎಷ್ಟು ಜನಪ್ರಿಯವಾಯಿತೆಂದರೆ ಥಾಮಸ್ ಮೂರ್ ಸತ್ತು ಐದುನೂರು ವರ್ಷಗಳ ನಂತರವೂ ಅವ್ಯಾವಹಾರಿಕವೆನಿಸು-ವಷ್ಟು ಆದರ್ಶವಾದವನ್ನು ಯುಟೋಪಿಯನ್ ಕಲ್ಪನೆ ಎಂದು ಹೆಸರಿಸುವುದಿದೆ. ಥಾಮಸ್ ಮೂರನ ನಂತರ ಇಂತಹುದೇ ಆದ ಪರಿಕಲ್ಪನೆಯನ್ನು ಫ್ರಾನ್ಸಿಸ್ ಬೇಕನ್ 'ಅಟ್ಲಾಂಟಿಸ್'ನ ಮೂಲಕ ವ್ಯಕ್ತಪಡಿಸಿದ. ಒಂದು ರೀತಿಯಲ್ಲಿ 'ಅಟ್ಲಾಂಟಿಸ್' ದ್ವೀಪದ ಜನ ಯುಟೋಪಿಯದ ಜನರಿಗಿಂತ ಹೆಚ್ಚು ವೈಜ್ಞಾನಿಕ ದೃಷ್ಟಿಕೋನವುಳ್ಳ-ವರು. ಅವರಲ್ಲಿ ಕೆಲವು ಜನ ವರ್ಷದಲ್ಲೊಂದು ಸಲ ಹಡಗಿನಲ್ಲಿ ಕುಳಿತು ಜಗತ್ತಿನ ತುಂಬಾ ಸಂಚರಿಸಿ ಹೊಸ ಹೊಸ ವಿಷಯಗಳ ಬಗೆಗೆ ಜ್ಞಾನಸಂಗ್ರಹ ಮಾಡಿಕೊಂಡು ದ್ವೀಪಕ್ಕೆ ಹಿಂದಿರುಗುವರು. ಇವರನ್ನು ಫ್ರಾನ್ಸಿಸ್ ಬೇಕನ್ ಪ್ರಕಾಶದ ವ್ಯಾಪಾರಿ-ಗಳು (Merchants of Light) ಎಂದು ಕರೆದ. ಇಂಗ್ಲೀಷಿನಲ್ಲಿ ವಿಜ್ಞಾನಿಗಳನ್ನು ಮುಂದೆ ಪಾಂಡಿತ್ಯಪೂರ್ಣ ಶೈಲಿಯಲ್ಲಿ ಈ ಹೆಸರಿನಿಂದ ಕರೆಯಲು ಪ್ರಾರಂಭವಾದ ಮೂಲ ಇಲ್ಲಿದೆ. ಆದರೆ 'ಅಟ್ಲಾಂಟಿಸ್' ಅನ್ನು ಪೂರ್ಣಗೊಳಿಸುವ ದೈವ ಬೇಕನ್ನನಿಗಿರ ಲಿಲ್ಲ. ಆದರೂ ಈ ಪುಸ್ತಕ ಬೇಕನ್ನನ ಕಲ್ಪಕತೆಯಿಂದಾಗಿ ಇಂದಿಗೂ ಜನರನ್ನು ಆಕರ್ಷಿಸುತ್ತಿದೆ.

ಇದರ ನಂತರ ಆದರ್ಶವಾದಿಗಳಾದ ವೈಚಾರಿಕರೂ ವೈಜ್ಞಾನಿಕರೂ ಆದ ಅನೇಕ ಜನ ಜಾಗತಿಕರಂಗದ ಮೇಲೆ ಆಗಿಹೋದರೂ ಆದರ್ಶ ರಾಜ್ಯದ ಕಲ್ಪನೆಯನ್ನು ಕಥಾವಸ್ತುವನ್ನಾಗಿ ಮಾಡಿಕೊಂಡ ಉದಾಹರಣೆಗಳು ಕಂಡುಬರುವುದಿಲ್ಲ.

ಈ ದೋಷವನ್ನು ಹೋಗಲಾಡಿಸಲೆಂದೋ ಏನೋ ಬ್ರಿಟನ್ನಿನ ಖ್ಯಾತ ವೈಚಾರಿ-ಕರೂ ವಿಜ್ಞಾನಿಗಳೂ ತತ್ತ್ವಜ್ಞಾನಿಗಳೂ ಆದ ಆಲ್ಡಸ್ ಹಕ್ಸ್ಲೆಯವರು ತಮ್ಮ ಕೊನೆಯ ದಿನಗಳಲ್ಲಿ 'ದಿ ಐಲೆಂಡ್' ಎಂಬ ಕೃತಿಯನ್ನು ರಚಿಸಿದರು. ಆ ಪುಸ್ತಕದ ಸಾರಸಂಗ್ರಹ ಇಲ್ಲಿದೆ. ಇದನ್ನು ಮೂಲತಃ 'ನವನೀತ'ಕ್ಕಾಗಿ ಸಂಗ್ರಹಿಸಿದವರು ಡಾ. ದೇವೇಶ ಠಾಕೂರ್.

ಶಾಂತ, ಶೂನ್ಯ ವಾತಾವರಣದಲ್ಲಿ ಸಹಸಾ "ಜಾಗ್ರತೆ, ಜಾಗ್ರತೆ" ಎಂಬ ಕೂಗು ಕೇಳಿಬರುತ್ತಲೇ ವಿಲ್‌ನ ಎದೆ ಧಸಕ್ಕೆಂದಿತು. ತರಂಗೆಲೆಗಳ ಮೇಲೆ ತೃಣದ ಹಾಗೆ ಬಿದ್ದುಕೊಂಡ ಆತ, ಬಹುಶಃ ಈ ಧ್ವನಿ ಮಾಲಿಯಿಂದ ಬಂದಿರಬೇಕು ಎಂದು ಭಾವಿಸಿದ.

"ಮಾಲೀ, ಎಲ್ಲಿದ್ದೀ? ಕಾಣುವುದೇ ಇಲ್ಲವಲ್ಲ," ವಿಲ್ ತಾನು ಬಿದ್ದುಕೊಂಡ ಸ್ಥಳದಿಂದಲೇ ಕೂಗಿದ.

ಉತ್ತರ ಬರಲಿಲ್ಲ. ಮಲಗಿಕೊಂಡು, ಬಹಳ ಹೊತ್ತಾಯಿತು; ಎದ್ದು ಬಟ್ಟೆ ಧರಿಸಿ, ನಾಶ್ತಾ ಮಾಡಿ ಆಫೀಸಿಗೆ ಹೋಗುವ ತಯಾರಿ ಮಾಡಿದರಾಯಿತು ಅಂದುಕೊಂಡ.

ಆದರೆ ತಾನಿರುವುದು ಲಂಡನ್ನಿನಲ್ಲಿನ ತನ್ನ ಮನೆಯ ಬೆಡ್‌ರೂಮಿನಲ್ಲಿ ಅಲ್ಲವೆಂಬ ವಿಚಾರ ಮರುಕ್ಷಣದಲ್ಲೇ ಬಂದು ಇದ್ದ ಕೊಂಚ ಉತ್ಸಾಹವೂ ಮೂರಾಬಟ್ಟೆಯಾಗಿ ಹೋಯಿತು. ಸುತ್ತಲೂ ಒಮ್ಮೆ ಕಣ್ಣಾಡಿಸಿದ. ಮಂಚದ ಸುತ್ತ ನಾಲ್ಕೂ ಬದಿಗಳಲ್ಲಿನ ಬಣ್ಣಬಣ್ಣದ ಪರದೆಯ ಬದಲು ವೃಕ್ಷರಾಜಿ ತಾನೇ ತಾನಾಗಿ ಹರಡಿಕೊಂಡಿತ್ತು. ಸೂರ್ಯ ಮೇಲೇರುತ್ತಾ ಬಂದಂತೆ ಭೂಮಿಯ ಮೇಲೆ ವಿಸ್ತಾರವಾಗಿ ಹರಡಿಕೊಂಡ ಭೂತಾಕಾರದ ಛಾಯೆಗಳು ಕ್ರಮೇಣ ಕುಗ್ಗುತ್ತಾ ಬರುತ್ತಿದ್ದವು.

ಅವನ ಬೆನ್ನು, ಹಣೆ, ಭುಜಗಳು ನೋಯುತ್ತಿದ್ದವು. ಎಡಗಾಲಿನ ನೋವು ಸಹಿಸಲಸಾಧ್ಯವಾಗಿತ್ತು.

"ಜಾಗ್ರತೆ ಜಾಗ್ರತೆ," ಎಂಬ ಶಬ್ದ ಮತ್ತೆ ಎಲ್ಲಿಂದಲೋ ತೂರಿಕೊಂಡು ಬಂತು.

"ಮಾಲಿ...?" ಎಂದು ವಿಲ್ ಮತ್ತೊಮ್ಮೆ ಪ್ರಶ್ನಾರ್ಥಕವಾಗಿ ಸುತ್ತಲೂ ನೋಡಿದಾಗ ತಾನು ಆಸ್ಪತ್ರೆಯ ಕೋಣೆಯೊಂದರಲ್ಲಿದ್ದುದು ಗಮನಕ್ಕೆ ಬಂತು. ಸುಂದರಳಾದ ಒಬ್ಬ ನರ್ಸ್ ಬಾಗಿಲ ಬಳಿ ನಿಂತು "ನಂಬರ್ ೫೫" ಎಂದು ಕೂಗುತ್ತಿದ್ದಳು.

ಕೂಡಲೇ ವಿಲ್ ಆ ನರ್ಸಿನ ಬೆನ್ನುಹತ್ತಿ ಇನ್ನೊಂದು ಕೋಣೆಗೆ ಹೋದ. ಅಲ್ಲಿನ ದೃಶ್ಯ ನೋಡಿ ಅವನ ಜಂಘಾಬಲವೇ ಉಡುಗಿ ಹೋದಂತಾಯಿತು. ಹಾಸಿಗೆಯ ಮೇಲೆ ಆತನ ಪತ್ನಿ ಮಾಲಿ ಎಚ್ಚರವಿಲ್ಲದೆ ಬಿದ್ದಿದ್ದಳು. ಮೈ ಮೇಲೆಲ್ಲಾ ಬ್ಯಾಂಡೇಜುಗಳಿದ್ದವು. ವಿಲ್ ಮತ್ತೊಮ್ಮೆ ತುಂಬಾ ಸ್ನೇಹದಿಂದ, "ಮಾಲೀ," ಅಂದ. ಕೇವಲ ಶಬ್ದವೊಂದರಿಂದ ಪ್ರಜ್ಞೆ ಮರುಕಳಿಸುವುದೇ? ಆಕೆ ಹಾಗೆಯೇ ಬಿದ್ದುಕೊಂಡಿದ್ದಳು.

ವಿಲ್‌ನ ಮನದಲ್ಲಿ ನಿರಾಶೆಯ ಮೋಡಗಳು ಕವಿದವು.

*

ಆತ ಆ ಅಪರಿಚಿತ ಸ್ಥಳದಲ್ಲಿ ಬಿದ್ದುಕೊಂಡು ಗತಕಾಲದ ಇಂಥಾ ನೆನಪುಗಳನ್ನು ಹಾಗೆಯೇ ಮೆಲಕು ಹಾಕುತ್ತಿದ್ದ. ಮಾಲಿ ಯಾವಾಗಲೋ ಆತನ ಜೀವನದಿಂದ ದೂರವಾಗಿದ್ದಳು. ಅಬ್ಬಾ! ಆ ದಿನ ನಡೆದ ಕಾರು ಅಪಘಾತವಾದರೂ ಎಂಥದು! ನೆನೆಸಿಕೊಂಡರೆ ಇನ್ನೂ ಮೈ ಜುಮ್ಮೆನ್ನುತ್ತದೆ. ಪತ್ರಿಕೆಗಳಲ್ಲೆಲ್ಲಾ ಅದೇ ಸುದ್ದಿ.

ವಿಲ್ ಫಾರ್ನಬಿಯ ತಲೆ ಸುತ್ತತೊಡಗಿತು. ಆತನ ತಲೆಗೆಲ್ಲಾ ಕೆಸರು ಮೆತ್ತಿಕೊಂಡಿತ್ತು. ತೊಟ್ಟ ಬಟ್ಟೆಯೆಲ್ಲ ಚಿಂದಿ ಚಿಂದಿಯಾಗಿತ್ತು. ಪಾಪ, ಆತ ಎಷ್ಟು ದಿನ ಹೀಗೆಯೇ ಉಪವಾಸವಿದ್ದನೋ ಏನೋ. 'ಪತ್ರಿಕೋದ್ಯೋಗಿಯ ಜೀವನವೆಂದರೆ . ಹೂವಿನ ಹಾಸಿಗೆಯೆಂದು ಎಷ್ಟೋ ಜನ ಹೇಳುತ್ತಾರೆ. ಹಾಳಾಗಿ ಹೋಗಲಿ ಹಾಗೆ ಹೇಳುವ ಜನ. ಒಮ್ಮೊಮ್ಮೆ ಆತ ಎಷ್ಟು ಕಷ್ಟ ಅನುಭವಿಸಬೇಕಾಗಿ ಬರುತ್ತದೆಂಬುದು ಅವರಿಗೇನು ಗೊತ್ತು? ಅಬ್ಬಾ! ಪತ್ರಿಕೋದ್ಯೋಗಿಯ ಜೀವನವೇ!' ಅಂದುಕೊಂಡ ತನ್ನ ಸ್ಥಿತಿಯನ್ನು ನೆನೆದು.

ವಿಶಾಲವಾದ ವೃಕ್ಷವೊಂದರ ಕೆಳಗೆ ವಿಶ್ರಮಿಸುತ್ತಾ ಹೀಗೆಯೇ ವಿಚಾರತಂದ್ರಿಯಲ್ಲಿ ಮಗ್ನನಾದಾಗಲೇ "ಜಾಗ್ರತೆ ಜಾಗ್ರತೆ" ಎಂಬ ಶಬ್ದ ದೂರ ಗಗನದಿಂದೆಲ್ಲಿಂದಲೋ ತೂರಿಕೊಂಡು ಬಂತು.

ವಿಲ್ ಮತ್ತೆ ಏಕಾಗ್ರಚಿತ್ತನಾಗಿ ಸುತ್ತಲೂ ನೋಡಿದಾಗ ದೂರದಲ್ಲಿ ಪುಟ್ಟ ಪಕ್ಷಿಯೊಂದು ಸ್ವಚ್ಛಂದವಾಗಿ ಹಾರಾಡುತ್ತಿದ್ದುದು ಕಾಣಿಸಿತು.

ಅಂಥ ಪಕ್ಷಿಯನ್ನವನು ಕಂಡಿರಲೇ ಇಲ್ಲ. ಅಹಾ! ಎಂಥಾ ಸುಂದರ ಪಕ್ಷಿ ಅಂದುಕೊಂಡ.

ಪಕ್ಷಿ ಇತ್ತಿಂದತ್ತ ಅತ್ತಿಂದತ್ತ ಎಂದು ಸ್ವಚ್ಛಂದವಾಗಿ ವಿಹರಿಸುತ್ತಿತ್ತು. ವಿಲ್ ತದೇಕ ಚಿತ್ತದಿಂದ ಅದನ್ನೇ ವೀಕ್ಷಿಸುತ್ತಾ, ಇದೆಲ್ಲಾ ಏನು? ತಾನು ಎಲ್ಲಿ ಬಂದು ಸೇರಿದೆ? ಈ ಪಕ್ಷಿ ಇಲ್ಲಿಯೇ ಏಕೆ ಸುತ್ತುತ್ತಿದೆ? ಎಂದೆಲ್ಲಾ ಯೋಚಿಸಲಾರಂಭಿಸಿದ.

ಮತ್ತೆ ಪಕ್ಷಿಯ ಚಿಲಿಪಿಲಿ ಕೇಳಿಬಂತು. ಆದರೆ ಈ ಸಲ ಸದ್ದು ದೂರದಿಂದ ಬಂದಿರದೆ ಹತ್ತಿರದಿಂದಲೇ ಬಂದಿತ್ತು. ಈಗ ಮನಸ್ಸಿನ ಮಾರ್ಗ ಮುಕ್ತವಾದಂತೆ ವಿಲ್‌ನಿಗನಿಸಿತು. ನಡೆದದ್ದೆಲ್ಲವೂ ಅವನ ನೆನಪಿಗೆ ಬಂತು.

ವಿಲ್ ಒಬ್ಬ ಪತ್ರಿಕೋದ್ಯೋಗಿ. ಉಳಿದೆಲ್ಲ ಪತ್ರಿಕೋದ್ಯೋಗಿಗಳ ಹಾಗೆ ಆತನೂ ಹೊಸ ಅನುಭವ, ಹೊಸ ಸಾಹಸಗಳನ್ನರಸಲು ರಾನಡಂಗ್ ಬಂದರದಿಂದ ಏಕಾಕಿಯಾಗಿ ದೋಣಿಯಲ್ಲಿ ಪಯಣಿಸುತ್ತಿದ್ದ. ಆದರೆ ದಾರಿಯಲ್ಲಿ ಬಿರುಗಾಳಿ ಬೀಸತೊಡಗಿದಾಗ ಆತ ಇದ್ದುಬಿದ್ದ ಶಕ್ತಿಯನ್ನೆಲ್ಲಾ ಒಟ್ಟುಗೂಡಿಸಿ ಅತಿ ಕಷ್ಟದಿಂದ ಸಸ್ಯ ಶಾಮಲವಾದ ಈ ದ್ವೀಪದ ತೀರವನ್ನು ತಲುಪಿದ್ದ. ದ್ವೀಪದ ಸುತ್ತೂ ಚಿಕ್ಕ ದೊಡ್ಡ ಬಂಡೆಗಲ್ಲುಗಳು ಬಿದ್ದುಕೊಂಡಿದ್ದು ಮೇಲಿನಿಂದ ನೋಡಿದರೆ ದ್ವೀಪಕ್ಕೆ ಉಂಗುರ ತೊಡಿಸಿದ ಹಾಗೆ ಕಾಣಿಸುತ್ತಿತ್ತು. ವಿಲ್ ನಾವೆಯನ್ನು ಬಿಟ್ಟು ಮೆಲ್ಲಮೆಲ್ಲನೆ ಬಂಡೆಯನ್ನೇರತೊಡಗಿದ್ದ. ಏರುವಾಗ ಅನೇಕ ಸಲ ಕಾಲು ಜಾರಿತು. ಆದರೂ ಆತ ಹೇಗೋ ಸಾವರಿಸಿಕೊಂಡು ಮೇಲೇರಿದಾಗ ಮತ್ತೊಂದು ವಿಪತ್ತು ಕಾದಿತ್ತು. ಅಲ್ಲಿ ಎಲ್ಲಿ ನೋಡಿದಲ್ಲಿ ನೀರು ಹಾವುಗಳು. ಸುದೈವದಿಂದ ಅವು ವಿಷಾಕ್ತವಾಗಿರದ್ದರಿಂದ ವಿಲ್ ಜೀವಸಹಿತ ಪಾರಾದ.

ಸನಿಹದಲ್ಲೇ ಒಂದು ಬೃಹದಾಕಾರದ ಗುಡ್ಡವಿತ್ತು. ವಿಲ್ ಕುತೂಹಲದಿಂದ ಅದನ್ನೇರತೊಡಗಿದ. ಗುಡ್ಡ ಕಡಿದಾದುದರಿಂದ ಕ್ಷಣ ಕ್ಷಣಕ್ಕೂ ತಾನು ಮೃತ್ಯುವಿಗೆ ಹತ್ತಿರವಾಗುತ್ತಿದ್ದೇನೆ ಎಂಬ ಭಾವನೆ ಬರುತ್ತಿತ್ತು. ಜೀವ ಗಟ್ಟಿಮಾಡುವರಿಂದ ಮೇಲಿಂದ ಮೇಲೆ ಕಾಲು ಜಾರುತ್ತಿದ್ದರೂ ಹೇಗೋ ಸಾವರಿಸಿಕೊಂಡು ಮೇಲೇರಿದ. ತುದಿಯನ್ನೇರಿದಾಗ ಅಲ್ಲಲ್ಲಿ ತರೆದ ಕಾಲಿನಿಂದ ರಕ್ತ ಹರಿಯುತ್ತಿತ್ತು.

ಪಶ್ಚಿಮ ದಿಗಂತದಲ್ಲಿ ಸೂರ್ಯ ಕ್ರಮೇಣ ಕೆಳಗಿಳಿಯುತ್ತಿದ್ದ. ಸಂಜೆಯ ಸ್ವರ್ಣಮ ಛಾಯೆ ಎಲ್ಲೆಡೆಯಲ್ಲೂ ಪಸರಿಸುತ್ತಿತ್ತು. ತಂಗಾಳಿ ಬೀಸುತ್ತಿತ್ತು. ಪ್ರಕೃತಿಸೌಂದರ್ಯ ರಮ್ಯವಾಗಿತ್ತು. ಆದರೆ ಇದನ್ನು ಸವಿಯುವ ತ್ರಾಣ ವಿಲ್‌ನಲ್ಲಿ ಇರಲಿಲ್ಲ. ಏಕೆಂದರೆ ಆ ವೇಳೆಗೆ ಆತ ಆಯಾಸದಿಂದ ಬಳಲಿ ಹೋಗಿದ್ದ. ಕಣ್ಣಿಗೆ ಚಕ್ರ ಬರುತ್ತಿತ್ತು. ಕೈಕಾಲುಗಳು ನಡುಗುತ್ತಿದ್ದವು. ವಿಲ್ ನೆಲದ ಮೇಲೆ ಬಿದ್ದ ತರಗೆಲೆಗಳನ್ನು ಹಾಸಿಗೆ ಮಾಡಿಕೊಂಡು ಬೆಳಗಾಗುವ ವರೆಗೆ ಜಗತ್ತಿನ ಪರಿವೆಯಿಲ್ಲದೆ ಮಲಗಿದ.

ಅದೇ ತಾನೆ ಸೂರ್ಯ ಉದಿಸತೊಡಗಿದ್ದ. ತರಗೆಲೆಗಳ ಮೇಲೆ ಯಾರೋ ನಡೆದಾಡುವ ಸಪ್ಪಳವಾಗಿ ವಿಲ್ ಎಚ್ಚರಗೊಂಡ. ಆತ ತುಂಬಾ ಕಷ್ಟದಿಂದ ಕುತ್ತಿಗೆಯನ್ನೆತ್ತಿ ಮೇಲೆ ನೋಡಿದಾಗ ಮುದ್ದಾದ ಇಬ್ಬರು ಮಕ್ಕಳು ತನ್ನೆಡೆಗೆ ಬರುತ್ತಿರುವುದು ಕಾಣಿಸಿತು. ಅವರಲ್ಲೊಬ್ಬ ಹುಡುಗ, ಇನ್ನೊಬ್ಬಳು ಹುಡುಗಿ. ಹುಡುಗನ ವಯಸ್ಸು ಬಹಳವೆಂದರೆ ಐದು ಅಥವಾ ಆರು ವರ್ಷವಿರಬೇಕು. ಹುಡುಗಿಯ ವಯಸ್ಸು ಹನ್ನೆರಡು ಮೀರಿರಲಿಕ್ಕಿಲ್ಲ. ಆಕೆಯ ಕೈಯಲ್ಲಿ ಹಣ್ಣಿನ ಬುಟ್ಟಿಯಿತ್ತು. ಅವರಿಬ್ಬರ ಮೈಬಣ್ಣ ಬಿಳಿಯದಾಗಿದ್ದರೂ ಸೂರ್ಯನ ಪ್ರಕಾಶದಲ್ಲಿ ಅವು ಬಂಗಾರದ ಹಾಗೆ ಥಳಥಳ ಹೊಳೆಯುತ್ತಿತ್ತು. ಅಹಾ ! ಎಂಥಾ ಮುದ್ದಾದ ಮಕ್ಕಳು ಅಂದುಕೊಂಡ ವಿಲ್.

ಆ ಮಕ್ಕಳು ವಿಲ್‌ನ ಬಳಿ ಬಂದು ಆತನಿಗೆ ತಿನ್ನಲೆಂದು ಹಣ್ಣು ಕೊಟ್ಟರು. ಪಾಪ ! ಎಷ್ಟು ಕಾಲದಿಂದ ಆತ ಉಪವಾಸವಿದ್ದನೋ ಏನೋ, ಹಣ್ಣು ಕೈಗೆ ಬರುತ್ತಲೆ ಗಬಗಬ ತಿಂದ. ಕ್ಷುಧಾಬಾಧೆ ಸ್ವಲ್ಪ ಹಿಂಗುತ್ತಲೆ ಅಡಗಿ ಹೋದ ಚೈತನ್ಯ ಮರಳಿ ಬಂತು. "ಏನಮ್ಮಾ, ಏನು ಹೆಸರು ನಿನ್ನದು ?" ಎಂದಾತ ಬಾಲಿಕೆಯನ್ನು ಕೇಳಿದಾಗ ಆಕೆ, "ಸರೋಜಿನಿ ಮ್ಯಾಕ್‌ಫೈಲ್" ಎಂದುತ್ತರಿಸಿದಳು.

"ಮತ್ತೆ ನಿನ್ನ ಹೆಸರು ?" ವಿಲ್ ಬಾಲಕನನ್ನು ಕೇಳಿದ.

"ಟಾಮ್ ಕೃಷ್ಣ."

ಹುಡುಗಿ ಸ್ವಲ್ಪ ಕಾಲ ಹಾಗೆಯೆ ನಿಂತಿದ್ದು ವಿಲ್‌ನನ್ನು ಕೇಳಿದಳು: "ಇಲ್ಲಿಗೆ ಹೇಗೆ ಬಂದಿರಿ ನೀವು ? ವಿಮಾನದಿಂದ ಪಾಳದಲ್ಲಿ ಇಳಿದು ಇಲ್ಲಿಗೆ ಬಂದಿರಾ ?"

ಆ ಸ್ಥಳದ ಹೆಸರು ಪಾಳ ಎಂದು ವಿಲ್‌ನಿಗೆ ಗೊತ್ತಾದದ್ದು ಆಗಲೆ. ಆತ ಹೇಳಿದ, "ಊಹುಂ. ಇಲ್ಲ, ನಾನು ಬಂದದ್ದು ಸಮುದ್ರದಿಂದ."

ಇದನ್ನು ಕೇಳಿ ಹುಡುಗಿಗೆ ಆಶ್ಚರ್ಯವೇ ಆಶ್ಚರ್ಯ. "ಹಾಗಾದರೆ ನಿಮ್ಮ ಬಳಿ ನಾವೆಯಿದೆಯೇನು ?" ಆಕೆ ವಿಸ್ಮಯದಿಂದ ಕೇಳಿದಳು.

"ಇತ್ತು. ಆದರೆ ಈಗ ಇಲ್ಲ."

ಬಿರುಗಾಳಿಯ ದೃಶ್ಯ ಅವನ ಕಣ್ಣಿಗೆ ಕಟ್ಟಿದಂತಾಯಿತು. ತೂಫಾನಿಗೆ ಸಿಕ್ಕ ನಾವೆ ವಿಶಾಲವಾದ ಸಮುದ್ರದಲ್ಲಿ ತರಗೆಲೆಯಂತೆ ಅಲ್ಲಾಡಿದ್ದು, ಅದರ ಫಳಿಗಳೆಲ್ಲ ಒಂದೊಂದಾಗಿ ಕಳಚತೊಡಗಿದ್ದು, ಕೊನೆಗೆ ಅತ್ಯಂತ ಕಷ್ಟದಿಂದ ತೀರವನ್ನು ಸೇರಿದ್ದು—ಈ ಎಲ್ಲ ದೃಶ್ಯ ಅವನ ಮಸ್ತಿಷ್ಕದಲ್ಲಿ ಸುಳಿದು ಹೃದಯ ಭಯದಿಂದ ಕಂಪಿಸಿತು.

ವಿಲ್ ಸುಧಾರಿಸಿಕೊಂಡು ತಾನು ಕಷ್ಟಪಟ್ಟು ಬಂಡೆಯೇರಿದ್ದನ್ನೂ ಅಲ್ಲಿ ಹಾವುಗಳ ಕೈಲಿ ಸಿಕ್ಕು ಗಾಸಿಗೊಂಡಿದ್ದನ್ನೂ ಒಳ್ಳೇ ರಸವತ್ತಾಗಿ ವರ್ಣಿಸಿದ. ಆತ ಹೇಳಿದ್ದರಲ್ಲಿ ಸತ್ಯದ ತಿರುಳೇನೋ ಇತ್ತು. ಆದರೆ ಆತನ ವರ್ಣನೆಯಲ್ಲಿ ವಾಸ್ತವಕ್ಕಿಂತ ಸ್ವಕಪೋಲಕಲ್ಪಿತವಾದದ್ದೇ ಹೆಚ್ಚಾಗಿತ್ತು.

ಆತ ಹೇಳಿದ್ದನ್ನೆಲ್ಲಾ ಕೇಳಿದ ನಂತರ ಸರೋಜಿನಿ ಹೇಳಿದಳು: "ಅದೆಲ್ಲಾ ಸರಿ. ಆದರೆ ನೀವು ಇಷ್ಟು ಹೆದರಿದ್ದಾದರೂ ಏಕೆ ? ಬಂಡೆಯನ್ನೇರುವಾಗ ನೀವೇನೂ ಕೆಳಗೆ ಉರುಳಿ ಬೀಳಲಿಲ್ಲ. ಅಲ್ಲಿ ಹಾವುಗಳನ್ನು ಕಂಡರೇನೋ ಸರಿ. ಆದರೆ ಅವುಗಳಿಂದ ಕಚ್ಚಿಸಿಕೊಳ್ಳಲಿಲ್ಲ. [illegible] ನಿನ್ನೆ. ಅಂದ ಮೇಲೆ ಹಿಂದೆ ನಡೆದದ್ದನ್ನು ನೆನೆಸಿಕೊಂಡು ಭಯಪಡುವುದಾದರೂ ಏಕೆ ? ನೋಡಿ, ಇಲ್ಲಿನ ಪ್ರಕೃತಿ ಎಷ್ಟು ಸುಂದರವಾಗಿದೆ ! ಆಕಾಶದಲ್ಲಿ ಸೂರ್ಯ ಹೇಗೆ ಏರುತ್ತಿದ್ದಾನೆ ! ಹೇಗೆ ಪ್ರಕಾಶಿಸುತ್ತಿದ್ದಾನೆ ! ಅಂದ ಮೇಲೆ ಉಳಿದೆಲ್ಲ ಯೋಚನೆ ಏಕೆ ?"

'ಹೌದು. ಪ್ರಾಣವಂತೂ ಉಳಿದಿದೆ ಅಂದ ಮೇಲೆ ಉಳಿದ ಯೋಚನೆ ಏಕೆ?' ಅಂದುಕೊಂಡು ವಿಲ್ ಒಮ್ಮೆ ನಕ್ಕ.

ಅಷ್ಟರಲ್ಲಿ ಯುರೋಪಿಯನ್ ವೇಷ ಧರಿಸಿದ ವ್ಯಕ್ತಿಯೊಬ್ಬ ಅವರ ಮಧ್ಯೆ ಪ್ರತ್ಯಕ್ಷನಾದ. ಅವನನ್ನು ನೋಡುತ್ತಲೇ ಆ ಹುಡುಗಿ, "ದಾದಾಜಿ," ಎಂದು ಅತ್ಯಂತ ಪ್ರೇಮದಿಂದ ಆತನ ಬಳಿ ಬಂದು ನಿಂತಳು.

ಐವತ್ತನ್ನು ದಾಟಿದ ಆ ವ್ಯಕ್ತಿಯ ಮುಖದ ಮೇಲೆ ಗಂಭೀರವಾದ, ಆದರೆ ಸೌಮ್ಯವಾದ ಕಳೆಯಿತ್ತು. "ನಾನು ಡಾಕ್ಟರ್ ರಾಬರ್ಟ್ ಮ್ಯಾಕ್‌ಫೈಲ್. ಸರೋಜಿನಿಯು ನನಗೆ ಮೊಮ್ಮಗಳಾಗಬೇಕು," ಆತ ತನ್ನನ್ನು ತಾನೇ ಪರಿಚಯಿಸಿಕೊಂಡ.

ಅನಂತರ ಅವರಿಬ್ಬರೂ ಆ ಮಾತು ಈ ಮಾತು ಆಡುತ್ತಿರುವಾಗ ಸರೋಜಿನಿಯು ವಿಲ್ ಪಟ್ಟ ಬವಣೆಯನ್ನು ರಾಬರ್ಟನಿಗೆ ಹೇಳಿದಳು. ವಿಲ್‌ನ ಬಗೆಗೆ ರಾಬರ್ಟನಲ್ಲಿ ಸಹಾನುಭೂತಿಯುಂಟಾಯಿತು.


ವಿಲ್ ತುಂಬಾ ತ್ರಸ್ತನಾಗಿದ್ದ. ಅವನ ಲಕ್ಷ್ಯವನ್ನು ಬೇರೆಡೆಗೆ ಹೊರಳಿಸಿ ಸಾಮಾನ್ಯ ಮನಃಸ್ಥಿತಿಯುಂಟಾಗುವ ಹಾಗೆ ಮಾಡಲು ರಾಬರ್ಟ್ ಅವನಿಗೆ ತನ್ನ ಮನೆತನದ ವಿಷಯ ಹೇಳಲಾರಂಭಿಸಿದ. ಆ ಪ್ರಕಾರ ಅವನ ಹಿರಿಯ ಮಗನ ಹೆಸರು ಡುಗಾಲ್ಡ್. ಆತನ ಮಗಳೇ ಸರೋಜಿನಿ. ನಾಲ್ಕು ವರ್ಷಗಳ ಹಿಂದೆ ಒಮ್ಮೆ ಆತ ಪರ್ವತಾರೋಹಣ ಮಾಡುತ್ತಿದ್ದಾಗ ಕೆಳಗೆ ಬಿದ್ದು ಸತ್ತುಹೋದ.

ರಾಬರ್ಟ್ ಇದನ್ನು ಹೇಳುತ್ತಿರುವಾಗಲೇ ಮತ್ತೊಮ್ಮೆ "ಜಾಗ್ರತೆ ಜಾಗ್ರತೆ" ಎಂಬ ಶಬ್ದ ಎಲ್ಲಿಂದಲೋ ತೂರಿಕೊಂಡು ಬಂತು.

"ಇದೇನು? ಅದಾವ ಶಬ್ದ? ಯಾರು ಹೀಗೆ ಕೂಗುತ್ತಿದ್ದಾರೆ? ಹೀಗೆ ಕೂಗು ಕೇಳಿ ಬಂದಾಗ ಎಲ್ಲಿ ನೋಡಿದರೂ ಕೂಗಿದವರು ಕಾಣುವುದೇ ಇಲ್ಲವಲ್ಲ! ಇದೆಲ್ಲದರ ಅರ್ಥವೇನು?" ವಿಲ್ ಕುತೂಹಲವಶನಾಗಿ ರಾಬರ್ಟ್ ಮ್ಯಾಕ್‌ಫೈಲನನ್ನು ಕೇಳಿದಾಗ ಆತ, ಅಲ್ಲಿನ ರಾಜನು ಪರ್ವತ ಪ್ರದೇಶದಲ್ಲಿ ತಿರುಗುವವರಿಗೆ ಎಚ್ಚರಿಕೆ ಕೊಡಲು ಒಂದು ಸಾವಿರ ಮೈನಾ ಪಕ್ಷಿಗಳಿಗೆ ಆ ಶಬ್ದವನ್ನು ಕಲಿಸಿ ಹಾರಲು ಬಿಟ್ಟಿದ್ದಾನೆ; ಇದರಿಂದಾಗಿ ದುರ್ಘಟನೆಗಳ ಸಂಖ್ಯೆ ಕಡಿಮೆಯಾಗಿದೆ ಎಂದು ಹೇಳಿದ.

ವಿಲ್‌ನಿಗಾದ ಗಾಯಗಳ ಚಿಕಿತ್ಸೆಗಾಗಿ ಅಲ್ಲಿನ ಗೆಸ್ಟ್‌ಹೌಸಿನ ಆಸ್ಪತ್ರೆಗೆ ಅವನನ್ನು ಸಾಗಿಸಬೇಕೆಂದು ರಾಬರ್ಟ್ ನಿರ್ಧರಿಸಿ ಸಹಾಯಕ್ಕಾಗಿ ವಿಜಯ ಭಟ್ಟಾಚಾರ್ಯ ಹಾಗೂ ಮುರುಗನ್‌ರನ್ನು ಕರೆದ. ಕೋಮಲ ಭಾವನೆಗಳುಳ್ಳ ಸುಂದರ ಯುವಕನಾಗಿದ್ದ. ವಿಲ್ -ರಾನಡಂಗ್ ಲೋಬೋದಲ್ಲಿ ಕರ್ನಲ್ ದೀಪನೊಂದಿಗೆ ಮುರುಗನ್ನನನ್ನು ನೋಡಿದ್ದ. ಆತ ಇಲ್ಲಿಗೆ ಹೀಗೆ ಅಕಸ್ಮಾತ್ತಾಗಿ ಬಂದದ್ದನ್ನು ನೋಡಿ ಆಶ್ಚರ್ಯವೇ ಆಯಿತು. ವಿಲ್ ಕರ್ನಲ್ಲನ ಮರ್ಸಿಡೀಸ್ ಬೆಂಜನ್ನು ನೂರಾಹತ್ತು ಮೈಲುಗಳ ವೇಗದಲ್ಲಿ ಓಡಿಸಿದ್ದ ಕೂಡ. ಅವನು ಮುರುಗನ್ನನನ್ನು ಮಾತಾಡಿಸಬೇಕೆಂದು ಬಾಯಿ ತೆರೆಯುವಷ್ಟರಲ್ಲೇ ಮುರುಗನ್ ಸನ್ನೆ ಮಾಡಿ ಸುಮ್ಮನಿರುವಂತೆ ವಿಲ್‌ನಿಗೆ ಸೂಚಿಸಿದ.

ತಾನು ಕರ್ನಲ್ಲನನ್ನು ಒಬ್ಬ ರಿಪೋರ್ಟರನಾಗಿ ಸಂಪರ್ಕಿಸಲು ಮಾತ್ರ ಬಂದಿದ್ದಾಗಿ ಗೆಸ್ಟ್ ಹೌಸಿನ ಆಸ್ಪತ್ರೆಯಲ್ಲಿ ವಿಲ್ ಡಾಕ್ಟರ್ ರಾಬರ್ಟ್ ಮ್ಯಾಕ್‌ಫೈಲನಿಗೆ ಪ್ರಾಸಂಗಿಕವಾಗಿ ಹೇಳಿದ. ವಾಸ್ತವದಲ್ಲಿ ಆತ ಲಾರ್ಡ್ ಆಲ್ಡೀಹೈಡನ ಕೆಲಸಕ್ಕಾಗಿ ಸರ್ವಾಧಿಕಾರಿಯಾದ ಕರ್ನಲ್ ದೀಪನನ್ನು ಭೇಟಿಯಾಗಲು ಬಂದಿದ್ದ. ಆದರೆ ಅದನ್ನು ಆಗಲೇ ಬಹಿರಂಗಪಡಿಸುವಂತಿರಲಿಲ್ಲ; ಲಾರ್ಡ್ ಆಲ್ಡೀಹೈಡ್ ಆಗ್ನೇಯ ಪೆಟ್ರೋಲಿಯಂ ಕಂಪೆನಿಯ ಆಲ್ ಇನ್ ಆಲ್ ಆಗಿದ್ದ. ತನ್ನ ...



[illegible] ಕರ್ನಲ್ ದೀಪನ [illegible] ಆತನ ಧೋರಣೆಗಳೇನು? ಒಂದು ವೇಳೆ ಆತ ತನ್ನ ಕಂಪೆನಿಯನ್ನು ಪಾಳದಲ್ಲಿ [illegible] ಕೂಲಂಕಷವಾಗಿ ಪರಿಶೀಲಿಸಿ ವರದಿ ಮಾಡಲು ವಿಲ್ಸನ್ನು ಅಲ್ಲಿಗೆ ಕಳಿಸಿದ್ದ.

ಕರ್ನಲ್ ದೀಪನು ವಿಲ್ಸನೊಂದಿಗೆ ಈ ವಿಷಯದಲ್ಲಿ ಸಾಕಷ್ಟು ಸಹಕಾರದಿಂದ ನಡೆದುಕೊಂಡ. ಅಲ್ಡೀಹೈಡನಿಗೆ ಪಾಳದ ರಾಣಿಯ ಪರಿಚಯವಿದ್ದುದರಿಂದ ತನ್ನ ವಾಸ್ತವ್ಯದ ಕಾಲದಲ್ಲಿ ಅವಳನ್ನು ಭೇಟಿಯಾಗಬೇಕೆಂದು ಅಲ್ಡೀಹೈಡನು ವಿಲ್ಸನಿಗೆ ಸೂಚಿಸಿದ್ದ. ಪಾಳದ ಭೂಗರ್ಭದಲ್ಲಿ ಸಂಗ್ರಹವಾದ ಪೆಟ್ರೋಲಿಯಮ್ಮಿನ ಬಗೆಗೆ ಇರುವಷ್ಟೇ ಆಸಕ್ತಿ ರಾಣಿಯ [illegible] ಪೂರೈಸಿದರೆ ಅವನಿಗೆ ಒಂದು ವರ್ಷ ಪಗಾರಿ ರಜೆಯಲ್ಲದೆ ಭಾರೀ ಬೋನಸ್ಸು ದೊರೆಯುವ ವ್ಯವಸ್ಥೆ ಮಾಡುವುದಾಗಿ ಆತ ವಿಲ್ಸನಿಗೆ ಮಾತು ಕೊಟ್ಟಿದ್ದ. ಅವನ ಸುದೈವವೋ [illegible]

ಪಾಳದಲ್ಲಿ ಅನಾಯಾಸವಾಗಿ ಡಾ. ರಾಬರ್ಟನ ಸಹಾಯ ಒದಗಿಬಂದಿದ್ದು ಅವನ ಸುದೈವವೇ ಎನ್ನಬೇಕು. ರಾಬರ್ಟನು ವಿಲ್ಸನಿಗೆ ವೈದ್ಯಕೀಯ ನೆರವನ್ನು ನೀಡಿದ್ದಲ್ಲದೆ ತನ್ನ ಬಂಗಲೆಯಲ್ಲೇ ಇಳಿಸಿಕೊಂಡು ಎಲ್ಲ ಬಗೆಯ ಅನುಕೂಲಗಳನ್ನೂ ಮಾಡಿಕೊಟ್ಟ. ಆ ಬಂಗಲೆಯಲ್ಲಿ ರಾಬರ್ಟನ ಸೊಸೆ ಸುಶೀಲೆಯೂ ಇರುತ್ತಿದ್ದಳು.

*

ಸುಶೀಲಾ ಮ್ಯಾಕ್‌ಫೈಲ್ ತನ್ನ ಪತಿಯ ಮರಣದ ಬಗ್ಗೆ ಯೋಚಿಸುತ್ತಿದ್ದಳು. ದೂರದಲ್ಲಿ ಜ್ವಾಲಾಮುಖಿಯಿಂದ ಧೂಮಿಲವಾದ ಮೋಡಗಳು ಹಳುತ್ತಿದ್ದವು. ಅಶೋಕವೃಕ್ಷದಲ್ಲಿ [illegible] ಕೆಳಗೆ ಬಿದ್ದು ವಿಕೃತಗೊಂಡ ಪತಿಯ ರೂಪ ಕಣ್ಣಿಗೆ ಕಟ್ಟಿದಂತಾಗಿ ಆಕೆಗೆ ಸಂಕಟವಾಯಿತು. ಆತ ಸತ್ತಾಗ ಅವಳ ದುಃಖ ಕಟ್ಟೆಯೊಡೆದು ಹರಿದಿತ್ತು. ಅವನಿಲ್ಲದ ಮನೆ ಅವಳ ಪಾಲಿಗೆ ಶೂನ್ಯವಾಗಿತ್ತು. ಆದರೆ ದಿನಗಳೆದಂತೆ ಕ್ರಮೇಣವಾಗಿ ಅವಳು ಹೊಸ ಪರಿಸ್ಥಿತಿಗೆ ಒಗ್ಗಿಕೊಂಡಿದ್ದಳು. ಎರಡು ಎಳೆಯ ಜೀವಗಳ ಸಲುವಾಗಿಯಾದರೂ ತಾನು ಬದುಕಲೇಬೇಕೆಂದು ನಿರ್ಧರಿಸಿದ್ದಳು.

ವಿಲ್ಸನ್ನು ಆಸ್ಪತ್ರೆಗೆ ಸಾಗಿಸಿದ ನಂತರ ಮನೆಗೆ ಬಂದು ಡಾ. ರಾಬರ್ಟ್‌ನು ವಿಲ್ ಫಾರ್ನಬಿಯ ಕಥೆಯನ್ನು ಹೇಳಿದಾಗ ಸೂಕ್ಷ್ಮ ಸಂವೇದಿಯಾದ ಸುಶೀಲಾ ಸಹಜವಾಗಿಯೇ ಉತ್ಕಂಠಿತ- [illegible] ಅವಳು ವಿಲ್ಸನ್ನು ಭೇಟಿಯಾಗಿ ತನ್ನನ್ನು ಪರಿಚಯಿಸಿಕೊಂಡು ಆತನ ಕ್ಷೇಮಸಮಾಚಾರವನ್ನು ವಿಚಾರಿಸಿದಳು. ಆ ಮಾತು ಈ ಮಾತು ಆಡುತ್ತಾ ವಿದ್ಯಾರ್ಥಿಜೀವನದ ಪ್ರಸ್ತಾಪ ಬಂತು. ಸುಶೀಲೆಯೂ ತಾನು ಇಂಗ್ಲೆಂಡು ಹಾಗೂ ವೇಲ್ಸ್‌ಗಳಲ್ಲಿ ಕಳೆದ ದಿನಗಳನ್ನು ಸ್ಮರಿಸಿಕೊಂಡಳು.

ಆಕೆ ಅಲ್ಲಿನ ನದಿ, ಸರೋವರ, ಜಲಾಶಯಗಳನ್ನೂ ಅವುಗಳಲ್ಲಿ ವಾಸಿಸುವ ರಾಜಹಂಸಗಳನ್ನೂ [illegible] ಅವುಗಳೊಂದಿಗೆ [illegible] ಮುಖದ ಮೇಲೆ ಬಾಲಿಶವಾದ ಭೋಳೇತನ ಎದ್ದು ಕಾಣುತ್ತಿತ್ತು. ಆದರೆ ವಾಸ್ತವವಾಗಿ, ಆಕೆ ಮೆಸ್ಮೆರಿಜಂ ಪ್ರಯೋಗಿಸಿ ಅವನ ಮನಸ್ಸಿಗಾದ ವೇದನೆಯನ್ನು ನಿವಾರಿಸುವಲ್ಲಿ ನಿರತಳಾಗಿದ್ದಳು.

ದುಗಾಲ್ಡನ ಆಕಸ್ಮಿಕ ಮರಣ ಡಾಕ್ಟರ್ ರಾಬರ್ಟನನ್ನು ಆಘಾತಕ್ಕೀಡುಮಾಡಿತ್ತು. ಸಾಲದ್ದಕ್ಕೆ ಅವನ ಪತ್ನಿ ಲಕ್ಷ್ಮಿ ಒಂದು ವರ್ಷ- [illegible] ಇನ್ನೂ ತೀವ್ರಗೊಳಿಸಿತ್ತು. ಈ ವೃದ್ಧ [illegible] ಮೆಲುಕುಹಾಕುತ್ತಾ ಅದರಲ್ಲೇ ತೃಪ್ತಿಪಡುತ್ತಿದ್ದರು. ಆದರೆ ಈಗ ಪರಿಸ್ಥಿತಿ ಇನ್ನೂ ಬಿಗ-

ಡಾಯಿಸಿತ್ತು. ಲಕ್ಷ್ಮಿ ಹಾಸಿಗೆ ಬಿಟ್ಟು ಎದ್ದು ಕೂಡುವ ಹಾಗೆಯೂ ಇರಲಿಲ್ಲ. ಡಾ. ರಾಬರ್ಟ್ ಅವಳ ಸೇವೆಯಲ್ಲಿಯೆ ತನ್ನೆಲ್ಲ ವೇಳೆ ಕಳೆಯುತ್ತಿದ್ದ. ಒಂದು ಮಾತಿನಲ್ಲಿ ಹೇಳಬೇಕೆಂದರೆ ಅವರ ದಾಂಪತ್ಯ ದಿವ್ಯಪ್ರೇಮದ ಒಂದು ಉತ್ಕೃಷ್ಟ ಉದಾಹರಣೆಯಾಗಿತ್ತು.

*

ಪಾಳದ ರಾಜಧಾನಿಯಾದ ಶಿವಪುರದಲ್ಲಿ ನಡೆಯಲಿರುವ ಪ್ರಿವೀ ಕೌನ್ಸಿಲ್ಲಿನ ಮೀಟಿಂಗಿಗಾಗಿ ತಾನು ಹೋಗುತ್ತಿರುವುದಾಗಿಯೂ ತನ್ನ ಅನುಪಸ್ಥಿತಿಯಲ್ಲಿ ಸುಶೀಲೆಯೆ ಅವನನ್ನು ನೋಡಿಕೊಳ್ಳುವಳೆಂದೂ ಡಾ. ರಾಬರ್ಟ್ ಮ್ಯಾಕ್‌ಫೈಲ್ ಆಸ್ಪತ್ರೆಗೆ ಸೇರಿಸಿದ ಮರುದಿನವೆ ವಿಲ್‌ನಿಗೆ ಹೇಳಿದ. ಜೊತೆಗೆ ಪಾಳದ ಹಿಂದಿನ ರಾಜ ಬರೆದ ಅಧ್ಯಾತ್ಮಿಕ ಪುಸ್ತಕವೊಂದನ್ನು ಅವನ ಕೈಗಿತ್ತ. ಅದರ ಶೀರ್ಷಿಕೆ ಹಾಗೂ ಒಳಗಿದ್ದ ವಿಷಯಗಳೆರಡೂ ವಿಲ್‌ನಿಗೆ ಸ್ವಲ್ಪ ವಿಚಿತ್ರವೆನಿಸಿದವು. ಆತ ರಾಜಪರಿವಾರದ ಬಗೆಗೆ ಕೇಳಿದಾಗ ಡಾ. ರಾಬರ್ಟ್ ಹೇಳಿದ್ದಿಷ್ಟು : ಆ ಪುಸ್ತಕವನ್ನು ಬರೆದ ರಾಜ ೧೯೩೫ ರಲ್ಲಿ ತೀರಿಕೊಂಡ. ಅವನ ಮಗ ಅದಕ್ಕಿಂತ ಮೊದಲೆ ತೀರಿಹೋಗಿದ್ದ. ಹೀಗಾಗಿ ಆತನ ಮಗಳ ಮಗನೇ ಸಿಂಹಾಸನವನ್ನೇರಿದ. ಆತನ ಮೊಮ್ಮಗನೇ ಈಗಿನ ರಾಜ.

ಬಳಿಕ ವಿಲ್ ಡಾ. ರಾಬರ್ಟನ ಮನೆತನ ಮೂಲತಃ ಎಲ್ಲಿಂದ ಬಂತು ? ಎಂದು ವಿಚಾರಿಸಿದಾಗ, ತನ್ನ ಮನೆತನದ ಮೂಲಪುರುಷ; ಆ ಅಧ್ಯಾತ್ಮಿಕ ಪುಸ್ತಕವನ್ನು ಬರೆದ ರಾಜನ ಅಜ್ಜನ ಕಾಲದಲ್ಲಿ ಪ್ರಥಮತಃ ಪಾಳಕ್ಕೆ ಬಂದು ನೆಲೆಸಿದ್ದಾಗಿ ಡಾ. ರಾಬರ್ಟ್ ಹೇಳಿದ.

ಡಾ. ರಾಬರ್ಟ್ ಹೊರಟುಹೋದ ನಂತರ ವಿಲ್ ಪುಸ್ತಕದ ಪುಟಗಳನ್ನು ತಿರುವತೊಡಗಿದ. ಆಗ ಅನೇಕ ವಿಚಿತ್ರ ಸೂಕ್ತಿಗಳು ಕಣ್ಣಿಗೆ ಬಿದ್ದವು. ಅವುಗಳ ಪೈಕಿ ಕೆಲವು ಇವು :

"ನಮಗೆ ಎಲ್ಲಿಯೂ ಹೋಗುವ ಅವಶ್ಯಕತೆಯಿಲ್ಲ. ನಾವು ಎಲ್ಲಿಗೆ ಹೋಗಬೇಕೆಂದು ಇಚ್ಛಿಸುತ್ತೇವೆಯೋ ಅಲ್ಲಿಯೆ ನಾವಿದ್ದೇವೆ ಎನ್ನುವುದು ಮೊದಲೆ ಗೊತ್ತಾಗಿದ್ದರೆ ಎಷ್ಟು ಚೆನ್ನಾಗಿತ್ತು!"

"ಧರ್ಮದ ಎಲ್ಲ ಶಬ್ದಗಳೂ ಹೊಲಸಾಗಿವೆ. ಬುದ್ಧ, ಈಶ್ವರ ಅಥವಾ ಕ್ರಿಸ್ತನ ಬಗೆಗೆ ಉಪದೇಶ ಕೊಡುತ್ತ ತಿರುಗುವವರು ಮೊದಲು ಕಾರ್ಬೋಲಿಕ್ ಸೋಪಿನಿಂದ ಮುಖ ತೊಳೆದುಕೊಳ್ಳುವುದು ಎಲ್ಲಕ್ಕಿಂತ ಅವಶ್ಯವಾಗಿದೆ."

"ಘರ್ಷಣೆ ಹಾಗೂ ಮೌಢ್ಯಗಳು ಸಮಸ್ತ ಇತಿಹಾಸ ಹಾಗೂ ಆತ್ಮಚರಿತ್ರೆಗಳ ಕಥಾವಸ್ತುವಾಗಿವೆ."

"ಧರ್ಮ ಹಾಗೂ ಶ್ರದ್ಧೆಯ ನಡುವೆ ಅಂತರ-

ಗರ್ಭಾಶಯದ ಕ್ಯಾನ್ಸರ್

ಶಿ ಸ

ಮಹಾರೋಗದ
ನಿವಾರಣೆ-೮

ಮಹಿಳೆಯರು ಅದರಲ್ಲಿಯೂ ೩೫ ವರ್ಷದ ಮೇಲ್ಪಟ್ಟವರು ಈ ಕೆಳಗಿನ ಅಂಶಗಳನ್ನು ಕಡ್ಡಾಯವಾಗಿ ಗಮನಿಸಬೇಕು.

* ರಕ್ತ ಮಿಶ್ರಿತ ಬಿಳಿಪದರು ಒಮ್ಮೆ ಜಾಸ್ತಿ, ಒಮ್ಮೆ ಕಡಿಮೆ ಹೀಗೆ ಸದಾ ಆಗುತ್ತಿದ್ದರೆ ಮತ್ತು ದುರ್ಗಂಧದಿಂದ ಕೂಡಿದ್ದರೆ.
* ಸಂಭೋಗ ಕ್ರಿಯೆ ಮತ್ತಿತರ ಕಾರಣಗಳಿಗಾಗಿ ಆದ ಗಾಯದಿಂದ ಇಲ್ಲವೆ ತ್ರಾಸದಾಯಕ ಮಲಬದ್ಧತೆಯಿಂದ ಅನಿಯಮಿತವಾಗಿ ರಕ್ತಸ್ರಾವವಾಗುತ್ತಿದ್ದರೆ.
* ಹಿಂದಿನಿಂದ ಎರಡು ವರ್ಷಗಳ ವರೆಗೆ ಮುಟ್ಟು ನಿಂತ ನಂತರ ರಕ್ತಸ್ರಾವವಾಗುತ್ತಲಿದ್ದರೆ:

ನಿಮಗೆ ಕ್ಯಾನ್ಸರ್ ರೋಗ ಅಂಟಿಕೊಂಡಿರಬಹುದೆಂದು ಭಾವಿಸಬೇಕು. ಪ್ರಾರಂಭಿಕ ಅವಸ್ಥೆಯಲ್ಲಿದ್ದರೆ ಇದನ್ನು ಪೂರ್ಣ ಗುಣಪಡಿಸಬಹುದು. ಆದರೆ ಅಲಕ್ಷ್ಯ ತಾಳಿದರೆ ಮುಂದೆ ಈ ರೋಗ ಪ್ರಬಲವಾಗಿ ಪರಿಸ್ಥಿತಿ ಕೈಮೀರಬಹುದು. ಕಾರಣ ನೀವು ೩೫ ವರ್ಷ ಮೀರಿದ ಕೂಡಲೆ ಆಗಿಂದಾಗ್ಗೆ ತಜ್ಞ ಡಾಕ್ಟರರಿಂದ ತಪಾಸು ಮಾಡಿಸಿಕೊಳ್ಳಬೇಕು.

ಮೂತ್ರ ಮಾಡುವಾಗ ತೊಂದರೆಯಾಗುತ್ತಿದ್ದರೆ ಮತ್ತು ಉರಿಮೂತ್ರವಾಗುತ್ತಿದ್ದರೆ ಇದು ಕ್ಯಾನ್ಸರ ರೋಗದ ಕೊನೆಯ ಅವಸ್ಥೆಯೆಂದು ಭಾವಿಸತಕ್ಕದ್ದು.

ಕ್ಯಾನ್ಸರ ರೋಗ ಇಂಥವರಿಗೆ ಬರುವದೆಂದಾಗಲಿ ಇಂಥಾ ಅಂಗಾಂಗಗಳಿಗೇ ಅಂಟಿಕೊಳ್ಳುವದೆಂದಾಗಲಿ ಹೇಳಲು ಸಾಧ್ಯವಿಲ್ಲ ಆದುದರಿಂದ ಪ್ರತಿಯೊಬ್ಬರೂ ಜಾಗರೂಕರಾಗಿರಬೇಕು.

ಈ ರೋಗ ತಗಲಿದ ಬಡ ಹಾಗೂ ಮಧ್ಯಮ ವರ್ಗದ ಜನರಿಗೆ ಶುಶ್ರೂಷೆ ನೀಡಲು ಮತ್ತು ಈ ಬಗ್ಗೆ ಸಂಶೋಧನೆ ನಡೆಸಲು ಒಂದು ಸುಸಜ್ಜಿತ ಆಸ್ಪತ್ರೆಯನ್ನು ಹುಬ್ಬಳ್ಳಿಯ ಅಮರಗೋಳದ ಬಳಿ ನಿರ್ಮಿಸಲಾಗಿದೆ. ಲಕ್ಷಾವಧಿ ರೂ. ಗಳ ವೆಚ್ಚದಿಂದ ಕಟ್ಟಲಾಗುತ್ತಿರುವ ಈ ಆಸ್ಪತ್ರೆಗೆ ಉದಾರ ಕೈಯಿಂದ ಸಹಾಯ ನೀಡಿರಿ. ನಿಮ್ಮ ಪಾಲಿನ ವಂತಿಗೆ ಬೇಗ ಬರಲಿ!

ಕರ್ನಾಟಕ ಕ್ಯಾನ್ಸರ್ ಶುಶ್ರೂಷಾ ಹಾಗೂ ಸಂಶೋಧನೆ ಸಂಸ್ಥೆ

ವಿದ್ಯಾನಗರ, ಹುಬ್ಬಳ್ಳಿ

ಸ್ಥಳದಾನ

ಸೊಂಡೂರ ಮ್ಯಾಂಗನೀಸ್ ಅ್ಯಂಡ್ ಐರನ್ ಓರ್ಸ್ ಲಿ.,

ಸೊಂಡೂರು (ಬಳ್ಳಾರಿ ಜಿಲ್ಲೆ)

ವೊಂದಿದೆ: ಈ ವರೆಗೂ ವಿಶ್ಲೇಷಣಗೊಳ್ಳದ ಶಬ್ದಗಳ ಬಗೆಗೂ ಗಂಭೀರವಾಗಿ ಯೋಚಿಸುವುದು ಶ್ರದ್ಧೆಯ ಗುಣ. ಪಾಲ್, ಮುಹಮ್ಮದ್, ಮಾರ್ಕ್ಸ್ ಹಾಗೂ ಹಿಟ್ಲರನ ವಾಕ್ಯಗಳನ್ನು ಜನ ಯಥಾವತ್ತಾಗಿ ಸ್ವೀಕರಿಸುತ್ತಾರೆ. ಪರಿಣಾಮ? ಇತಿಹಾಸದ ದುರ್ಗತಿ. ಆದ್ದರಿಂದ ಹೇ ಪ್ರಭುವೆ, ನಮಗೆ ಧರ್ಮದ ಬಗೆಗೆ ಭಕ್ತಿಯನ್ನೂ ಶ್ರದ್ಧೆಯಿಂದ [illegible] ಕೊಡು."

ಇಂಥಾ ವಿಚಿತ್ರವಾದ ವಿಚಾರಗಳನ್ನು ಗ್ರಹಿಸುವುದರಲ್ಲಿ ತಲ್ಲೀನನಾಗಿದ್ದಾಗಲೆ ಅಲ್ಲಿಗೆ ಮುರುಗನ್ ಬಂದ. ವಿಲ್ ತನ್ನ ಪುಸ್ತಕವನ್ನು ಮುಚ್ಚಿದ.

*

ಪಾಳದ ಭಾವಿ ರಾಜನಾದ ಮುರುಗನ್ ಕರ್ನಲ್ ದೀಪನ ವಿಚಾರಗಳಿಂದಲೂ ಸಮಾಜ ಸುಧಾರಕರಿಂದಲೂ ಅತ್ಯಂತ ಪ್ರಭಾವಿತನಾಗಿದ್ದ. ಅವನ ವಿಚಾರಗಳು ಡಾ. ರಾಬರ್ಟನ 'ಆದರ್ಶ ರಾಜ್ಯ'ದ ಕಲ್ಪನೆಯೊಂದಿಗೆ ಅಷ್ಟಾಗಿ ಸರಿಹೊಂದುತ್ತಿರಲಿಲ್ಲ. [illegible] ಅತ ಪೆಟ್ರೋಲಿಯಂ ವ್ಯವಹಾರವನ್ನು ಕುರಿತು ಪ್ರಸ್ತಾಪಿಸುವುದಕ್ಕಾಗಲಿ [illegible] ರಾಜದೂತ ಅಬ್ದುಲ್ ಬಾಹುವಿನೊಡನೆ ರಾಣಿ ಅಲ್ಲಿಗೆ ಬಂದಳು.

ವಿಲ್‌ನಿಗೆ ಅಬ್ದುಲ್ ಬಾಹುವಿನ ವ್ಯಕ್ತಿತ್ವ ಅತ್ಯಂತ [illegible]. ರಾಣಿಯು ವಿಲ್‌ನ [illegible] ನಂತರ [illegible] ಬಗೆಗೆ [illegible] ರಾಣಿಯ ಮಾತುಗಳಿಂದ ವಿದಿತವಾಯಿತು. ತಾನು ಕೆಲ ಸಿದ್ಧಿಗಳನ್ನು ಹೇಗೆ ಕೈಗೂಡಿಸಿಕೊಂಡೆನೆಂದು ಅವಳು [illegible] ಹೇಳುತ್ತಿರ[illegible] ಹೋದಳು.

ಆಕೆ ಮುರುಗನ್ನನೊಡನೆ ಸ್ವಿಟ್ಸರಲೆಂಡ್ ಹಾಗೂ [illegible] ಅಮೇರಿಕದ [illegible]ಗಿನ ದಿನಗಳತ್ತ ಮಾತು ತಿರುಗಿದಾಗ ಬಹು ರಮ್ಯವಾಗಿ ಅಲ್ಲಿನ ದಿನಗಳನ್ನು ವರ್ಣಿಸಿದಳು. ವೈಜ್ಞಾನಿಕ ಪ್ರಗತಿಯಿಂದಾಗಿ ದಿನೇ ದಿನೇ ಜಗತ್ತು ಚಿಕ್ಕದಾಗುತ್ತಿದೆ. ರಾಷ್ಟ್ರರಾಷ್ಟ್ರಗಳ [illegible] ದರೆ ಏನು ಪ್ರಯೋಜನ? ಡಾಕ್ಟರ್ ರಾಬರ್ಟ [illegible] ಪೆಟ್ರೋಲಿಯಂ ಕಂಪೆನಿಯನ್ನು ಸ್ಥಾಪಿಸುವ ಕುರಿತೂ ಮಾತೆತ್ತಿದಳು.

ಪಲ್ಲಂಗದ ಮೇಲೆ ಮಲಗಿಕೊಂಡೆ ವಿಲ್ ತದೇಕ ಚಿತ್ತನಾಗಿ ಇದೆಲ್ಲವನ್ನೂ ಕೇಳುತ್ತಿದ್ದ. ತಾನು [illegible] ಅಪ್ಪೂಳನ್ನು ಕರೆದ.

ಆಕೆಯ ಸೌಂದರ್ಯ ಅನುಪಮವಾಗಿತ್ತು. ರಾಜದೂತ ಬಾಹು ಅವಳನ್ನು ಅವಳ ಸೌಂದರ್ಯವನ್ನು [illegible] ವಿಲ್‌ನ ಲಕ್ಷ್ಯಕ್ಕೆ ಬಾರದಿರಲಿಲ್ಲ.

ರಾಣಿ ವಿಲ್‌ನಿಗೆ ವಿದಾಯ ಹೇಳಿ ಕೋಣೆಯಿಂದ ಹೊರಬಿದ್ದಳು; ವಿಲ್ ರಾಧೆಯು ಕೊಟ್ಟ ಔಷಧ ಕುಡಿದ. ರಾಜದೂತ ಬಾಹುವಿನೊಂದಿಗೆ ಪೆಟ್ರೋಲಿಯಂ ಕಂಪೆನಿಯ ಕುರಿತು ಚರ್ಚೆ ಪ್ರಾರಂಭಿಸಿದ ಸ್ವಲ್ಪ ಹೊತ್ತಿನಲ್ಲೇ [illegible].

[illegible] ಆಸಕ್ತಿಯುಳ್ಳವರು ಮನೋವಿಕಾರಗ್ರಸ್ತ[illegible] ತೂತು ಬಿದ್ದು ನೀರು ಒಳಸೇರುತ್ತಿದೆ. [illegible] ಅವರಲ್ಲಿ [illegible] ಆದರಿಂದ

[illegible] ಲೀನರಾಗಿರುವವರ ಸ್ಥಿತಿಯೂ ಇದೇ ರೀತಿ [illegible] ನಕ್ಕೆ ಬಂದರು.


ಮುಂದೆ ಸ್ವಲ್ಪ ಹೊತ್ತಿನಲ್ಲಿ ರಾಜದೂತ [illegible] ವೆಸ್ನುವುದು ಅವಳ ಮುಖಭಾವದಿಂದಲೆ ಗೊತ್ತಾಗುತ್ತಿತ್ತು. ಆತ ಹೋದ ನಂತರ ಬಾಹುವಿನ ಬಗೆಗೆ ತನ್ನ ಅಸಂತೋಷವನ್ನು ವ್ಯಕ್ತಪಡಿಸುತ್ತಾ ವಿಲ್‌ನಿಗೆ ಹೇಳಿದಳು: "ಸ್ವಲ್ಪ ದುಡ್ಡು ಕೊಟ್ಟು ತಮ್ಮೊಂದಿಗೆ ಮಲಗಲು ಆಹ್ವಾನಿಸುವುದೇ ಈ ದೇಶದ ಜನರ ಸಂಸ್ಕೃತಿಯೇನು? ಒಂದು ವೇಳೆ ಆಕೆ ಮಲಗಲು ತಯಾರಾಗದಿದ್ದರೆ ಇನ್ನೂ ಸ್ವಲ್ಪ ಹೆಚ್ಚು ಹಣ ಕೊಡುವ ಆಮಿಷ ತೋರಿಸುತ್ತಾರೆ. ಇವರ ಸಂಸ್ಕೃತಿಯ ಮಟ್ಟ ಇಷ್ಟೇನೆ?"

ಈಕೆಗೂ ಮುರುಗನ್ನನಿಗೂ ಯಾವ ರೀತಿಯ ಸಂಬಂಧವಿದೆಯೆಂಬ ಕುತೂಹಲವನ್ನು ತಣಿಸಲು ಇದೇ ಅವಕಾಶವೆಂದುಕೊಂಡ ವಿಲ್ ಅವಳನ್ನು ಆ ಬಗ್ಗೆ ನೇರವಾಗಿಯೆ ಪ್ರಶ್ನಿಸಿದ.

[illegible] ಪ್ರೇಮದ ಸ್ವರೂಪದ ಬಗ್ಗೆ ಆತನಿಗೆ [illegible] ಸ್ವಭಾವದಿಂದ ಅಂಜುಗುಳಿ. ತುಂಬಾ ನಾಚುಗೆಯ ಸ್ವಭಾವ. ಅವರೂ ದಿನಗಳೆದಂತೆ ಎಷ್ಟು [illegible]"

[illegible] ಕರನ್ ಕೋಣೆಯೊಳಗೆ ಬಂದ. ರಾಧೆಯ [illegible] ಬಾಹುವಿನ ಬಗೆಗೆ ರಂಗಾನಿಗೂ ಸದಭಿಪ್ರಾಯವಿಲ್ಲ [illegible] ವ್ಯಕ್ತಪಡಿಸಿದ.

[illegible] ಮಿತವಾದ ಪ್ರೇಮವ್ಯವಹಾರಗಳು ವಿಲ್‌ನಿಗೆ



ಹೊಸದಾಗಿ ತೋರಿಬಂದವು. ಯುರೋಪಿನಲ್ಲಾಗಲಿ ಅಮೇರಿಕದಲ್ಲಾಗಲಿ ಒಂದು ಕಡೆ ಲೈಂಗಿಕ ಸಂಬಂಧಗಳ ಮೇಲೆ ಬಂಧನವಿದ್ದರೆ ಮತ್ತೊಂದು ಕಡೆ ಮನಃಕಾಮನೆಗಳನ್ನು ತೃಪ್ತಿಪಡಿಸಲು ಸಮಾಜದ ಒಪ್ಪಿಗೆಯಿದೆ. ಪರಿಣಾಮವಾಗಿ ಅಲ್ಲಿ ಒತ್ತಡ (tension) ಉಂಟಾಗುತ್ತದೆ. ಆದರೆ ಪಾಳದ ಪರಿಸ್ಥಿತಿ ತದ್ವಿರುದ್ಧವಾಗಿತ್ತು. ಅಲ್ಲಿನ ಪರಂಪರೆಯೂ ಸಾಮಾಜಿಕ ರೀತಿನೀತಿಗಳೂ ಮನುಷ್ಯನನ್ನು ನಿಯಂತ್ರಿಸುತ್ತಿದ್ದವು. ಇದು ಅವನ ಮನಸ್ಸಿಗೆ ಬಂದಿರಲಿಲ್ಲ. ಆತ ತನ್ನ ಸರ್ವಾಧಿಕಾರಿ ಧೋರಣೆಯಿಂದ ಎಲ್ಲ ರೀತಿಯಿಂದಲೂ ಪಾಳವನ್ನು ಆಧುನಿಕಗೊಳಿಸಬಯಸುತ್ತಿದ್ದ.

ರಂಗಾ ವಿಲ್‌ನ ಮುಂದೆ ಸಂಭೋಗ, ತಂತ್ರ, ನಿರ್ವಾಣ ಮೊದಲಾದ ಅನೇಕ ವಿಷಯಗಳ ವ್ಯಾಖ್ಯೆ ನೀಡಿದ. ಅವನ ಪ್ರಕಾರ, ಸಂಭೋಗವು ಪ್ರೇಮದ ಯೌಗಿಕಕ್ರಿಯೆ ಮಾತ್ರ. ಅದರಿಂದ ಮಾಯವೀಯ ಪ್ರೇಮವು ಪಾವನವಾಗುತ್ತದೆ. ಅಷ್ಟೇ ಅಲ್ಲ, ಬುದ್ಧತ್ವವೂ ಯೋನಿಯಲ್ಲಿಯೆ ಅವಸ್ಥಿತವಾಗಿದೆ. ಹಾಗೆ ನೋಡಿದರೆ ಸಂಭೋಗವೇ ಧ್ಯಾನ.

ಲೈಂಗಿಕ ಜೀವನಕ್ಕೆ ಸಂಬಂಧಿಸಿದ ಇಂಥಾ ಗಂಭೀರ ವಿಷಯಗಳನ್ನು ಕುರಿತು ಶಾಲೆಯಲ್ಲಿಯೆ ಅಲ್ಲಿ ಪಾಠ ಹೇಳಿಕೊಡಲಾಗುತ್ತದೆ. ಆದ್ದರಿಂದಲೇ ಸಾಮಾನ್ಯವಾಗಿ ಕುಟುಂಬವೊಂದರಲ್ಲಿ ಎರಡು ಅಥವಾ ಮೂರಕ್ಕಿಂತ ಹೆಚ್ಚು ಮಕ್ಕಳಿರುವುದಿಲ್ಲ. ಅನ್ಯ ದೇಶಗಳಲ್ಲಿ ಲೈಂಗಿಕ ಶಿಕ್ಷಣವನ್ನು ಬಹು ಮಡಿವಂತಿಕೆಯ ದೃಷ್ಟಿಯಿಂದ ನೋಡಲಾಗುತ್ತದೆ. ಪರಿಣಾಮವಾಗಿ ವಿಕೃತ ಕಾಮಭಾವನೆಗಳೂ ಸ್ವಚ್ಛಂದ ಪ್ರವೃತ್ತಿಯೂ ಜೀವನ ಸಮಾಜ ಕಲುಷಿತಗೊಳ್ಳುವುದು. ಪರಿಣಾಮವಾಗಿ ಕೀಳು ಮಟ್ಟದ ರಾಜಕಾರಣ ತಾನೆ ತಾನಾಗಿ ಬೆಳೆಯುತ್ತವೆ. ಇಂಥಲ್ಲಿ ಒಂದೆಡೆ ಔಷಧ ವಿಜ್ಞಾನ ಹಾಗೂ ಆರೋಗ್ಯ ಶಾಸ್ತ್ರಗಳು ಅಭಿವೃದ್ಧಿಗೊಳ್ಳುತ್ತಿದ್ದರೆ ಇನ್ನೊಂದೆಡೆ ಕೊಲೆಗಳು, ಯುದ್ಧ, ಹಿಂಸೆಗಳು ದಿನೇ ದಿನೇ ಜನಸಾಮಾನ್ಯರನ್ನು ಸತಾಯಿಸುತ್ತವೆ. ಕೊನೆಗೆ ಇವೆಲ್ಲ ದೋಷಗಳನ್ನೂ ದೇವರ ತಲೆಯ ಮೇಲೆ ಹೇರಲಾಗುತ್ತದೆ. ಇಂತಹ 'ನಾಗರಿಕ' ರಾಷ್ಟ್ರಗಳಿಂದ ದೂರವಿರುವುದೆ ಒಳ್ಳೆಯದೆಂದು ಪಾಳದ ಜನ ಭಾವಿಸುತ್ತಾರೆ.

ಡಾಕ್ಟರ್ ರಾಬರ್ಟನ ಪೂರ್ವಜನಾದ ಡಾ. ಆ್ಯಂಡ್ರೂ ಅವರಿಗೆ ಪಾಶ್ಚಾತ್ಯರ ಜೀವನ ವಿಧಾನದ ದೋಷಗಳೆಲ್ಲವೂ ಗೊತ್ತಿತ್ತು. ಜನಸಂಖ್ಯೆಯ ಅನಿಯಂತ್ರಿತವಾದ ಬೆಳವಣಿಗೆಯೆ ಎಲ್ಲ ಸಮಸ್ಯೆಗಳಿಗೂ ಮೂಲ ಎಂಬುದನ್ನವರು ಆಗಲೆ ಕಂಡುಕೊಂಡಿದ್ದರು. ಆದ್ದರಿಂದಲೆ ಅವರು ಪಾಳದಲ್ಲಿ ಅನೇಕ ಕಡೆ ಜನಸಂಖ್ಯಾ ನಿಯಂತ್ರಣ ಕೇಂದ್ರಗಳನ್ನು ಸ್ಥಾಪಿಸಿ ಜನಸಾಮಾನ್ಯರ ಜೀವನ ಮಟ್ಟ ತಗ್ಗದಂತೆ ನೋಡಿಕೊಂಡರು ಎಂದು ಮುಂತಾಗಿ ರಂಗಾ ಹೇಳಿದ.

ಪಾಳದ ಸಿಪಾಯಿಗಳ ಬಗ್ಗೆ ವಿಲ್‌ನಿಗೆ ಅಭಿಮಾನ ಉಕ್ಕಿ ಬಂತು. ಎಂಥಾ ಒಳ್ಳೆಯ ಜನ! ಎಂಥಾ ಭೋಳೇ ಸ್ವಭಾವ! ವ್ಯಾಪಾರಿಗಳೂ ಸರ್ವಾಧಿಕಾರಿಗಳೂ ಆದವರನ್ನು ಕೂಡಿಕೊಂಡು ಇಲ್ಲಿನ ನಿರ್ಮಲವಾದ ಜೀವನ ವಿಧಾನ ಕಲುಷಿತಗೊಳ್ಳುವ ಹಾಗೆ ನಾವು ಮಾಡುತ್ತಿದ್ದೇವಲ್ಲ ಎಂದು ವಿಲ್‌ನಿಗೆ ಆತ್ಮಗ್ಲಾನಿಯುಂಟಾಯಿತು.

*

ಕೋಣೆ ಶಾಂತವಾಗಿತ್ತು.

ವಿಲ್ ರಾಜ ಬರೆದ ಆ ಅದ್ಭುತ ಪುಸ್ತಕವನ್ನು ಓದುತ್ತಿದ್ದ. ಅದರಲ್ಲಿನ ಕೆಲವು ವಿಚಿತ್ರವಾದ ತಥ್ಯಗಳು ಅವನಿಗೆ ಸಾಕಷ್ಟು ಮನೋರಂಜನ ನೀಡಿದವು. ಸ್ವಲ್ಪ ಸಮಯದ ನಂತರ ಸುಶೀಲೆಯು ಅಲ್ಲಿಗೆ ಬಂದಾಗ ಆಕೆ ವಾಡಿಕೆಯಾಗಿ ಆತನೊಡನೆ ಮಾತನಾಡುತ್ತಾ ಮ್ಯೂಚ್ಯುಅಲ್ ಅಡಾಪ್ಟೇಶನ್ ಕ್ಲಬ್ಬಿನ ಬಗ್ಗೆ ಹೇಳಿದಳು. ಆಕೆ ಹೇಳಿದ ಪ್ರಕಾರ, "ಕ್ಲಬ್ಬಿನ ಸದಸ್ಯರು ಪಾರಸ್ಪರಿಕವಾಗಿ ಮಲ-ಅಕ್ಕ, ಮಲ-ತಮ್ಮ, ಮಲ-ಅಣ್ಣ, ಮಲ-ತಂದೆ, ಮಲ-ತಾಯಿ ಸಂಬಂಧ ಹೊಂದಿದವರಾಗಿರುತ್ತಾರೆ. ಈ ವ್ಯವಸ್ಥೆಯಿಂದಾಗಿ ಎಲ್ಲರಿಗೂ ಪ್ರೇಮದ ನೈಸರ್ಗಿಕ ರೂಪ ಅರಿವಾಗುವುದಲ್ಲದೆ ಜವಾಬ್ದಾರಿಯೂ ಸಮನಾಗಿ ಹಂಚಿಹೋಗುತ್ತದೆ.

ಇದರಿಂದಾಗಿ ಯಾರಿಗೂ ತೊಂದರೆಯಾಗುವುದಿಲ್ಲ. ಯಾರೂ ಅಸಂತುಷ್ಟರಾಗುವುದಿಲ್ಲ. ಈ ಕ್ಲಬ್ಬಿನ ವ್ಯವಹಾರದಲ್ಲಿ ಸರಕಾರವೂ ಹಸ್ತಕ್ಷೇಪ ಮಾಡುವುದಿಲ್ಲ. ಈ ಸ್ವಾತಂತ್ರ್ಯ, ಜಗತ್ತಿನ ಇನ್ನುಳಿದ ಯಾವುದೇ ದೇಶಕ್ಕೂ ಇರುವುದಿಲ್ಲ. ಉಳಿದ ದೇಶಗಳಲ್ಲಿನ ಮಕ್ಕಳು ಹೆಚ್ಚು ಮಟ್ಟಿಗೆ ವಿಕ್ಷಿಪ್ತವಾದ ಪ್ರವೃತ್ತಿಗಳನ್ನು ಬೆಳೆಸಿಕೊಂಡಿರುತ್ತವೆ. ಹೀಗಿರುವಾಗ ಕಮ್ಯೂನಿಸ್ಟ್ ದೇಶಗಳಲ್ಲಿನ ಕೈದಿ ಶಿಬಿರಗಳಾಗಲಿ ಇತರದೇಶಗಳಲ್ಲಿನ ಅಸಂಖ್ಯ ಜೈಲುಗಳಾಗಲಿ ಚರ್ಚುಗಳಾಗಲಿ ಕಂಡುಬರುವುದರಲ್ಲಿ ಆಶ್ಚರ್ಯವಿಲ್ಲ. ನಮ್ಮ ದೇಶದ ಮಾತು ಹಾಗಲ್ಲ. ಬಾಲ್ಯದಿಂದಲೆ ನಾವು ಅವರನ್ನು [illegible] ವ್ಯಕ್ತಿಗಳನ್ನಾಗಿ ರೂಪಿಸುತ್ತೇವೆ. ಅವರ ವ್ಯಕ್ತಿತ್ವವನ್ನು ಸರಿಯಾದ ರೀತಿಯಲ್ಲಿ ವಿಕಸಿತಗೊಳಿಸುತ್ತೇವೆ. ಹೀಗಾಗಿ ಇನ್ನೂ ಬಾಲ್ಯಾವಸ್ಥೆಯಲ್ಲಿದ್ದಾಗಲೆ ತಾವು ನಿರ್ವಹಿಸಬೇಕಾದ ಕರ್ತವ್ಯದ ಅರಿವು ನಮ್ಮ ಮಕ್ಕಳಿಗೆ ಇರುತ್ತದೆ. ಅವರು ತಮ್ಮ ಭವಿಷ್ಯವನ್ನು ತಾವೇ ಕಂಡುಕೊಳ್ಳುತ್ತಾರೆ. ದೈವಭೀರುಗಳಾಗುತ್ತಾರೆ."

ಸುಶೀಲೆಯು ಇದನ್ನೆಲ್ಲ ಹೇಳುವಾಗ ವಿಲ್‌ಗೆ ತನ್ನ ಹಾಗೂ ಮಾಲಿಯ ಸಂಬಂಧ ನೆನಪಿಗೆ ಬಂದು ಮನಸ್ಸು ವಿಚಲಿತವಾಯಿತು. ಭಾವನೆಗಳ ಆವೇಗ ಹಾಗೂ ಪಶ್ಚಾತ್ತಾಪಾಗ್ನಿ-ಪ್ರಕೋಪವನ್ನು ಅವನಿಗೆ ತಡೆದುಕೊಳ್ಳಲಾಗಲಿಲ್ಲ. ಆತ ತನ್ನ ಜೀವನದ ಇತಿಹಾಸವನ್ನು ಸಂಕ್ಷಿಪ್ತವಾಗಿ ಸುಶೀಲೆಗೆ ಹೇಳಿದ.

ಅವನಿಗೆ ಅನಾಯಾಸವಾಗಿ ಒಂದು ಸ್ಟುಡಿಯೋದಲ್ಲಿ ಮಾಲಿಯ ಪರಿಚಯವಾಗಿತ್ತು. ಆತ ಮಾಲಿಯನ್ನು ತುಂಬಾ ಪ್ರೀತಿಸುತ್ತಿದ್ದ. ಮಾಲಿಗೂ ವಿಲ್‌ನ ಮೇಲೆ ವಿಶ್ವಾಸ ಬಹಳ. ಆಕೆ ಅವನಿಗೆ ತೋರಿಸಿದ ಪ್ರೀತಿಯಾಗಲಿ ವಿಶ್ವಾಸವಾಗಲಿ ಅತಿಯಾಯಿತೇನೋ. ವಿಲ್ ಮಾಲಿಯಿಂದ ಹಿಂದೊಮ್ಮೆ ಆರ್ಥಿಕ ಸಹಾಯ ಪಡೆದ ರಶ್ಶೆಲ್ ಎಂಬ ಹುಡುಗಿಯೊಡನೆ ಸಂಪರ್ಕವನ್ನು ಬೆಳೆಸಿಕೊಂಡ. ಇದರಿಂದಾಗಿ ಮಾಲಿಯ ಜೀವನದಲ್ಲಿ ನಿರಾಶೆಯ ಕಾರ್ಮೋಡಗಳು ಕವಿದವು. ದುಃಖದ ಪಡಿನೆಳಲು ಜೀವನದ ಉದ್ದಗಲಗಳನ್ನು ವ್ಯಾಪಿಸಿತು. ಇತ್ತ, ತನ್ನ ಮೇಲಿನ ಪ್ರೇಮ ಹಾಗೂ ಏಕಾಧಿಕಾರಗಳಿಂದಾಗಿ ಆಕೆ ರಶ್ಶೆಲ್ ಹಾಗೂ ತನ್ನ ನಡುವಿನ ಸಂಬಂಧಕ್ಕೆ ಮುಳ್ಳಾಗಿದ್ದಾಳೆ ಎಂದು ವಿಲ್‌ನಿಗೆ ಪದೇ ಪದೇ ಕೋಪವುಂಟಾಗುತ್ತಿತ್ತು. ಅವಳ ಪ್ರೇಮದ ಭಾರ ಅವನ ಅನುಭವಕ್ಕೆ ಬಾರದ ಹಾಗೆ ಆಕೆ ತಡೆದುಕೊಂಡಿದ್ದರೆ ಮಾಲಿಯ ಬಗೆಗೆ ಕ್ರೋಧವೂ ಉಂಟಾಗುತ್ತಿರಲಿಲ್ಲ; ಅವಳ ಬಗ್ಗೆ ತಿರಸ್ಕಾರದ ಭಾವನೆಯೂ ಮೂಡುತ್ತಿರಲಿಲ್ಲ.

ಮುಂದೆ ಒಮ್ಮೆ ಆತ ಅಲ್ಡೀಹೈಡನ

ಕಾರ್ಯದ ನಿಮಿತ್ತ ಆಫ್ರಿಕಕ್ಕೆ ಹೋದಾಗ ಬ್ಯಾಬ್ ಅವನ ಜೀವನದಲ್ಲಿ ಪ್ರವೇಶಿಸಿದಳು. ನಿಜ ಹೇಳಬೇಕೆಂದರೆ 'ಸೆಕ್ಸ್' ಅನ್ನುವುದು ಒಂದು ಚಟ. ಮತ್ತೆ ಎಲ್ಲ ಚಟಗಳ ಹಾಗೆ ಅದನ್ನು ಬಿಡುವುದೂ ಬಲು ಕಷ್ಟ. ಬ್ಯಾಬ್ ನಿಂದಾಗಿಯೆ ವಿಲ್ ಮಾಲಿಯನ್ನೇ ಕಳೆದುಕೊಳ್ಳಬೇಕಾಯಿತು.

ಮಾಲಿಯ ಶಾಬೂತನ್ನು ಗೋರಿಯಲ್ಲಿಳಿಸುವಾಗ ಇನ್ನು ಮುಂದೆ ಎಂದಿಗೂ ಬ್ಯಾಬ್‌ಳನ್ನು [illegible] ಆತ ಪ್ರತಿಜ್ಞೆ ಮಾಡಿದ್ದ. ಹೀಗೆ ಪ್ರತಿಜ್ಞೆ ಮಾಡಿದ ಮರುದಿನವೇ ಬ್ಯಾಬ್ ಅವನ ರೂಮಿಗೆ ಬಂದಾಗ ಹಿಂದಿನ ದಿನದ ಪ್ರತಿಜ್ಞೆ ಓಡಿಹೋಗಿತ್ತು. ಮುಂದೆ ಅರ್ಧ ಗಂಟೆಯಲ್ಲೆ ಅವರಿಬ್ಬರೂ ಒಂದೇ ಹಾಸಿಗೆಯಲ್ಲಿ ಮಲಗಿದ್ದರು. ಇದಾದ ಮೂರು ತಿಂಗಳಲ್ಲೆ ಬೇಸರಗೊಂಡು ಆಕೆ ವಿಲ್ ನಿಂದ ದೂರವಾಗಿದ್ದಳು.

*

ಡಾಕ್ಟರ್ ರಾಬರ್ಟ್ ಶಿವಪುರದಿಂದ ಬಂದಿದ್ದ. ಒಂದು ದಿನ ವಿಲ್ ಕರ್ನಲ್ ದೀಪನ ಬಗ್ಗೆ ವಿಚಾರಿಸಿದಾಗ ರಾಬರ್ಟ್, ಆತ ಇಡಿ ದ್ವೀಪಕ್ಕೇ ಸಂಕಟಪ್ರಾಯವಾಗಿರುವುದಾಗಿ ಹೇಳಿದ. ಅವನು ಮುಂದುವರೆದು ೧೪೪೯ರಿಂದ ೧೪೮೩ರವರೆಗಿನ ಅವಧಿಯಲ್ಲಿ ಪ್ರಕಟವಾದ ನಕ್ಷೆಗಳ ಆಧಾರದಿಂದ ಆತ ಇಡಿ ರಾನ್‌ಡಂಗ್ ಪಾಳದ ಒಂದು ಇಲಾಖೆ ಮಾತ್ರವಾಗಿದೆಯೆಂದು ಸಿದ್ಧಪಡಿಸಲು ಯತ್ನಿಸುತ್ತಿದ್ದಾನೆ. ಅಲ್ಲದೆ ಇಡೀ ರಾನ್‌ಡಂಗ್ ತನಗೆ ಸೇರಿದ್ದೆಂದು [illegible] ಗಲಿ ಇಲ್ಲ. ಅಕಸ್ಮಾತ್ತಾಗಿ ಪಾಳ ರಾಜ್ಯದ [illegible] ಪ್ರಪಂಚದ ಎಲ್ಲ ರಾಷ್ಟ್ರಗಳೂ ಅತ್ಯಂತ ಉಗ್ರ- [illegible] ಹೊತ್ತಿಗೆ ಸಹಾಯಕ್ಕೆ ಬರುವುದಿಲ್ಲ. ರಾಷ್ಟ್ರಸಂಘದಲ್ಲಿ ಈಗ ಈ ಬಗ್ಗೆ ಸ್ವಲ್ಪ ಗೊಂದಲವೆಬ್ಬಿಸುವುದೊಂದೇ ಈ ರಾಜ್ಯಕ್ಕಿರುವ ದಾರಿ.

ಪೆಟ್ರೋಲಿಯಮ್ಮಿಗಾಗಿ [illegible] ವುದು ಖಂಡಿತ. ರಾನ್‌ಡಂಗದ ಸುಲ್ತಾನನ [illegible] ಆಕೆ [illegible] ಪಾಳವನ್ನೂ ರಾನ್‌ಡಂಗನ್ನೂ ಏಕಛತ್ರಾಧಿ- [illegible]

[illegible] ಪ್ರಖ್ಯಾತ ಡಾಕ್ಟರನಾಗಿದ್ದ. ಪಾಳದ ರಾಜನಿಗೆ [illegible] ಯಾಗಿ ಆಪರೇಶನ್ ಮಾಡುವುದು ಕಠಿಣವಿತ್ತು. ಡಾಕ್ಟರ್ ಆ್ಯಂಡ್ರೂ ರಾಜನನ್ನು ಮೆಸ್ಮೆರಿಜಂ ಪ್ರಯೋಗಕ್ಕೊಳಪಡಿಸಿ ಆಪರೇಶನ್ ಮಾಡಿದ. ಅದು ಸಫಲವಾಯಿತು. ಅನಂತರ ಗರ್ಭವತಿಯಾದ ರಾಜಕುಮಾರಿಯ ಆಪರೇಶನ್ನನ್ನೂ ಯಶಸ್ವಿಯಾಗಿ ಮಾಡಿದ. ಪ್ರಸವವಾಗುವಾಗ ತಾನು ಪ್ರಾಣ ಕಳೆದುಕೊಳ್ಳುತ್ತೇನೆಂಬ ಭಯ ಇನ್ನೊಬ್ಬ ರಾಜಕುಮಾರಿಯನ್ನು ಆವರಿಸಿತ್ತು. ಮೆಸ್ಮೆರಿಜಂನ ಸಹಾಯದಿಂದ ಡಾ. ಆ್ಯಂಡ್ರೂ ಆ ಭಯವನ್ನೂ ನಿವಾರಿಸಿದ. ಅವನ ಈ ಎಲ್ಲ ಸೇವೆಯಿಂದ ಕೃತಜ್ಞನಾದ ರಾಜ ಆ್ಯಂಡ್ರೂನನ್ನು ತನ್ನ ಪ್ರಧಾನಮಂತ್ರಿಯನ್ನಾಗಿ ಮಾಡಿಕೊಂಡ.

ಇಬ್ಬರ ಆದರ್ಶಗಳೂ ಒಂದೇ ಆಗಿದ್ದವು. [illegible] ಮಿಶನರಿಗಳ, ವ್ಯಾಪಾರಿಗಳ ಹಾವಳಿ ಎಲ್ಲಿಯೂ ನಡೆಯದಂತೆ ನೋಡಿಕೊಂಡರು. ಹೀಗಾಗಿ

[illegible] ಅಲ್ಲಿ ಸಾಹಿತ್ಯ ಹಾಗೂ ಲಲಿತ [illegible] ಪ್ರಸ್ಫುಟಿಸಿದುವು.

•

ವಿಲ್‌ನ ಆರೋಗ್ಯ ಸುಧಾರಿಸಿತ್ತು. ಹೀಗೆಯೆ ಒಂದು ದಿನ ಮುರಗನ್ನನೊಡನೆ ಮಾತಾಡುತ್ತಿದ್ದಾಗ ಆಧುನಿಕ ವಾಣಿಜ್ಯದ ಪ್ರಸ್ತಾಪ ಬಂತು. ಮುರುಗನ್ ರಾನ್‌ಡಂಗ್ ಉದ್ಯೋಗ, ವ್ಯವಸಾಯ, ವಾಣಿಜ್ಯೋದ್ಯಮಗಳಲ್ಲಿ ಸಾಧಿಸಿದ ಪ್ರಗತಿಯಿಂದ ಪ್ರಭಾವಿತನಾಗಿದ್ದ. ಅವನಿಗೆ ಡಾ. ರಾಬರ್ಟನ ವಿಚಾರಗಳಾಗಲಿ ಜಾಗತಿಕ ರಂಗದಿಂದ ದೂರವಾಗಿ ಏಕಾಂತದಲ್ಲಿರುವ ಪಾಳರಾಜ್ಯದ ನೀತಿಯಾಗಲಿ ಅಷ್ಟಾಗಿ ಸರಿಬಂದಿರಲಿಲ್ಲ. ಪಾಳ ತನ್ನ ಪ್ರಚಲಿತ ಧೋರಣೆಯನ್ನು ಬದಲಿಸಿ ಜಾಗತಿಕ ಪ್ರವಾಹದಲ್ಲಿ ಧುಮುಕಬೇಕು; ಅದಕ್ಕಿಂತ ಮುಖ್ಯವಾಗಿ ಅಲ್ಲಿನ ಜನರಿಗೆ ತಾವು ಅತ್ಯಂತ ಸುಖಿಗಳಾಗಿದ್ದೇವೆ; ತಮ್ಮಷ್ಟು ಸುಖದಿಂದ ಜಗತ್ತಿನಲ್ಲಿ ಇನ್ನಾರೂ ಇಲ್ಲ ಎಂಬ ಭ್ರಮೆ ಹೋಗಬೇಕು ಎಂಬ ಅಭಿಪ್ರಾಯ ಆತನದಾಗಿತ್ತು.

ರಾಬರ್ಟನಿಗೆ ಅವನ ವಿಚಾರ ಗೊತ್ತಿರದಿರಲಿಲ್ಲ. ಪಾಪ! ವಯಸ್ಸಾದರೂ ಬುದ್ಧಿ ಇನ್ನೂ ಪ್ರಬುದ್ಧವಾಗಿಲ್ಲ ಎಂದು ಅವನನ್ನು ಗಂಭೀರವಾಗಿ ಗಮನಿಸಿರಲಿಲ್ಲ. 'ನಿಶೆಯಲ್ಲಿದ್ದವರಿಗೆ ಜಗತ್ತಿನ ಪರಿವೆಯೆ ಇರುವುದಿಲ್ಲ. ಪಾಳದ ಸ್ಥಿತಿಯೂ ಹೀಗೆಯೆ. ಅಲ್ಲಿನ ವ್ಯವಸ್ಥೆ ನಿಶೆಯ ಒಂದು ಸ್ವರೂಪವೇ' ಸೈ ಎಂಬ ಭಾವನೆ ಮುರುಗನ್ನನಿಗೆ ಇತ್ತು. ಆತನಿಗೆ ಸಮೃದ್ಧವಾದ ಐಹಿಕ ಜೀವನ ನಡೆಸುವುದರಲ್ಲಿ ಆಸಕ್ತಿಯಿತ್ತೇ ಹೊರತು ಸಮಾಧಿ ಮುಂತಾದವುಗಳಲ್ಲಿ ಕಿಂಚಿತ್ತಾದರೂ ವಿಶ್ವಾಸವಿರಲಿಲ್ಲ. ಆದರೆ ಡಾಕ್ಟರ್ ರಾಬರ್ಟನ ಧೋರಣೆ ತದ್ವಿರುದ್ಧವಾಗಿತ್ತು. ಆವನಿಗೆ ಮೋಕ್ಷದಲ್ಲಿ ವಿಶ್ವಾಸ ಬಹಳ. ಅದೇ [illegible] ಔಷಧಿ; ವಿಲ್‌ನನ್ನು ಆಪತ್ತಿನಿಂದ ಪಾರು ಮಾಡಿದ್ದೇ ಅದು ಎಂಬ ಭಾವನೆ ಅವನದು. ಒಮ್ಮೆ [illegible], ಪ್ರತಿಯೊಬ್ಬನಿಗೂ ಮೃತ್ಯುವು ಕಟ್ಟಿಟ್ಟ ಬುತ್ತಿ. ಅದನ್ನು ತಪ್ಪಿಸಿಕೊಳ್ಳಲು ಯಾರಿಂದಲೂ ಸಾಧ್ಯವಿಲ್ಲ. ಇದು ಎಲ್ಲರಿಗೂ ಗೊತ್ತಿದ್ದರೂ ಒಬ್ಬರೂ ಮತ್ಯುವನ್ನೆದುರಿಸಲು ತಯಾರಾಗುವುದಿಲ್ಲ ಎನ್ನುವುದು ಎಂತಹ ವಿಪರ್ಯಾಸದ ಸಂಗತಿ! ಪಾಳದಲ್ಲಿ ಯಾವುದಕ್ಕೂ ಅಭಾವವಿಲ್ಲ. ಬೇಕಾದರೆ ನಮಗೆ ಹೆಚ್ಚಾದ ಪದಾರ್ಥಗಳನ್ನು ನಿರ್ಯಾತ ಮಾಡಲೂಬಹುದು. ಸರ್ವವಿಧದಲ್ಲಿಯೂ ದೇಶದ ಉತ್ಪಾದನೆಯನ್ನು ಇನ್ನೂ ಹೆಚ್ಚಿಸಬಹುದು. ಹೀಗಾಗಿ ಇಲ್ಲಿ ಸಾಮ್ಯವಾದವನ್ನು ನೆಲೆಗೊಳಿಸುವುದು ಅಷ್ಟು ಕಠಿಣವಲ್ಲ. ಆದರೆ ಈ ಎರಡು ಸೂತ್ರಗಳನ್ನು ಮಾತ್ರ

ಮರೆಯಬಾರದು, ಅವು ಯಾವುವೆಂದರೆ:

೧) ವಿದ್ಯುತ್ತು-ಬೃಹತ್ ವ್ಯಾಪಾರೋದ್ಯಮಗಳು + ಜನಸಂಖ್ಯಾ ನಿಯಂತ್ರಣ = ಪ್ರಜಾಪ್ರಭುತ್ವ ಹಾಗೂ ಸಮೃದ್ಧಿ;

೨] ವಿದ್ಯುತ್ತು — ಬೃಹತ್ ವ್ಯಾಪಾರೋದ್ಯಮಗಳು — ಜನಸಂಖ್ಯಾ ನಿಯಂತ್ರಣ = ದುಃಖ, ಸರ್ವಾಧಿಕಾರ ಹಾಗೂ ಯುದ್ಧ.

ಪಾಳದ ಜನತೆಗೆ ಸಹಕಾರ ತತ್ತ್ವದಲ್ಲಿ ವಿಶ್ವಾಸವಿತ್ತೇ ಹೊರತು ಅದು ಸಾಮ್ಯವಾದಿಯೂ ಆಗಿರಲಿಲ್ಲ, ಬಂಡವಾಳವಾದಿಯೂ ಆಗಿರಲಿಲ್ಲ. ಎಲ್ಲರಿಗೂ ಅನ್ನ-ವಸ -ವಸತಿಗಳನ್ನು ಕಲ್ಪಿಸಲು ಸಾಧ್ಯವಾಗುವಷ್ಟೇ ಜನಸಂಖ್ಯೆಯ-ನ್ನು ಬೆಳೆಸಿ ತನ್ಮೂಲಕ ಮಾನವತೆಯನ್ನು ವಿಕಾಸಗೊಳಿಸುವಲ್ಲಿ ಆ ರಾಷ್ಟ್ರದ ಆಸಕ್ತಿಯಿತ್ತು. ಡಾಕ್ಟರ್ ರಾಬರ್ಟನ ಪ್ರಕಾರ ಪಾಶ್ಚಾತ್ಯ ರಾಷ್ಟ್ರಗಳು ಸಮೃದ್ಧಿ ಸಾಧಿಸಿದ್ದು ಶಸ್ತ್ರೀಕರಣ, ಬೃಹತ್ಪ್ರಮಾಣದ ಸಾಲ, ಲಭ್ಯ ಸಾಧನಗಳ ದುಷ್ಪ್ರಯೋಗಗಳಿಂದ. ಒಂದು ವೇಳೆ ಯುದ್ಧ ಕಣ್ಮುಚ್ಚಿಯಾಗಿ ಪೂರ್ವಾಪರ ವಿಚಾರವಿಲ್ಲದೆ ಖರ್ಚು ಮಾಡುವ ಹಾಗೂ ಸಾಲಮಾಡುವ ಪ್ರವೃತ್ತಿ ಕೊನೆಗಂಡರೆ ಪಾಶ್ಚಾತ್ಯ ರಾಷ್ಟ್ರಗಳ ಅವನತಿ ಪ್ರಾರಂಭವಾಗುವುದು. ಪಾಳದ ಸಾಮಾಜಿಕ ವ್ಯವಸ್ಥೆಯಲ್ಲಿ ಯಾರೂ ಇನ್ನೊಬ್ಬರಿಗಿಂತ ದೊಡ್ಡವರಾಗಲಾರರು. ಅಲ್ಲದೆ ಆ ದೇಶಕ್ಕೆ ಸೈನ್ಯದ ಅವಶ್ಯಕತೆಯೂ ಇಲ್ಲ. ಅಲ್ಲಿ ಯಾರೂ ಕಂಡಾಬಟ್ಟೆಯಾಗಿ ಹಣ ಶೇಖರಿಸಿ ಶ್ರೀಮಂತರಾಗಲಾರರು. ಅಲ್ಲಿನ ದೇಶದಲ್ಲಿ ಅಸಂತೋಷವಾಗಲಿ ಘರ್ಷಣೆಯಾಗಲಿ ತಲೆದೋರುವ ಪ್ರಮೇಯವೇ ಇಲ್ಲ. ಸಮಾಜವೆಂದರೆ ಅದರಲ್ಲಿ ಎಲ್ಲ ತರಹದ ಜನರೂ ಇರುವವರೆ. ಆದ್ದರಿಂದ ಕೆಟ್ಟವರಾರು, ಒಳ್ಳೆಯವರಾರು ಎಂಬುದನ್ನು ವಿದ್ಯಾರ್ಥಿ ದೆಸೆಯಲ್ಲಿಯೆ ಗುರುತಿಸಿ ಅವರನ್ನು ಸುಧಾರಿಸಲು ಕ್ರಮ ಕೈಕೊಳ್ಳಲಾಗುತ್ತದೆ. ರಕ್ತ ಹಾಗೂ ವೈಜ್ಞಾನಿಕ ಪರೀಕ್ಷೆಗಳ ಮೂಲಕ ಇಂತಹ ಜನರನ್ನು ಪೃಥಃಕರಿಸಿ ಸುಧಾರಿಸಲಾಗುತ್ತದೆ ಎಂದು ಡಾ. ರಾಬರ್ಟ್ ವಿಲ್‌ನಿಗೆ ಹೇಳಿದ.

ವಿಜಯ ಭಟ್ಟಾಚಾರ್ಯ ಪಾಳದ ಶಿಕ್ಷಣ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದ. ಲೀಲಾ ರಾವ್‌ಳನ್ನು ವಿಲ್‌ನಿಗೆ ಪರಿಚಯ ಮಾಡಿಸಿದ ಆತ ಮಂದಿರ, ಮೂರ್ತಿಗಳು ಹಾಗೂ ಚಿತ್ರಗಳ ಸಹಾಯದಿಂದ ಮಾನವೀಯತೆಯಲ್ಲಿ ಅವರನ್ನು ಹೇಗೆ ತರಬೇತುಗೊಳಿಸಲಾಗುತ್ತದೆ ಹಾಗೂ ರೂಢವಾದ ಸಂಸ್ಕಾರಗಳಿಂದ ಮುಕ್ತರಾಗಿ ಪ್ರತಿಯೊಂದು ವಿಷಯದ ಬಗೆಗೂ ಸ್ವತಂತ್ರವಾಗಿ ವಿಚಾರಿಸುವ ಶಕ್ತಿಯನ್ನು ಹೇಗೆ ದೊರಕಿಸಿಕೊಡಲಾಗುತ್ತದೆ ಎಂಬುದನ್ನು ಸಾದ್ಯಂತವಾಗಿ ವಿವರಿಸಿದ.

ಒಂದು ದಿನ ವಿಲ್ ಭಟ್ಟಾಚಾರ್ಯನ ಮನೆಗೆ ಊಟಕ್ಕೆ ಹೋದಾಗ ಅವನ ಹೆಂಡತಿ ಶಾಂತಾ ತನ್ನ ಇಬ್ಬರು ಮಕ್ಕಳಿಗೆ ಸ್ನಾನ ಮಾಡಿಸುತ್ತಿದ್ದಳು.

"ಮಕ್ಕಳು ಎಷ್ಟು ಮುದ್ದಾಗಿದ್ದಾರಲ್ಲಾ, ಇವರು ದೊಡ್ಡವರಾದ ನಂತರ ನಿಮ್ಮ ಹಾಗೆ ಕಾಣುವರೋ ಅಥವಾ ತಂದೆಯ ಹಾಗೊ?" ವಿಲ್ ಸಹಜ ಕುತೂಹಲದಿಂದ ಕೇಳಿದ.

"ಯಾರನ್ನು ಹೋಲುತ್ತಾರೋ ಏನೊ. ಆದರೆ ಅವರು ತಂದೆಯನ್ನಂತೂ ಹೋಲುವುದಿಲ್ಲ."

"ಅದು ಹೇಗೆ ಅಷ್ಟು ಖಂಡಿತವಾಗಿ ಹೇಳುತ್ತೀರಿ?"

"ಏಕೆಂದರೆ ಇವರಿಬ್ಬರ ಜನನಕ್ಕೂ ನಾನು ಕಾರಣನಲ್ಲ," ವಿಜಯ ಮುಗುಳ್ನಗುತ್ತಾ ಹೇಳಿದ.

"ಆಂ! ಏನಂದಿರಿ?" ವಿಲ್‌ನಿಗೆ ಆಶ್ಚರ್ಯಾಘಾತವೇ ಆಗಿತ್ತು.

"ಅಷ್ಟೇನೂ ಆಶ್ಚರ್ಯಪಡುವ ಕಾರಣವಿಲ್ಲ. ನಾಲ್ಕು ವರ್ಷಗಳ ಹಿಂದೆ ನಮಗೆ ಅವಳಿ ಮಕ್ಕಳು ಜನಿಸಿದ್ದರು. ಈ ಸಲ ನಾವು ಸ್ವಲ್ಪ ಮಜಾ ಮಾಡಿದೆವು. ನೀವು ಗೋವಿಂದಸಿಂಹನ ಹೆಸರನ್ನು ಕೇಳಿದ್ದೀರಾ? ಇದು ಆತನ ಮಗು," ಶಾಂತಾ ಹೇಳಿದಳು.

"ಹೌದು ಹೌದು. ಈಗ ತಾನೆ ನಿಮ್ಮ ಮನೆಯವರು ನನಗೆ ಗೋವಿಂದಸಿಂಹನ ಲ್ಯಾಂಡ್ಸ್ಕೇಪುಗಳನ್ನು ನೋಡಲು ಕೊಟ್ಟಿದ್ದರು.

[illegible] ಆ ಅತ್ಯಾಚಾರ [illegible] [illegible] [illegible] [illegible]ವಲ್ಲ!"

[illegible] ಅಲ್ಲಿ ಹಾಗೆ [illegible] [illegible] [illegible] [illegible] [illegible] [illegible] [illegible] [illegible] [illegible] ಅನಂತ ಕಾಲದ ವರೆಗೂ [illegible] [illegible] [illegible] ಆ ದಂಪತಿಗಳು ವಿಲ್ಸನಿಗೆ ವಿವರಿಸಿ ಹೇಳಿದರು. ಅಲ್ಲಿನ ಜನ ಎರಡು ಮಕ್ಕಳಾದ ನಂತರ ಮೂರನೆಯ ಮಗುವನ್ನು ಹೀಗೆ ನಡೆಸುತ್ತಾರೆ. ಇದರಿಂದ ಅಹಿಂಸೆ, ಮಾನವತೆ, ಸೌಹಾರ್ದ ಭಾವನೆಗಳು ಮಕ್ಕಳಲ್ಲಿ ರಕ್ತಗತವಾಗಿಯೇ ಬರುತ್ತವೆ. ಪರಸ್ಪರರಲ್ಲಿ ಪ್ರೇಮ ವಿಶ್ವಾಸಗಳು ಹೆಚ್ಚುತ್ತವೆ ಎಂದು ಅವರು ಹೇಳಿದಾಗ ವಿಲ್ಸನಿಗೆ ತನ್ನ ಕಿವಿಗಳನ್ನೇ ನಂಬಲಾಗಲಿಲ್ಲ.

ಊಟ ಮುಗಿಸಿ ಆತ ತನ್ನ ಕೋಣೆಗೆ ಮರಳಿ ಬಂದ. ಅವನಿಗಾದ ಅನುಭವ ಅಪೂರ್ವವಾಗಿತ್ತು.

ಒಂದು ದಿನ ಅವನಿಗೆ ಶಾಲೆಗೆ ಹೋಗಿ ಅಲ್ಲಿನ ಶಿಕ್ಷಣ ಪದ್ಧತಿಯನ್ನು ಅರಿಯುವ ಅವಕಾಶವೂ ಸಿಕ್ಕಿತ್ತು. ಆತ ಶಾಲೆಗೆ ಹೋದಾಗ ಮಕ್ಕಳು ಯಾವುದೋ ಕೆಲಸ ಮಾಡುತ್ತಿದ್ದರು. [illegible] ಶ್ರೀಮತಿ [illegible] ವಿಲ್ಸನಿಗೆ ಪರಿಚಯಿಸಿದರು.

ಶ್ರೀಮತಿ ಮೇಸನ್ ಹೇಳಿದಳು: "ಈ ಬಾಲಕರನ್ನಾಗಲಿ ಬಾಲಿಕೆಯರನ್ನಾಗಲಿ ಯಾವ [illegible] [illegible] [illegible] [illegible] [illegible] [illegible] [illegible] [illegible] [illegible] [illegible] ದೊಡ್ಡವರಾಗಿ [illegible], ನಡೆಸಬೇಕಾದರೂ [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] [illegible] ವಾದರೆ ಸಾಕು ಎನ್ನುವ ಧೋರಣೆ ಅಲ್ಲಿಯ ಸರಕಾರದ್ದು. ಜೀವನ ಧೋರಣೆಯೂ ಇದಕ್ಕಿಂತ ಭಿನ್ನವಾಗಿಲ್ಲ. ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವುದಕ್ಕಾಗಿ ಮುಂದೊಂದು ದಿನ ಬಹುಶಃ ಪಾಶ್ಚಾತ್ಯ ದೇಶಗಳು ಹೀಗೆ ಯೋಚಿಸಲೂ ಬಹುದು.

"ಆದರೆ ನಮ್ಮ ಉದ್ದೇಶ ಸಂಪೂರ್ಣವಾಗಿ

ಇದಕ್ಕಿಂತ ಭಿನ್ನವಾಗಿದೆ. ಹತ್ತು ನಿಮಿಷಗಳಲ್ಲಾಗುವ ಅನುಭವವನ್ನು ಹತ್ತು ಸೆಕೆಂಡುಗಳಲ್ಲಿ [illegible] ಹೇಳಿಕೊಡುತ್ತೇವೆ. ನೋಡಿ, ಒಂದು ಗಣಿತ ಸಮಸ್ಯೆಯನ್ನು ಬಿಡಿಸಲು ಮೂವತ್ತು ನಿಮಿಷಗಳು ಬೇಕು ಎಂದಿಟ್ಟುಕೊಳ್ಳಿ. ಆ ಮೂವತ್ತು [illegible]-ವಾಗುವಂತಾದರೆ ಎಷ್ಟು ಚೆನ್ನ? ಆಗ ಮೂವತ್ತು ನಿಮಿಷಗಳಲ್ಲಿ ಬಿಡಿಸಬಹುದಾದ ಸಮಸ್ಯೆಯನ್ನು ಒಂದೇ ನಿಮಿಷದಲ್ಲಿ ಬಿಡಿಸಬಹುದು. ಇದೇನೂ ಆಶ್ಚರ್ಯದ ಮಾತಲ್ಲ. [illegible] ಕೈಕೊಳ್ಳುವುದರ ಮೂಲಕವೇ ಪುಟ್ಟ [illegible]ರೆ.

[illegible] ಶಕ್ತಿಯನ್ನು ಸಂಪಾದಿಸುತ್ತೀರಿ. ಇಂತಹ ಶಕ್ತಿ [illegible] ಶಕ್ತಿಯೇ. ಅದನ್ನು ಒಳ್ಳೆಯ ಉದ್ದೇಶಕ್ಕಾ-[illegible] ಕಂಪನಗೊಳಿಸುತ್ತವೆ. ಆದ್ದರಿಂದ ಸದಾಕಾಲ [illegible] ಬುದ್ಧಿಶಕ್ತಿ ಮಹತ್ತಾಗಿತ್ತು. ಮಿದುಳು ತುಂಬಾ ವಿಕಾಸಗೊಂಡಿತ್ತು. ಆದರೆ ಅವರಿಗೆ ಸರಿಯಾದ ವ್ಯವಹಾರಜ್ಞಾನವಿರಲಿಲ್ಲ. ನಾನು ಹೇಳು-[illegible] ನೀವು ಭೌತಶಾಸ್ತ್ರ, ರಸಾಯನಶಾಸ್ತ್ರಗಳಂತಹ [illegible] ಕೊಡುತ್ತೀರಿ. ಆದರೆ ನಮ್ಮ ಮಾತು ಹಾಗಲ್ಲ. [illegible] ಮಾತ್ರ ಮಹತ್ವ ಕೊಡುತ್ತೇವೆ.

"ಪ್ರ[illegible]

ಕೊಳ್ಳುವುದು. [illegible]

[illegible]-ನಿಕವಾಗಿ ವರ್ಗೀಕರಿಸಿ ಬೇರೆ ಬೇರೆ ತರಗತಿಗಳಲ್ಲಿ ಸೇರಿಸಲಾಗುತ್ತಿತ್ತು. ಅವರ ಪಾಠಗಳು ಹೇಗೆ-ನಡೆಯುತ್ತದೆಂಬುದನ್ನು ನೋಡಲು ಹೋದಾಗ ವಿದ್ಯಾರ್ಥಿಗಳು ಹೊರ ಜಗತ್ತಿನ ಪರಿವೆಯಿಲ್ಲ-ದಷ್ಟು ಪಾಠದಲ್ಲಿ ತಲ್ಲೀನರಾಗಿದ್ದನ್ನು ವಿಲ್ ಕಂಡ.

ಅದೇ ಸಂಜೆ ವಿಲ್‌ನಿಗೆ ಮುರುಗನ್ ಹಾಗೂ ರಾಣಿಯರು ಭೇಟಿಯಾದರು. ವಿಲ್ ಆ ರಾಜ್ಯದ ವ್ಯವಸ್ಥೆಯನ್ನೂ ಅಲ್ಲಿನ ಜನರ ರೀತಿ [illegible]-ತ್ತಿತ್ತು. ಇದು ರಾಣಿಗೆ ಅಷ್ಟಾಗಿ ಮನಸ್ಸಿಗೆ ಬರಲಿಲ್ಲ.

*

ಅನೇಕ ದಿನಗಳ ನಂತರ ಸುಶೀಲಾ ವಿಲ್‌ನ ಬಳಿ ಬಂದಿದ್ದಳು. ತಾನು ವೇಲ್ಸಿನಲ್ಲಿದ್ದಾಗ ಅಲ್ಲಿನ ಸರೋವರಗಳನ್ನು ಅದರಲ್ಲಿ ವಿಹರಿಸು-ತ್ತಿದ್ದ ನಯನಮನೋಹರವಾದ ರಾಜಹಂಸ-ಗಳನ್ನೂ ನೆನೆಸಿಕೊಂಡಳು. ಪುಷ್ಪಗಳು ಸುರ-[illegible] ಪ್ರಾರಂಭವಾದ ತಕ್ಷಣ ಮಾಲಿಯ ನೂರಾರು ಸ್ಮೃತಿಗಳು ವಿಲ್‌ನನ್ನು ಮುತ್ತಿಕೊಳ್ಳುತ್ತಿದ್ದವು. [illegible] ನಾವು ಕೇವಲ ಒಂದು ಸೂಕ್ಷ್ಮ ಕಣ ಮಾತ್ರ



ಸಿಂಗರ್
ರೂ. 25 ರಿಂದ ರೂ.125ರ ವರೆಗಿನ
120 ದಿನಗಳಲ್ಲಿ ಬೆಲೆಯನ್ನು ಸಲ್ಲಿಸಿರಿ -

ಏನನ್ನುವುದು ಅವರ ಗಮನಕ್ಕೆ ಬರುವುದಿಲ್ಲ ಎಂಬ ವಿಚಾರ ಆತನಿಗೆ ಬಂತು.

*

ಸಂಜೆಯಾಗಿತ್ತು. ಅಲ್ಲಿನ ಸಾಮಾಜಿಕ ಜೀವನ ಹೇಗಿರುತ್ತದೆಂಬುದನ್ನು ಕಂಡುಕೊಳ್ಳಲು ವಿಲ್ ಸುಶೀಲೆಯೊಡನೆ ಪಾಳದ ಬೀದಿಗಳಲ್ಲಿ ತಿರುಗುತ್ತಿದ್ದಾಗ ಒಂದು ಮಂದಿರದ ಮುಂದೆ ಜನಜಂಗುಳಿ ವಿಪರೀತವಾಗಿದ್ದುದನ್ನು ಕಂಡ. ನವಯುವಕನೊಬ್ಬ ಆ ಮಂದಿರದ ಮುಂದೆ ಸ್ವರಬದ್ಧವಾಗಿ ತುತ್ತೂರಿಯೂದುತ್ತಿದ್ದ. ಮಂದಿರದ ಮುಂದೆ ನೆರೆದವರೆಲ್ಲ ಸುಮಾರಾಗಿ ತಾರುಣ್ಯದ ಹೊಸ್ತಿಲಲ್ಲಿದ್ದವರೆ. ಇದೇನೆಂದು ವಿಲ್ ಸುಶೀಲೆಯನ್ನು ಕೇಳಿದಾಗ ಆಕೆ ಹೇಳಿದಳು: "ನವ ಯುವಕ ಯುವತಿಯರಿಗೆ ಇಲ್ಲಿ ಸಂಯಮಿತವಾದ ಪ್ರೇಮಜೀವನವನ್ನು ಹೇಗೆ ನಡೆಸಬೇಕೆಂಬುದನ್ನು ಕಲಿಸಿಕೊಡಲಾಗುತ್ತದೆ. ಹೀಗಾಗಿ ಇಲ್ಲಿ ಯುವಕ ಯುವತಿಯರು ಜೊತೆ ಜೊತೆಯಾಗಿ ಮಲಗಿದರೂ ಅವರಲ್ಲಿ ವಿಷಮ ವಾಸನೆಯಾಗಲಿ ವಿಕೃತವಾದ ವಿಚಾರಗಳಾಗಲಿ ಮೂಡುವುದಿಲ್ಲ. ಆದ್ದರಿಂದ ನಿಜವಾದ ಜ್ಞಾನ ಸಂಪಾದಿಸಲು ಗೌತಮ ಬುದ್ಧನ ಹಾಗೆ ಮನೆ ಬಿಟ್ಟು ತೆರಳುವ ಪ್ರಸಂಗ ಇಲ್ಲಿನವರಿಗೆ ಬರುವುದಿಲ್ಲ. ಬೇಕಾದರೆ ತಮ್ಮ ಪ್ರಿಯತಮೆಯೊಂದಿಗಿದ್ದುಕೊಂಡೇ ಬುದ್ಧತ್ವವನ್ನು ಪಡೆಯಬಹುದು."

ನವಯುವಕನೀಗ ಈಡಿಪಸ್‌ನ ಗೀತೆಯನ್ನು ನುಡಿಸುತ್ತಿದ್ದ. ಮಂದಿರದ ಸನಿಹದಲ್ಲೇ ಗೊಂಬೆಯಾಟ ನಡೆಯುತ್ತಿತ್ತು. ಆದರೆ ಅದು ಗೂಢವಾದ ಅನೇಕ ಸಂಕೇತಗಳನ್ನು ಒಳಗೊಂಡಿದ್ದರಿಂದ ನಾಟಕದ ಅರ್ಥ ವಿಲ್‌ನಿಗೆ ಆಗಲಿಲ್ಲ.

*

ಒಮ್ಮೆ ಡಾಕ್ಟರ್ ರಾಬರ್ಟ್ ಮೋಕ್ಷದ ಔಷಧಿಯನ್ನು ಕುರಿತು ವಿಲ್‌ನ ಮುಂದೆ ಪ್ರಸ್ತಾಪಿಸಿದ್ದನಲ್ಲದೆ ಜನನ—ಮರಣಗಳನ್ನು ಬಾಲಕರಿಗೆ ಪರಿಚಯಿಸುವುದರಿಂದ ಯಾರು ಮರಣ ಹೊಂದಿದರೂ ಯಾರಿಗೂ ದುಃಖವಾಗುವುದಿಲ್ಲವೆಂದು ಹೇಳಿದ್ದ. ಇದನ್ನು ಕೇಳಿದಂದಿನಿಂದ ವಿಲ್‌ನಲ್ಲಿ ಈ ಬಗ್ಗೆ ಕುತೂಹಲ ಮೂಡಿತ್ತು. ಅವನು ಈಗ ಸುಶೀಲೆಯ ಸಹಾಯದಿಂದ ಮೋಕ್ಷದ ಔಷಧಿಯನ್ನು ದೊರಕಿಸಿ, ಅದನ್ನು ಕುಡಿದು ನೋಡಬೇಕೆಂದು ನಿಶ್ಚಯಿಸಿದ.

*

ಮೋಕ್ಷದ ಔಷಧಿಯನ್ನು ತೆಗೆದುಕೊಂಡ ನಂತರ ದೇಹ, ಮನಸ್ಸು, ಪ್ರಾಣಗಳೆಲ್ಲವೂ ಹಗುರವಾಗಿ ಮೋಡದ ಹಾಗೆ ತೇಲುತ್ತಿರುವ ಅನುಭವ ವಿಲ್‌ನಿಗಾಯಿತು. ಹಳೆಗಾಲದ ಸ್ಮೃತಿಗಳೂ ಸೂಕ್ಷ್ಮಾತಿಸೂಕ್ಷ್ಮವಾದ ಸಂವೇದನೆಗಳೂ ಪ್ರಕಟಗೊಂಡು ನಶಿಸಿ, ಆತ್ಮವೊಂದು ನಿರ್ಮಾಣಗೊಂಡಂತೆನಿಸಿತು. ವಿಲ್‌ನ ಸಮಸ್ತ ಚೇತನವೂ ಜಾಗ್ರತವಾಯಿತು. ಬುದ್ಧನ ನಿರ್ವಾಣ ಕಲ್ಪನೆ ತನ್ನ ದೇಹದಲ್ಲೇ ಸಾಕಾರವಾದಂತಾಯಿತು. ಕುಂಡಲಿನಿಯು ಜಾಗ್ರತಗೊಂಡಾಗ ಯೋಗಿಗಳಿಗೂ ಋಷಿಮುನಿಗಳಿಗೂ ಇಂತಹುದೇ ಅನುಭವ ಆಗುತ್ತದೆಯೋ ಏನೋ ಎನಿಸಿತು.

ತನಗಾಗುತ್ತಿರುವ ಅನುಭವವನ್ನೆಲ್ಲ ಆತ ಸುಶೀಲೆಗೆ ವಿವರಿಸಿ ಹೇಳುತ್ತಿದ್ದ. ಅದೃಶ್ಯವನ್ನು ನೋಡಿದಂತೆಯೂ ಅಶ್ರುತವನ್ನು ಕೇಳಿದಂತೆಯೂ ಭಯ–ಪೀಡೆಗಳ ಪರಿಧಿಯನ್ನು ದಾಟಿಹೋದಂತೆಯೂ ಅವನಿಗನಿಸುತ್ತಿತ್ತು. ಭೂತಕಾಲ ಅವನ ಕಣ್ಣುಮುಂದಿನಲ್ಲೇ ಹಾದು ಹೋಗುತ್ತಿತ್ತು. ಖಾಕಿ ಬಟ್ಟೆ ಧರಿಸಿದ ಸೈನಿಕರ ಪರೇಡು, ಧ್ವಜಗಳು, ತೋಫುಗಳು, ಯುದ್ಧ ವಾದ್ಯಗಳು, ಕೊರೆಯುವ ಮಂಜು ಭೂಮಿಯ ಕೆಸರಿನಲ್ಲಿ ಸಿಕ್ಕಿಕೊಂಡ ಹೆಣಗಳು, ನಾಜಿಗಳ ಮುಂದೆ ಸಾಕಾರ ರೂಪ ಧರಿಸಿ ಕುಣಿಯುತ್ತಿದ್ದ ಮೃತ್ಯು—ಇದೆಲ್ಲ ಅವನ ಕಣ್ಣಿಗೆ ಕಟ್ಟಿದಂತಾಗಿತ್ತು.

ದೂರದಿಂದೆಲ್ಲೋ "ಜಾಗ್ರತೆ...ಕರುಣೆ... ಜಾಗ್ರತೆ...ಕರುಣೆ" ಎಂಬ ಉಲಿಯು ಕೇಳಿ ಬರುತ್ತಿತ್ತು.

"ಈ ಮೈನಾ ಪಕ್ಷಿಗಳು ಹೇಳುತ್ತಿರುವುದು ಕೇಳಿಸಿತೆ?" ಸುಶೀಲೆ ವಿಲ್‌ನನ್ನು ಕೇಳಿದಳು.

ಅವರಿಬ್ಬರೂ ಕಿಟಕಿಯ ಬಳಿ ಹೋಗಿ ನಿಂತರು. ಕಂಪೌಂಡಿನ ಹೊರಗೆ ರಾಜಮಾರ್ಗದಲ್ಲಿ ಟ್ಯಾಂಕುಗಳ ಸಾಲು ಗಡಗಡ ಸದ್ದು ಮಾಡುತ್ತಾ ಸಾಗುತ್ತಿತ್ತು. ಅವರ ಹಿಂದೆಯೇ

ಸೈನಿಕ ವಾಹನಗಳು. ಸರ್ಚ್‌ಲೈಟಿನ ಪ್ರಕಾಶ ನಾಲ್ಕೆಡೆಗಳಲ್ಲೂ ವ್ಯಾಪಿಸಿತ್ತು. "ಪಾಳದ ನಾಗರಿಕರೇ, ಶಾಂತರಾಗಿರಿ. ನಿಮ್ಮ ರಾಜ ಈಗ ಮಾತನಾಡುವವನಿದ್ದಾನೆ. ದ್ವೀಪದಾಚೆಯಿಂದ ಬಂದ ಮಿತ್ರರನ್ನು ಎಲ್ಲರೂ ಮುಕ್ತ ಮನಸ್ಸಿನಿಂದ ಸ್ವಾಗತಿಸಿರಿ," ಎಂದು ವಾಹನವೊಂದರಿಂದ ಲೌಡ್‌ಸ್ಪೀಕರ್ ಹಿಡಿದು ಮುರುಗನ್ ಕೂಗುತ್ತಿದ್ದ.

ಮುರುಗನ್ನನ ಜೊತೆಗೆ ಕರ್ನಲ್ ದೀಪನ ಸೈನ್ಯವಿತ್ತು. ಲೌಡ್ ಸ್ಪೀಕರ್ ಇನ್ನೂ ಕೂಗುತ್ತಿತ್ತು: "ನನ್ನ ತಾಯಿ ಹಾಗೂ ತಂದೆಯ ರಾಜ್ಯಗಳೆರಡೂ ಇಂದು ಒಂದಾಗಿವೆ. ಇನ್ನು ಮೇಲೆ ಈ ಹೊಸ ರಾಜ್ಯವನ್ನು 'ಪಾಳ-ರಿನ್‌ಡಂಗ್ ಸಂಯುಕ್ತ ರಾಜ್ಯ'ವೆಂದು ಕರೆಯಲಾಗುವುದು. ಅಪ್ರತಿಮ ರಾಜನೀತಿಜ್ಞರೂ ಮಹಾ ಆಧ್ಯಾತ್ಮಿಕರೂ ಆದ ಕರ್ನಲ್ ದೀಪ ಅದರ ಪ್ರಥಮ ಪ್ರಧಾನಮಂತ್ರಿಯಾಗುವರು. ಮತ್ತು ಪ್ರತಿಗಾಮಿಗಳಾದ ಈ ಮುದುಕ ಧುರೀಣರೂ ಅವರ ಸಿದ್ಧಾಂತಗಳೂ..."

ಸೈನ್ಯದ ತುಕುಡಿಯೊಂದು ರಾಬರ್ಟನ ಮನೆಯ ಮುಂದೆ ನಿಂತು ಗುಂಡಿನ ಮಳೆಗರೆಯಲಾರಂಭಿಸಿತು. ಕಂಪೌಂಡಿನಲ್ಲಿದ್ದ ಗಿಡಗಳಿಗೆಲ್ಲಾ ಬೆಂಕಿ ಹತ್ತಿಕೊಂಡು ಅಗ್ನಿಯ ನಾಲಿಗೆ ಆಕಾಶವನ್ನು ನೆಕ್ಕತೊಡಗಿದವು. ಮಶೀನ್‌ಗನ್ನುಗಳ ಸಪ್ಪಳದಿಂದ ಭೂಮಿ ಕಂಪಿಸತೊಡಗಿತು. ನೂರು ವರ್ಷಗಳ ಕೆಲಸ ಒಂದೇ ಒಂದು ರಾತ್ರಿಯಲ್ಲಿ ಮೂರಾಬಟ್ಟೆಯಾಗಿ ಹೋಗಿತ್ತು.

ಸುಶೀಲಾ ಚಾದರಿನಿಂದ ಮುಖ ಮುಚ್ಚಿಕೊಂಡಳು. ಮೈ ಥರಥರ ನಡಗುತ್ತಿತ್ತು. ಇನ್ನೇನು, ಆಕೆ ಆಯ ತಪ್ಪಿ ಕೆಳಗೆ ಬೀಳುತ್ತಾಳೆ ಅನ್ನುವಷ್ಟರಲ್ಲೇ ವಿಲ್ ಆಕೆಯನ್ನು ಗಟ್ಟಿಯಾಗಿ ಹಿಡಿದುಕೊಂಡ. ಸೈನ್ಯದ ತುಕಡಿ ಮರಳಿ ಹೋಗಿತ್ತು. ಎಲ್ಲ ಕಡೆ ಸ್ಮಶಾನ ಶಾಂತಿಯಾವರಿಸಿತ್ತು. ದೂರದಲ್ಲಿ ಪಕ್ಷಿಯೊಂದು, "ಜಾಗ್ರತೆ... ಕರುಣೆ... ಜಾಗ್ರತೆ... ಕರುಣೆ" ಎಂದು ಕಿರಿಚುತ್ತಿತ್ತು. ✡

ವೇದಗಳು ಕಠಿಣಾತಿಕಠಿಣ ನಿಯಮಗಳನ್ನು ಬೋಧಿಸುವುದಿಲ್ಲ, ಕಾರ್ಯಕಾರಣ ಭಾವದ ಪದ್ಧತಿಯಲ್ಲಿ ಚಿರಂತನ ಕಾಲದವರೆಗೂ ಜೀವಿ ತೊಳಲಬೇಕಾಗುವುದೆಂದೂ ಹೇಳುವುದಿಲ್ಲ, ಬದಲು ಸರ್ವಕ್ಕೂ ಮೂಲವಾದ, ಅಣುರೇಣುಗಳಲ್ಲಿಯೂ ವ್ಯಾಪ್ತವಾದ, ಜಗತ್ತಿನ ಸಕಲ ವ್ಯವಹಾರಗಳಿಗೂ ಕಾರಣವಾದ ಅಜಿಂಕ್ಯ ಆತ್ಮವಿದೆಯೆಂಬುದನ್ನು ಉದ್ಘೋಷಿಸುತ್ತವೆ.

-ಸ್ವಾಮಿ ವಿವೇಕಾನಂದ

Printed & published by Shri K. Janardana for the Karnataka Patrika Private Ltd. at the Samyukta Karnatak Press, Koppikar Road, Hubli. Rep: Bombay: V. Satyamurthy Tel. No. 522412; Calcutta: H. Muzamdar, Phone: 46-4238: Madras: K. A. Subramaniam 611326; New Delhi: P. R. Chopra Phone: 224130.



ಹೊಸ
ಪಾಯಿಂಟ್
ಡಿಟರ್ಜೆಂಟ್
ವಾಷಿಂಗ್
ಕೇಕ್
ಮೈಸೂರು
ಸ್ಯಾಂಡಲ್
ಸೋಪ್
ತಯಾರಕರಿಂದ
Point
for sparkling white and brilliant colour washes
Point
DETERGENT WASHING CAKE
Net Weight 125 gms.
Point
ರೂ. 1·29
ಸ್ಥಳೀಯ ತೆರಿಗೆಗಳು ಪ್ರತ್ಯೇಕ

KASTURI PRICE: 1-25 Regd. No. KRNG 43
Registered with the Registrar of Newspapers for India under No. 3658/57

